ಶನಿವಾರ, ಏಪ್ರಿಲ್ 19, 2025 | ₹ 7.00

www.prajavani.net

prajavani.net prajavani prajavani prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಚಿನ್ನದ ಆಮದು ಹೆಚ್ಚಳ



- ಮಾರ್ಚ್ ತಿಂಗಳಲ್ಲಿ ಚಿನ್ನದ ಆಮದು ಪ್ರಮಾಣ ಶೇ 192ರಷ್ಟು ಹೆಚ್ಚಳವಾಗಿದ್ದು, ₹38,168 ಕೋಟಿ ಮೌಲ್ಯದ ಚಿನ್ನ ಆಮದಾಗಿದೆ
- 2023–24ರ ಆರ್ಥಿಕ ವರ್ಷದಲ್ಲಿ ₹3.88 ಲಕ್ಷ ಕೋಟಿ ಮೌಲ್ಯದಷ್ಟು ಚಿನ್ನ ಆಮದಾಗಿತ್ತು
- 2024–25ರ ಆರ್ಥಿಕ ವರ್ಷದಲ್ಲಿ ₹4.95 ಲಕ್ಷ ಕೋಟಿಯಷ್ಟು ಆಮದಾಗಿದ್ದು, ಶೇ 27ರಷ್ಟು ಹೆಚ್ಚಳವಾಗಿದೆ

(ಕೇಂದ್ರ ವಾಣಿಜ್ಯ ಸಚಿವಾಲಯ ನೀಡಿದ ಮಾಹಿತಿ)

ಮೂರೂ ಪರೀಕ್ಷೆ ಮುಗಿಯುವವರೆಗೂ ಇಲ್ಲ 'ಫೇಲ್'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಎಸ್‌ಎಸ್‌ಎಲ್‌ಸಿ ಹಾಗೂ ದ್ವಿತೀಯ ಪಿಯು ಪರೀಕ್ಷೆ–1 ಮತ್ತು ಪರೀಕ್ಷೆ–2ರಲ್ಲಿ ಅನುತ್ತೀರ್ಣರಾದ ವಿದ್ಯಾರ್ಥಿಗಳ ಡಿಜಿಟಲ್ ಅಂಕಪಟ್ಟಿಯಲ್ಲಿ ಫಲಿತಾಂಶ 'ಪೂರ್ಣಗೊಂಡಿಲ್ಲ' ಎಂದು ನಮೂದಿಸಲು ಶಾಲಾ ಶಿಕ್ಷಣ ಇಲಾಖೆ ಸೂಚಿಸಿದೆ.

ಎಸ್‌ಎಸ್‌ಎಲ್‌ಸಿ ಹಾಗೂ ದ್ವಿತೀಯ ಪಿಯುಸಿಗೆ ಮೂರು ವಾರ್ಷಿಕ ಪರೀಕ್ಷೆಗಳನ್ನು ಬರೆಯಲು ವಿದ್ಯಾರ್ಥಿಗಳಿಗೆ ಅವಕಾಶ ಇರುವ ಕಾರಣ, ಅನುತ್ತೀರ್ಣರಾದ ಹಾಗೂ ಫಲಿತಾಂಶ ವೃದ್ಧಿಸಿಕೊಳ್ಳಲು ಬಯಸುವ ವಿದ್ಯಾರ್ಥಿಗಳಿಗೆ ಮೂರು ಪರೀಕ್ಷೆಗಳ ನಂತರವೇ ಅಂಕಪಟ್ಟಿ ಪಡೆಯಲು ಅವಕಾಶ ನೀಡಲಾಗಿದೆ. ಮೊದಲ ಎರಡೂ ಪರೀಕ್ಷೆಗಳಲ್ಲಿ ಅನುತ್ತೀರ್ಣರಾದ ವಿಷಯಗಳ ಮುಂದೆ 'ಅನುತ್ತೀರ್ಣ' ಪದ ಬಳಸುತ್ತಿಲ್ಲ.

ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯ ನಿರ್ಣಯ ಮಂಡಳಿ 2024–25ನೇ ಸಾಲಿನಿಂದ 3 ಪರೀಕ್ಷೆಗಳನ್ನು ಪರಿಚಯಿಸಿದೆ. ಇದರಿಂದ ಅನುತ್ತೀರ್ಣರಾದ ವಿದ್ಯಾರ್ಥಿಗಳು ಉಳಿದ 2 ಪರೀಕ್ಷೆ ಬರೆಯಬಹುದು. ಫಲಿತಾಂಶ ವೃದ್ಧಿಸಿಕೊಳ್ಳಲು ಬಯಸುವವರು ಮೂರು ಪರೀಕ್ಷೆಗಳಿಂದ ಯಾವ ವಿಷಯದಲ್ಲಿ ಹೆಚ್ಚು ಅಂಕ ಬಂದಿರುತ್ತದೆಯೋ ಅದನ್ನೇ ಉಳಿಸಿಕೊಳ್ಳಬಹುದು. ವೃತ್ತಿಪರ ಕೋರ್ಸ್‌ಗಳ ಪ್ರವೇಶಕ್ಕೆ ಅಂತಿಮ ಅಂಕಪಟ್ಟಿಯನ್ನೇ ಪರಿಗಣಿಸಲಾಗುತ್ತದೆ.

ನೈಸ್ ಯೋಜನೆಯೇ ಈಗ ಅಪ್ರಸ್ತುತ ಎನ್ನುವ ತೀರ್ಮಾನಕ್ಕೆ ಸರ್ಕಾರ • ಸದ್ಯವೇ ಪ್ರಕಟ ಸಾಧ್ಯತೆ

ಬಿಎಂಐಸಿ ಯೋಜನೆಗೆ ಅರ್ಧಚಂದ್ರ?

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು– ಮೈಸೂರು ಮೂಲಸೌಕರ್ಯ ಕಾರಿಡಾರ್ (ಬಿಎಂಐಸಿ) ಯೋಜನೆ ಮುಂದುವರಿಸ ಬೇಕೆ ಅಥವಾ ಸ್ಥಗಿತಗೊಳಿಸಬೇಕೆ ಎಂಬ ಕುರಿತು ಸರ್ಕಾರ ಗಂಭೀರ ಚಿಂತನೆ ಆರಂಭಿಸಿದ್ದು, ಈ ಕುರಿತು ಸದ್ಯವೇ ಸ್ಪಷ್ಟ ತೀರ್ಮಾನ ತೆಗೆದುಕೊಳ್ಳಲಿದೆ.

ಇದಕ್ಕಾಗಿ ಸಚಿವ ಸಂಪುಟ ಉಪಸಮಿತಿಯನ್ನು ರಚಿಸಲು ಸರ್ಕಾರ ತೀರ್ಮಾನಿಸಿದ್ದು, ಗೃಹ ಸಚಿವ ಜಿ.ಪರಮೇಶ್ವರ ಅವರನ್ನು ಉಪಸಮಿತಿ ಅಧ್ಯಕ್ಷರನ್ನಾಗಿ ನೇಮಿಸುವ ಸಾಧ್ಯತೆ ಇದೆ. ಯೋಜನೆಯನ್ನು ಕೈಬಿಡುವ ಸಾಧ್ಯತೆ ದಟ್ಟವಾಗಿದೆ ಎಂದು ಮೂಲಗಳು ತಿಳಿಸಿವೆ.

ಬೆಂಗಳೂರು– ಮೈಸೂರು ಮೂಲಸೌಕರ್ಯ ಕಾರಿಡಾರ್ ಯೋಜನೆ ಕಾರ್ಯಗತಗೊಳಿಸಬೇಕಿದ್ದ ನೈಸ್ ಸಂಸ್ಥೆಯು ಸರ್ಕಾರದ ಎಲ್ಲ ನಿಯಮ ಮತ್ತು ಷರತ್ತುಗಳನ್ನು ಉಲ್ಲಂಘಿಸಿಕೊಂಡು ಬಂದಿರುವುದು ಮಾತ್ರವಲ್ಲ, ರಿಯಲ್ ಎಸ್ಟೇಟ್ ಸಂಸ್ಥೆಯಾಗಿ ರೂಪುಗೊಳ್ಳುತ್ತಿರುವ ಕಾರಣ ಯೋಜನೆ ಮುಂದುವರೆಸುವ ಅಗತ್ಯವಿಲ್ಲ. ಬೆಂಗಳೂರು–ಮೈಸೂರು ಮಧ್ಯೆ ಎಕ್ಸ್‌ಪ್ರೆಸ್ ಹೆದ್ದಾರಿ ನಿರ್ಮಾಣ ಮಾಡದೇ ಕೇವಲ ಪೆರಿಫೆರಲ್ ರಿಂಗ್ ರಸ್ತೆಯ ಮೂಲಕ ಟೋಲ್ ಸಂಗ್ರಹಿಸುತ್ತಿದೆ. ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ ಈಗಾಗಲೇ ಮೈಸೂರಿಗೆ ಹೆದ್ದಾರಿಯನ್ನು ನಿರ್ಮಿಸಿರುವುದರಿಂದ ನೈಸ್ ಸಂಸ್ಥೆ ತನ್ನ ಪ್ರಸ್ತುತತೆ ಕಳೆದುಕೊಂಡಿದೆ ಎಂದು ಸರ್ಕಾರದ ಉನ್ನತ ಮೂಲಗಳು ತಿಳಿಸಿವೆ.

ಈ ಯೋಜನೆಗೆ ಸಂಬಂಧಿಸಿದಂತೆ ಭೂವ್ಯಾಜ್ಯಗಳ 374 ಪ್ರಕರಣಗಳು ನ್ಯಾಯಾಲಯದಲ್ಲಿ ಬಾಕಿ ಇವೆ. ಕೆಲವು ಪ್ರಕರಣಗಳಲ್ಲಿ ನ್ಯಾಯಾಲಯಗಳಿಂದ ತೀರ್ಪು ಬಂದಿವೆ. ಈ ತೀರ್ಪುಗಳಿಂದ ನೈಸ್ ಸಂಸ್ಥೆಗೆ ಹಿನ್ನಡೆಯಾಗಿದೆ. ಮುಂದೆ ಬರುವ ತೀರ್ಪುಗಳು ನೈಸ್‌ಗೆ ವ್ಯತಿರಿಕ್ತವಾಗುವ ಸಾಧ್ಯತೆ ಇದೆ ಎಂದು ಮೂಲಗಳು ಹೇಳಿವೆ.

'ಮೈಸೂರಿಗೆ ಎಕ್ಸ್‌ಪ್ರೆಸ್ ವೇ ನಿರ್ಮಿಸುವ ಯೋಜನೆ ಇಲ್ಲದಿದ್ದರೆ, ₹33,219 ಕೋಟಿ ವೆಚ್ಚದಲ್ಲಿ 13,418 ಎಕರೆ ಭೂಸ್ವಾಧೀನಕ್ಕೆ ಮುಂದಾಗುವ ಅಗತ್ಯವಿಲ್ಲ. ಕೇವಲ ಕಲಂ28 (1) ರಡಿ ಅಧಿಸೂಚನೆ ಹೊರಡಿಸಿರುವುದರಿಂದ ಪ್ರಸ್ತಾವನೆ ಕೈಬಿಡಬಹುದು' ಎಂದು ಆರ್ಥಿಕ ಇಲಾಖೆಯು ಸಚಿವ ಸಂಪುಟಕ್ಕೆ ತನ್ನ ಅಭಿಪ್ರಾಯ ತಿಳಿಸಿದೆ.

'ಅಲ್ಲದೇ, ಹಾಲಿ ನೈಸ್ ರಸ್ತೆಯು (ಪೆರಿಫೆರಲ್) ಪೂರ್ಣಗೊಂಡಿದ್ದು, ಇಲ್ಲಿ ಇನ್ನು ಹೆಚ್ಚಿನ ಅಭಿವೃದ್ಧಿಯ ಅಗತ್ಯ ಇಲ್ಲದ ಕಾರಣ ಲೋಕೋಪಯೋಗಿ ಇಲಾಖೆ 2,531 ಎಕರೆ ಭೂಮಿ ಸ್ವಾಧೀನಪಡಿಸಿಕೊಳ್ಳುವುದು ಅವಶ್ಯಕತೆ ಇದೆಯೇ ಎಂಬುದನ್ನು ಪುನರ್ ಪರಿಶೀಲಿಸಬೇಕು. ಈ ಸಂಬಂಧ ಕಾನೂನು ಇಲಾಖೆಯಿಂದ ಅಭಿಪ್ರಾಯ ಪಡೆಯಬೇಕು. ಒಂದು ವೇಳೆ ಕಾನೂನು ಇಲಾಖೆ ನೈಸ್ ಕಂಪನಿಗೆ ಭೂಮಿ ನೀಡಬೇಕಾಗುತ್ತದೆ ಎಂದು ಅಭಿಪ್ರಾಯ ಪಟ್ಟರೆ, ಆ ಸಂದರ್ಭದಲ್ಲಿ ಕಾನೂನಿನ ಪ್ರಕಾರ ಸಂಪೂರ್ಣ ಭೂಸ್ವಾಧೀನಕ್ಕೆ ನೈಸ್ ಕಂಪನಿಯೇ ಪರಿಹಾರ ನೀಡಬೇಕಾಗುತ್ತದೆ. ವೆಚ್ಚದ ಯಾವುದೇ ಭಾಗವನ್ನು ಸರ್ಕಾರ ಭರಿಸುವ ಅಗತ್ಯವಿಲ್ಲ' ಎಂದು ಆರ್ಥಿಕ ಇಲಾಖೆ ಸ್ಪಷ್ಟಪಡಿಸಿದೆ.

'ಯೋಜನೆಯ ಮುಕ್ತಾಯ ಅಥವಾ ಮುಂದುವರಿಕೆಗೆ ಸಂಬಂಧಿಸಿದಂತೆ ಯಾವುದೇ ನಿರ್ಧಾರವನ್ನು ಸರ್ಕಾರದ ಮೇಲಿನ ಹೊಣೆಗಾರಿಕೆಯನ್ನು ಗಮನದಲ್ಲಿಟ್ಟುಕೊಂಡು ತೆಗೆದುಕೊಳ್ಳಬೇಕು. ಕಳೆದ 16 ಕ್ಕೂ ಹೆಚ್ಚು ವರ್ಷಗಳಿಂದ ಟೋಲ್ ಶುಲ್ಕದಿಂದ ನೈಸ್ ಕಂಪನಿ ಪಡೆದ ಆದಾಯವೂ ಒಳಗೊಂಡಂತೆ ಪಡೆದಿರುವ ಪ್ರಯೋಜನಗಳನ್ನು 55 ಕಿ.ಮೀ ರಸ್ತೆ ನಿರ್ಮಿಸಲು ಮಾಡಿರುವ ವೆಚ್ಚದಲ್ಲಿ ಮನ್ನಾ ಮಾಡಬೇಕು. ಈ ಯೋಜನೆ ಕಳೆದ 16 ವರ್ಷಗಳಲ್ಲಿ ಭಾಗಶಃ ಪೂರ್ಣಗೊಂಡಿರುವುದರಿಂದ ಮತ್ತು ಸರ್ಕಾರವು ರಸ್ತೆ ನಿರ್ಮಾಣಕ್ಕೆ ಅಗತ್ಯವಿರುವುದಕ್ಕಿಂತ ಹೆಚ್ಚಿನ ಭೂಮಿಯನ್ನು ನೀಡಿರುವುದರಿಂದ ಸರ್ಕಾರವು ಹೆಚ್ಚುವರಿ ಹೊಣೆಗಾರಿಕೆ ಭರಿಸುವ ಅಗತ್ಯವಿಲ್ಲ' ಎಂದೂ ಹೇಳಿದೆ.

ಯೋಜನೆ ಏನಾಗಿತ್ತು?

1995 ರಲ್ಲಿ ಸರ್ಕಾರಕ್ಕೆ ಸಲ್ಲಿಸಿದ್ದ ತಾಂತ್ರಿಕ ವರದಿಯಲ್ಲಿ 41 ಕಿ.ಮೀ ಉದ್ದದ ಪೆರಿಫೆರಲ್ ರಸ್ತೆ, 9.8 ಕಿ.ಮೀ ಉದ್ದದ ಲಿಂಕ್ ರಸ್ತೆ, 111 ಕಿ.ಮೀ ಉದ್ದದ ಎಕ್ಸ್‌ಪ್ರೆಸ್ ಹೆದ್ದಾರಿ ಮತ್ತು 7 ಉಪನಗರಗಳ ಪ್ರಸ್ತಾಪವಿತ್ತು. ಆ ಬಳಿಕ 7 ಉಪನಗರಗಳ ಬದಲಿಗೆ 5 ಉಪನಗರಗಳ ಪ್ರಸ್ತಾವ ಮುಂದಿಟ್ಟಿತ್ತು. 30 ವರ್ಷಗಳ ಗುತ್ತಿಗೆ ಅವಧಿ ಮುಗಿದ ನಂತರ ರಸ್ತೆಯ ಎಲ್ಲಾ ಸೌಲಭ್ಯಗಳನ್ನು ನೈಸ್ ಸಂಸ್ಥೆಯು ಸರ್ಕಾರಕ್ಕೆ ಹಿಂತಿರುಗಿಸಬೇಕು ಎಂಬ ಒಪ್ಪಂದ ಮಾಡಿಕೊಳ್ಳಲಾಗಿತ್ತು.

ಈವರೆಗೆ ಏನೇನಾಗಿದೆ?


- ಕ್ರಿಯಾ ಒಪ್ಪಂದದಂತೆ (ಫ್ರೇಮ್ ವರ್ಕ್ ಅಗ್ರಿಮೆಂಟ್) 13,237 ಎಕರೆ ಖಾಸಗಿ ಜಮೀನು ಮತ್ತು 6956 ಸರ್ಕಾರಿ ಜಮೀನು ಸೇರಿ ಒಟ್ಟು 20193 ಎಕರೆ ಸ್ವಾಧೀನಕ್ಕೆ ನೈಸ್ ಕಂಪನಿ ಜತೆ ಒಪ್ಪಂದ ಆಗಿತ್ತು.
- 1998–99 ರಲ್ಲಿ 23,625 ಎಕರೆ ಖಾಸಗಿ ಜಮೀನು ಮತ್ತು 5,688 ಎಕರೆ ಸರ್ಕಾರಿ ಜಮೀನು ಸೇರಿ ಒಟ್ಟು 29,313 ಭೂಸ್ವಾಧೀನ ಮಾಡಿಕೊಳ್ಳಲು ಸಚಿವ ಸಂಪುಟದ ಅನುಮೋದನೆ ಇಲ್ಲದೇ ಕೆಐಎಡಿಬಿ ಒಪ್ಪಂದ ಮಾಡಿಕೊಂಡಿತ್ತು.
- ನೈಸ್ ಸಂಸ್ಥೆಗೆ ಇಲ್ಲಿಯವರೆಗೆ 2,191 ಎಕರೆ ಖಾಸಗಿ ಜಮೀನು ಮತ್ತು 5,000 ಎಕರೆ ಸರ್ಕಾರಿ ಜಮೀನು ಹಸ್ತಾಂತರ ಮಾಡಲಾಗಿದೆ.
- 2 ಎಕರೆ ಸರ್ಕಾರಿ ಜಮೀನು ಸೇರಿ 1,699 ಎಕರೆ ಜಮೀನಿಗೆ ಕೆಐಎಡಿಬಿಯಿಂದ ನೈಸ್ ಸಂಸ್ಥೆಗೆ ಶುದ್ಧ ಕ್ರಯ ಪತ್ರ ಮಾಡಲಾಗಿದೆ.

ಸುದ್ದಿ 2 ನಿಮಿಷ

1,566 ಗುತ್ತಿಗೆದಾರರ ಬಾಕಿ ಇತ್ಯರ್ಥ

ಬೆಂಗಳೂರು: ಎಲ್ಲ ಗುತ್ತಿಗೆದಾರರಿಗೂ ಪಾರದರ್ಶಕವಾಗಿ ಹಣ ಬಿಡುಗಡೆ ಮಾಡಲಾಗುತ್ತಿದೆ. ಗುತ್ತಿಗೆದಾರರ ಸಂಘ ಮಾಡಿರುವ ಆರೋಪ ನಿರಾಧಾರ ಎಂದು ಸಣ್ಣ ನೀರಾವರಿ ಸಚಿವ ಎನ್.ಎಸ್. ಬೋಸರಾಜು ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಶುಕ್ರವಾರ ಮಾತನಾಡಿದ ಅವರು, ಇಲಾಖೆಯ ಆಡಳಿತದಲ್ಲಿ ಯಾರದೂ ಹಸ್ತಕ್ಷೇಪ ಇಲ್ಲ. ಕೆರೆಗಳ ಆಧುನೀಕರಣದಲ್ಲಿ ₹10 ಲಕ್ಷದವರೆಗಿನ ಕಾಮಗಾರಿಗಳಿಗೆ, ಪಿಕ್‌ಅಪ್ ಅಣೆಕಟ್ಟೆಗಳ ಕಾಮಗಾರಿಗಳಿಗೆ ₹15 ಲಕ್ಷದವರೆಗೆ ಪೂರ್ಣ ಹಣ ಬಿಡುಗಡೆ ಮಾಡಲಾಗಿದೆ. ತಾರತಮ್ಯ, ಹಸ್ತಕ್ಷೇಪ ಇಲ್ಲದೇ ಸಣ್ಣ ಗುತ್ತಿಗೆದಾರರಿಗೂ ಹಣ ನೀಡಲಾಗಿದೆ. ಹೆಚ್ಚಿನ ಹಣ ಬಾಕಿ ಇರುವ ಗುತ್ತಿಗೆದಾರರನ್ನು ಆದ್ಯತೆಯ ಮೇಲೆ ಪರಿಗಣಿಸಲಾಗಿದೆ. ಎರಡು ವರ್ಷಗಳಲ್ಲಿ 1,566 ಗುತ್ತಿಗೆದಾರರ ಬಾಕಿ ಇತ್ಯರ್ಥ ಮಾಡಲಾಗಿದೆ ಎಂದರು.



ರಾಜ್ಯ ಗುತ್ತಿಗೆದಾರರ ಸಂಘ ಆಧಾರ ರಹಿತ ಆರೋಪ ಮಾಡಿದೆ. ಸಂಘದ ಮುಖಂಡರ ಜತೆ ಸಭೆ ನಡೆಸಿ, ಗೊಂದಲಗಳನ್ನು ಪರಿಹರಿಸಲಾಗಿದೆ. ಬಿಜೆಪಿ ಸರ್ಕಾರದ ಅವಧಿಯಲ್ಲಿ ಅನುದಾನ ಇಲ್ಲದಿದ್ದರೂ, ಅವೈಜ್ಞಾನಿಕವಾಗಿ ಅನುಮೋದನೆ ನೀಡಲಾಗಿದ್ದ ₹12,693 ಕೋಟಿ ಮೊತ್ತದ ಒಟ್ಟು 15,549 ಕಾಮಗಾರಿ ಮುಂದುವರಿಸಲಾಗಿದೆ. 2000 ಗುತ್ತಿಗೆದಾರರಲ್ಲಿ, 639 ಗುತ್ತಿಗೆದಾರರ ಸಂಪೂರ್ಣ ಹಣವನ್ನು ಬಿಡುಗಡೆ ಮಾಡಲಾಗಿದೆ. 1,361 ಗುತ್ತಿಗೆದಾರರಿಗೆ ಭಾಗಶಃ ಹಣ ನೀಡಲಾಗಿದೆ ಎಂದರು.

ಸಿಇಟಿ ಕೀ ಉತ್ತರ ಪ್ರಕಟ: 22ರ ಒಳಗೆ ಆಕ್ಷೇಪಣೆ

ಬೆಂಗಳೂರು: ಪ್ರಸಕ್ತ ಸಾಲಿನ ಸಾಮಾನ್ಯ ಪ್ರವೇಶ ಪರೀಕ್ಷೆಯ (ಸಿಇಟಿ) ಕೀ ಉತ್ತರಗಳನ್ನು ಕರ್ನಾಟಕ ಪರೀಕ್ಷಾ ಪ್ರಾಧಿಕಾರ ಶುಕ್ರವಾರ ಪ್ರಕಟಿಸಿದೆ. ಭೌತವಿಜ್ಞಾನ, ರಸಾಯನ ವಿಜ್ಞಾನ, ಗಣಿತ ಮತ್ತು ಜೀವವಿಜ್ಞಾನ ಸೇರಿ ನಾಲ್ಕೂ ವಿಷಯದ 16 ವರ್ಷನ್‌ಗಳ ಕೀ ಉತ್ತರಗಳನ್ನು ಪ್ರಕಟಿಸಿದ್ದು, ಆನ್‌ಲೈನ್ ಮೂಲಕ ಆಕ್ಷೇಪಣೆ ಸಲ್ಲಿಸಲು ಏ. 22ರ ಸಂಜೆ 5ರವರೆಗೆ ಅವಕಾಶ ನೀಡಲಾಗಿದೆ.

ಆಕ್ಷೇಪಣೆ ಸಲ್ಲಿಸುವಾಗ ಪತ್ರಿಕೆಯ ವಿವರ, ಪರೀಕ್ಷಾ ದಿನಾಂಕ, ವರ್ಷನ್ ಕೋಡ್, ಪ್ರಶ್ನೆ ಸಂಖ್ಯೆ ಹಾಗೂ ಪೂರಕ ದಾಖಲೆಗಳನ್ನು ಪಿಡಿಎಫ್ ರೂಪದಲ್ಲಿ ಸಲ್ಲಿಸಬೇಕು. ಈ ಮಾಹಿತಿ ಸರಿ ಇಲ್ಲದಿದ್ದರೆ ಅಂತಹ ಆಕ್ಷೇಪಣೆಗಳನ್ನು ಪರಿಗಣಿಸುವುದಿಲ್ಲ ಎಂದು ಪ್ರಾಧಿಕಾರದ ಕಾರ್ಯನಿರ್ವಾಹಕ ನಿರ್ದೇಶಕ ಎಚ್. ಪ್ರಸನ್ನ ಹೇಳಿದ್ದಾರೆ.

ಅರ್ಜಿ ತಿದ್ದುಪಡಿಗೆ ಅವಕಾಶ: ಸಿಇಟಿ ಅರ್ಜಿಯಲ್ಲಿ ಏನಾದರೂ ತಪ್ಪುಗಳಿದ್ದು, ಅವುಗಳನ್ನು ತಿದ್ದುಪಡಿ ಮಾಡಿಕೊಳ್ಳಲು ಇಚ್ಛಿಸುವವರಿಗೆ ಮೇ 2ರವರೆಗೆ ಅವಕಾಶ ನೀಡಲಾಗಿದೆ. ಮೀಸಲಾತಿ, ವಿಶೇಷ ಪ್ರವರ್ಗ, ಶೈಕ್ಷಣಿಕ ವಿವರಗಳು, ಕ್ಲಾಸ್ ಕೋಡ್‌ಗಳಲ್ಲಿ (ಎ,ಬಿ,ಸಿ,ಡಿ.. ಇತ್ಯಾದಿ) ತಪ್ಪಾಗಿದ್ದರೆ ಅವುಗಳನ್ನು ಸರಿಪಡಿಸಿಕೊಳ್ಳಬಹುದು. ಅಭ್ಯರ್ಥಿಗಳ ಹೆಸರು, ತಂದೆ–ತಾಯಿ ಹೆಸರು, ಜನ್ಮ ದಿನಾಂಕ, 10ನೇ ತರಗತಿ ಹಾಗೂ 12ನೇ ತರಗತಿಯ ನೋಂದಣಿ ಸಂಖ್ಯೆ ತಪ್ಪಾಗಿದ್ದರೆ ದಾಖಲೆ ಸಹಿತ ಪ್ರಾಧಿಕಾರಕ್ಕೆ ಬಂದು ಮನವಿ ಸಲ್ಲಿಸಬೇಕು ಎಂದು ಸೂಚಿಸಿದ್ದಾರೆ.

ಕೃಷಿಕರ ಕೋಟಾದಡಿ ಪ್ರಾಯೋಗಿಕ ಪರೀಕ್ಷೆ ಬರೆಯಲು ಅರ್ಜಿಯಲ್ಲಿ ನಮೂದೇ ಇದ್ದವರು ಏ.20ರ ಒಳಗೆ ತಿದ್ದುಪಡಿ ಮಾಡಿಕೊಳ್ಳಬೇಕು. ಹೊಸದಾಗಿ ಕೃಷಿಕರ ಕೋಟಾ ನಮೂದಿಸಿದವರು ಏ. 21ರಂದು ತಮ್ಮ ದಾಖಲೆಗಳನ್ನು ಕೆಇಎ ವೆಬ್‌ಸೈಟ್‌ನಲ್ಲಿ ಅಪ್‌ಲೋಡ್ ಮಾಡಬೇಕು ಎಂದು ಹೇಳಿದ್ದಾರೆ.

ವಿದ್ಯಾರ್ಥಿಗೆ ಮರು ಪರೀಕ್ಷೆ ಬಗ್ಗೆ ಚರ್ಚೆ: ಸುಧಾಕರ್

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಪರೀಕ್ಷೆ ಬರೆಯಲಾಗದೇ ನೊಂದಿರುವ ವಿದ್ಯಾರ್ಥಿಯೊಂದಿಗೆ ಮೊಬೈಲ್ ಮೂಲಕ ಮಾತನಾಡಲಾಗಿದೆ. ವಿದ್ಯಾರ್ಥಿ ಗಣಿತ ಪರೀಕ್ಷೆ ಬರೆದಿಲ್ಲ ಎಂಬ ಮಾಹಿತಿ ಇದೆ. ಅದನ್ನು ಸರಿಪಡಿಸುವ ಬಗ್ಗೆ ಯೋಚಿಸಲಾಗುವುದು' ಎಂದು ಉನ್ನತ ಶಿಕ್ಷಣ ಸಚಿವ ಡಾ.ಎಂ.ಸಿ.ಸುಧಾಕರ್ ಹೇಳಿದರು.

ಶಿವಮೊಗ್ಗ ಮತ್ತು ಬೀದರ್‌ನಲ್ಲಿ ನಡೆದ ಘಟನೆಯ ಬಗ್ಗೆ ಪ್ರತಿಕ್ರಿಯಿಸಿದ ಅವರು, 'ನಾನು ಇಂತಹದನ್ನು ಪ್ರೋತ್ಸಾಹಿಸುವುದಿಲ್ಲ. ಜನಿವಾರ ತೆಗೆಸಬೇಕು ಎಂಬ ನಿಯಮವಿಲ್ಲ. ಮಾರ್ಗಸೂಚಿಯೂ ಇಲ್ಲ. ಪರೀಕ್ಷೆ ಬರೆಯಲು ಸಾಧ್ಯವಾಗದ ವಿದ್ಯಾರ್ಥಿಗೆ ಏನು ಪರ್ಯಾಯ ಮಾಡಬಹುದು ಎಂಬುದನ್ನು ಚರ್ಚಿಸುತ್ತೇನೆ. ಪರೀಕ್ಷೆ ನಡೆಸುವ ಜವಾಬ್ದಾರಿ ಆಯಾ ಜಿಲ್ಲೆಗಳ ಜಿಲ್ಲಾಧಿಕಾರಿಗಳಿಗಿರುತ್ತದೆ. ಈ ಪ್ರಕರಣವನ್ನು ಗಂಭೀರವಾಗಿ ತೆಗೆದುಕೊಳ್ಳುತ್ತೇನೆ' ಎಂದರು.

'ಎಲ್ಲಾ ಜಾತಿ ಮತ್ತು ಧರ್ಮಗಳ ಆಚರಣೆ, ಸಂಪ್ರದಾಯಗಳಿಗೆ ಗೌರವ ಕೊಡಬೇಕು. ಈ ವಿಚಾರವಾಗಿ ರಾಜಕಾರಣ ಮಾಡಬಾರದು. ಹಿಜಾಬ್ ಪ್ರಕರಣದಲ್ಲಿ ನಾವು ರಾಜಕೀಯ ಲಾಭ ಪಡೆಯಲಿಲ್ಲ. ಯಾವುದೇ ಸಮುದಾಯವನ್ನು ನೋಯಿಸುವ ಉದ್ದೇಶ ನಮಗಿಲ್ಲ. ಎಲ್ಲರ ಭಾವನೆಗಳನ್ನೂ ಗೌರವಿಸುತ್ತೇವೆ' ಎಂದು ಹೇಳಿದರು.

ಅಧಿಕಾರಿ ವಿರುದ್ಧ ಕ್ರಮ: ಮಧು ಬಂಗಾರಪ್ಪ



ಶಿವಮೊಗ್ಗ: ನಗರದಲ್ಲಿ ಬುಧವಾರ ವೃತ್ತಿಪರ ಕೋರ್ಸ್‌ಗಳ ಪ್ರವೇಶ ಪರೀಕ್ಷೆ (ಸಿಇಟಿ)ಗೆ ಹಾಜರಾಗಲು ಪರೀಕ್ಷಾ ಕೇಂದ್ರದೊಳಗೆ ತೆರಳುವ ವೇಳೆ ವಿದ್ಯಾರ್ಥಿಯ ಜನಿವಾರ ಮತ್ತು ಶಿವದಾರ ತೆಗೆಸಿದ್ದ ಕ್ರಮವನ್ನು ಗಂಭೀರವಾಗಿ ಪರಿಗಣಿಸಿರುವ ಶಾಲಾ ಶಿಕ್ಷಣ ಹಾಗೂ ಸಾಕ್ಷರತಾ ಇಲಾಖೆ ಸಚಿವ ಮಧು ಬಂಗಾರಪ್ಪ, ಸಂಬಂಧಿಸಿದ ಪರೀಕ್ಷಾ ಕೇಂದ್ರದ ಅಧಿಕಾರಿಯ ವಿರುದ್ಧ ಶಿಸ್ತು ಕ್ರಮಕ್ಕೆ ಸೂಚಿಸಿದ್ದಾರೆ.

'ಪ್ರಕರಣದ ಕುರಿತು ನಿಖರ ಮಾಹಿತಿ ಪಡೆಯುತ್ತೇನೆ. ಜನಿವಾರ ತೆಗೆಯುವ ನಿಯಮ ಇಲ್ಲ. ಎಲ್ಲ ಜಾತಿ– ಧರ್ಮಗಳಿಗೆ ಗೌರವ ಕೊಡಬೇಕಾಗುತ್ತದೆ. ಯಾರದ್ದೇ ಧಾರ್ಮಿಕ ಭಾವನೆಗೆ ಧಕ್ಕೆ ತರುವುದನ್ನು ಸಹಿಸಲು ಆಗುವುದಿಲ್ಲ. ಘಟನೆಗೆ ಕಾರಣರಾದವರ ವಿರುದ್ಧ ಕ್ರಮ ಕೈಗೊಳ್ಳಲಾಗುತ್ತದೆ' ಎಂದು ಅವರು ತಿಳಿಸಿದ್ದಾರೆ.

'ಜನಿವಾರ ತೆಗೆಸಿದವರ ವಿರುದ್ಧ ಕ್ರಮ ಜರುಗಿಸಿ'



ಬೆಂಗಳೂರು: ಜನಿವಾರ ಧರಿಸಿದ್ದ ವಿದ್ಯಾರ್ಥಿಗಳಿಗೆ ಬೀದರ್ ಮತ್ತು ಶಿವಮೊಗ್ಗ ಜಿಲ್ಲೆಯಲ್ಲಿ ಸಿಇಟಿ ಪರೀಕ್ಷೆಗೆ ಬರೆಯಲು ಅವಕಾಶ ನೀಡದ ಅಧಿಕಾರಿಗಳ ವಿರುದ್ಧ ಕ್ರಮ ತೆಗೆದುಕೊಳ್ಳಬೇಕು ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ, ಸರ್ಕಾರವನ್ನು ಒತ್ತಾಯಿಸಿದ್ದಾರೆ.

'ಬ್ರಾಹ್ಮಣ ವಿದ್ಯಾರ್ಥಿಗಳ ಭವಿಷ್ಯಕ್ಕೆ ಕಲ್ಲು ಹಾಕಿದ ಅಧಿಕಾರಿ ಮತ್ತು ಸಿಬ್ಬಂದಿ ವರ್ತನೆ ಅತ್ಯಂತ ಹೇಯ, ಬೌದ್ಧಿಕ ವಿಕೃತಿ ಮತ್ತು ಮನುಷ್ಯತ್ವ ಇಲ್ಲದ ನಡೆ' ಎಂದು ಅವರು 'ಎಕ್ಸ್'ನಲ್ಲಿ ಆಕ್ರೋಶ ವ್ಯಕ್ತಪಡಿಸಿದ್ದಾರೆ. 'ಪರೀಕ್ಷೆ ಮತ್ತು ಸಂದರ್ಶನ ಎದುರಿಸುವ ವೇಳೆ ಕೆಲ ವಸ್ತುಗಳನ್ನು ಕೊಂಡೊಯ್ಯುವುದು ನಿಷಿದ್ಧ. ಆದರೆ, ಜನಿವಾರ ತೊಡುವುದು ಭಾರತೀಯ ಸಮುದಾಯವೊಂದರ ಆಚಾರ–ವಿಚಾರಕ್ಕೆ ಸಂಬಂಧಿಸಿದ್ದಾಗಿದೆ. ವಿದ್ಯಾರ್ಥಿ ಬರೆಯುವ ಪರೀಕ್ಷೆಯ ಮೇಲೆ ಜನಿವಾರ ಏನು ಪ್ರಭಾವ ಬೀರುತ್ತದೆ ಎಂದು ಸಚಿವರು ಉತ್ತರಿಸಬೇಕು' ಎಂದು ವಿಜಯೇಂದ್ರ ಒತ್ತಾಯಿಸಿದ್ದಾರೆ.

ಬ್ರಾಹ್ಮಣರು ಮಾತ್ರವಲ್ಲದೆ ವೈಶ್ಯರು, ಕ್ಷತ್ರಿಯರೂ ಜನಿವಾರ ಹಾಕುತ್ತಾರೆ. ಈ ಎಲ್ಲರಿಗೆ ಕಾಂಗ್ರೆಸ್ ಸರ್ಕಾರ ಅಪಮಾನ ಮಾಡಿರುವುದು ಖಂಡನೀಯ
ಆರ್. ಅಶೋಕ, ವಿರೋಧ ಪಕ್ಷದ ನಾಯಕ

ವ್ಯವಸ್ಥಿತ ಕುತಂತ್ರ ಇರಬಹುದು. ಸನಾತನ ಧರ್ಮದ ಅನುಯಾಯಿಗಳನ್ನು ಕೆಣಕುವ ದುಷ್ಟ ಪ್ರವೃತ್ತಿ ಎಲ್ಲಾ ಕಡೆ ಇದೆ. ಸರ್ಕಾರ ಕ್ರಮ ಕೈಗೊಳ್ಳಲಿ
ಸುಗುಣೇಂದ್ರತೀರ್ಥ ಸ್ವಾಮೀಜಿ, ಪರ್ಯಾಯ ಪುತ್ತಿಗೆ ಮಠಾಧೀಶ

ರಾಜ್ಯದಲ್ಲಿ ಜನಿವಾರ, ಶಿವದಾರ ಧರಿಸಿದ ವಿದ್ಯಾರ್ಥಿಗಳಿಗೆ ಪರೀಕ್ಷೆ ಬರೆಯಲು ಅವಕಾಶವಿಲ್ಲ. ಇದು ಸಿದ್ದರಾಮಯ್ಯನವರ ಸೆಕ್ಯುಲರ್ ಸರ್ಕಾರ. ಬೀದರ್, ತೀರ್ಥಹಳ್ಳಿ ವಿದ್ಯಾರ್ಥಿಗಳಿಗೆ ಪುನಃ ಪರೀಕ್ಷೆಗೆ ವ್ಯವಸ್ಥೆ ಮಾಡಬೇಕು
ಎನ್. ರವಿಕುಮಾರ, ವಿಧಾನ ಪರಿಷತ್ ಸದಸ್ಯ

ಜನಿವಾರಕ್ಕೆ ಧಾರ್ಮಿಕ ಮಹತ್ವವಿದ್ದು, ಅದನ್ನು ತೆಗೆಸಿರುವುದು ಸಂವಿಧಾನದತ್ತವಾದ ಧಾರ್ಮಿಕ ಹಕ್ಕನ್ನು ಮೊಟಕುಗೊಳಿಸುವ ಕೃತ್ಯ
ಡಾ. ಗಿರಿಧರ್ ಕಜೆ, ಅಖಿಲ ಹವ್ಯಕ ಮಹಾಸಭೆಯ ಅಧ್ಯಕ್ಷ

ಜನಿವಾರ ಧರಿಸಿದ್ದರಿಂದ ಸಿಇಟಿ ಬರೆಯಲು ಅವಕಾಶ ನಿರಾಕರಿಸಿರುವುದು ಅತ್ಯಂತ ಹೇಯ, ಅಮಾನುಷ ಕೃತ್ಯ. ಹಿಂದೂ ಸಂಸ್ಕೃತಿ, ಆಚರಣೆಗೆ ಕಾಂಗ್ರೆಸ್ ಸರ್ಕಾರ ಮಾಡುತ್ತಿರುವ ಅಪಚಾರಕ್ಕೆ ಕೊನೆಯೇ ಇಲ್ಲ
ಟಿ.ಎ. ಶರವಣ, ವಿಧಾನ ಪರಿಷತ್‌ನ ಜೆಡಿಎಸ್ ಸದಸ್ಯ

ಕೇಂದ್ರ ಪಠ್ಯ ಶಾಲೆಗಳಲ್ಲೇ ಗೊಂದಲ

ಶಾಲಾ ಪ್ರವೇಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಒಂದನೇ ತರಗತಿಗೆ ಪ್ರವೇಶ ಪಡೆಯುವ ಮಕ್ಕಳ ಕನಿಷ್ಠ ವಯಸ್ಸನ್ನು 2025–26ನೇ ಸಾಲಿಗೆ ಮಾತ್ರ ಅನ್ವಯವಾಗುವಂತೆ 5 ವರ್ಷ 5 ತಿಂಗಳಿಗೆ ನಿಗದಿಗೊಳಿಸಿದ ಶಾಲಾ ಶಿಕ್ಷಣ ಇಲಾಖೆ ಆದೇಶವನ್ನು ಪಾಲಿಸದೇ ಇರಲು ಸಿಬಿಎಸ್‌ಇ, ಐಸಿಎಸ್‌ಇ ಸೇರಿದಂತೆ ಕೇಂದ್ರ ಪಠ್ಯಕ್ರಮ ಅನುಸರಿಸುವ ಬಹುತೇಕ ಶಾಲೆಗಳು ನಿರ್ಧರಿಸಿವೆ. ಕೆಲ ಶಾಲೆಗಳು ಸಮ್ಮತಿ ಸೂಚಿಸಿವೆ.

ರಾಷ್ಟ್ರೀಯ ಶಿಕ್ಷಣ ನೀತಿ ಹಾಗೂ ಕಡ್ಡಾಯ ಶಿಕ್ಷಣ ಕಾಯ್ದೆಯ ಅನ್ವಯ ಒಂದನೇ ತರಗತಿ ಪ್ರವೇಶದ ವಯೋಮಿತಿಯನ್ನು ಕೇಂದ್ರ ಸರ್ಕಾರ 6 ವರ್ಷಕ್ಕೆ ನಿಗದಿಗೊಳಿಸಿ 2024ರಲ್ಲೇ ಆದೇಶ ಹೊರಡಿಸಿದೆ. ಆ ಪ್ರಕಾರ, 2024–25ನೇ ಸಾಲಿನಿಂದಲೇ ನಿಯಮ ಪಾಲಿಸಲಾಗಿದೆ. ಇದೊಂದು ವರ್ಷ ವಯೋಮಿತಿ ಸಡಿಲಿಕೆಗೆ ಅವಕಾಶ ನೀಡಿದರೆ ಹೊರ ರಾಜ್ಯಕ್ಕೆ ವರ್ಗಾವಣೆಗೊಳ್ಳುವ ಮಕ್ಕಳ ಶೈಕ್ಷಣಿಕ ಭವಿಷ್ಯಕ್ಕೆ ತೊಡಕಾಗುತ್ತದೆ. ಮತ್ತೆ ಮುಂದಿನ ಶೈಕ್ಷಣಿಕ ವರ್ಷಕ್ಕೆ 6 ವರ್ಷ ಕಡ್ಡಾಯವಾಗುತ್ತದೆ. ಹೀಗಿರುವಾಗ ಸಡಿಲಿಕೆ ನಿಯಮ ಪಾಲಿಸುವುದರಲ್ಲಿ ಅರ್ಥವಿಲ್ಲ ಎನ್ನುವುದು ಕೇಂದ್ರ ಪಠ್ಯಕ್ರಮ ಅನುಸರಿಸುವ ಶಾಲೆಗಳ ವಾದ.

'ಕೇಂದ್ರ ಪಠ್ಯಕ್ರಮದ ಶಾಲೆಗಳ ವ್ಯಾಪ್ತಿ ದೇಶದ ಎಲ್ಲೆಡೆ ಒಂದೇ ರೀತಿ ಇದೆ. ಈ ವರ್ಷದಿಂದ ಮಹಾರಾಷ್ಟ್ರವೂ ವಯೋಮಿತಿಯನ್ನು 6 ವರ್ಷಕ್ಕೆ ಕಡ್ಡಾಯಗೊಳಿಸಿದೆ. ರಾಜ್ಯ ಸರ್ಕಾರದ ಆದೇಶದಂತೆ 5 ವರ್ಷ, 5 ತಿಂಗಳು ಪ್ರವೇಶ ನೀಡಿದರೆ ಕೇಂದ್ರೀಯ ವಿದ್ಯಾಲಯ ಅಥವಾ ಬೇರೆ ರಾಜ್ಯಗಳಿಗೆ ತೆರಳುವ ಮಕ್ಕಳಿಗೆ ವಯೋಮಿತಿ ವ್ಯತ್ಯಾಸದಿಂದ ಅನ್ಯಾಯವಾಗುತ್ತದೆ. ಹಾಗಾಗಿ, ನಿಯಮ ಪಾಲಿಸದೇ ಇರಲು ನಿರ್ಧರಿಸಿದ್ದೇವೆ. ಒತ್ತಡ ಬಂದರೆ ಕೋರ್ಟ್ ಮೊರೆ ಹೋಗುತ್ತೇವೆ' ಎನ್ನುತ್ತಾರೆ ಕರ್ನಾಟಕ ಖಾಸಗಿ ಶಾಲಾ ಆಡಳಿತ ಮಂಡಳಿ ಸಂಚಾಲಕ ಡಿ. ಶಶಿಕುಮಾರ್.

ಕೆಲ ಶಾಲೆಗಳ ಸಮ್ಮತಿ: ಕೇಂದ್ರ ಪಠ್ಯಕ್ರಮ ಅನುಸರಿಸುವ ಕೆಲ ಶಾಲೆಗಳು 5 ವರ್ಷ, 5 ತಿಂಗಳು ವಯೋಮಿತಿಯ ಪ್ರಕಾರವೇ ಪ್ರವೇಶ ನೀಡಲು ಸಮ್ಮತಿಸಿವೆ. ಆದರೆ, ಕಳೆದ ಸಾಲಿನಲ್ಲಿ 4 ವರ್ಷ ತುಂಬಿದ ಮಕ್ಕಳಿಗೆ ಮಾತ್ರ ಎಲ್‌ಕೆಜಿ ಪ್ರವೇಶ ನೀಡಲಾಗಿತ್ತು. ಆ ಮಕ್ಕಳು ಈಗ ಯುಕೆಜಿಗೆ ಪ್ರವೇಶ ಪಡೆಯುತ್ತಿವೆ. ಎಲ್‌ಕೆಜಿ, ಯುಕೆಜಿ ಪೂರ್ಣಗೊಳಿಸದ ಮಕ್ಕಳಿಗೆ 6 ವರ್ಷ ಕಡ್ಡಾಯವಾಗಿರುವುದರಿಂದ ಹೊಸ ಆದೇಶ ಪಾಲಿಸಿದರೂ, ಪ್ರಯೋಜನವಾಗದು.

'ಐಸಿಎಸ್‌ಸಿ, ಸಿಬಿಎಸ್‌ಇ ಓದುವ ಮಕ್ಕಳು ಆರು ವರ್ಷ ಪೂರೈಸಿದ್ದರೆ ಒಂದನೇ ತರಗತಿಯ ಶಿಕ್ಷಣ ಸುಲಲಿತವಾಗುತ್ತದೆ. ಆದರೂ, ಪೋಷಕರು ಬಯಸಿದರೆ 5 ವರ್ಷ, 5 ತಿಂಗಳು ತುಂಬಿದ ಮಕ್ಕಳಿಗೂ ಈ ಬಾರಿ ಪ್ರವೇಶ ನೀಡುತ್ತೇವೆ. ನಿಯಮಗಳ ಬದಲಾವಣೆಯಿಂದ ಪ್ರಯೋಜನ ಪಡೆಯುವ ಮಕ್ಕಳು ಅತ್ಯಂತ ಕಡಿಮೆ ಎನ್ನುತ್ತಾರೆ' ರಾಷ್ಟ್ರೀಯ ವಸತಿ ಶಾಲೆಯ ಮುಖ್ಯಶಿಕ್ಷಕಿ ಸುಜಾತ.

'ಆದೇಶ ಪಾಲನೆ ಕಡ್ಡಾಯ'

ರಾಜ್ಯ ಸರ್ಕಾರದ ಆದೇಶವನ್ನು ರಾಜ್ಯದಲ್ಲಿರುವ ಎಲ್ಲ ಪಠ್ಯಕ್ರಮದ ಶಿಕ್ಷಣ ಸಂಸ್ಥೆಗಳೂ ಪಾಲಿಸಲೇಬೇಕು ಎನ್ನುತ್ತಾರೆ ಎಸ್‌ಇಪಿ ಆಯೋಗದ ಸದಸ್ಯರೂ ಆದ ಶಿಕ್ಷಣದ ಮೂಲಭೂತ ಹಕ್ಕಿಗಾಗಿ ಜನಾಂದೋಲನಗಳ ಸಮನ್ವಯದ (ಪಾಫ್ರೆ) ಪ್ರಧಾನ ಸಂಚಾಲಕ ವಿ.ಪಿ. ನಿರಂಜನಾರಾಧ್ಯ.

ಸಂವಿಧಾನದ 21ಎ ವಿಧಿ, ಶಿಕ್ಷಣ ಹಕ್ಕು ಕಾಯಿದೆ 2(ಸಿ) ಹಾಗೂ 15, ಕೇಂದ್ರದ ನಿಯಮ 13–14 ಮತ್ತು ರಾಜ್ಯ ನಿಯಮ 9–10 ರಾಜ್ಯ ಸರ್ಕಾರಗಳಿಗೆ ಈ ಬಗೆಯ ನಿಯಮಗಳನ್ನು ರೂಪಿಸಲು ಅವಕಾಶ ಕಲ್ಪಿಸುತ್ತದೆ. ಇದರ ಆಧಾರದ ಮೇಲೆ ವಯೋಮಿತಿ ಸಡಿಲಿಕೆಗೆ ರಾಜ್ಯ ಶಿಕ್ಷಣ ನೀತಿ ಆಯೋಗ ಶಿಫಾರಸು ಮಾಡಿದೆ. ಶಾಲಾ ಶಿಕ್ಷಣ ಇಲಾಖೆ ಆದೇಶ ಹೊರಡಿಸಿದೆ ಎಂದಿದ್ದಾರೆ.

ಶಾಲೆ ಯಾವುದೇ ಮಂಡಳಿಯ ಪಠ್ಯಕ್ರಮಕ್ಕೆ ಸಂಯೋಜನೆ ಹೊಂದಿದ್ದರೂ, ಆಡಳಿತಾತ್ಮಕವಾಗಿ ಆಯಾ ರಾಜ್ಯ ಸರ್ಕಾರಗಳ ವ್ಯಾಪ್ತಿಗೆ ಒಳಪಡುತ್ತವೆ. ಹಾಗಾಗಿ, ಸಿಬಿಎಸ್‌ಇ, ಐಸಿಎಸ್‌ಇ ಸೇರಿದಂತೆ ಕೇಂದ್ರ ಪಠ್ಯ ಅನುಸರಿಸುವ ಎಲ್ಲ ಶಾಲೆಗಳು ಪಾಲಿಸಬೇಕು ಎಂದು ವಿವರಿಸಿದ್ದಾರೆ.

ಆರೋಪಿಗೆ ಗೂಗಲ್ ಪೇ ಮೂಲಕ ₹ 2 ಸಾವಿರ ಪಾವತಿ

ತಂಗಿಯ ಸುರಕ್ಷತೆಗೆ ಯಾಚಿಸಿದ್ದ ಅಕ್ಕ

ಉಳ್ಳಾಲ (ದಕ್ಷಿಣ ಕನ್ನಡ): ಮುನ್ನೂರು ಬಂಗುಲೆ ಸಮೀಪ ಸಾಮೂಹಿಕ ಅತ್ಯಾಚಾರಕ್ಕೀಡಾದ ಪಶ್ಚಿಮ ಬಂಗಾಳದ ಯುವತಿಯ ಅಕ್ಕ, ಆಟೊ ಚಾಲಕನಿಗೆ ₹2 ಸಾವಿರವನ್ನು 'ಗೂಗಲ್ ಪೇ' ಮೂಲಕ ಪಾವತಿಸಿ, ತಂಗಿಯನ್ನು ಸುರಕ್ಷಿತವಾಗಿ ರೈಲು ಹತ್ತಿಸುವಂತೆ ಕೇಳಿಕೊಂಡಿದ್ದಳು ಎಂಬುದು ತನಿಖೆ ವೇಳೆ ತಿಳಿದುಬಂದಿದೆ.



ಮಣಿ

ಆರೋಪಿಗಳಾದ ಆಟೊ ಚಾಲಕ ಪ್ರಭುರಾಜ್, ಆತನ ಸ್ನೇಹಿತರಾದ ಮಣಿ, ಮಿಥುನ್ ಎಂಬುವರನ್ನು ಘಟನೆ ನಡೆದ 24ಗಂಟೆಯೊಳಗೆ ಬಂಧಿಸಲಾಗಿತ್ತು.

ಸಂತ್ರಸ್ತೆಯು ಸುಮಾರು 3 ತಿಂಗಳ ಹಿಂದೆ ಪ್ರಿಯತಮನ ಜತೆ ಕೇರಳದ ಕಡೆಗೆ ಕೆಲಸಕ್ಕೆ ಬಂದಿದ್ದಳು. ಏ.16ರಂದು ಇಬ್ಬರ ನಡುವೆ ಜಗಳ ನಡೆದಿದ್ದು, ಪ್ರಿಯತಮ ಜಗಳ ಮಾಡಿ ಮೊಬೈಲ್ ಒಡೆದು ಹಾಕಿ ಮನೆಯಿಂದ ಹೊರಹಾಕಿದ್ದಾನೆ. ಇದರಿಂದ ನೊಂದ ಯುವತಿ ಕೇರಳದಿಂದ ಮಂಗಳೂರಿಗೆ ಬರುವ ರೈಲು ಹತ್ತಿದ್ದಳು. ಮಂಗಳೂರಿನಲ್ಲಿ ಇಳಿದ ಆಕೆ ಊರಿಗೆ ಹೋಗಲು ಹಣವಿಲ್ಲದೆ ಅಸಹಾಯಕಳಾಗಿದ್ದಳು. ಈ ಬಗ್ಗೆ ಪ್ರಭುರಾಜ್ ಜೊತೆಗೆ ಅಲವತ್ತುಕೊಂಡಿದ್ದಳು. ಅದನ್ನೇ ದುರ್ಬಳಕೆ ಮಾಡಿಕೊಂಡ ಆತ ಆಕೆಯ ಮೊಬೈಲ್ ರಿಪೇರಿ ಮಾಡಿ ಪಶ್ಚಿಮ ಬಂಗಾಳದಲ್ಲಿರುವ ಸಹೋದರಿಗೆ ಕರೆ ಮಾಡುವಂತೆ ತಿಳಿಸಿದ್ದ.

ತಂಗಿ ಊರಿಗೆ ಬರುವ ಇಂಗಿತ ವ್ಯಕ್ತಪಡಿಸುತ್ತಿದ್ದಂತೆ ಆಟೊ ರಿಕ್ಷಾ ಚಾಲಕನ ಸಹಾಯ ಯಾಚಿಸಿದ ಅಕ್ಕ, ₹2 ಸಾವಿರವನ್ನು ಗೂಗಲ್ ಪೇ ಮಾಡಿ ರೈಲು ಹತ್ತಿಸುವಂತೆ ತಿಳಿಸಿದ್ದಳು. ಪಶ್ಚಿಮ ಬಂಗಾಳದ ರೈಲು ತಡವಾಗಿದೆ ಎಂದು ನಂಬಿಸಿ ಸುಮಾರು 6 ಗಂಟೆ ರಿಕ್ಷಾದಲ್ಲೇ ಸುತ್ತಾಡಿಸಿ ಮತ್ತು ಬರುವ ಪಾನೀಯ ಕುಡಿಸಿ ತಡರಾತ್ರಿ ವೇಳೆ ಮೂವರು ಸೇರಿ ಅತ್ಯಾಚಾರವೆಸಗಿದ್ದಾರೆ ಎಂದು ತನಿಖೆ ವೇಳೆ ಗೊತ್ತಾಗಿದೆ ಎಂದು ಮೂಲಗಳು ತಿಳಿಸಿವೆ.

ಆರೋಪಿ ಮಿಥುನ್ ವಿರುದ್ಧ ಪಾಂಡೇಶ್ವರ ಮಹಿಳಾ ಠಾಣೆಯಲ್ಲಿ ಲೈಂಗಿಕ ಕಿರುಕುಳ ನೀಡಿದ್ದ ಪ್ರಕರಣ ಇದೆ. ಡೆಲಿವರಿ ಬಾಯ್ ಮಣಿ ವಿರುದ್ಧ ಕಂಕನಾಡಿ ಠಾಣೆಯಲ್ಲಿ ಕಳವು ಪ್ರಕರಣ ಇದೆ. ಆರೋಪಿಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲಾಗಿದ್ದು, ಹೆಚ್ಚಿನ ವಿಚಾರಣೆಗಾಗಿ ಏ.25ರವರೆಗೆ ಪೊಲೀಸ್ ವಶಕ್ಕೆ ನೀಡಲಾಗಿದೆ. 'ಸಂತ್ರಸ್ತೆ ಚೇತರಿಸಿಕೊಂಡಿದ್ದು, ಆಸ್ಪತ್ರೆಯಲ್ಲಿ ಚಿಕಿತ್ಸೆ ಮುಂದುವರಿಸಲಾಗಿದೆ. ಶುಕ್ರವಾರದ ಸಂಜೆವರೆಗೂ ಆಕೆಯ ಮನೆಯಿಂದ ಯಾರೂ ಬಂದಿಲ್ಲ. ಆಕೆಯನ್ನು ಊರಿನಿಂದ ಕರೆತಂದ ಪ್ರಿಯತಮನ ವಿಚಾರಣೆಯೂ ನಡೆದಿಲ್ಲ' ಎಂದು ಮೂಲಗಳು ತಿಳಿಸಿವೆ.

ಭಾರಿ ಮಳೆ: ವಿವಿಧೆಡೆ ಬೆಳೆಹಾನಿ

ಪ್ರಜಾವಾಣಿ ವಾರ್ತೆ

ಬಳ್ಳಾರಿ/ವಿಜಯನಗರ: ಬಳ್ಳಾರಿ ಜಿಲ್ಲೆಯ ವಿವಿಧೆಡೆ ಮತ್ತು ವಿಜಯನಗರ ಜಿಲ್ಲೆಯ ಹಗರಿಬೊಮ್ಮನಹಳ್ಳಿ ತಾಲ್ಲೂಕಿನ ಗ್ರಾಮಗಳಲ್ಲಿ ಶುಕ್ರವಾರ ಧಾರಾಕಾರ ಮಳೆಯಾಯಿತು. ಹಲವೆಡೆ ಮರ, ವಿದ್ಯುತ್ ಕಂಬಗಳು ನೆಲಕ್ಕುರುಳಿವೆ.

ಬಳ್ಳಾರಿ ಜಿಲ್ಲೆಯ ಕೊಳಗಲ್ಲು ಸುತ್ತಮುತ್ತ ಭಾರಿ ಗಾಳಿ ಸಹಿತ ಆಲಿಕಲ್ಲು ಮಳೆ ಬಿದ್ದಿದ್ದರಿಂದ ಭತ್ತದ ಬೆಳೆ ನೆಲಕಚ್ಚಿದೆ. ಕೊಳಗಲ್ಲು ಗ್ರಾಮದ ನಾಗರಾಜ ಎಂಬುವರು 5 ಎಕರೆ ಭತ್ತದ ಬೆಳೆ, ಮೆಣಸಿನಕಾಯಿ ಬೆಳೆ ನಾಶವಾಗಿದೆ.

ಮರಗಳು, ವಿದ್ಯುತ್ ಕಂಬಗಳು ರಸ್ತೆಗೇ ಬಿದ್ದಿದ್ದರಿಂದ ಬಳ್ಳಾರಿ–ಹೊಸಪೇಟೆ, ಬಳ್ಳಾರಿ–ಸಿರುಗುಪ್ಪ ಮತ್ತು ಬೆಂಗಳೂರು ರಸ್ತೆಯಲ್ಲಿ ಕೆಲಕಾಲ ಸಂಚಾರ ಅಸ್ತವ್ಯಸ್ತಗೊಂಡಿತ್ತು. ಸಂಚಾರ ದಟ್ಟಣೆ ನಿಯಂತ್ರಣಕ್ಕೆ ಪೊಲೀಸರು ಹರಸಾಹಸಪಟ್ಟರು. ಬಳಿಕ ಮರಗಳನ್ನು ಪಕ್ಕಕ್ಕೆ ಸರಿಸಿ ಸುಗಮ ಸಂಚಾರಕ್ಕೆ ಅನುವು ಮಾಡಿಕೊಡಲಾಯಿತು.

ವಿಜಯನಗರ ಜಿಲ್ಲೆಯ ಹರಪನಹಳ್ಳಿ ತಾಲ್ಲೂಕಿನ ಚಿಗಟೇರಿಯಲ್ಲಿ ಸಹ ಮಳೆ ಸುರಿದಿದ್ದು, ಶಿವನಾರದಮುನಿ ದೇವರ ಬ್ರಹ್ಮರಥೋತ್ಸವ ಮಳೆಯಲ್ಲೇ ನಡೆಯಿತು.

ಉರುಳಿ ಬಿದ್ದ ದೇವಸ್ಥಾನದ ಕಳಸ (ಹಿರಿಯೂರು): ತಾಲ್ಲೂಕಿನ ಯರ ಬಳ್ಳಿ ಗ್ರಾಮದಲ್ಲಿ ಭಾರಿ ಬಿರು ಗಾಳಿ, ಮಳೆಗೆ ಕಾಟಮಲಿಂಗೇಶ್ವರ ದೇವಸ್ಥಾನದ ಕಳಸಗಳು ಹಾರಿ ಹೋಗಿವೆ.

ಕಾಟಮಲಿಂಗೇಶ್ವರ ದೇವಸ್ಥಾನದ ಎದುರು ಹಾಕಿದ್ದ ತಗಡಿನ ಶೀಟ್‌ಗಳು ಹಾರಿ ದೇವಸ್ಥಾನದ ಶಿಖರದ ಮೇಲಿನ ಕಳಸಕ್ಕೆ ಅಪ್ಪಳಿಸಿವೆ. ನಾಲ್ಕು ಕಳಸ ಕೆಳಗೆ ಬಿದ್ದಿವೆ. ರಂಗನಾಥಸ್ವಾಮಿ ದೇವಸ್ಥಾನದ ಆವರಣದಲ್ಲಿನ ಬೃಹತ್ ಬೇವಿನ ಮರ ಬುಡಸಮೇತ ಉರುಳಿ ದೇಗುಲದ ಮುಂಭಾಗದಲ್ಲಿದ್ದ ದೀಪಸ್ತಂಭದ ಮೇಲೆ ಬಿದ್ದ ಕಾರಣ ಸ್ತಂಭ ಮುರಿದು ಬಿದ್ದಿದೆ. ತಾಲ್ಲೂಕಿನ ಹಲವೆಡೆ ಹತ್ತಾರು ಎಕರೆ ಮೆಕ್ಕೆಜೋಳ ಸಂಪೂರ್ಣ ನೆಲಕ್ಕೆ ಹಾಸಿದೆ.



ಬಳ್ಳಾರಿ–ಹೊಸಪೇಟೆ ರಸ್ತೆಯಲ್ಲಿ ಶುಕ್ರವಾರ ಭಾರಿ ಮಳೆಗೆ ಮರವೊಂದು ಉರುಳಿಬಿದ್ದು, ಸಂಚಾರ ಅಸ್ತವ್ಯಸ್ತಗೊಂಡಿತು

ಸಿಡಿಲು ಬಡಿದು ಸಾವು

ಕಲಬುರಗಿ: ಕಲ್ಯಾಣ ಕರ್ನಾಟಕ ಭಾಗದ ಬೀದರ್, ಕಲಬುರಗಿ, ರಾಯಚೂರು, ಕೊಪ್ಪಳ ಜಿಲ್ಲೆಯ ವಿವಿಧೆಡೆ ಶುಕ್ರವಾರ ಸುರಿದ ಮಳೆ ತಂಪೆರೆಯಿತು. ರಾಯಚೂರಿನಲ್ಲಿ ಹೊಲದಲ್ಲಿ ಮರದ ಕೆಳಗೆ ಕುಳಿತಿದ್ದ ಮರ್ಚಟಹಾಳ್ ಮೂಲದ ಹನುಮಂತ ಯಾದವ (44) ಸಿಡಿಲು ಬಡಿದು ಮೃತಪಟ್ಟಿದ್ದಾರೆ.

ಕಾಳಗಿ, ಅಫಜಲಪುರ, ಚಿತ್ತಾಪುರ, ಚಿಂಚೋಳಿ, ಜೇವರ್ಗಿ ತಾಲ್ಲೂಕುಗಳ ವಿವಿಧೆಡೆ ಮಳೆ ಸುರಿದಿದೆ. ಚಿಂಚೋಳಿ ತಾಲ್ಲೂಕಿನ ಗಡಿಲಿಂಗದಳ್ಳಿ ಗ್ರಾಮದಲ್ಲಿ ಸಿಡಿಲು ಬಡಿದು ಆಕಳು ಮೃತಪಟ್ಟಿದೆ. ತಾಲ್ಲೂಕಿನಲ್ಲಿ ಸುರಿದ ಬಿರುಗಾಳಿ ಮಳೆಯಿಂದಾಗಿ 25 ವಿದ್ಯುತ್ ಕಂಬ ಉರುಳಿದ್ದು, 6 ಟಿಸಿ ಹಾಳಾಗಿವೆ.

ಬೀದರ್ ಜಿಲ್ಲೆಯ ಚಿಟಗುಪ್ಪ ಪಟ್ಟಣ ಸೇರಿದಂತೆ ಹಲವೆಡೆ ಗಾಳಿ ಸಹಿತ ಆಲಿಕಲ್ಲು ಮಳೆಯಾಗಿದೆ. ಮುಸ್ತರಿಯಲ್ಲಿ ಪಪ್ಪಾಯಿ ತೋಟ, ಚಿಟಗುಪ್ಪ ಪಟ್ಟಣದಲ್ಲಿ ಕಾರಿಗೆ ಹಾನಿಯಾಗಿದೆ. ಎಂಟು ಮರಗಳು ನೆಲಕ್ಕುರುಳಿವೆ.

ವಿಶೇಷ ಯೋಜನೆ ರೂಪಿಸುತ್ತಿರುವ ಕೆಎಂಇಆರ್‌ಸಿ– ಹತ್ತು ಸಾವಿರ ರೈತರಿಗೆ ನೆರವಾಗುವ ಪ್ರಸ್ತಾವ

ಗಣಿ ಬಾಧಿತ ಜಿಲ್ಲೆಗಳಲ್ಲಿ ಹಲಸು ಬೆಳೆಗೆ ಉತ್ತೇಜನ

• ವಿ.ಎಸ್. ಸುಬ್ರಹ್ಮಣ್ಯ

ಬೆಂಗಳೂರು: ಗಣಿಗಾರಿಕೆಯಿಂದ ಬಾಧಿತವಾಗಿರುವ ರಾಜ್ಯದ ನಾಲ್ಕು ಜಿಲ್ಲೆಗಳಲ್ಲಿ ಸಿದ್ದು ಮತ್ತು ಶಂಕರ ತಳಿಯ ಚಂದ್ರಹಲಸು ಬೆಳೆಯುವ ರೈತರಿಗೆ ಉತ್ತೇಜನ ನೀಡಲು ಕರ್ನಾಟಕ ಗಣಿ ಪರಿಸರ ಪುನಶ್ಚೇತನ ನಿಗಮ (ಕೆಎಂಇಆರ್‌ಸಿ) ಮುಂದಾಗಿದೆ. ಇದಕ್ಕಾಗಿ ಭಾರತೀಯ ತೋಟಗಾರಿಕಾ ಸಂಶೋಧನಾ ಸಂಸ್ಥೆ (ಐಐಎಚ್‌ಆರ್) ನೆರವಿನಲ್ಲಿ ಯೋಜನೆಯ ರೂಪುರೇಷೆ ಸಿದ್ಧವಾಗುತ್ತಿದೆ.

ತುಮಕೂರು, ಚಿತ್ರದುರ್ಗ, ಬಳ್ಳಾರಿ ಮತ್ತು ವಿಜಯನಗರ ಜಿಲ್ಲೆಗಳಲ್ಲಿನ ಗಣಿ ಬಾಧಿತ ಗ್ರಾಮಗಳ ರೈತರಿಗೆ ಚಂದ್ರಹಲಸಿನ ವಿಶೇಷ ತಳಿಯ ಸಸಿಗಳ ವಿತರಣೆ, ತಾಂತ್ರಿಕ ಮತ್ತು ಆರ್ಥಿಕ ನೆರವು, ಹಣ್ಣುಗಳ ಸಂಸ್ಕರಣೆ ಹಾಗೂ ಸಂರಕ್ಷಣೆ, ಮಾರುಕಟ್ಟೆ ಒದಗಿಸುವುದು, ವಿದೇಶಗಳಿಗೆ ರಫ್ತಿನವರೆಗೂ ವಿವಿಧ ಹಂತಗಳಲ್ಲಿ ನೆರವಾಗುವ ವಿಸ್ತೃತ ಯೋಜನೆಯೊಂದನ್ನು ಅನುಷ್ಠಾನಕ್ಕೆ ತರುವ ಪ್ರಸ್ತಾವ ಕೆಎಂಇಆರ್‌ಸಿ ಮುಂದಿದೆ.

ನಿಗಮದ ಮೇಲುಸ್ತುವಾರಿ ಪ್ರಾಧಿಕಾರಿಯಾಗಿರುವ ಸುಪ್ರೀಂ ಕೋರ್ಟ್ ನಿವೃತ್ತ ನ್ಯಾಯಮೂರ್ತಿ ಬಿ. ಸುದರ್ಶನ್ ರೆಡ್ಡಿ, ಅವರ ಸಲಹೆಗಾರರಾಗಿರುವ ನಿವೃತ್ತ ಐಎಎಸ್ ಅಧಿಕಾರಿ ವಿ. ಬಾಲಸುಬ್ರಮಣಿಯನ್, ನಿಗಮದ ಅಧ್ಯಕ್ಷೆ ಉಮಾ ಮಹದೇವನ್, ವ್ಯವಸ್ಥಾಪಕ ನಿರ್ದೇಶಕ ಸಂಜಯ್ ಬಿಜ್ಜೂರ್ ನೇತೃತ್ವದ ತಂಡವು ತೋಟಗಾರಿಕಾ ಇಲಾಖೆ ಅಧಿಕಾರಿಗಳು, ಐಐಎಚ್‌ಆರ್ ಮತ್ತು ಹೆಬ್ಬಾಳದ ಗಾಂಧಿ ಕೃಷಿ ವಿಜ್ಞಾನ ಕೇಂದ್ರದ ಕೃಷಿ ವಿಜ್ಞಾನಿಗಳೊಂದಿಗೆ ಫೆಬ್ರುವರಿಯಲ್ಲಿ ಮೊದಲ ಸುತ್ತಿನ ಚರ್ಚೆ ನಡೆಸಿದೆ.

ಯೋಜನೆಯ ರೂಪುರೇಷೆಗಳನ್ನು ಸಿದ್ಧಪಡಿಸುವ ಹೊಣೆಯನ್ನು ಹೆಸರಘಟ್ಟದ ಐಐಎಚ್‌ಆರ್‌ನಲ್ಲಿ ಹಲಸು ಬೆಳೆ ಕುರಿತು ಸಂಶೋಧನೆ ನಡೆಸುತ್ತಿರುವ ತೋಟಗಾರಿಕಾ ವಿಜ್ಞಾನಿ ಕರುಣಾಕರನ್ ಅವರಿಗೆ ವಹಿಸಲಾಗಿದೆ. ಮೇ ಅಂತ್ಯದ ವೇಳೆಗೆ ಯೋಜನೆಯ ಕರಡನ್ನು ಅನುಮೋದಿಸಿ, ಅನುಷ್ಠಾನಕ್ಕೆ ಚಾಲನೆ ನೀಡುವ ಗುರಿಯನ್ನು ನಿಗಮ ಹೊಂದಿದೆ.

ಹತ್ತು ಸಾವಿರ ರೈತರಿಗೆ ನೆರವು: ಈ ಕುರಿತು 'ಪ್ರಜಾವಾಣಿ' ಜೊತೆ ಮಾತನಾಡಿದ ಕೆಎಂಇಆರ್‌ಸಿ ಮೇಲುಸ್ತುವಾರಿ ಪ್ರಾಧಿಕಾರಿಯವರ ಸಲಹೆಗಾರ ವಿ. ಬಾಲಸುಬ್ರಮಣಿಯನ್, 'ತುಮಕೂರು ಜಿಲ್ಲೆಯ ವಿವಿಧೆಡೆ ಸಿದ್ದು ಮತ್ತು ಶಂಕರ ತಳಿಯ ಹಲಸನ್ನು ಬೆಳೆಯಲಾಗುತ್ತಿದೆ. ತುಮಕೂರು ಮತ್ತು ಚಿತ್ರದುರ್ಗ ಜಿಲ್ಲೆಗಳ ಹವಾಮಾನದಲ್ಲಿ ಸಾಮ್ಯತೆ ಇದೆ. ಮೊದಲು ಈ ಎರಡು ಜಿಲ್ಲೆಗಳಲ್ಲಿ ಯೋಜನೆ ಅನುಷ್ಠಾನಕ್ಕೆ ತರಲಾಗುವುದು. ಎರಡನೇ ಹಂತದಲ್ಲಿ ಬಳ್ಳಾರಿ ಮತ್ತು ವಿಜಯನಗರ ಜಿಲ್ಲೆಗಳಿಗೆ ವಿಸ್ತರಿಸಲಾಗುವುದು' ಎಂದರು.

ಯೋಜನೆಯಡಿ ಹತ್ತು ಸಾವಿರ ರೈತರಿಗೆ ಸಿದ್ದು ಮತ್ತು ಶಂಕರ ತಳಿಯ ಹಲಸಿನ ಸಸಿಗಳನ್ನು ವಿತರಿಸುವ ಪ್ರಸ್ತಾವವಿದೆ. ಐಐಎಚ್‌ಆರ್‌ನಲ್ಲಿ ಅತ್ಯಾಧುನಿಕ ಸೌಲಭ್ಯಗಳಿರುವ ತೋಟಗಾರಿಕಾ ನರ್ಸರಿ ಇದ್ದು, ವಾರ್ಷಿಕ ಒಂದು ಲಕ್ಷ ಸಸಿಗಳ ಉತ್ಪಾದನಾ ಸಾಮರ್ಥ್ಯವಿದೆ. ಅದರಿಂದಲೇ ಸಸಿಗಳನ್ನು ಪಡೆದು ಒದಗಿಸುವ ಪ್ರಸ್ತಾವ ನಿಗಮದ ಮುಂದಿದೆ.

ಮುಖ್ಯಾಂಶಗಳು

- ತುಮಕೂರು, ಚಿತ್ರದುರ್ಗ, ಬಳ್ಳಾರಿ, ವಿಜಯನಗರ ಜಿಲ್ಲೆಗಳ ವ್ಯಾಪ್ತಿ
- ಚಂದ್ರಹಲಸು ಸಸಿಗಳನ್ನು ಒದಗಿಸಲು ಐಐಎಚ್‌ಆರ್ ಒಲವು
- ಸಸಿ ಪೂರೈಕೆಯಿಂದ ರಫ್ತಿನವರೆಗೆ ನೆರವಾಗಲು ಸಮಗ್ರ ಯೋಜನೆ



ಸಿದ್ದು ಹಲಸು

2.39 ಪಟ್ಟು ಲಾಭದಾಯಕ

'ಚಂದ್ರ ಹಲಸಿನ ಹಣ್ಣಿನಲ್ಲಿ ಇತರ ಹಣ್ಣುಗಳು ಮತ್ತು ಸಿರಿ ಧಾನ್ಯಗಳಿಗಿಂತಲೂ ಹೆಚ್ಚಿನ ಪ್ರಮಾಣದ ವಿಟಮಿನ್–ಎ ಇರುತ್ತದೆ. ಹೆಚ್ಚಿನ ಪ್ರಮಾಣದ ನಾರಿನಂಶವೂ ಇರುತ್ತದೆ. ಉತ್ತರ ಭಾರತ ಮತ್ತು ವಿದೇಶಗಳಲ್ಲಿ ದೊಡ್ಡ ಮಾರುಕಟ್ಟೆ ಇದೆ' ಎಂದು ಐಐಎಚ್‌ಆರ್ ವಿಜ್ಞಾನಿ ಕರುಣಾಕರನ್ ಅವರು ನಿಗಮಕ್ಕೆ ನೀಡಿರುವ ಪ್ರಾಥಮಿಕ ವರದಿಯಲ್ಲಿ ತಿಳಿಸಿದ್ದಾರೆ.

ಹಲಸಿನ ಹಣ್ಣನ್ನು ಸಂಸ್ಕರಿಸಿ ಆಹಾರ ಪದಾರ್ಥಗಳು, ತಿಂಡಿಗಳನ್ನು ಮತ್ತು ಇತರ ಮೌಲ್ಯವರ್ಧಿತ ಉತ್ಪನ್ನಗಳನ್ನು ತಯಾರಿಸಲು ಸಂಸ್ಥೆ ಅಭಿವೃದ್ಧಿಪಡಿಸಿರುವ ತಂತ್ರಜ್ಞಾನಗಳನ್ನೂ ಹಂಚಿಕೊಳ್ಳುವುದಾಗಿ ವರದಿಯಲ್ಲಿ ತಿಳಿಸಲಾಗಿದೆ.

ಒಂದು ಹೆಕ್ಟೇರ್ ಪ್ರದೇಶದಲ್ಲಿ ಹಲಸು ಬೆಳೆಯನ್ನು ಬೆಳೆಸಲು ₹ 6.78 ಲಕ್ಷ ವೆಚ್ಚವಾಗುತ್ತದೆ. ಆರು ವರ್ಷಗಳ ಬಳಿಕ ಒಂದು ಹೆಕ್ಟೇರ್‌ನಲ್ಲಿ ₹ 6 ಲಕ್ಷ ಲಾಭ ದೊರಕುತ್ತದೆ. ವೆಚ್ಚಕ್ಕೆ ಹೋಲಿಸಿದರೆ ಲಾಭದ ಅನುಪಾತವು 2.39 ಪಟ್ಟಿನಷ್ಟಿರುತ್ತದೆ ಎಂದು ತಿಳಿಸಿದ್ದಾರೆ.

'ಹಣದ ಕೊರತೆ ಇಲ್ಲ'



ವಿ. ಬಾಲ ಸುಬ್ರಮಣಿಯನ್

'ಹಲಸು ಬೆಳೆ ಉತ್ತೇಜಿಸಲು ಹೆಚ್ಚು ಅನುದಾನದ ಅಗತ್ಯವಿಲ್ಲ. ಆದರೆ, ಈ ಯೋಜನೆ ಅಷ್ಟಕ್ಕೆ ಸೀಮಿತವಾಗಿರುವುದಿಲ್ಲ. ಹಲಸಿನ ಹಣ್ಣುಗಳು ಕೆಡದಂತೆ ಸಂರಕ್ಷಿಸಿಡಲು ಬೇಕಾದ ವ್ಯವಸ್ಥೆ, ವಿಶೇಷ ಮಾರುಕಟ್ಟೆಗಳನ್ನು ಒದಗಿಸುವುದು ಮತ್ತು ರಫ್ತು ಉತ್ತೇಜಿಸಲು ಹೆಚ್ಚು ಹಣ ಬೇಕಾಗುತ್ತದೆ. ನಿಗಮದ ಬಳಿ ₹ 30,000 ಕೋಟಿ ಇದೆ. ಹೀಗಾಗಿ ಈ ಯೋಜನೆಗೆ ಹಣದ ಕೊರತೆ ಇಲ್ಲ' ಎಂದು ವಿ. ಬಾಲಸುಬ್ರಮಣಿಯನ್ ತಿಳಿಸಿದರು.

ಶನಿವಾರ, ಏಪ್ರಿಲ್ 19, 2025 | ₹ 7.00
www.prajavani.net
prajavani.net prajavani prajavani prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ



ಕೊಹ್ಲಿ ಅಭ್ಯಾಸ

ಬೆಂಗಳೂರಿನ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಪಂಜಾಬ್ ಕಿಂಗ್ಸ್ ವಿರುದ್ಧ ಶುಕ್ರವಾರ ಐಪಿಎಲ್ ಪಂದ್ಯ ಮಳೆಯಿಂದ ವಿಳಂಬಗೊಂಡ ಸಂದರ್ಭದಲ್ಲಿ ಆರ್‌ಸಿಬಿ ತಂಡದ ವಿರಾಟ್ ಕೊಹ್ಲಿ ಮೈದಾನದಲ್ಲಿ ಅಭ್ಯಾಸ ಮಾಡಿದರು

ನದಿ ಸುಳಿಗೆ ಸಿಲುಕಿ ಇಬ್ಬರು ಭಕ್ತರ ಸಾವು

ಪ್ರಜಾವಾಣಿ ವಾರ್ತೆ

ರಾಯಚೂರು: ಮಂತ್ರಾಲಯದ ರಾಯರ ದರ್ಶನಕ್ಕೆ ಬಂದಿದ್ದ ಇಬ್ಬರು ಭಕ್ತರು ಎಲೆಬಿಚ್ಚಾಲಿಯ ರಾಯರ ತಪೋ ಕಟ್ಟೆ ಬಳಿ ಗುರುವಾರ ಸಂಜೆ ತುಂಗಭದ್ರಾ ನದಿಯಲ್ಲಿ ಈಜಲು ಹೋಗಿ ನೀರಲ್ಲಿ ಮುಳುಗಿ ಮೃತಪಟ್ಟಿದ್ದಾರೆ.

ಮೃತರನ್ನು ಮುತ್ತುರಾಜ್ ಹಾಗೂ ಮದನ್ ಎಂದು ಗುರುತಿಸಲಾಗಿದೆ. ಬೆಂಗಳೂರಿನಿಂದ ಬಂದಿದ್ದ ಒಟ್ಟು 15 ಭಕ್ತರ ತಂಡದ ಸದಸ್ಯರು ರಾಯರ ದರ್ಶನದ ನಂತರ ಗಾಣದಾಳಕ್ಕೆ ತೆರಳಿ ಪಂಚಮುಖಿಯ ದರ್ಶನ ಪಡೆದಿದ್ದರು. ಆನಂತರ, ರಾಯರ ತಪೋಕಟ್ಟೆ ಎಂದೇ ಖ್ಯಾತಿ ಹೊಂದಿರುವ ಎಲೆ ಬಿಚ್ಚಾಲಿ ಗ್ರಾಮಕ್ಕೆ ಬಂದಿದ್ದರು.

ಕೆಲವರು ನೀರಿಗಿಳಿದು ಈಜುತ್ತಿದ್ದರು. ಇಬ್ಬರು ಮಾತ್ರ ಈಜುತ್ತ ನದಿಯ ನಡುವೆ ಹೋಗಿ ನೀರಿನ ಸುಳಿಗೆ ಸಿಲುಕಿ ಉಸಿರುಗಟ್ಟಿ ಮೃತಪಟ್ಟಿದ್ದಾರೆ. ಮೃತದೇಹ ಹೊರತೆಗೆದು ಮರಣೋತ್ತರ ಪರೀಕ್ಷೆ ನಡೆಸಿ ಸಂಬಂಧಿಕರಿಗೆ ಒಪ್ಪಿಸಲಾಗಿದೆ. ಯರಗೇರಾ ಠಾಣೆಯ ಪೊಲೀಸರು ಪ್ರಕರಣ ದಾಖಲಿಸಿಕೊಂಡಿದ್ದಾರೆ.

ಸಂಧ್ಯಾ ಶರ್ಮಗೆ 'ಕಲಾ ಪ್ರವೀಣ' ಪ್ರಶಸ್ತಿ

ಉಡುಪಿ: ನಗರದ ರಾಗಧನ ಉಡುಪಿ ಸಂಸ್ಥೆಯವರು ಈಶ್ವರಯ್ಯ ಅನಂತಪುರ ಅವರ ಹೆಸರಿನಲ್ಲಿ ನೀಡುವ 'ರಾಗಧನ ಕಲಾ ಪ್ರವೀಣ' ಪ್ರಶಸ್ತಿಗೆ ಸಾಹಿತಿ ವೈ.ಕೆ. ಸಂಧ್ಯಾ ಶರ್ಮ ಆಯ್ಕೆಯಾಗಿದ್ದಾರೆ.



ಸಂಧ್ಯಾ ಶರ್ಮ

ಪ್ರಶಸ್ತಿ ₹10 ಸಾವಿರ ನಗದು ಹಾಗೂ ಪ್ರಶಸ್ತಿಪತ್ರ ಒಳಗೊಂಡಿದೆ. ಸರಿಗಮ ಭಾರತಿ ಪರ್ಕಳ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಯೋಗದಲ್ಲಿ ಪರ್ಕಳದ ಸರಿಗಮ ಭಾರತಿ ಸಭಾಂಗಣದಲ್ಲಿ ಶನಿವಾರ (ಏ.19) ಮಧ್ಯಾಹ್ನ 2.45ಕ್ಕೆ ನಡೆಯುವ ರಾಗರತ್ನಮಾಲಿಕೆ-36 ಕಾರ್ಯಕ್ರಮದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗುವುದು ಎಂದು ಪ್ರಕಟಣೆ ತಿಳಿಸಿದೆ.

ಆರ್‌.ಸಿ, ಸರ್ಕಾರಿ ಕಲಾ ಕಾಲೇಜು ವಿ.ವಿ ಘಟಕ ಮಾಡದಂತೆ ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಸರ್ಕಾರಿ ಆರ್‌.ಸಿ. ಕಾಲೇಜು ಮತ್ತು ಸರ್ಕಾರಿ ಕಲಾ ಕಾಲೇಜುಗಳನ್ನು ಬೆಂಗಳೂರು ನಗರ ವಿಶ್ವವಿದ್ಯಾಲಯದ ಘಟಕ ಕಾಲೇಜುಗಳನ್ನಾಗಿ ಪರಿವರ್ತಿಸಲು ಸರ್ಕಾರ ಅನುಮತಿ ನೀಡಬಾರದು ಎಂದು ಕಾಲೇಜುಗಳ ನೌಕರರು ಮತ್ತು ವಿದ್ಯಾರ್ಥಿಗಳು ಆಗ್ರಹಿಸಿದ್ದಾರೆ.

'ಈ ಕಾಲೇಜುಗಳನ್ನು ಬೆಂಗಳೂರು ನಗರ ವಿಶ್ವವಿದ್ಯಾಲಯದ ಘಟಕ ಕಾಲೇಜುಗಳನ್ನಾಗಿ ಪರಿವರ್ತಿಸಬೇಕೆಂದು ಕೆಲವು ಅಧ್ಯಾಪಕರು ಸರ್ಕಾರದ ಮೇಲೆ ಒತ್ತಡ ಹಾಕುತ್ತಿದ್ದಾರೆ. ಮುಖ್ಯಮಂತ್ರಿಯವರ ಆಪ್ತ ಕಾರ್ಯದರ್ಶಿ ಕೂಡ ಈ ಸಂಬಂಧ ಅಗತ್ಯ ಕ್ರಮ ಕೈಗೊಳ್ಳುವಂತೆ ಉನ್ನತ ಶಿಕ್ಷಣ ಇಲಾಖೆಯ ಪ್ರಧಾನ ಕಾರ್ಯದರ್ಶಿಗಳಿಗೆ ಪತ್ರ ಬರೆದಿದ್ದಾರೆ. ಇದಕ್ಕೆ ಅನುಮತಿ ನೀಡಬಾರದು' ಎಂದು ವಿದ್ಯಾರ್ಥಿಗಳು ಸರ್ಕಾರವನ್ನು ಒತ್ತಾಯಿಸಿದ್ದಾರೆ.

'ಈ ಎರಡೂ ಕಾಲೇಜುಗಳನ್ನು ಬೆಂಗಳೂರು ನಗರ ವಿಶ್ವವಿದ್ಯಾಲಯದ ಘಟಕ ಕಾಲೇಜುಗಳನ್ನಾಗಿ ಪರಿವರ್ತಿಸಿದರೆ, ಈಗಿರುವ ಪ್ರವೇಶ ಶುಲ್ಕ ವಿಪರೀತ ಹೆಚ್ಚಾಗುತ್ತದೆ' ಎಂದು ವಿದ್ಯಾರ್ಥಿಗಳು ಆತಂಕ ವ್ಯಕ್ತಪಡಿಸಿದ್ದಾರೆ.

'ಕಡಿಮೆ ಶುಲ್ಕವಿರುವ ಕಾರಣ ರಾಜ್ಯದ ಬೇರೆ ಬೇರೆ ಭಾಗಗಳಿಂದ ವಿದ್ಯಾರ್ಥಿಗಳು ಈ ಕಾಲೇಜುಗಳಿಗೆ ಬರುತ್ತಿದ್ದಾರೆ. ಅದರಲ್ಲೂ ಗ್ರಾಮೀಣ ಭಾಗದ ಬಡತನದ ಕೆಳಗಿರುವ, ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಹಿಂದುಳಿದ ವರ್ಗಗಳು ಮತ್ತು ಅಲ್ಪಸಂಖ್ಯಾತ ವರ್ಗದ ವಿದ್ಯಾರ್ಥಿಗಳು ಹೆಚ್ಚಾಗಿ ಬರುತ್ತಾರೆ.

ನಗರದ ವಿವಿಧೆಡೆಯಿರುವ ಸರ್ಕಾರಿ ವಸತಿ ನಿಲಯಗಳಲ್ಲಿ ಉಚಿತ ಊಟ ಮತ್ತು ವಸತಿ ವ್ಯವಸ್ಥೆಯ ಅನುಕೂಲ ಪಡೆದು, ಈ ಕಾಲೇಜುಗಳಲ್ಲಿ ಉನ್ನತ ಶಿಕ್ಷಣ ಪಡೆಯುತ್ತಿದ್ದಾರೆ. ಈ ಕಾಲೇಜುಗಳನ್ನು ಪರಿವರ್ತಿಸಿದರೆ, ಇಂಥ ನೂರಾರು ವಿದ್ಯಾರ್ಥಿಗಳು ಉನ್ನತ ಶಿಕ್ಷಣದಿಂದ ವಂಚಿತರಾಗುತ್ತಾರೆ' ಎಂದು ವಿವರಿಸಿದ್ದಾರೆ.

'ವಿದ್ಯಾರ್ಥಿಗಳ ಅಭಿವೃದ್ಧಿ ಹಾಗೂ ಜ್ಞಾನಾರ್ಜನೆ ನೋಡದೇ, ನಾಲ್ಕೈದು ಅಧ್ಯಾಪಕರ ಹಿತಾಸಕ್ತಿಗಾಗಿ ಘಟಕ ಕಾಲೇಜು ಮಾಡಿದರೆ, ಸಾವಿರಾರು ವಿದ್ಯಾರ್ಥಿಗಳ ಭವಿಷ್ಯ ಹಾಳಾಗುತ್ತದೆ. ಆದ್ದರಿಂದ, ಪರಿವರ್ತನೆಗೆ ಸರ್ಕಾರ ಅನುಮತಿ ನೀಡಬಾರದು' ಎಂದು ವಿದ್ಯಾರ್ಥಿಗಳು ಮತ್ತು ನೌಕರರು ಪ್ರಕಟಣೆಯಲ್ಲಿ ಆಗ್ರಹಿಸಿದ್ದಾರೆ.

21ರಿಂದ ಮದ್ದೂರಮ್ಮ ಜಾತ್ರೆ ಮಹೋತ್ಸವ


ಬೆಂಗಳೂರು: ಹೆಣ್ಣೂರು ಬಾಗಲೂರು ಮುಖ್ಯ ರಸ್ತೆಯ ದೊಡ್ಡಗುಬ್ಬಿ ಗ್ರಾಮದಲ್ಲಿ ಏಪ್ರಿಲ್ 21ರಿಂದ 26ರವರೆಗೆ ಜಾತ್ರಾ ಮಹೋತ್ಸವ ನಡೆಯಲಿದೆ.

ದೊಡ್ಡಮ್ಮದೇವಿ, ಮದ್ದೂರಮ್ಮದೇವಿ, ಸವಾರಮ್ಮದೇವಿ, ಗಂಗಮ್ಮದೇವಿ, ಪ್ಲೇಗಮ್ಮದೇವಿ, ನರೇಡಮ್ಮದೇವಿ, ಸಪ್ಪಮ್ಮದೇವಿಗೆ ದೀಪೋತ್ಸವ, ಸಿಡಿ ಪರಿಷೆ, ಕೆಂಡ ಹಾಯುವುದು, ಬಾಯಿಬೀಗ ಹರಕೆ, ಕರಗ ಮಹೋತ್ಸವ ಹಾಗೂ ಮುತ್ತಿನ ಪಲ್ಲಕ್ಕಿಯ ಮೆರವಣಿಗೆ ನಡೆಯಲಿದೆ.

ಚೋಳರ ಕಾಲದ ಇತಿಹಾಸ ಹೊಂದಿರುವ ದೊಡ್ಡಗುಬ್ಬಿ ಗ್ರಾಮದ ಸೋಮೇಶ್ವರ ಸ್ವಾಮಿ, ವೇಣುಗೋಪಾಲ ಸ್ವಾಮಿ ಮತ್ತು ಆಂಜನೇಯ ಸ್ವಾಮಿ ದೇವರಿಗೆ ದೀಪೋತ್ಸವ ಹಾಗೂ ಬೆಲ್ಲದ ಆರತಿ ನಡೆಯಲಿದೆ ಎಂದು ಸೋಮೇಶ್ವರ ಸ್ವಾಮಿ ಸೇವಾ ಮತ್ತು ಅಭಿವೃದ್ಧಿ ಮಂಡಳಿ ಸಂಚಾಲಕ ಬಾಲಾಜಿ. ಎಸ್. ತಿಳಿಸಿದ್ದಾರೆ.

ಶನಿವಾರ, ಏಪ್ರಿಲ್ 19, 2025 | ಬೆಂಗಳೂರು | ₹ 7.00 | ಸಂಪುಟ 78 | ಸಂಚಿಕೆ 108 | ಪುಟ 22
www.prajavani.net
prajavani.net prajavani prajavani prajavani

ಪ್ರಜಾವಾಣಿ
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ



ಪ್ರತಿಕ್ರಿಯೆ

ನ್ಯಾಯಾಂಗದ ಮೇಲೆ ದಾಳಿ ಮಾಡಬಾರದು, ದುರ್ಬಲಗೊಳಿಸಲೂ ಬಾರದು. ನ್ಯಾಯ ಮತ್ತು ಸಂವಿಧಾನವನ್ನು ನ್ಯಾಯಾಂಗ ಎತ್ತಿ ಹಿಡಿಯಲಿದೆ ಎಂದು ನಾವು ವಿಶ್ವಾಸ ಇಟ್ಟಿದ್ದೇವೆ. ನ್ಯಾಯಾಂಗದ ಸ್ವಾತಂತ್ರ್ಯವೇ ಪ್ರಜಾಪ್ರಭುತ್ವದ ಮೂಲಾಧಾರ. ಅದಿಲ್ಲದಿದ್ದರೆ, ಇತರೆ ಎಲ್ಲ ಹಕ್ಕುಗಳಿಗೂ ಅಪಾಯ.

ಕಪಿಲ್ ಸಿಬಲ್, ರಾಜ್ಯಸಭೆ ಸದಸ್ಯ

(ಉಪರಾಷ್ಟ್ರಪತಿ ಜಗದೀಪ್ ಧನಕರ್ ಅವರು ಸುಪ್ರೀಂ ಕೋರ್ಟ್ ಕಾರ್ಯವೈಖರಿಯನ್ನು ಟೀಕಿಸಿರುವುದಕ್ಕೆ ಪ್ರತಿಕ್ರಿಯೆ)

ಸಂಖ್ಯೆ-ಸುದ್ದಿ
ಎಲ್‌ಪಿಜಿ ಹೊರೆ: ಬಡ ಮಹಿಳೆಯರಿಗೆ ಬರೆ
ಕೋರ್ಟ್‌ಗೆ ಭೂ ಮಾಲೀಕರ ಮೊರೆ 2
ಜಾತಿ ಜನ ಗಣತಿ: ನಿರ್ಧಾರ ಒಂದು ವರ್ಷ ತಡ 5

ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
₹1.01 ಲಕ್ಷ	₹1.01 ಲಕ್ಷ	85.39

ಕೃಷಿ ಉತ್ಪನ್ನ ₹75 ಸಾವಿರ ಕೋಟಿ ವಹಿವಾಟು



• ಚಂದ್ರಹಾಸ ಹಿರೇಮಳಲಿ

ಬೆಂಗಳೂರು: ಕೃಷಿ ಮಾರುಕಟ್ಟೆ ಪ್ರಾಂಗಣದಿಂದ ಹೊರಗೆ ಕೃಷಿ ಉತ್ಪನ್ನಗಳ ಮಾರಾಟಕ್ಕೆ ನೀಡಿದ್ದ ಅವಕಾಶ ವಾಪಸ್ ಪಡೆದ ಬಳಿಕ ಎಪಿಎಂಸಿ ಪ್ರಾಂಗಣಗಳಲ್ಲಿ ವ್ಯಾಪಾರ ಜಿಗಿತ ಕಂಡಿದ್ದು, 2024–25ನೇ ಸಾಲಿನಲ್ಲಿ ₹75 ಸಾವಿರ ಕೋಟಿ ಮೌಲ್ಯದ ವಹಿವಾಟು ದಾಖಲಿಸಿದೆ.

ಹಿಂದಿನ ಬಿಜೆಪಿ ನೇತೃತ್ವದ ಸರ್ಕಾರ 2020ರಲ್ಲಿ ಕಾಯ್ದೆಗೆ ತಿದ್ದುಪಡಿ ತಂದು ಕೃಷಿ ಉತ್ಪನ್ನ ಮಾರುಕಟ್ಟೆ (ಎಪಿಎಂಸಿ) ಹೊರಗೂ ರೈತರು ತಾವು ಬೆಳೆದ ಉತ್ಪನ್ನಗಳನ್ನು ಮಾರಾಟ ಮಾಡಲು ಅವಕಾಶ ನೀಡಿತ್ತು. ಇದರಿಂದ ಎಪಿಎಂಸಿಗಳಲ್ಲಿನ ವ್ಯಾಪಾರ ಗಣನೀಯವಾಗಿ ಕುಸಿದು ಆದಾಯವಿಲ್ಲದೆ ಸಂಕಷ್ಟಕ್ಕೆ ಒಳಗಾಗಿದ್ದವು.

‘ಕೃಷಿ ಉತ್ಪನ್ನ ಮಾರುಕಟ್ಟೆ ವ್ಯವಹಾರ (ನಿಯಂತ್ರಣ ಮತ್ತು ಅಭಿವೃದ್ಧಿ) ಕಾಯ್ದೆ’ಗೆ ತಂದಿದ್ದ ತಿದ್ದುಪಡಿಯಿಂದಾಗಿ ಖಾಸಗಿಯವರಿಗೆ ಹಾಗೂ ಮಾರುಕಟ್ಟೆ ಹೊರಗೆ ರೈತರು ತಮ್ಮ ಉತ್ಪನ್ನಗಳನ್ನು ಮಾರಾಟ ಮಾಡುವ ಅವಕಾಶ ದೊರಕಿತ್ತು. ರಾಜ್ಯದಲ್ಲಿ ಅಧಿಕಾರಕ್ಕೆ ಬಂದರೆ, ಈ ಕಾಯ್ದೆಗೆ ತಿದ್ದುಪಡಿ ಮಾಡಲಾಗುವುದು ಎಂದು ಕಾಂಗ್ರೆಸ್ ಪಕ್ಷ ತನ್ನ ಪ್ರಣಾಳಿಕೆಯಲ್ಲಿ ಹೇಳಿತ್ತು. ಅಧಿಕಾರಕ್ಕೆ ಬಂದ ನಂತರ ಭರವಸೆ ಈಡೇರಿಸಿತ್ತು. 2024 ಏಪ್ರಿಲ್‌ನಿಂದ ರೈತರು ಮಾರುಕಟ್ಟೆ ಒಳಗೇ ತಮ್ಮ ಉತ್ಪನ್ನಗಳನ್ನು ಮಾರಾಟ ಮಾಡಲು ಆರಂಭಿಸಿದ್ದರು. ಕಳೆಗುಂದಿದ್ದ ಕೃಷಿ ಉತ್ಪನ್ನ ಮಾರುಕಟ್ಟೆ ಪ್ರಾಂಗಣಗಳಿಗೆ ಮರುಜೀವ ಬಂದಿತ್ತು. ಒಂದೇ ವರ್ಷದಲ್ಲಿ ಕೃಷಿ ಉತ್ಪನ್ನಗಳ ಮಾರಾಟದಲ್ಲಿ ಎಪಿಎಂಸಿಗಳು ಹೊಸ ದಾಖಲೆ ಬರೆದಿವೆ.

> **ಕೃಷಿ ಮಾರುಕಟ್ಟೆಯ ಒಳಗೆ ರೈತರಿಗೆ ಉತ್ತಮ ಬೆಲೆ, ಹಣದ ಪಾವತಿಯ ಖಾತ್ರಿ ಇರುತ್ತದೆ. ರೈತರು ಎಪಿಎಂಸಿ ಮೇಲೆ ವಿಶ್ವಾಸ ಇಟ್ಟ ಕಾರಣಕ್ಕೆ ದಾಖಲೆಯ ವಹಿವಾಟು ಸಾಧ್ಯವಾಗಿದೆ**
> **ಶಿವಾನಂದ ಪಾಟೀಲ,** ಕೃಷಿ ಮಾರುಕಟ್ಟೆ ಸಚಿವ

‘ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯ (ಎಪಿಎಂಸಿ) ಪ್ರಾಂಗಣಗಳ ಸುಧಾರಣೆ, ರೈತಸ್ನೇಹಿ ಮಾರುಕಟ್ಟೆ ವ್ಯವಸ್ಥೆ, ಕೈಗಾರಿಕೆಗಳಿಗೆ ಪೂರಕವಾದ ಕೆಲವು ನೀತಿ ಸೇರಿದಂತೆ ಹಲವು ಸುಧಾರಣೆಗಳನ್ನು ಕಾಯ್ದೆಯಲ್ಲಿ ಅಳವಡಿಸಿದ್ದು ದಾಖಲೆಯ ವಹಿವಾಟಿಗೆ ಕಾರಣ. ಮಾರುಕಟ್ಟೆ ಪ್ರಾಂಗಣದ ಹೊರಗಿನ ವ್ಯವಹಾರ ಚಟುವಟಿಕೆಗಳನ್ನು ಕಟ್ಟುನಿಟ್ಟಾಗಿ ನಿಯಂತ್ರಿಸಲಾಗಿದೆ. ಅದಕ್ಕಾಗಿಯೇ ಹೆಚ್ಚುವರಿ ನಿರ್ದೇಶಕರನ್ನು ಒಳಗೊಂಡ ನಾಲ್ಕು ವಿಭಾಗವಾರು ಕಚೇರಿಗಳನ್ನು ತೆರೆಯಲಾಗಿದೆ. ತೂಕ, ಮಾರಾಟ, ಆದಾಯದ ಖಾತರಿಯನ್ನು ರೈತರಿಗೆ ನೀಡಲಾಗುತ್ತಿದೆ’ ಎನ್ನುತ್ತಾರೆ ಕೃಷಿ ಮಾರುಕಟ್ಟೆ ಸಚಿವ ಶಿವಾನಂದ ಪಾಟೀಲ.

1.61 ಕೋಟಿ ಟನ್ ಮಾರಾಟವಾದ ಕೃಷಿ ಉತ್ಪನ್ನಗಳು

₹490 ಕೋಟಿ ಸಂಗ್ರಹವಾದ ಮಾರುಕಟ್ಟೆ ಶುಲ್ಕ

ಮಾರುಕಟ್ಟೆ ಪ್ರಾಂಗಣದ ಹೊರಗಿನ ವ್ಯವಹಾರ ಚಟುವಟಿಕೆಗಳನ್ನು ನಿಯಂತ್ರಿಸುವ ಜತೆಗೆ, ಇಲಾಖೆಯ ಅನುಮತಿ, ಪರವಾನಗಿ ಇಲ್ಲದೆ ಆನ್‌ಲೈನ್ ಮೂಲಕ ನಡೆಸುತ್ತಿದ್ದ ಇ-ಕಾಮರ್ಸ್, ಬಹುರಾಷ್ಟ್ರೀಯ ಕಂಪನಿಗಳ ಕೃಷಿ ಉತ್ಪನ್ನಗಳ ವಹಿವಾಟನ್ನು ಕಾಯ್ದೆಯ ವ್ಯಾಪ್ತಿಗೆ ತರಲಾಗಿದೆ. ಎಪಿಎಂಸಿಯ ಎಲ್ಲ ಕಾರ್ಯಚಟುವಟಿಕೆಗಳನ್ನು ಡಿಜಿಟಲೀಕರಣಗೊಳಿಸಲಾಗಿದೆ. ಆನ್‌ಲೈನ್ ಪಾವತಿಗೆ ಅವಕಾಶ ಕಲ್ಪಿಸಲಾಗಿದೆ. ಅಕ್ಕಿ ಗಿರಣಿಗಳೂ ಸೇರಿ ಎಪಿಎಂಸಿ ಹೊರಗಿನ ಅಧಿಸೂಚಿತ ಕೃಷಿ ಉತ್ಪನ್ನಗಳ ವಹಿವಾಟು ಜಾಗಗಳನ್ನು ಉಪ ಮಾರುಕಟ್ಟೆ ಎಂದು ಘೋಷಿಸಿ, ಎಪಿಎಂಸಿ ನಿಯಂತ್ರಣಕ್ಕೆ ಒಳಪಡಿಸಲಾಗುತ್ತಿದೆ.

6,230 ಪ್ರಕರಣ ಪತ್ತೆ ₹4.80 ಕೋಟಿ ದಂಡ

ಮಾರುಕಟ್ಟೆ ಶುಲ್ಕ ಪಾವತಿಸದೆ ವಂಚಿಸುತ್ತಿದ್ದ 6,230 ಪ್ರಕರಣಗಳನ್ನು ಪತ್ತೆಹಚ್ಚಲಾಗಿದ್ದು, ₹4.80 ಕೋಟಿ ದಂಡ ಸೇರಿ ₹6.40 ಕೋಟಿ ವಸೂಲು ಮಾಡಲಾಗಿದೆ.

ಏಕೀಕೃತ ಮಾರಾಟ ವೇದಿಕೆ ಅಡಿ ಆನ್‌ಲೈನ್ ಮೂಲಕ ಮಾರುಕಟ್ಟೆ ಶುಲ್ಕ ಪಾವತಿಸಿ, ಸಾಗಾಣಿಕೆ ಪರವಾನಗಿ ಪಡೆಯಲು ಅವಕಾಶ ಕಲ್ಪಿಸಲಾಗಿದೆ. ಮಾರುಕಟ್ಟೆ ಶುಲ್ಕದ ಜತೆಗೆ, ಬಳಕೆದಾರರ ಶುಲ್ಕ, ಬಾಡಿಗೆ ಸೇರಿದಂತೆ ಎಲ್ಲ ಹಣಕಾಸಿನ ವಹಿವಾಟವನ್ನೂ ಆನ್‌ಲೈನ್ ಮೂಲಕವೇ ಪಾವತಿಸಲು ₹10 ಕೋಟಿ ವೆಚ್ಚದಲ್ಲಿ ಡಿಜಿಟಲೀಕರಣ ಕಾರ್ಯ ಕೈಗೊಳ್ಳಲಾಗಿದೆ. ಆನ್‌ಲೈನ್ ಮೂಲಕವೇ ₹30.48 ಕೋಟಿ ಶುಲ್ಕ ಸಂಗ್ರಹಿಸಲಾಗಿದೆ.

ಮೂರನೇ ಬಾರಿ ಬೈ-ಲಾ ತಿದ್ದುಪಡಿಗೆ ಸಿದ್ಧತೆ • ನಾಮನಿರ್ದೇಶನ, ಸದಸ್ಯತ್ವ ರದ್ದತಿ ಅಧಿಕಾರ

ಕಸಾಪ ಅಧ್ಯಕ್ಷರಿಗೆ ‘ಪರಮಾಧಿಕಾರ’

• ವರುಣ ಹೆಗಡೆ

ಬೆಂಗಳೂರು: ಕನ್ನಡ ಸಾಹಿತ್ಯ ಪರಿಷತ್ತಿನ ‘ಸಮಸ್ತ ಅಧಿಕಾರ’ವನ್ನು ರಾಜ್ಯ ಘಟಕದ ಅಧ್ಯಕ್ಷರಿಗೆ ನೀಡುವ ಉದ್ದೇಶ ದಿಂದ, ಬೈ-ಲಾ ತಿದ್ದುಪಡಿಗೆ ಪರಿಷತ್ತು ಮುಂದಾಗಿದೆ.

ಹಾಲಿ ಅಧ್ಯಕ್ಷ ಮಹೇಶ ಜೋಶಿ ನೇತೃತ್ವದ ಕಾರ್ಯಕಾರಿ ಸಮಿತಿ ಅಸ್ತಿತ್ವಕ್ಕೆ ಬಂದ ಮೇಲೆ, ಬೈ-ಲಾಗೆ ತಿದ್ದುಪಡಿ ತರುತ್ತಿರುವುದು ಇದು ಮೂರನೇ ಬಾರಿ. 2022ರಲ್ಲಿ ಪರಿಷತ್ತಿನ ಬೈ-ಲಾದಲ್ಲಿ ಆಮೂಲಾಗ್ರ ಬದಲಾವಣೆ ತರಲಾಗಿತ್ತು. 2023ರಲ್ಲಿ ಎರಡನೇ ಬಾರಿ ತಿದ್ದುಪಡಿ ಮಾಡಲಾಗಿತ್ತು. ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿ ಎ.ಎಸ್. ಪಾಚ್ಛಾಪುರೆ ಅವರ ಅಧ್ಯಕ್ಷತೆಯಲ್ಲಿ ರಚಿಸಲಾಗಿದ್ದ ‘ನಿಬಂಧನೆ ತಿದ್ದುಪಡಿ ಸಲಹಾ ಉಪಸಮಿತಿ’ಯ ಶಿಫಾರಸಿನ ಅನುಸಾರ ಈಗ ಬೈ-ಲಾ ತಿದ್ದುಪಡಿ ಮಾಡಲಾಗುತ್ತಿದೆ.

ಪ್ರಸ್ತಾವಿತ ತಿದ್ದುಪಡಿಯು 20 ನಿಯಮಗಳನ್ನು ಒಳಗೊಂಡಿದೆ. ಇದು ಅಂಗೀಕಾರವಾದರೆ, ಜಿಲ್ಲಾ ಘಟಕವೂ ಸೇರಿದಂತೆ ತೆರವಾದ ವಿವಿಧ ಘಟಕಗಳ ಅಧ್ಯಕ್ಷ ಸ್ಥಾನಕ್ಕೆ ನಾಮನಿರ್ದೇಶನ, ನಾಮನಿರ್ದೇಶನಗೊಂಡ ಸದಸ್ಯರನ್ನು ಕಾರಣ ನೀಡದೇ ಬದಲಾಯಿಸುವಂತಹ ಅಧಿಕಾರ ರಾಜ್ಯ ಘಟಕದ ಅಧ್ಯಕ್ಷರಿಗೆ ದೊರೆಯಲಿದೆ.

ಜಿಲ್ಲೆ, ಗಡಿನಾಡು, ಗಡಿರಾಜ್ಯ ಘಟಕದ ಅಧ್ಯಕ್ಷರು, ನಾಮನಿರ್ದೇಶನಗೊಂಡ ಸದಸ್ಯರು ಕೇಂದ್ರ ಪರಿಷತ್ತಿನ ಕಾರ್ಯಕಾರಿ ಸಮಿತಿ ಸಭೆಗಳಿಗೆ ರಾಜ್ಯ ಘಟಕದ ಅಧ್ಯಕ್ಷರ ಅನುಮತಿ ಪಡೆಯದೆ ಸತತ ಮೂರು ಬಾರಿ ಗೈರಾಗುವಂತಿಲ್ಲ. ಒಂದು ವೇಳೆ ಗೈರಾದಲ್ಲಿ ಅವರ ಸದಸ್ಯತ್ವವು ತನ್ನಿಂತಾನಾಗಿ ರದ್ದಾಗಲಿದೆ. ಹೀಗೆ ತೆರವಾದ ಸ್ಥಾನಕ್ಕೆ ನಾಮನಿರ್ದೇಶನ ಮಾಡುವ ಅಧಿಕಾರವನ್ನು ಪ್ರಸ್ತಾವಿತ ತಿದ್ದುಪಡಿಯಲ್ಲಿ ರಾಜ್ಯ ಘಟಕದ ಅಧ್ಯಕ್ಷರಿಗೆ ನೀಡಲಾಗಿದೆ.

ನಿಧನ, ರಾಜೀನಾಮೆ ಹಾಗೂ ಅನರ್ಹತೆ ಸೇರಿ ವಿವಿಧ ಕಾರಣದಿಂದ ಜಿಲ್ಲಾ ಘಟಕದ ಚುನಾಯಿತ ಅಧ್ಯಕ್ಷರ ಸ್ಥಾನ ತೆರವಾದರೆ, ಆ ಸ್ಥಾನಕ್ಕೆ ಮುಂದಿನ ಆದೇಶ ಅಥವಾ ಚುನಾವಣೆವರೆಗೆ ನಾಮನಿರ್ದೇಶನ ಮಾಡುವ ಅಧಿಕಾರವೂ ಅಧ್ಯಕ್ಷರಿಗೆ ಇರಲಿದೆ. ತಾಲ್ಲೂಕು ಮತ್ತು ಹೋಬಳಿ ಘಟಕದಲ್ಲಿ ಇಂತಹ ಪರಿಸ್ಥಿತಿ ಉದ್ಭವಿಸಿದಲ್ಲಿ ಜಿಲ್ಲಾ ಘಟಕದ ಅಧ್ಯಕ್ಷರು ರಾಜ್ಯ ಘಟಕದ ಅಧ್ಯಕ್ಷರೊಂದಿಗೆ ಚರ್ಚಿಸಿ, ಅನುಮತಿ ಪಡೆದ ಬಳಿಕವೇ ನಿಗದಿತ ಸ್ಥಾನಕ್ಕೆ ಹೆಸರನ್ನು ಘೋಷಿಸಬೇಕೆಂದು ತಿಳಿಸಲಾಗಿದೆ.

ಕಾರಣ ನೀಡದೆ ಬದಲಾವಣೆ: ನಾಮನಿರ್ದೇಶಿತ ಸದಸ್ಯರನ್ನು ಯಾವುದೇ ಕಾರಣ ನೀಡದೆ ಬದಲಾವಣೆ ಮಾಡುವ ಅಧಿಕಾರವನ್ನೂ ತಿದ್ದುಪಡಿಯಲ್ಲಿ ಸೇರ್ಪಡೆ ಮಾಡಲಾಗಿದೆ. ನಾಮನಿರ್ದೇಶಿತ ಸದಸ್ಯರು ಗುರುತರ ಆರೋಪ ದಡಿ ರಾಜೀನಾಮೆ ನೀಡಿದಲ್ಲಿ, ಅವರ ರಾಜೀನಾಮೆಯನ್ನು ಅಂಗೀಕರಿಸುವ ಅಥವಾ ತಿರಸ್ಕರಿಸುವ ಅಧಿಕಾರ ಕಸಾಪ ರಾಜ್ಯ ಘಟಕದ ಅಧ್ಯಕ್ಷರು ಹೊಂದಿರುತ್ತಾರೆಂದು ತಿದ್ದುಪಡಿಯ ಕರಡುವಿನಲ್ಲಿ ಉಲ್ಲೇಖಿಸಲಾಗಿದೆ.

ಜಿಲ್ಲಾ ಘಟಕದ ಕಾರ್ಯಕಾರಿ ಸಮಿತಿ ಸದಸ್ಯರ ಬದಲಾವಣೆ ಸಂದರ್ಭ ಉದ್ಭವಿಸಿದಾಗ, ಹೊಸ ನಾಮ ನಿರ್ದೇಶನಕ್ಕೆ ಹೆಸರುಗಳ ಪ್ರಸ್ತಾವವನ್ನು ಕೇಂದ್ರ ಘಟಕದ ಅಧ್ಯಕ್ಷರಿಗೆ ಕಳುಹಿಸಿ ಲಿಖಿತ ಅನುಮೋದನೆ ಪಡೆಯಬೇಕು ಎನ್ನಲಾಗಿದೆ.

ಸರ್ಕಾರಿ ಅಧಿಕಾರಿಗಳ ಮೇಲೆ ಹಿಡಿತ?

‘ಸಾಹಿತ್ಯ ಸಮ್ಮೇಳನ ಸುಸೂತ್ರವಾಗಿ ನಡೆಯಲು ಪರಿಷತ್ತಿನ ರಾಜ್ಯ ಘಟಕದ ಅಧ್ಯಕ್ಷರು ತಾವೇ ನೇರವಾಗಿ ಅಥವಾ ಮಾರ್ಗಸೂಚಿ ಉಪಸಮಿತಿಯನ್ನು ರಚಿಸಿ, ಮಾರ್ಗಸೂಚಿಗಳನ್ನು ಹೊರಡಿಸಬಹುದಾಗಿದೆ. ಹೀಗೆ ರಚಿಸಿದ ಮಾರ್ಗಸೂಚಿಗಳನ್ನು ಸಮ್ಮೇಳನ ನಡೆಯುವ ಜಿಲ್ಲೆಯ ಜಿಲ್ಲಾಡಳಿತ ಮತ್ತು ಸರ್ಕಾರದ ವಿವಿಧ ಇಲಾಖೆಗಳು ಕಡ್ಡಾಯವಾಗಿ ಪಾಲಿಸತಕ್ಕದ್ದು’ ಎಂದು ತಿದ್ದುಪಡಿಯಲ್ಲಿ ಪ್ರಸ್ತಾಪಿಸಲಾಗಿದೆ.

ಹಣ ಜಮೆ ಮಾಡದಿದ್ದರೆ ಡಿ.ಸಿ ವಿರುದ್ಧ ದಾವೆ?

ಸಾಹಿತ್ಯ ಸಮ್ಮೇಳನದ ಬಳಿಕ ಬಾಕಿ ಉಳಿದ ಹಣವನ್ನು ಸಾಹಿತ್ಯ ಪರಿಷತ್ತಿನ ರಾಜ್ಯ ಘಟಕಕ್ಕೆ ಜಮಾ ಮಾಡಲು 10 ತಿಂಗಳ ಗಡುವು ನೀಡಲಾಗಿದೆ. ಈ ಅವಧಿಯೊಳಗೆ ಲೆಕ್ಕ ಪರಿಶೋಧನೆ ನಡೆಸಿ, ಬಾಕಿ ಮೊತ್ತವನ್ನು ಜಮಾ ಮಾಡದಿದ್ದಲ್ಲಿ ಸರ್ಕಾರದ ಮುಖ್ಯ ಕಾರ್ಯದರ್ಶಿ ಅವರಿಗೆ ಕಸಾಪ ಅಧ್ಯಕ್ಷರು ಪತ್ರ ಬರೆದು, ಜಿಲ್ಲಾಧಿಕಾರಿಗೆ ನಿರ್ದೇಶನ ನೀಡಲು ಮನವಿ ಮಾಡುವುದು. ಬಳಿಕ ಮೂರು ತಿಂಗಳಲ್ಲಿ ಜಮಾ ಆಗದಿದ್ದರೆ ಸಮ್ಮೇಳನದ ಸಂದರ್ಭದಲ್ಲಿ ಕಾರ್ಯನಿರ್ವಹಿಸಿದ ಹಾಗೂ ಸಮ್ಮೇಳನದ ಬಳಿಕ ಹೊಸದಾಗಿ ವರ್ಗಾವಣೆಯಾಗಿ ಬಂದ ಜಿಲ್ಲಾಧಿಕಾರಿ ವಿರುದ್ಧ ನ್ಯಾಯಾಲಯದಲ್ಲಿ ದಾವೆ ಹೂಡುವ ಬಗ್ಗೆಯೂ ತಿದ್ದುಪಡಿಯಲ್ಲಿ ಸೇರ್ಪಡೆ ಮಾಡಲಾಗಿದೆ.

27ರಂದು ಸರ್ವಸದಸ್ಯರ ವಿಶೇಷ ಸಭೆ

ಕನ್ನಡ ಸಾಹಿತ್ಯ ಪರಿಷತ್ತು ಇದೇ 27ರಂದು ಬೆಳಿಗ್ಗೆ 11 ಗಂಟೆಗೆ ಬಳ್ಳಾರಿ ಜಿಲ್ಲೆಯ ಸಂಡೂರು ತಾಲ್ಲೂಕಿನ ನಂದಿಹಳ್ಳಿಯಲ್ಲಿರುವ ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯದ ಸ್ನಾತಕೋತ್ತರ ಅಧ್ಯಯನ ಕೇಂದ್ರದ ಸಭಾಂಗಣದಲ್ಲಿ ಸರ್ವಸದಸ್ಯರ ವಿಶೇಷ ಸಭೆ ಹಮ್ಮಿಕೊಂಡಿದೆ. ಮಹೇಶ ಜೋಶಿ ಅಧ್ಯಕ್ಷತೆಯಲ್ಲಿ ನಡೆಯಲಿರುವ ಸಭೆಯಲ್ಲಿ ಉದ್ದೇಶಿತ ತಿದ್ದುಪಡಿಯನ್ನು ಮಂಡಿಸಲಾಗುತ್ತದೆ.



> **ಸಾಹಿತ್ಯ ಸಮ್ಮೇಳನದ ಯಶಸ್ಸಿಗೆ, ಆಡಳಿತದ ಅನುಕೂಲಕ್ಕಾಗಿ ಬೈ-ಲಾದಲ್ಲಿ ಕೆಲ ತಿದ್ದುಪಡಿ ಮಾಡಲಾಗುತ್ತಿದೆ. ಹಾಲಿ ಇರುವ ನಿಯಮಗಳಲ್ಲಿ ಸ್ಪಷ್ಟತೆ ತರಲಾಗುತ್ತಿದೆ**
> **ಮಹೇಶ ಜೋಶಿ**
> ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ



ಪ್ರತಿಭಟನೆ

ವಕ್ಫ್ ಕಾಯ್ದೆ ತಿದ್ದುಪಡಿ ವಿರುದ್ಧ ಕರ್ನಾಟಕ ಉಲಮಾ ಒಕ್ಕೂಟವು ಮಂಗಳೂರು ಹೊರವಲಯದ ಕಣ್ಣೂರಿನ ಅಡ್ಯಾರ್ ಷಾ ಗಾರ್ಡನ್‌ನಲ್ಲಿ ಆಯೋಜಿಸಿದ್ದ ಪ್ರತಿಭಟನಾ ಸಮಾವೇಶದಲ್ಲಿ ಭಾಗವಹಿಸಿದ್ದ ಜನಸ್ತೋಮ ಚಿತ್ರ: ಫಕ್ರುದ್ದೀನ್ ಎಚ್.

ಪ್ರಧಾನಿ ಮೋದಿ– ಮಸ್ಕ್ ಮಾತುಕತೆ

ಪ್ರಜಾವಾಣಿ ವಾರ್ತೆ/ ಪಿಟಿಐ

ನವದೆಹಲಿ: ಪ್ರಧಾನಿ ನರೇಂದ್ರ ಮೋದಿ ಅವರು ಅಮೆರಿಕದ ಉದ್ಯಮಿ ಇಲಾನ್ ಮಸ್ಕ್ ಜತೆ ನಾವೀನ್ಯತೆ ಮತ್ತು ತಂತ್ರಜ್ಞಾನ ಕ್ಷೇತ್ರಗಳಿಗೆ ಸಂಬಂಧಿಸಿದಂತೆ ಮಹತ್ವದ ಮಾತುಕತೆ ನಡೆಸಿದ್ದಾರೆ.

‘ಮಸ್ಕ್ ಜೊತೆ ಹಲವು ವಿಷಯಗಳ ಕುರಿತು ಮಾತನಾಡಿದ್ದೇನೆ. ಈ ವರ್ಷದ ಆರಂಭದಲ್ಲಿ ವಾಷಿಂಗ್ಟನ್ ಡಿ.ಸಿಯಲ್ಲಿ ನಾವು ಚರ್ಚಿಸಿದ್ದ ವಿಷಯಗಳೂ ಸೇರಿದಂತೆ ತಂತ್ರಜ್ಞಾನ ಮತ್ತು ನಾವೀನ್ಯತೆ ಕ್ಷೇತ್ರಗಳಲ್ಲಿನ ಸಹಯೋಗದ ಬಗ್ಗೆ ಚರ್ಚಿಸಲಾಗಿದೆ’ ಎಂದು ಮೋದಿ ಅವರು ಶುಕ್ರವಾರ ‘ಎಕ್ಸ್’ನಲ್ಲಿ ತಿಳಿಸಿದ್ದಾರೆ.



ನರೇಂದ್ರ ಮೋದಿ



ಇಲಾನ್ ಮಸ್ಕ್

‘ಈ ಎರಡು ಕ್ಷೇತ್ರಗಳಲ್ಲಿ ಅಮೆರಿಕ ಜೊತೆಗಿನ ಪಾಲುದಾರಿಕೆಯನ್ನು ಮುಂದುವರಿಸಲು ಭಾರತ ಬದ್ಧವಾಗಿದೆ’ ಎಂದೂ ಹೇಳಿದ್ದಾರೆ.

ಡೊನಾಲ್ಡ್ ಟ್ರಂಪ್ ಆಡಳಿತದಲ್ಲಿ ಅತ್ಯಂತ ಪ್ರಭಾವಿ ವ್ಯಕ್ತಿಗಳಲ್ಲಿ ಒಬ್ಬರೆನಿಸಿರುವ ಮಸ್ಕ್ ಅವರು ಅಮೆರಿಕ ಸರ್ಕಾರದ ದಕ್ಷತಾ ಇಲಾಖೆಯ (ಡಿಒಜಿಇ) ನೇತೃತ್ವ ವಹಿಸಿದ್ದಾರೆ.

ಮಸ್ಕ್ ಒಡೆತನದ ಸ್ಟಾರ್‌ಲಿಂಕ್ ಮತ್ತು ವಿದ್ಯುತ್‌ಚಾಲಿತ ಕಾರು ತಯಾರಿಕಾ ಕಂಪನಿ ಟೆಸ್ಲಾ, ಭಾರತದ ಮಾರುಕಟ್ಟೆಗೆ ಪ್ರವೇಶಿಸಲು ಸಿದ್ಧತೆ ನಡೆಸಿರುವ ಸಮಯದಲ್ಲೇ ಇಬ್ಬರ ನಡುವೆ ದೂರವಾಣಿ ಸಂಭಾಷಣೆ ನಡೆದಿದೆ.

ಅಗೆದು ಹಾಕಿದ ರಸ್ತೆ ಸಂಚಾರಕ್ಕೆ ಸಂಚಕಾರ 9

ಚಿನಕುರುಳಿ

ಪ್ರಕಾಶ್ ಶೆಟ್ಟಿ



‘ರೋಹಿತ್ ವೇಮುಲ ಕಾಯ್ದೆ ರೂಪಿಸಿ’

ಪ್ರಜಾವಾಣಿ ವಾರ್ತೆ/ಪಿಟಿಐ

ನವದೆಹಲಿ: ದೇಶದ ಶಿಕ್ಷಣ ವ್ಯವಸ್ಥೆಯಲ್ಲಿ ಯಾರೊಬ್ಬರೂ ಜಾತಿ ಆಧಾರದಲ್ಲಿ ತಾರತಮ್ಯ ಎದುರಿಸಬಾರದು. ಇದನ್ನು ಖಾತ್ರಿಪಡಿಸುವುದಕ್ಕಾಗಿ ‘ರೋಹಿತ್ ವೇಮುಲ ಕಾಯ್ದೆ’ ಹೆಸರಿನ ಕಾನೂನು ರೂಪಿಸುವಂತೆ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರು ಕರ್ನಾಟಕ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಒತ್ತಾಯಿಸಿದ್ದಾರೆ.

ಈ ಸಂಬಂಧ, ಸಿದ್ದರಾಮಯ್ಯ ಅವರಿಗೆ ರಾಹುಲ್ ಏಪ್ರಿಲ್ 16ರಂದು ಪತ್ರ ಬರೆದಿದ್ದಾರೆ. ಬಿ.ಆರ್. ಅಂಬೇಡ್ಕರ್ ತಮ್ಮ ಜೀವಿತಾವಧಿಯಲ್ಲಿ ಎದುರಿಸಿದ್ದ ತಾರತಮ್ಯಕ್ಕೆ ಸಂಬಂಧಿಸಿದ ಹಲವು ಘಟನೆಗಳನ್ನು ರಾಹುಲ್ ಗಾಂಧಿ ಪತ್ರದಲ್ಲಿ ವಿವರಿಸಿದ್ದು, ಈ ಪತ್ರವನ್ನು ‘ಎಕ್ಸ್’ನಲ್ಲಿ ಹಂಚಿಕೊಂಡಿದ್ದಾರೆ

3ನೇ ಪುಟ ನೋಡಿ

ಅಂಬೇಡ್ಕರ್ ಬದುಕಿನ ಘಟನೆಗಳ ಉಲ್ಲೇಖ



ಎತ್ತಿನಗಾಡಿಯಲ್ಲಿ ಪ್ರಯಾಣ ಹೊರಟಿದ್ದರ ಕುರಿತು ಅಂಬೇಡ್ಕರ್ ವಿವರಿಸಿರುವುದನ್ನು ರಾಹುಲ್ ಉಲ್ಲೇಖಿಸಿದ್ದಾರೆ: ‘ಈ ಪಯಣದಲ್ಲಿ ನಮ್ಮೊಂದಿಗೆ ಸಾಕಷ್ಟು ಆಹಾರ ಇತ್ತು. ನಮ್ಮಲ್ಲಿ ಹಸಿವೂ ಇತ್ತು. ಆದಾಗ್ಯೂ ನಾವು ಏನನ್ನೂ ತಿನ್ನದೆಯೇ ಮಲಗಬೇಕಾಯಿತು. ನಮಗೆ ನೀರು ಸಿಗದ ಕಾರಣ ಹಸಿದ ಹೊಟ್ಟೆಯಲ್ಲೇ ಮಲಗಿದೆವು. ನಾವು ಅಸ್ಪೃಶ್ಯರಾಗಿದ್ದರಿಂದ ನಮಗೆ ನೀರು ಸಿಗಲಿಲ್ಲ’.

> **ನಮ್ಮ ಶೈಕ್ಷಣಿಕ ವ್ಯವಸ್ಥೆಯಲ್ಲಿ ದಲಿತರು, ಆದಿವಾಸಿಗಳು ಹಾಗೂ ಒಬಿಸಿ ಸಮುದಾಯದ ವಿದ್ಯಾರ್ಥಿಗಳು ಈಗಲೂ ತಾರತಮ್ಯ ಎದುರಿಸುತ್ತಿರುವುದು ನಾಚಿಕೆಗೇಡಿನ ಸಂಗತಿ**
> **ರಾಹುಲ್ ಗಾಂಧಿ,** ಕಾಂಗ್ರೆಸ್ ನಾಯಕ

> **ಜಾತಿ, ವರ್ಗ ಅಥವಾ ಧರ್ಮದ ಆಧಾರದ ಮೇಲೆ ಯಾವುದೇ ವಿದ್ಯಾರ್ಥಿ ತಾರತಮ್ಯ ಎದುರಿಸಬಾರದು ಎನ್ನುವುದನ್ನು ಖಾತ್ರಿಪಡಿಸಲು ಕಾಯ್ದೆ ಜಾರಿಗೊಳಿಸುವ ಸಂಕಲ್ಪಕ್ಕೆ ಸರ್ಕಾರ ಬದ್ಧ**
> **ಸಿದ್ದರಾಮಯ್ಯ,** ಮುಖ್ಯಮಂತ್ರಿ

ಜನಿವಾರ ವಿವಾದ: ವರದಿ ಕೇಳಿದ ಕೆಇಎ

ಪ್ರಜಾವಾಣಿ ವಾರ್ತೆ

ಬೆಂಗಳೂರು/ ಶಿವಮೊಗ್ಗ/ಬೀದರ್: ಸಿಇಟಿ ಪರೀಕ್ಷೆ ಬರೆಯಲು ಹೋಗಿದ್ದ ಬ್ರಾಹ್ಮಣ ಸಮುದಾಯದ ವಿದ್ಯಾರ್ಥಿಗಳ ಜನಿವಾರ ತೆಗೆಸಿದ ಪ್ರಕರಣಗಳ ಕುರಿತು ಕರ್ನಾಟಕ ಪರೀಕ್ಷಾ ಪ್ರಾಧಿಕಾರ ಆಯಾ ಜಿಲ್ಲಾಧಿಕಾರಿಗಳಿಂದ ವರದಿ ಕೇಳಿದೆ.

ಗುರುವಾರ ನಡೆದ ಪರೀಕ್ಷೆ ವೇಳೆ ಶಿವಮೊಗ್ಗದ ಆದಿಚುಂಚನಗಿರಿ ಕಾಲೇಜು ಹಾಗೂ ಬೀದರ್‌ನ ಸಾಯಿ ಸ್ಫೂರ್ತಿ ಕಾಲೇಜಿನ ಪರೀಕ್ಷಾ ಕೇಂದ್ರಗಳಿಗೆ ಹಾಜರಾಗಿದ್ದ ವಿದ್ಯಾರ್ಥಿಗಳ ಜನಿವಾರ ತೆಗೆಸಲಾಗಿತ್ತು. ಶಿವಮೊಗ್ಗದಲ್ಲಿ ವಿದ್ಯಾರ್ಥಿ ಜನಿವಾರ ತೆಗೆದು ಪರೀಕ್ಷೆ ಬರೆದಿದ್ದ. ಬೀದರ್‌ನಲ್ಲಿ ಜನಿವಾರ ತೆಗೆಯಲು ನಿರಾಕರಿಸಿದ ವಿದ್ಯಾರ್ಥಿ, ಪರೀಕ್ಷೆ ಬರೆಯದೇ ವಾಪಸ್ ಹೋಗಿದ್ದ.

ಶುಕ್ರವಾರ ಈ ವಿಷಯವು ರಾಜಕೀಯ ತಿರುವು ಪಡೆದಿದ್ದು, ಬಿಜೆಪಿ ನಾಯಕರು ಈ ಬಗ್ಗೆ ತೀಕ್ಷ್ಣ ಪ್ರತಿಕ್ರಿಯೆ ನೀಡಿದ್ದರು. ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದ ಅಧ್ಯಕ್ಷ ಎಸ್. ರಘುನಾಥ್, ಹವ್ಯಕ ಮಹಾಸಭಾದ ಅಧ್ಯಕ್ಷ ಡಾ. ಗಿರಿಧರ ಕಜೆ ಅವರು ಈ ಕ್ರಮಕ್ಕೆ ತೀವ್ರ ಆಕ್ಷೇಪ ವ್ಯಕ್ತಪಡಿಸಿದ್ದರು.

ಪ್ರಕರಣದ ಬಗ್ಗೆ ಪ್ರತಿಕ್ರಿಯಿಸಿದ್ದ ಉನ್ನತ ಶಿಕ್ಷಣ ಸಚಿವ ಡಾ.ಎಂ.ಸಿ. ಸುಧಾಕರ್, ಶಾಲಾ ಶಿಕ್ಷಣ ಸಚಿವ ಮಧು ಬಂಗಾರಪ್ಪ ಹಾಗೂ ಬೀದರ್ ಜಿಲ್ಲಾ ಉಸ್ತುವಾರಿ ಸಚಿವ ಈಶ್ವರ ಖಂಡ್ರೆ ಅವರು, ವಿಚಾರಣೆ ನಡೆಸಿ ವರದಿ ನೀಡುವಂತೆ ಸಂಬಂಧಿಸಿದ ಅಧಿಕಾರಿಗಳಿಗೆ ಸೂಚಿಸಿದ್ದರು.

ಈ ಬಗ್ಗೆ ಪ್ರಕಟಣೆ ನೀಡಿರುವ ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ಕಾರ್ಯನಿರ್ವಾಹಕ ನಿರ್ದೇಶಕ ಎಚ್. ಪ್ರಸನ್ನ ಅವರು, ‘ಪ್ರಕರಣ ಗೊತ್ತಾದ ತಕ್ಷಣ ಎರಡೂ ಜಿಲ್ಲೆಗಳ ಜಿಲ್ಲಾಧಿಕಾರಿಗಳಿಗೆ ಪತ್ರ ಬರೆದು, ಸಮಗ್ರ ವರದಿ ನೀಡುವಂತೆ ಸೂಚಿಸಲಾಗಿದೆ. ವಸ್ತ್ರ ಸಂಹಿತೆಯಲ್ಲಿ ಎಲ್ಲಿಯೂ ಜನಿವಾರ ತೆಗೆಸಲು ಹೇಳಿಲ್ಲ. ಆದರೂ, ಎರಡು ಕೇಂದ್ರಗಳಲ್ಲಿ ಈ ರೀತಿ ನಡೆದಿರುವುದು ಖಂಡನೀಯ. ಈ ಬಗ್ಗೆ ಸಮಗ್ರ ತನಿಖೆ ನಡೆಸಿ, ತಪ್ಪಿತಸ್ಥರ ವಿರುದ್ಧ ಕಠಿಣ ಕ್ರಮ ಜರುಗಿಸಲಾಗುವುದು’ ಎಂದು ಹೇಳಿದ್ದಾರೆ.

ಪ್ರಾಂಶುಪಾಲರಿಗೆ ನೋಟಿಸ್: ಕೆ-ಸಿಇಟಿ ಪರೀಕ್ಷೆ ಬರೆಯಲು ಅವಕಾಶ ಕಲ್ಪಿಸದ ವಿಷಯವಾಗಿ ಬೀದರ್‌ನ ಸಾಯಿ ಸ್ಫೂರ್ತಿ ಕಾಲೇಜಿನ ಪ್ರಾಂಶುಪಾಲರಿಗೆ ಜಿಲ್ಲಾಧಿಕಾರಿ ಶಿಲ್ಪಾ ಶರ್ಮಾ ಅವರು ಶುಕ್ರವಾರ ಕಾರಣ ಕೇಳಿ ನೋಟಿಸ್ ನೀಡಿದ್ದಾರೆ.

3ನೇ ಪುಟ ನೋಡಿ



> **ಜನಿವಾರ ತೆಗೆಸುವುದು ವಿಕೃತ ಮನಃಸ್ಥಿತಿ. ಅವರ ಸಂಪ್ರದಾಯ ಅವರ ಹಕ್ಕು. ಜನಿವಾರ ತೆಗೆಸಿದ್ದು ನಿಜವೇ ಆಗಿದ್ದರೆ, ಅದು ಅತಿರೇಕದ ವರ್ತನೆ. ಅಧಿಕಾರಿಗಳಿಂದ ವರದಿ ಪಡೆದು, ಕ್ರಮ ಜರುಗಿಸುತ್ತೇನೆ**
> **ಡಾ.ಎಂ.ಸಿ. ಸುಧಾಕರ್,** ಉನ್ನತ ಶಿಕ್ಷಣ ಸಚಿವ



> **ಜನಿವಾರ, ಶಿವದಾರ ಸೇರಿದಂತೆ ವಿದ್ಯಾರ್ಥಿಗಳು ಧರಿಸಿರುವ ಧಾರ್ಮಿಕ ಚಿಹ್ನೆಗಳನ್ನು ತೆಗೆಸುವಂತೆ ನಿರ್ದೇಶನ ನೀಡಿಲ್ಲ. ಪರೀಕ್ಷೆಯಿಂದ ವಂಚಿತರಾದವರಿಗೆ ಮರು ಪರೀಕ್ಷೆ ಕೊಡಿಸುವ ಬಗ್ಗೆ ಚರ್ಚಿಸಲಾಗುವುದು**
> **ಮಧು ಬಂಗಾರಪ್ಪ,** ಶಾಲಾ ಶಿಕ್ಷಣ ಸಚಿವ

ಸಚಿವರಾದ ಕೆ.ಎಚ್ ಮುನಿಯಪ್ಪ-ಸತೀಶ ಜಾರಕಿಹೊಳಿ ಸುದೀರ್ಘ ಚರ್ಚೆ

ಕೆಪಿಸಿಸಿ ಸಾರಥ್ಯ ಬದಲು: ಮತ್ತೆ ಮುನ್ನೆಲೆಗೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೆಲವು ದಿನಗಳಿಂದ ಮರೆಗೆ ಸರಿದಿದ್ದ, ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿ (ಕೆಪಿಸಿಸಿ) ಅಧ್ಯಕ್ಷರ ಬದಲು ಹಾಗೂ ಅಧಿಕಾರ ಹಂಚಿಕೆಯ ವಿಷಯ ಮತ್ತೆ ಮುನ್ನೆಲೆಗೆ ಬಂದಿದೆ.

ಆಹಾರ ಸಚಿವ ಕೆ.ಎಚ್. ಮುನಿಯಪ್ಪ ಅವರ ಸಂಜಯನಗರದ ಮನೆಗೆ ಉಪಾಹಾರದ ನೆಪದಲ್ಲಿ ಶುಕ್ರವಾರ ಭೇಟಿ ನೀಡಿದ ಲೋಕೋಪಯೋಗಿ ಸಚಿವ ಸತೀಶ ಜಾರಕಿಹೊಳಿ, ಎರಡು ಗಂಟೆಗೂ ಹೆಚ್ಚು ಸಮಯ ಚರ್ಚೆ ನಡೆಸಿದರು. ಈ ವೇಳೆ, ಕೆಪಿಸಿಸಿ ಅಧ್ಯಕ್ಷ ಮತ್ತು ಮುಖ್ಯಮಂತ್ರಿ ಬದಲಾವಣೆಯಾದಲ್ಲಿ, ಯಾರಿಗೆ ಅವಕಾಶ ಸಿಗಬೇಕು ಎಂಬ ಬಗ್ಗೆ ಇಬ್ಬರು ನಾಯಕರು ಗಂಭೀರ ಸಮಾಲೋಚನೆ ನಡೆಸಿದ್ದಾರೆ ಎಂದು ಗೊತ್ತಾಗಿದೆ.

ಕೆಲ ತಿಂಗಳ ಹಿಂದೆ ಲೋಕೋಪಯೋಗಿ ಸಚಿವ ಸತೀಶ ಜಾರಕಿಹೊಳಿ ಅವರ ಮನೆಯಲ್ಲಿ ನಡೆದಿದ್ದ ಔತಣ ಕೂಟದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಅವರ ಆಪ್ತ ಬಳಗದ ಸಚಿವರಾದ ಎಚ್.ಸಿ.ಮಹದೇವಪ್ಪ, ಕೆ.ಎನ್.ರಾಜಣ್ಣ, ಜಿ.ಪರಮೇಶ್ವರ ಭಾಗವಹಿಸಿದ್ದರು. ಕೆಪಿಸಿಸಿ ಅಧ್ಯಕ್ಷರೂ ಆಗಿರುವ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ವಿದೇಶ ಪ್ರವಾಸದಲ್ಲಿದ್ದಾಗ ನಡೆದಿದ್ದ ಈ ಸಭೆ ಪಕ್ಷದ ವಲಯದಲ್ಲಿ ನಾನಾ ಚರ್ಚೆಗಳನ್ನು ಹುಟ್ಟು ಹಾಕಿತ್ತು.


ಮುಖ್ಯಮಂತ್ರಿ ಸ್ಥಾನ, ಕೆಪಿಸಿಸಿ ಅಧ್ಯಕ್ಷರ ಬದಲಾವಣೆಯಾದರೆ ಮುಂದಿನ ನಡೆ ಏನು ಎಂಬ ಬಗ್ಗೆ ಚರ್ಚಿಸಲು ಔತಣ ಸಭೆಗಳನ್ನು ಆಯೋಜಿಸಲಾಗುತ್ತಿದೆ ಎಂಬ ಸುದ್ದಿ ಹಬ್ಬಿತ್ತು. ನಂತರ ಗೃಹ ಸಚಿವ ಪರಮೇಶ್ವರ ಅವರ ಮನೆಯಲ್ಲಿ ನಿಗದಿಯಾಗಿದ್ದ ಔತಣ ಸಭೆಯ ವಿರುದ್ಧ ಶಿವಕುಮಾರ್ ಅವರು ವರಿಷ್ಠರಿಗೆ ದೂರು ನೀಡಿದ ನಂತರ ರದ್ದಾಗಿತ್ತು. ಪರಿಶಿಷ್ಟ ಜಾತಿ, ಪಂಗಡದ ಸಚಿವರ ಸಭೆಗೆ ದಲಿತ ಎಡಗೈ ಪಂಗಡದ ಸಚಿವರನ್ನು ಕಡೆಗಣಿಸಲಾಗಿದೆ ಎಂದು ಹಿರಿಯ ಸಚಿವರೂ ಆದ ಕೆ.ಎಚ್. ಮುನಿಯಪ್ಪ ಅಸಮಾಧಾನ ಹೊರಹಾಕಿದ್ದರು.

ಕೆಪಿಸಿಸಿ ಅಧ್ಯಕ್ಷ ಸ್ಥಾನದ ಮೇಲೆ ಕಣ್ಣಿಟ್ಟಿರುವ ಸತೀಶ ಜಾರಕಿಹೊಳಿ ಅವರು, ಎಡಗೈ ಪಂಗಡವನ್ನು ಪ್ರತಿನಿಧಿಸುವ ಸಚಿವರ ವಿಶ್ವಾಸ ಗಳಿಸುವತ್ತ ಹೆಜ್ಜೆ ಇಟ್ಟಿದ್ದು, ಕೆಪಿಸಿಸಿ ಅಧ್ಯಕ್ಷ ಸ್ಥಾನದ ಬದಲಾವಣೆಗೆ ಹೈಕಮಾಂಡ್ ಮುಂದಾದರೆ ತಮ್ಮನ್ನು ಬೆಂಬಲಿಸುವಂತೆ ಮುನಿಯಪ್ಪ ಅವರನ್ನು ಕೋರಿದ್ದಾರೆ ಎನ್ನಲಾಗಿದೆ.

‘ಸಿ.ಎಂ ಸ್ಥಾನಕ್ಕೆ ಬೆಂಬಲ ಕೊಡಿ’

‘ಕಾಂಗ್ರೆಸ್ ಅಧಿಕಾರಕ್ಕೆ ಬಂದ ನಂತರ ಪರಿಶಿಷ್ಟ ಸಮುದಾಯದ ಬಲಗೈನವರಿಗೇ ಹೆಚ್ಚಿನ ಮನ್ನಣೆ ದೊರೆಯುತ್ತಿದೆ. ನಾನು 7 ಬಾರಿ ಸಂಸದನಾಗಿ ಆಯ್ಕೆಯಾಗಿದ್ದೇನೆ. ಕೇಂದ್ರ ಸಚಿವನಾಗಿ ಕೆಲಸ ಮಾಡಿದ್ದೇನೆ. ಪಕ್ಷದ ನಿಷ್ಠಾವಂತ. ಮುಖ್ಯಮಂತ್ರಿಯಾಗುವ ಎಲ್ಲ ಅರ್ಹತೆ ಇದೆ. ರಾಜ್ಯದಲ್ಲಿ ಮುಂದೆ ದಲಿತರನ್ನು ಮುಖ್ಯಮಂತ್ರಿ ಸ್ಥಾನಕ್ಕೆ ಪರಿಗಣಿಸುವುದಾದರೆ ನನಗೆ ತಮ್ಮ ಬೆಂಬಲ ಇರಬೇಕು. ಕೆಪಿಸಿಸಿ ಸ್ಥಾನದ ವಿಚಾರದಲ್ಲಿ ನಿಮ್ಮ ಜತೆ ನಿಲ್ಲುವೆ ಎಂದು ಮುನಿಯಪ್ಪ ಬೇಡಿಕೆ ಇಟ್ಟರು’ ಎಂದು ಮೂಲಗಳು ಹೇಳಿವೆ.

‘ಪರಿಶಿಷ್ಟ ಜಾತಿ, ಪಂಗಡ ಪ್ರತಿನಿಧಿಸುವ ಎಲ್ಲ ಸಚಿವರು, ಶಾಸಕರು ಒಗ್ಗಟ್ಟು ಪ್ರದರ್ಶಿಸೋಣ. ಸಮಯ ಬಂದಾಗ ಅವಕಾಶದ ಸದುಪಯೋಗಕ್ಕೆ ಪ್ರಬಲ ಬೇಡಿಕೆ ಮಂಡಿಸೋಣ. ನಮ್ಮ ಜತೆಗೆ ಇರಿ’ ಎಂದು ಸತೀಶ ಜಾರಕಿಹೊಳಿ ಕೋರಿದರು ಎನ್ನಲಾಗಿದೆ.



ತಮ್ಮ ಮನೆಗೆ ಬಂದ ಸತೀಶ ಜಾರಕಿಹೊಳಿ ಅವರನ್ನು ಹೂಗುಚ್ಛ ನೀಡಿ ಸ್ವಾಗತಿಸಿದ ಕೆ.ಎಚ್. ಮುನಿಯಪ್ಪ

> **ಬೆಂಗಳೂರು ಗ್ರಾಮಾಂತರ ಕ್ಷೇತ್ರದ ರಸ್ತೆ ಅಭಿವೃದ್ಧಿ ಕುರಿತು ಚರ್ಚೆ ನಡೆಸಿದೆವು. ಜಾತಿ ಗಣತಿ, ಒಳ ಮೀಸಲಾತಿ ಕುರಿತು ಒಂದಷ್ಟು ಮಾತುಕತೆ ನಡೆಯಿತು**
> **ಸತೀಶ ಜಾರಕಿಹೊಳಿ,**
> ಲೋಕೋಪಯೋಗಿ ಸಚಿವ

ವಿದ್ಯಾಸಿರಿ ಮೊತ್ತ ₹2,000ಕ್ಕೆ ಏರಿಕೆ

ಮಡಿವಾಳರು ಹಿಂದುಳಿಯಲು ಮನುಸ್ಮೃತಿ ಕಾರಣ: ಸಿ.ಎಂ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಡಿವಾಳ ಮತ್ತು ಹಿಂದುಳಿದ ಸಮುದಾಯದ ಮಕ್ಕಳು ಹೆಚ್ಚು ಶಿಕ್ಷಿತರಾಗಬೇಕು. ಆದ್ದರಿಂದ ‘ವಿದ್ಯಾಸಿರಿ’ ಮೊತ್ತವನ್ನು ಪ್ರತಿ ವಿದ್ಯಾರ್ಥಿಗೆ ₹1,500ರಿಂದ ₹2,000ಕ್ಕೆ ಹೆಚ್ಚಿಸಲಾಗುವುದು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಪ್ರಕಟಿಸಿದರು.



ಸಿದ್ದರಾಮಯ್ಯ

ಶ್ರೀ ಮಾಚಿದೇವ ಗುರುಪೀಠ ವಿಶ್ವಸ್ಥ ಸಮಿತಿ ಟ್ರಸ್ಟ್ ಕೆಂಗೇರಿ ಸಮೀಪದ ಚೂಡೇನಾಪುರದಲ್ಲಿ ನಿರ್ಮಿಸಿದ ಕಲಿದೇವ ಸಭಾಂಗಣ ಉದ್ಘಾಟಿಸಿ ಅವರು ಮಾತನಾಡಿದರು.

‘ಮಡಿವಾಳ ಸೇರಿ ಎಲ್ಲ ಹಿಂದುಳಿದ ಸಮುದಾಯಗಳ ಪ್ರಗತಿಗೆ ಕಾಂಗ್ರೆಸ್ ಸರ್ಕಾರ ಬದ್ಧವಾಗಿದೆ. ಮಡಿವಾಳ ಸಮುದಾಯ ಮುಖ್ಯವಾಹಿನಿಗೆ ಬರಬೇಕು. ಅದಕ್ಕಾಗಿ ವಿದ್ಯಾಸಿರಿ ಮೊತ್ತವನ್ನು ಹೆಚ್ಚಿಸಲು ತೀರ್ಮಾನಿಸಿದ್ದೇವೆ. ಮಡಿವಾಳ ಸಮುದಾಯದ ವಿದ್ಯಾರ್ಥಿ ನಿಲಯಕ್ಕೆ ಅಗತ್ಯ ಸೌಲಭ್ಯಗಳನ್ನು ಒದಗಿಸಲಾಗುವುದು’ ಎಂದರು.



12ನೇ ಶತಮಾನದಲ್ಲೇ ಮಡಿವಾಳ ಮಾಚಿದೇವರು ಬಸವಣ್ಣನವರ ಜತೆ ಸೇರಿ ಸಮಾಜದ ಬದಲಾವಣೆಗೆ ಮುಂದಾಗಿದ್ದರು. ನಮ್ಮ ಸಮಾಜದಲ್ಲಿ ಜಾತಿ ವ್ಯವಸ್ಥೆ ಕಾರಣಕ್ಕೆ ಅಸಮಾನತೆ ಇದೆ. ಈ ಕಾರಣಕ್ಕೆ ಉದ್ಯೋಗ, ಶಿಕ್ಷಣ ಸಿಗದೇ ಆರ್ಥಿಕ ಅಸಮಾನತೆ ಹೆಚ್ಚಾಯಿತು ಎಂದು ಸಿದ್ದರಾಮಯ್ಯ ಹೇಳಿದರು.

ಮಡಿವಾಳ ಸಮಾಜದಲ್ಲಿ ಒಬ್ಬರೂ ಶಾಸಕರಿಲ್ಲ. ಒಬ್ಬರು ಮಾತ್ರ ಐಎಎಸ್ ಅಧಿಕಾರಿ ಇದ್ದಾರೆ. ಮಡಿವಾಳ ಸಮಾಜ ಇಷ್ಟು ಹಿಂದುಳಿಯಲು ಮನುಸ್ಮೃತಿ ಕಾರಣ ಎಂದು ಹೇಳಿದ ಅವರು, ಸಮಾನತೆ ಸಾರುವ ಸಂವಿಧಾನವನ್ನು ವಿರೋಧಿಸುವವರನ್ನು ದೂರ ಇಡಬೇಕು. ಅವರನ್ನು ಹತ್ತಿರಕ್ಕೆ ಸೇರಿಸಬೇಡಿ. ಸಂವಿಧಾನ ವಿರೋಧಿಗಳ ಜತೆ ಕೈ ಜೋಡಿಸುವುದು ಮಡಿವಾಳ ಮಾಚಿದೇವರಿಗೆ ಮಾಡುವ ಅವಮಾನ ಎಂದರು.

‘ಎಸ್‌ಸಿ ಪಟ್ಟಿಗೆ ಸೇರಿಸಲು ಯತ್ನ’

‘ಹಲವು ರಾಜ್ಯಗಳಲ್ಲಿ ಮಡಿವಾಳ ಸಮುದಾಯದವರು ಪರಿಶಿಷ್ಟ ಜಾತಿ ಪಟ್ಟಿಯಲ್ಲಿದ್ದಾರೆ. ನಮ್ಮ ರಾಜ್ಯದಲ್ಲೂ ಸೇರಿಸಬೇಕು ಎಂದು ಬೇಡಿಕೆ ಇಟ್ಟಿದ್ದೀರಿ. ಮುಂದಿನ ದಿನಗಳಲ್ಲಿ ಮುಖ್ಯಮಂತ್ರಿ ಜತೆ ಚರ್ಚೆ ಮಾಡುತ್ತೇನೆ. ಈ ಸಮುದಾಯವರು ಕೆಲವೇ ಕೆಲವರು ಮಾತ್ರ ಅಧಿಕಾರಿಗಳಿದ್ದಾರೆ. ಬಹುತೇಕರು ಕುಲಕಸುಬು ಬಿಟ್ಟಿಲ್ಲ’ ಎಂದು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಹೇಳಿದರು.



ಡಿ.ಕೆ ಶಿವಕುಮಾರ್

ಸಂಕ್ಷಿಪ್ತ ಸುದ್ದಿ



ಜಾನಪದ ಕಲಾ ಸ್ಪರ್ಧೆ ಆಯೋಜನೆ

ಬೆಂಗಳೂರು: ನಾಡೋಜ ಡಾ.ಜಿ. ನಾರಾಯಣ ಪ್ರತಿಷ್ಠಾನವು ವಿಶ್ವ ದಾಖಲೆ ಪ್ರಯತ್ನದೊಂದಿಗೆ ಜೂನ್ 15ರಂದು ರವೀಂದ್ರ ಕಲಾಕ್ಷೇತ್ರದಲ್ಲಿ ಜಾನಪದ ಕಲೆಗಳ ಪ್ರದರ್ಶನ ಮತ್ತು ಸ್ಪರ್ಧೆ ಹಮ್ಮಿಕೊಂಡಿದೆ.

ಡೊಳ್ಳು ಕುಣಿತ, ವೀರಗಾಸೆ, ಪಟದ ಕುಣಿತ, ಪೂಜಾ ಕುಣಿತ, ಬೀಸು ಕಂಸಾಳೆ, ಹೆಜ್ಜೆ ಮೇಳ, ಗೊರವರ ಕುಣಿತ, ಕಂಗೀಲು ಕುಣಿತ, ಕೋಲಾಟ ಮತ್ತು ಜೋಗತಿ ಮೇಳ ಪ್ರಕಾರದಲ್ಲಿ ಕಲಾ ತಂಡಗಳು ಸ್ಪರ್ಧೆಗೆ ಭಾಗವಹಿಸಬಹುದಾಗಿದೆ. ಪ್ರಥಮ ಬಹುಮನ ₹1 ಲಕ್ಷ, ದ್ವಿತೀಯ ಬಹುಮಾನ ₹75 ಸಾವಿರ, ತೃತೀಯ ಬಹುಮಾನ ₹50 ಸಾವಿರ ಹಾಗೂ ಹತ್ತು ತಂಡಗಳಿಗೆ ತಲಾ ₹10 ಸಾವಿರ ಪ್ರೋತ್ಸಾಹಕ ಬಹುಮಾನ ಒಳಗೊಂಡಿದೆ.

ಸ್ಪರ್ಧೆಗೆ ಪ್ರವೇಶ ಶುಲ್ಕವಿಲ್ಲ. ಆಸಕ್ತ ತಂಡಗಳು ಇದೇ 25ರಿಂದ ಮೇ 15ರೊಳಗೆ ಹೆಸರು ನೋಂದಣಿ ಮಾಡಿಕೊಳ್ಳಬೇಕು. ವಾಟ್ಸ್ ಆ್ಯಪ್ ಸಂಖ್ಯೆ 9481783344 ಅಥವಾ 9341224368ಕ್ಕೆ ಕಲಾ ಪ್ರದರ್ಶನದ ಐದು ನಿಮಿಷಗಳ ಕಿರು ವಿಡಿಯೊವನ್ನು ಕಳುಹಿಸಬೇಕು. ಸ್ಪರ್ಧೆಗೆ ಸಂಬಂಧಿಸಿದಂತೆ 'ವರ್ಲ್ಡ್ ರೆಕಾರ್ಡ್' ಎಂದು ನಮೂದಿಸಿ ಸಂಪರ್ಕಿಸಬಹುದು ಎಂದು ಪ್ರತಿಷ್ಠಾನದ ಅಧ್ಯಕ್ಷ ಜಿ.ನಾ. ಗೋಪಾಲಕೃಷ್ಣ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ವಚನ ಕಂಠಪಾಠ ಸ್ಪರ್ಧೆ ಏ.30ಕ್ಕೆ

ಬೆಂಗಳೂರು: ಎಚ್ಎಎಲ್ ಸಮೀಪದ ಬಸವನಗರದ ಬಸವ ಬಳಗದ ವತಿಯಿಂದ ವಚನ ಕಂಠಪಾಠ ಸ್ಪರ್ಧೆ ಆಯೋಜಿಸಲಾಗಿದೆ.

ಏಪ್ರಿಲ್ 30ರಂದು ಸ್ಪರ್ಧೆ ನಡೆಯಲಿದ್ದು, ಮೊದಲನೇ ಬಹುಮಾನವಾಗಿ ₹25 ಸಾವಿರ ನಗದು ನೀಡಲಾಗುತ್ತದೆ. 2ನೇ ಹಾಗೂ 3ನೇ ಬಹುಮಾನವಾಗಿ ಕ್ರಮಗಾಗಿ ₹15 ಸಾವಿರ ಮತ್ತು ₹10 ಸಾವಿರ ನಗದು ನೀಡಲಾಗುತ್ತದೆ. ಸ್ಪರ್ಧೆಯಲ್ಲಿ ಭಾಗವಹಿಸುವವರು ಏಪ್ರಿಲ್ 25ರೊಳಗೆ ನೋಂದಾಯಿಸಿ ಕೊಳ್ಳಬೇಕು. ಬೆಂಗಳೂರು ನಗರ ಹಾಗೂ ಗ್ರಾಮಾಂತರ ನಿವಾಸಿಗಳಿಗೆ ಮಾತ್ರ ಅವಕಾಶ ಇರುತ್ತದೆ. 12ನೇ ಶತಮಾನದ ಬಸವಾದಿ ಶರಣರ ವಚನಗಳನ್ನು ಹೇಳಬೇಕು. ಮಾಹಿತಿಗೆ 98865 12801, 9632119745.

ಪಿಆರ್‌ಆರ್ ಯೋಜನೆಗೆ ವಿರೋಧ: ಸೂಕ್ತ ಪರಿಹಾರಕ್ಕೆ ಒತ್ತಾಯ

ಕೋರ್ಟ್‌ಗೆ ಭೂ ಮಾಲೀಕರ ಮೊರೆ

• ಕೆ.ಎಸ್.ಸುನಿಲ್

ಬೆಂಗಳೂರು: ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಉದ್ದೇಶಿತ ಪೆರಿಫೆರಲ್ ವರ್ತುಲ ರಸ್ತೆ-1 (ಬೆಂಗಳೂರು ಬ್ಯುಸಿನೆಸ್ ಕಾರಿಡಾರ್) ಯೋಜನೆ ವಿರೋಧಿಸಿ ನೂರಾರು ಮಂದಿ ಜಮೀನು ಮಾಲೀಕರು ಹೈಕೋರ್ಟ್ ಮೆಟ್ಟಿಲೇರಿದ್ದಾರೆ.

ತುಮಕೂರು ರಸ್ತೆಯ ಮಾದನಾಯಕಹಳ್ಳಿ ಬಳಿಯ ನೈಸ್ ಜಂಕ್ಷನ್ ಸಮೀಪದಿಂದ ಆರಂಭವಾಗುವ ಬ್ಯುಸಿನೆಸ್ ಕಾರಿಡಾರ್ ಹೆಸರುಘಟ್ಟ ರಸ್ತೆ, ದೊಡ್ಡಬಳ್ಳಾಪುರ ರಸ್ತೆ, ಬಳ್ಳಾರಿ ರಸ್ತೆ, ಹೆಣ್ಣೂರು, ಹಳೇ ಮದ್ರಾಸ್ ರಸ್ತೆ, ವೈಟ್‌ಫೀಲ್ಡ್, ಚನ್ನಸಂದ್ರ, ಸರ್ಜಾಪುರ ರಸ್ತೆ ಮಾರ್ಗವಾಗಿ ಹೊಸೂರು ರಸ್ತೆ ತಲುಪಲಿದೆ. ಈ ಮಾರ್ಗದಲ್ಲಿನ ಹಲವು ಗ್ರಾಮಗಳ ಭೂ ಮಾಲೀಕರಿಗೆ ನೋಟಿಸ್ ಜಾರಿ ಮಾಡಿದೆ.

ಬೆಂಗಳೂರು ಉತ್ತರ ತಾಲ್ಲೂಕಿನ ದಾಸನಪುರ ಹೋಬಳಿ, ಯಲಹಂಕ ತಾಲ್ಲೂಕಿನ ಹೆಸರಘಟ್ಟ ಹೋಬಳಿಯ ಸರ್ಜಾಪುರ, ಸೂಲಿಗುಂಟೆ, ಕಾಟಮಾರನಹಳ್ಳಿ ಗ್ರಾಮಗಳ 600ಕ್ಕೂ ಹೆಚ್ಚು ಜಮೀನು ಮಾಲೀಕರು ನ್ಯಾಯಾಲಯದ ಮೊರೆ ಹೋಗಿದ್ದಾರೆ.

'2013ರ ಭೂ ಸ್ವಾಧೀನ ಮತ್ತು ಪರಿಹಾರ ಕಾಯ್ದೆ ಅನ್ವಯ ಪರಿಹಾರ ನೀಡಬೇಕು. 2006ರಲ್ಲಿ ಭೂಸ್ವಾಧೀನಕ್ಕೆ ಅಧಿಸೂಚನೆ ಹೊರಡಿಸಿದ್ದು, ಹಲವು ವರ್ಷಗಳಾದರೂ ಪ್ರಕ್ರಿಯೆ ಪೂರ್ಣಗೊಳಿಸದ ಕಾರಣದಿಂದ ಯೋಜನೆಯನ್ನು ರದ್ದುಗೊಳಿಸಬೇಕು. ಪರಿಹಾರ ನಿಗದಿ ಸಾಧ್ಯವಾಗದಿದ್ದರೆ ಜಮೀನು ಸ್ವಾಧೀನ ಪಡಿಸಿಕೊಳ್ಳಬಾರದು. ಹೊಸದಾಗಿ ಅಧಿಸೂಚನೆ ಹೊರಡಿಸುವಂತೆ ಆದೇಶ ನೀಡಬೇಕು' ಎಂದು ಅರ್ಜಿಯಲ್ಲಿ ಕೋರಿದ್ದಾರೆ.

'ಪಿಆರ್‌ಆರ್ ಯೋಜನೆಗೆ ಜಮೀನು ಬಿಟ್ಟುಕೊಟ್ಟಿರುವ ರೈತರಿಗೆ 2013ರ ಭೂಸ್ವಾಧೀನ ಕಾಯ್ದೆ ಅನ್ವಯ ಪರಿಹಾರ ನಿಗದಿ ಮಾಡಬೇಕು. ಆದರೆ, ಅಧಿಕಾರಿಗಳು ಬ್ರಿಟಿಷ್ ಕಾಲದ ಭೂ ಸ್ವಾಧೀನ ಕಾಯ್ದೆ 1894ರ ಅನ್ವಯ ಸಂಧಾನ ಸೂತ್ರದಡಿ ಪರಿಹಾರ ನಿಗದಿಗೆ ಆದೇಶ ಮಾಡಿದ್ದಾರೆ. ಇದರ ಅನ್ವಯ ಬಿಡಿಎ ಅಧಿಕಾರಿಗಳು ರೈತರ ಜಮೀನು ಸ್ವಾಧೀನಕ್ಕೆ ಸಂಧಾನದ ಹೆಸರಿನಲ್ಲಿ ದರ ನಿಗದಿ ಪತ್ರಕ್ಕೆ ಬಲವಂತವಾಗಿ ಸಹಿ ಪಡೆಯುತ್ತಿದ್ದಾರೆ' ಎಂದು ಎಂದು ಪಿಆರ್‌ಆರ್ ರೈತ ಹಾಗೂ ನಿವೇಶನ ದಾರರ ಸಂಘದ ಅಧ್ಯಕ್ಷ ಮಾವಳ್ಳಿಪುರ ಶ್ರೀನಿವಾಸ್ ಆರೋಪಿಸಿದರು.

'ಪ್ರತಿ ಎಕರೆಗೆ ₹2 ರಿಂದ ₹4 ಕೋಟಿ ಪಡೆಯುವಂತೆ ಅಧಿಕಾರಿಗಳು ಒತ್ತಾಯಿಸುತ್ತಿದ್ದಾರೆ. ಆದರೆ, ಮಾರುಕಟ್ಟೆ ಮೌಲ್ಯವು ₹8 ಕೋಟಿಯಿಂದ ₹15 ಕೋಟಿ ಇದೆ. ಉದಾಹರಣೆಗೆ ಹೆಸರಘಟ್ಟ ಹೋಬಳಿಯ ಮಾವಳ್ಳಿಪುರ ಗ್ರಾಮದಲ್ಲಿ ಎಕರೆಗೆ ₹2.34 ಕೋಟಿ ಪರಿಹಾರ ನಿಗದಿ ಮಾಡಲಾಗಿದೆ. ವಾಸ್ತವವಾಗಿ ಮಾರುಕಟ್ಟೆ ಮೌಲ್ಯ ದುಪ್ಪಟ್ಟು ಇದೆ' ಎಂದರು.

'2006ರಲ್ಲಿ ಬಿಡಿಎ ಭೂಸ್ವಾಧೀನಕ್ಕೆ ಅಧಿಸೂಚನೆ ಹೊರಡಿಸಿ, ಆಕ್ಷೇಪಣೆ ಸಲ್ಲಿಸಲು ಸೂಚಿಸಿತ್ತು. ಬಳಿಕ ಯಾವುದೇ ಕ್ರಮ ಕೈಗೊಂಡಿರಲಿಲ್ಲ. ಈಗ ಜಮೀನಲ್ಲಿ ಮನೆಗಳನ್ನು ನಿರ್ಮಿಸಲಾಗಿದ್ದು, ಕೆಲವರು ನಿವೇಶನ ನಿರ್ಮಿಸಿ ಮಾರಾಟ ಮಾಡಿ ಹೋಗಿದ್ದಾರೆ. ಸಾವಿರಾರು ಮನೆಗಳು ನಿರ್ಮಾಣವಾಗಿವೆ. ಅವರೆಲ್ಲರೂ ಎಲ್ಲಿ ಹೋಗಬೇಕು. ಜಮೀನು ಸ್ವಾಧೀನಕ್ಕೆ ಅಧಿಸೂಚನೆ ಹೊರಡಿಸಿರುವ ಕಾರಣ ಯಾವುದೇ ಚಟುವಟಿಕೆ ಕೈಗೊಳ್ಳಲು ಆಗುತ್ತಿಲ್ಲ. ಜಮೀನು ಮಾರಾಟ ಮಾಡುವಂತಿಲ್ಲ, ಮನೆ ಕಟ್ಟುವಂತಿಲ್ಲ' ಎಂದು ಮಾವಳ್ಳಿಪುರದ ರೈತ ಬಿ.ಧನರಾಜ್ ಬೇಸರ ವ್ಯಕ್ತಪಡಿಸಿದರು.

'2013ರ ಕಾಯ್ದೆ ಬಿಡಿಎಗೆ ಅನ್ವಯವಾಗಲ್ಲ'

'ಜಮೀನು ಮಾಲೀಕರಿಂದ ಬಲವಂತವಾಗಿ ಸಂಧಾನದ ದರ ನಿಗದಿ ಪತ್ರಕ್ಕೆ ಸಹಿ ಮಾಡಿಸಿಕೊಳ್ಳುತ್ತಿಲ್ಲ. ಪರಿಹಾರ ಕುರಿತು ರೈತರು ಮತ್ತು ಬಿಡಿಎ ಪರಸ್ಪರ ಒಪ್ಪಂದ ಮಾಡಿಕೊಂಡರೆ ಮಾತ್ರ ಸಂಧಾನ ಪತ್ರಕ್ಕೆ ಸಹಿ ಮಾಡುತ್ತಾರೆ. ಯಾರು ಕಡಿಮೆ ಬೆಲೆಗೆ ಜಮೀನು ನೀಡಲು ಒಪ್ಪಿಕೊಳ್ಳುತ್ತಾರೆ? ಬಿಡಿಎ ಮಾರ್ಗಸೂಚಿಯಡಿ ನಿಗದಿ ಮಾಡಿರುವುದಕ್ಕಿಂತಲೂ ಹೆಚ್ಚಿನ ಪರಿಹಾರ ನೀಡಲು ಸಿದ್ಧ. ಆದರೆ, ಭೂ ಮಾಲೀಕರು ದೊಡ್ಡ ಪ್ರಮಾಣದ ಪರಿಹಾರ ನಿರೀಕ್ಷಿಸುತ್ತಿದ್ದಾರೆ. ಅವರನ್ನು ಕೆಲವರು ಪ್ರಚೋದಿಸುತ್ತಿದ್ದಾರೆ' ಎಂದು ಬಿಡಿಎ ಆಯುಕ್ತ ಎನ್.ಜಯರಾಮ್ ಅವರು 'ಪ್ರಜಾವಾಣಿ'ಗೆ ಪ್ರತಿಕ್ರಿಯಿಸಿದರು.

'ರಸ್ತೆ ನಿರ್ಮಿಸುವುದು ಖಚಿತ. ಬಿಡಿಎ ನೀಡುವ ಪರಿಹಾರಕ್ಕೆ ಜಮೀನು ಮಾಲೀಕರು ಒಪ್ಪಿಕೊಳ್ಳದಿದ್ದರೆ ನಿಯಮಾನುಸಾರ ಭೂ ಸ್ವಾಧೀನ ಮಾಡಿಕೊಳ್ಳಲಾಗುವುದು. 2013ರ ಭೂ ಸ್ವಾಧೀನ ಕಾಯ್ದೆ ಬಿಡಿಎಗೆ ಅನ್ವಯವಾಗುವುದಿಲ್ಲ ಎಂದು ಸುಪ್ರೀಂ ಕೋರ್ಟ್ ಸ್ಪಷ್ಟ ಆದೇಶ ನೀಡಿದೆ. ಈ ಬಗ್ಗೆ ರೈತರಿಗೆ ಹಲವು ಬಾರಿ ಸಭೆಯಲ್ಲಿ ತಿಳಿಸಲಾಗಿದೆ. ಆದರೂ ಅನ್ಯಾಯವಾಗಬಾರದು ಎಂಬ ಕಾರಣಕ್ಕೆ ಉತ್ತಮ ಪರಿಹಾರ ನೀಡಲು ಮಾತುಕತೆ ನಡೆಸುತ್ತಿದ್ದೇವೆ. ರೈತರು ಕೋರ್ಟ್‌ಗೆ ಹೋಗಿರುವ ಬಗ್ಗೆ ಮಾಹಿತಿ ಇಲ್ಲ. ನಮಗೆ ನೋಟಿಸ್ ಸಹ ಬಂದಿಲ್ಲ' ಎಂದು ಹೇಳಿದರು.



ಪ್ರಕರಣ ದಾಖಲಿಸಿಕೊಂಡು ಯುವಕನನ್ನು ವಶಕ್ಕೆ ಪಡೆದ ಪೊಲೀಸರು

ರೀಲ್ಸ್‌ಗಾಗಿ ರಸ್ತೆಯಲ್ಲೇ ಕುಳಿತು ವಿಡಿಯೊ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರೀಲ್ಸ್‌ಗಾಗಿ ನಡುರಸ್ತೆಯಲ್ಲಿ ವಿಡಿಯೊ ಮಾಡಿದ್ದ ಪ್ರಶಾಂತ್ ಎಂಬ ಯುವಕನನ್ನು ಎಸ್.ಜೆ.ಪಾರ್ಕ್ ಠಾಣೆ ಪೊಲೀಸರು ವಶಕ್ಕೆ ಪಡೆದುಕೊಂಡಿದ್ದಾರೆ.

'ಚಾಲಕನಾಗಿದ್ದ ಪ್ರಶಾಂತ್, ರೀಲ್ಸ್ ವ್ಯಾಮೋಹ ಬೆಳೆಸಿಕೊಂಡಿದ್ದ. ಎಸ್.ಜೆ.ಪಾರ್ಕ್‌ನ ಮುಖ್ಯ ರಸ್ತೆಯಲ್ಲಿ ಕುರ್ಚಿ ಹಾಕಿಕೊಂಡು ಕುಳಿತು ಟೀ ಕುಡಿಯುತ್ತಾ ರೀಲ್ಸ್ ಮಾಡಿದ್ದ. ಆ ವಿಡಿಯೊವನ್ನು ಸಾಮಾಜಿಕ ಮಾಧ್ಯಮಗಳಲ್ಲಿ ಹಾಕಿದ್ದ. ಇದನ್ನು ಗಮನಿಸಿದ್ದವರು ಪೊಲೀಸರಿಗೆ ಮಾಹಿತಿ ನೀಡಿದ್ದರು. ಮಾಹಿತಿ ಆಧರಿಸಿ ಆರೋಪಿಯ ವಿರುದ್ಧ ಎನ್‌ಸಿಆರ್ ಪ್ರಕರಣ ದಾಖಲಿಸಿಕೊಂಡು, ವಶಕ್ಕೆ ಪಡೆಯಲಾಗಿದೆ' ಎಂದು ಮೂಲಗಳು ತಿಳಿಸಿವೆ.



ರೀಲ್ಸ್‌ಗಾಗಿ ರಸ್ತೆಯಲ್ಲೇ ಕುರ್ಚಿ ಹಾಕಿಕೊಂಡು ಕುಳಿತಿದ್ದ ವ್ಯಕ್ತಿ

'ಏಪ್ರಿಲ್ 12ರಂದು ಆರೋಪಿ ರೀಲ್ಸ್ ಮಾಡಿದ್ದ. ರೀಲ್ಸ್ ಮಾಡುತ್ತಿದ್ದ ಸಂದರ್ಭದಲ್ಲಿ ಅದೇ ಮಾರ್ಗದಲ್ಲಿ ತೆರಳುತ್ತಿದ್ದ ವಾಹನ ಸಂಚಾರಕ್ಕೂ ಅಡಚಣೆ ಉಂಟಾಗಿತ್ತು' ಎಂದು ಪೊಲೀಸರು ಹೇಳಿದರು.

ದಂಪತಿ ಆತ್ಮಹತ್ಯೆಗೆ ಕೌಟುಂಬಿಕ ಕಲಹ ಕಾರಣ

ಬೆಂಗಳೂರು: ಡಾಲರ್ಸ್ ಕಾಲೊನಿಯ ನಿರ್ಮಾಣ ಹಂತದ ಕಟ್ಟಡವೊಂದರಲ್ಲಿ ಯಾದಗಿರಿ ತಾಲ್ಲೂಕಿನ ಮೆಹಬೂಬ್(45) ಹಾಗೂ ಪರ್ವಿನ್ (35) ದಂಪತಿಯ ಅನುಮಾನಾಸ್ಪದ ಸಾವು ಪ್ರಕರಣದ ತನಿಖೆ ನಡೆಸಿದ ಪೊಲೀಸರು, ಕೌಟುಂಬಿಕ ಕಲಹದಿಂದ ದಂಪತಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎಂಬುದನ್ನು ಪತ್ತೆ ಮಾಡಿದ್ದಾರೆ.

ಸಂಜಯ್‌ನಗರ ಠಾಣೆಯ ಪೊಲೀಸರು ಅಸಹಜ ಸಾವು ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸಿದ್ದರು. ಮೆಹಬೂಬ್ ಅವರು ಮೇಸ್ತ್ರಿ ಕೆಲಸ ಹಾಗೂ ಪರ್ವಿನ್ ಅವರು ಗಾರೆ ಕೆಲಸ ಮಾಡುತ್ತಿದ್ದರು. ಇತ್ತೀಚೆಗೆ ಈದ್ ಉಲ್ ಫಿತ್ರ್ ಹಬ್ಬದ ಅಂಗವಾಗಿ ಊರಿಗೆ ಹೋಗಿ ದಂಪತಿ ವಾಪಸ್ ಆಗಿದ್ದರು.

'ಕಟ್ಟಡದಲ್ಲಿ ದುರ್ವಾಸನೆ ಬರುತ್ತಿರುವುದನ್ನು ಗಮನಿಸಿದ್ದ ಸ್ಥಳೀಯರು, ಪೊಲೀಸರು ಸ್ಥಳಕ್ಕೆ ಬಂದು ಪರಿಶೀಲಿಸಿ ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸಿದ್ದರು' ಎಂದು ಮೂಲಗಳು ತಿಳಿಸಿವೆ.

'ವಿವಿಧ ಆಯಾಮಗಳಲ್ಲಿ ತನಿಖೆ ನಡೆಸಲಾಯಿತು. ದಂಪತಿ ಮಧ್ಯೆ ಗಲಾಟೆ ನಡೆಯುತ್ತಿತ್ತು. ಗಲಾಟೆಯಿಂದ ಬೇಸತ್ತಿದ್ದ ಪತಿ ಮೆಹಬೂಬ್ ಅವರು ವಿಷ ಸೇವಿಸಿ ಆತ್ಮಹತ್ಯೆ ಮಾಡಿಕೊಂಡಿದ್ದರು. ಅದನ್ನು ಕಂಡ ಪತ್ನಿ ಪರ್ವಿನ್ ಸ್ಥಳದಲ್ಲೇ ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎಂಬುದು ಗೊತ್ತಾಗಿದೆ' ಎಂದು ಮೂಲಗಳು ತಿಳಿಸಿವೆ.

'ದಂಪತಿಗೆ ಮಕ್ಕಳಿದ್ದು, ಅವರು ಯಾದಗಿರಿಯಲ್ಲೇ ನೆಲಸಿದ್ದಾರೆ. ದಂಪತಿ ಮಾತ್ರ ಕೆಲಸಕ್ಕೆಂದು ನಗರಕ್ಕೆ ವಲಸೆ ಬಂದಿದ್ದರು. ಐದು ದಿನಗಳ ಹಿಂದೆ ದಂಪತಿ ಮಧ್ಯೆ ಗಲಾಟೆ ನಡೆದಿತ್ತು. ಇಬ್ಬರೂ ಪರಸ್ಪರ ಹೊಡೆದಾಡಿಕೊಂಡಿದ್ದರು. ಅದಾದ ಮೇಲೆ ದಂಪತಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎಂಬುದು ಗೊತ್ತಾಗಿದೆ. ಸ್ಥಳಕ್ಕೆ ವಿಧಿ ವಿಜ್ಞಾನ ಪ್ರಯೋಗಾಲದ (ಎಫ್ಎಸ್ಎಲ್) ತಜ್ಞರು ಭೇಟಿ ನೀಡಿ ಪರಿಶೀಲನೆ ನಡೆಸಿದ್ದರು' ಎಂದು ಪೊಲೀಸರು ಹೇಳಿದರು.

ಸುದ್ದಿ 2 ನಿಮಿಷ

₹18 ಲಕ್ಷ ಮೌಲ್ಯದ ಕೂದಲು ಜಪ್ತಿ

ಬೆಂಗಳೂರು: ಕೂದಲು ಕದ್ದ ಪ್ರಕರಣದ ತನಿಖೆ ನಡೆಸುತ್ತಿರುವ ಸೋಲದೇವನಹಳ್ಳಿ ಠಾಣೆಯ ಪೊಲೀಸರು, ಬಂಧಿತ ಆರೋಪಿ ಮಾರಾಟ ಮಾಡಿದ್ದ ₹18 ಲಕ್ಷ ಮೌಲ್ಯದ 300 ಕೆ.ಜಿ ಕೂದಲನ್ನು ಜಪ್ತಿ ಮಾಡಿದ್ದಾರೆ.

'ಈ ಪ್ರಕರಣದಲ್ಲಿ ಗದಗದ ಆರೋಪಿ ಯಲ್ಲಪ್ಪ ಎಂಬಾತನನ್ನು ಬಂಧಿಸಿ ವಿಚಾರಣೆ ನಡೆಸಲಾಗುತ್ತಿದೆ. ತಲೆಮರೆಸಿಕೊಂಡಿರುವ ನಾಲ್ವರು ಆರೋಪಿಗಳಿಗಾಗಿ ಶೋಧ ನಡೆಸಲಾಗುತ್ತಿದೆ' ಎಂದು ಪೊಲೀಸರು ಹೇಳಿದರು.

'ವೆಂಕಟರಮಣಪ್ಪ ಅವರು ಕೂದಲು ವಹಿವಾಟು ನಡೆಸುತ್ತಿದ್ದರು. ಆರೋಪಿ ಯಲ್ಲಪ್ಪ ನಗರದಲ್ಲಿ ಸಂಚಾರ ನಡೆಸಿ ತಲೆ ಕೂದಲನ್ನು ಸಂಗ್ರಹಿಸಿಕೊಂಡು ಬರುತ್ತಿದ್ದ. ವೆಂಕಟರಮಣಪ್ಪ ಅವರಿಗೆ ಸೇರಿದ ಸೋಲದೇವನ ಹಳ್ಳಿಯ ಗೋದಾಮಿನಲ್ಲಿ ಕೂದಲು ಸಂಗ್ರಹಿಸಿಡಲಾಗಿತ್ತು. ಈ ವಿಚಾರ ಆರೋಪಿಗೆ ತಿಳಿದಿತ್ತು. ವೆಂಕಟರಮಣಪ್ಪ ಅವರ ಗೋದಾಮಿಗೆ ಕನ್ನ ಹಾಕಲು ಸಹಚರರ ಜೊತೆ ಚರ್ಚಿಸಿದ್ದ. ತಾನು ರೂಪಿಸಿದ ಸಂಚಿನಂತೆ ಮಾರ್ಚ್‌ನಲ್ಲಿ ತಂಡ ದೊಂದಿಗೆ ಗೋದಾಮಿನ ಬೀಗ ಒಡೆದು ₹25 ಲಕ್ಷ ಮೌಲ್ಯದ 400 ಕೆ.ಜಿ ಕೂದಲನ್ನು ಕದ್ದು ತಂಡ ಪರಾರಿ ಆಗಿದ್ದ' ಎಂದು ಮೂಲಗಳು ತಿಳಿಸಿವೆ. 'ಗೋದಾಮು ಮಾಲೀಕ ವೆಂಕಟರಮಣಪ್ಪ ಅವರು ಪೊಲೀಸರಿಗೆ ದೂರು ನೀಡಿದ್ದರು. ದೂರು ಆಧರಿಸಿ ತನಿಖೆ ನಡೆಸಿ ಒಬ್ಬ ಆರೋಪಿಯನ್ನು ಬಂಧಿಸಲಾಯಿತು' ಎಂದು ಪೊಲೀಸರು ಹೇಳಿದರು.



'ಕೃತ್ಯ ನಡೆದ ಸ್ಥಳದ ಸುತ್ತಮುತ್ತಲಿನ ರಸ್ತೆಗಳಲ್ಲಿ ಅಳವಡಿಸಿರುವ ಸಿಸಿಟಿವಿ ಕ್ಯಾಮೆರಾಗಳ ದೃಶ್ಯಾವಳಿ ಪರಿಶೀಲನೆ ನಡೆಸಿದಾಗ ಯಲ್ಲಪ್ಪನ ಸುಳಿವು ಸಿಕ್ಕಿತ್ತು. ಆತನನ್ನು ಹುಬ್ಬಳ್ಳಿಯಲ್ಲಿ ಪತ್ತೆಹಚ್ಚಿ ಬಂಧಿಸಲಾಗಿದೆ. ಕದ್ದ ಕೂದಲನ್ನು ಆರೋಪಿಗಳು ಚನ್ನಪಟ್ಟಣದಲ್ಲಿ ವ್ಯಾಪಾರಿಗೆ ಮಾರಾಟ ಮಾಡಿದ್ದರು. ಆ ವ್ಯಾಪಾರಿ ಗೋದಾಮಿನಲ್ಲಿ ಕೂದಲುದಾಸ್ತಾನು ಮಾಡಿದ್ದ. ಅಲ್ಲಿಂದ ಕೂದಲು ಜಪ್ತಿ ಮಾಡಲಾಗಿದೆ' ಎಂದರು.

ಪ್ರತಿಷ್ಠಿತ ಕಂಪನಿ ಹೆಸರಿನಲ್ಲಿ ಕಳಪೆ ಬಟ್ಟೆ ಮಾರಾಟ

ಬೆಂಗಳೂರು: ಪ್ರತಿಷ್ಠಿತ ಕಂಪನಿಗಳ ಬ್ರ್ಯಾಂಡ್ ಹೆಸರಿನಲ್ಲಿ ಕಳಪೆ ಬಟ್ಟೆಗಳನ್ನು ತಯಾರಿಸಿ ಮಾರಾಟ ಮಾಡುತ್ತಿದ್ದ ಮೂವರು ಆರೋಪಿಗಳನ್ನು ಮಾದನಾಯಕನಹಳ್ಳಿ ಠಾಣೆಯ ಪೊಲೀಸರು ಬಂಧಿಸಿದ್ದಾರೆ. ಆಶ್ರಫ್, ಶರ್ಫುದ್ದೀನ್ ಹಾಗೂ ಶರವಣ ಬಂಧಿತರು.


ಮಾದನಾಯಕನಹಳ್ಳಿ ಠಾಣಾ ವ್ಯಾಪ್ತಿಯ ತೋಟದ ಗುಡ್ಡದಹಳ್ಳಿಯಲ್ಲಿ ಮೂವರು ಗಾರ್ಮೆಂಟ್ಸ್ ಫ್ಯಾಕ್ಟರಿ ನಡೆಸುತ್ತಿದ್ದರು. ಆ ಗಾರ್ಮೆಂಟ್ಸ್ ಮೇಲೆ ನಡೆದ ದಾಳಿಯ ವೇಳೆ ₹40 ಲಕ್ಷ ಮೌಲ್ಯದ ಕಳಪೆ ಬಟ್ಟೆಗಳನ್ನು ಜಪ್ತಿ ಮಾಡಲಾಗಿದೆ ಎಂದು ಪೊಲೀಸರು ಹೇಳಿದರು.

'ಕಳಪೆ ಬಟ್ಟೆಗಳನ್ನು ತಯಾರಿಸಿ, ಪ್ರತಿಷ್ಠಿತ ಕಂಪನಿಯ ಲೇಬಲ್‌ಗಳನ್ನು ಅಂಟಿಸಿ ಅಸಲಿ ಎಂದು ನಂಬಿಸಿ ಮಾರಾಟ ಮಾಡುತ್ತಿದ್ದರು. ಬ್ರ್ಯಾಂಡ್ ಕಂಪನಿಯೊಂದರ ರಾಯಭಾರಿ ಸಂಸ್ಥೆಯಾಗಿರುವ ಅನ್ವೇಶ್ ಐಪಿಆರ್ ಸಂಸ್ಥೆಯ ಪ್ರತಿನಿಧಿಗಳು ನೀಡಿದ ದೂರು ಆಧರಿಸಿ ಪ್ರಕರಣ ದಾಖಲಿಸಿಕೊಂಡು ಆರೋಪಿಗಳನ್ನು ಬಂಧಿಸಲಾಯಿತು' ಎಂದು ಪೊಲೀಸರು ಹೇಳಿದರು.

ಕಸದ ತೊಟ್ಟಿಯಲ್ಲಿ ನವಜಾತ ಶಿಶು ಪತ್ತೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಯಲಹಂಕದ ಕಸದ ತೊಟ್ಟಿಯಲ್ಲಿ ನವಜಾತ ಶಿಶುವಿನ ಶವ ಪತ್ತೆಯಾದ ಪ್ರಕರಣಕ್ಕೆ ಸಂಬಂಧಿಸಿದಂತೆ ಯುವಕನೊಬ್ಬನನ್ನು ಯಲಹಂಕ ಪೊಲೀಸರು ಬಂಧಿಸಿದ್ದಾರೆ.



ಏಪ್ರಿಲ್ 2 ರಂದು ಗಾಂಧಿನಗರದ 2ನೇ ಅಡ್ಡರಸ್ತೆಯ ಕಸದತೊಟ್ಟಿಯಲ್ಲಿ ಕಂಬಳಿ ಸುತ್ತಿ ಬಿಸಾಡಿದ್ದ ಶಿಶುವನ್ನು ನೋಡಿದ ಸ್ಥಳೀಯರು, ಪೊಲೀಸರಿಗೆ ತಿಳಿಸಿದ್ದರು. ಪೊಲೀಸರು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿ, ಶಿಶುವನ್ನು ಸರ್ಕಾರಿ ಆಸ್ಪತ್ರೆಗೆ ಸಾಗಿಸಿದರು. ಪರೀಕ್ಷಿಸಿದ ವೈದ್ಯರು ಶಿಶು ಮೃತಪಟ್ಟಿರುವು ದಾಗಿ ತಿಳಿಸಿದರು.

'ಪ್ರಕರಣ ದಾಖಲಿಸಿಕೊಂಡು ಪೋಷಕರ ಪತ್ತೆಗಾಗಿ ಸುತ್ತಮುತ್ತಲ ಸಿಸಿಟಿವಿ ಕ್ಯಾಮೆರಾಗಳ ಪರಿಶೀಲನೆ ನಡೆಸಲಾಯಿತು. ವೃದ್ಧರೊಬ್ಬರು ಹಸುಗೂಸನ್ನು ಕಂಬಳಿ ಯಲ್ಲಿ ಸುತ್ತಿಕೊಂಡು ಸೈಕಲ್‌ನಲ್ಲಿ ತೆರಳುತ್ತಿರುವ ದೃಶ್ಯ ಕಂಡು ಬಂದಿತ್ತು. ಆ ವ್ಯಕ್ತಿಯನ್ನು ಪತ್ತೆ ಮಾಡಿ ವಿಚಾರಿಸಿದಾಗ, ಮನೆ ಸಮೀಪದ ಯುವತಿಯೊಬ್ಬಳು ಮಗು ನೀಡಿರುವುದಾಗಿ ತಿಳಿಸಿದ್ದರು' ಎಂದು ಮೂಲಗಳು ಹೇಳಿವೆ.

'ಯುವತಿಯನ್ನು ಪತ್ತೆ ಹಚ್ಚಿ ವಿಚಾರಣೆ ನಡೆಸಿದಾಗ, ಆಕೆ ಬಾಲಕಿ ಎಂಬುದು ತಿಳಿದುಬಂತು. 22 ವರ್ಷದ ಭರತ್ ಎಂಬಾತನ ಜತೆ ಸಂಬಂಧದಿಂದಾಗಿ ಮಗು ಜನಿಸಿತು. ಈ ವಿಷಯವನ್ನು ಯಾರಿಗೂ ತಿಳಿಸಬಾರದು ಎಂದು ಬೆದರಿಕೆ ಹಾಕಿದ್ದ. ಮಗು ಹುಟ್ಟುವಾಗಲೇ ಮೃತಪಟ್ಟಿತ್ತು. ಯಾರಿಗೂ ಗೊತ್ತಾಗಬಾರದೆಂದು ವೃದ್ಧರ ಕೈಗೆ ಕೊಟ್ಟು ಕಳುಹಿಸಿದ್ದೆ ಎಂದು ಬಾಲಕಿ ಮಾಹಿತಿ ನೀಡಿದ್ದಳು' ಎಂದು ಮೂಲಗಳು ತಿಳಿಸಿವೆ.

ವಾಹನಗಳ ಗಾಜು ಪುಡಿಗಟ್ಟಿದ ಚಾಲಕ

ಕೆ.ಆರ್.ಪುರ: ಇಲ್ಲಿನ ಸಂತೆ ಮೈದಾನದ ಬಳಿ ಆಟೊ ಚಾಲಕನೊಬ್ಬ ಮದ್ಯದ ಅಮಲಿನಲ್ಲಿ ಸಿಕ್ಕಸಿಕ್ಕ ವಾಹನಗಳ ಮೇಲೆ ದಾಳಿ ನಡೆಸಿ, ಗಾಜು ಪುಡಿಗಟ್ಟಿದ್ದಾನೆ.

ದೇವಸಂದ್ರದ ಮೆಕ್ಕಾ ಮಸೀದಿ ರಸ್ತೆಯಲ್ಲಿ ವಾಸವಾಗಿರುವ ಆಟೊ ಚಾಲಕ ಸೂಫಿಯಾನ್ (25) ಎಂಬಾತ ಕೃತ್ಯ ಎಸಗಿದ್ದಾನೆ ಎಂದು ಗೊತ್ತಾಗಿದೆ. ತಲೆಮರೆಸಿಕೊಂಡಿರುವ ಆರೋಪಿಗಾಗಿ ಹುಡುಕಾಟ ನಡೆಸಲಾಗುತ್ತಿದೆ ಎಂದು ಪೊಲೀಸರು ಹೇಳಿದರು.

'ಆರೋಪಿ ಶುಕ್ರವಾರ ಮುಂಜಾನೆ ಮಾರಕಾಸ್ತ್ರ ಹಿಡಿದು ಸಾರ್ವಜನಿಕರಿಗೆ ಬೆದರಿಕೆ ಹಾಕಿದ್ದ. ಅಲ್ಲದೇ ರಸ್ತೆಯ ಪಕ್ಕದಲ್ಲಿ ನಿಲ್ಲಿಸಿದ ವಾಹನಗಳ ಮೇಲೆ ಮಾರಕಾಸ್ತ್ರದಿಂದ ದಾಳಿ ನಡೆಸಿದ್ದ. ಓಮ್ನಿ ಕಾರು ಹಾಗೂ ಆಟೊಗಳ ಗಾಜು ಪುಡಿ ಆಗಿದ್ದವು. ಪೊಲೀಸ್ ಸಹಾಯವಾಣಿಗೆ ಸಾರ್ವಜನಿಕರು ಕರೆ ಮಾಡಿ ಮಾಹಿತಿ ತಿಳಿಸಿದ್ದರು. ಘಟನಾ ಸ್ಥಳಕ್ಕೆ ಪೊಲೀಸರು ಬರುತ್ತಿದಂತೆಯೇ ಆರೋಪಿ ಸ್ಥಳದಿಂದ ಪರಾರಿಯಾಗಿದ್ದ.



ಸೂಫಿಯಾನ್



ಮಳಿಗೆ ಉದ್ಘಾಟನೆ


ಮಲ್ಲೇಶ್ವರದ ಮಾರ್ಗೋಸಾ ರಸ್ತೆಯಲ್ಲಿ ಆರಂಭವಾಗಿರುವ ರೀಗಲ್ ಜುವೆಲ್ಲರ್ಸ್‌ನ ನೂತನ ಮಳಿಗೆಯನ್ನು ನಟಿ ರಾಧಿಕಾ ಪಂಡಿತ್ ಅವರು ಶುಕ್ರವಾರ ಉದ್ಘಾಟಿಸಿದರು. ರೀಗಲ್ ಜುವೆಲ್ಲರ್ಸ್‌ನ ಮುಖ್ಯ ಕಾರ್ಯನಿರ್ವಾಹಕ ನಿರ್ದೇಶಕ ವಿಪಿನ್ ಶಿವದಾಸ್, ಪ್ರಧಾನ ವ್ಯವಸ್ಥಾಪಕ ಎಂ.ಕೆ.ಗೋಪಾಲ್, ನಿರ್ದೇಶಕಿ ಪಲ್ಲವಿ ನಾಮ್ದೇವ್ ಇದ್ದಾರೆ

ಅಸಭ್ಯ ವರ್ತನೆ: ಆರೋಪಿ ಸೆರೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಹಿಳೆಯೊಂದಿಗೆ ಅಸಭ್ಯವಾಗಿ ವರ್ತಿಸಿ ಆಕೆಯ ಕುಟುಂಬದ ಸದಸ್ಯರ ಮೇಲೆ ಇಟ್ಟಿಗೆಯಿಂದ ಹಲ್ಲೆ ನಡೆಸಿದ್ದ ಆರೋಪಿ ಕಾರ್ತಿಕ್ (21) ಎಂಬಾತನನ್ನು ಶಿವಾಜಿನಗರ ಠಾಣೆಯ ಪೊಲೀಸರು ರಾಮನಗರದಲ್ಲಿ ಬಂಧಿಸಿದ್ದಾರೆ.

'ಶಿವಾಜಿನಗರದ ರಾಜೀವ್ ಗಾಂಧಿ ಕಾಲೊನಿಯಲ್ಲಿ ವಾಸವಿದ್ದ ಮಹಿಳೆ, ಏಪ್ರಿಲ್ 13ರಂದು ರಾತ್ರಿ ತಮ್ಮ ಮನೆಯ ಎರಡನೇ ಮಹಡಿಯ ಕೊಠಡಿಯಲ್ಲಿ ಮಲಗಲು ತೆರಳುತ್ತಿದ್ದರು. ಎದುರು ಮನೆಯಲ್ಲಿ ವಾಸಿಸುತ್ತಿದ್ದ ಆರೋಪಿ, ದೂರುದಾರ ಮಹಿಳೆಗೆ ಕಾಣುವಂತೆ ಬಟ್ಟೆ ಬದಲಾವಣೆ ಮಾಡಿ ನಗ್ನವಾಗಿ ಕಾಣಿಸಿಕೊಂಡಿದ್ದ. ಮಹಿಳೆ ನೀಡಿದ ದೂರಿನ ಮೇರೆಗೆ ಆರೋಪಿಯನ್ನು ಬಂಧಿಸಲಾಗಿದೆ' ಎಂದು ಪೊಲೀಸ್ ಮೂಲಗಳು ತಿಳಿಸಿವೆ.



'ಮಹಿಳೆಯ ಪತಿ ಆರೋಪಿಯನ್ನು ಪ್ರಶ್ನೆ ಮಾಡಿದ್ದರು. ಆಗ 'ನನ್ನ ಇಷ್ಟ ಏನು ಬೇಕಾದರೂ ಮಾಡಿಕೊಳ್ಳುತ್ತೇನೆ. ಕೇಳಲು ನೀನು ಯಾರು' ಎಂದು ಪ್ರಶ್ನಿಸಿದ್ದ. ಅಲ್ಲದೇ ಮಹಿಳೆಯ ಪತಿಗೆ ಇಟ್ಟಿಗೆಯಿಂದ ಹಲ್ಲೆ ನಡೆಸಿದ್ದ. ಮಗನ ಕೃತ್ಯಕ್ಕೆ ತಂದೆಯೂ ಬೆಂಬಲ ನೀಡಿದ್ದರು' ಎಂದು ದೂರಿನಲ್ಲಿ ಉಲ್ಲೇಖಿಸಲಾಗಿದೆ.

'ಮಹಿಳೆ ದೂರು ನೀಡಿದ ಬಳಿಕ ಆರೋಪಿ ತಲೆಮರೆಸಿಕೊಂಡಿದ್ದ. ಆತನ ಬಂಧನಕ್ಕೆ ಒಂದು ವಾರದಿಂದ ಕಾರ್ಯಾಚರಣೆ ನಡೆಸಲಾಗುತ್ತಿತ್ತು. ಖಚಿತ ಮಾಹಿತಿ ಮೇರೆಗೆ ರಾಮನಗರಕ್ಕೆ ತೆರಳಿ ಅಲ್ಲಿ ಆರೋಪಿಯನ್ನು ವಶಕ್ಕೆ ಪಡೆದುಕೊಳ್ಳಲಾಯಿತು' ಎಂದು ಮೂಲಗಳು ತಿಳಿಸಿವೆ.


ನಗರದಲ್ಲಿ ಇಂದು

ಆರ್ಯಭಟ ಉಡಾವಣೆಯ ಸುವರ್ಣ ಮಹೋತ್ಸವ ಆಚರಣೆ: ಉದ್ಘಾಟನೆ: ಎಂ. ಶಂಕರನ್, ಮುಖ್ಯ ಅತಿಥಿ: ಅನ್ನಪೂರ್ಣಿ ಸುಬ್ರಮಣ್ಯಂ, ಅಧ್ಯಕ್ಷತೆ: ಎ.ಎಸ್. ಕಿರಣ್ ಕುಮಾರ್, ಆಯೋಜನೆ: ಯು.ಆರ್. ರಾವ್ ಉಪಗ್ರಹ ಕೇಂದ್ರ, ಸ್ಥಳ: ಸಿ.ವಿ. ವಿಶ್ವೇಶ್ವರ ಸಭಾಂಗಣ, ಯು.ಆರ್. ರಾವ್ ಭವನ, ಜವಾಹರ್‌ಲಾಲ್ ನೆಹರು ತಾರಾಲಯ ಆವರಣ, ಟಿ. ಚೌಡಯ್ಯ ರಸ್ತೆ, ಬೆಳಿಗ್ಗೆ 10.30

ನಾಗನಾಥ್ ಗೌರಿಪುರ ಅವರ 'ಕರ್ನಾಟಕದ ಕಾರ್ಟೂನಿಷ್ಟರು' ಪುಸ್ತಕ ಬಿಡುಗಡೆ ಹಾಗೂ ವಾರ್ಷಿಕ ವ್ಯಂಗ್ಯಚಿತ್ರ ಪ್ರದರ್ಶನ: ಉದ್ಘಾಟನೆ: ಪ.ಸ. ಕುಮಾರ್, ಅತಿಥಿ: ವಿ.ಜಿ. ನರೇಂದ್ರ, ಅಧ್ಯಕ್ಷತೆ: ಬಿ.ಜಿ. ಗುಜ್ಜಾರಪ್ಪ, ಆಯೋಜನೆ: ಕರ್ನಾಟಕ ವ್ಯಂಗ್ಯಚಿತ್ರಕಾರರ ಸಂಘ, ಸ್ಥಳ: ಭಾರತೀಯ ವ್ಯಂಗ್ಯಚಿತ್ರ ಗ್ಯಾಲರಿ, ಎಂ.ಜಿ. ರಸ್ತೆ, ಬೆಳಿಗ್ಗೆ 11

87ನೇ ಶ್ರೀ ರಾಮನವಮಿ ಸಂಗೀತೋತ್ಸವ: ರಾಘವ್ ರಾಮ್ ಲೋಕೂರ್ ಮತ್ತು ತಂಡ, ಜುಗಲ್ ಬಂದಿ: ವಿಶ್ವಮೋಹನ್ ಭಟ್, ಮೈಸೂರು ಮಂಜುನಾಥ್, ಸಲೀಲ್ ಭಟ್, ಸುಮಂತ್ ಮಂಜುನಾಥ್, ಯಲ್ಲಾ ವೆಂಕಟೇಶ್ವರ ರಾವ್, ಹಿಮಾಂಶು ಮಹಂತ್, ಆಯೋಜನೆ: ಶ್ರೀರಾಮಸೇವಾ ಮಂಡಳಿ ರಾಮನವಮಿ ಸೆಲೆಬ್ರೇಷನ್ ಟ್ರಸ್ಟ್, ಸ್ಥಳ: ಕೋಟೆ ಪ್ರೌಢಶಾಲೆ ಆವರಣ, ಚಾಮರಾಜಪೇಟೆ, ಸಂಜೆ 5ರಿಂದ

ಮನೆಯಂಗಳದಲ್ಲಿ ಮಾತುಕತೆ: ತಿಂಗಳ ಅತಿಥಿ: ತುಂಬಾಡಿ ರಾಮಯ್ಯ, ಉಪಸ್ಥಿತಿ: ಕೆ.ಎಂ. ಗಾಯಿತ್ರಿ, ಆಯೋಜನೆ: ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಸ್ಥಳ: ನಯನ ಸಭಾಂಗಣ, ಕನ್ನಡ ಭವನ, ಜೆ.ಸಿ.ರಸ್ತೆ, ಸಂಜೆ 4




ತುಂಬಾಡಿ ರಾಮಯ್ಯ

'ಸೂ.ವೆಂ. ಆರಗ ವಿಮರ್ಶಾ ಪ್ರಶಸ್ತಿ' ಮತ್ತು 'ಡಾ.ವಿಜಯಾ ಸುಬ್ಬರಾಜ್ ಗಣ್ಯ ಲೇಖಕಿ ಪ್ರಶಸ್ತಿ' ಪ್ರದಾನ: ಕೆ. ಮೋಹನ್ ದೇವ್ ಆಳ್ವ, ಪ್ರಶಸ್ತಿ ಪುರಸ್ಕೃತರು: ಪ್ರಸನ್ನ ನಂಜಾಪುರ, ಲತಾ ಗುತ್ತಿ, ಅಧ್ಯಕ್ಷತೆ: ಬೈರಮಂಗಲ ರಾಮೇಗೌಡ, ಆಯೋಜನೆ: ಬಿ.ಎಂ.ಶ್ರೀ. ಪ್ರತಿಷ್ಠಾನ, ಸ್ಥಳ: ಎಂ.ವಿ.ಸೀ. ಸಭಾಂಗಣ, ಬಿ.ಎಂ. ಶ್ರೀ. ಕಲಾಭವನ, ಎನ್.ಆರ್. ಕಾಲೊನಿ, ಸಂಜೆ 5

31ನೇ ವಾರ್ಷಿಕೋತ್ಸವ ಹಾಗೂ 'ಪ್ರಣತಿ ಪ್ರಶಸ್ತಿ' ಪ್ರದಾನ ಸಮಾರಂಭ: ಪ್ರಶಸ್ತಿ ಪುರಸ್ಕೃತರು: ನಾ. ಸೋಮೇಶ್ವರ, ಬಿ.ವಿ. ಶ್ರೀನಿವಾಸ, ಮುಖ್ಯ ಅತಿಥಿಗಳು: ಎನ್.ಎಸ್. ಪ್ರಸಾದ್, ಉಮಾ ಶಂಕರ್ ಬಿ. ಪಾಟೀಲ, ಎಚ್. ಫಲ್ಗುಣ, ಗಾಯನ: ಪ್ರಣತಿ ರಾಘವೇಂದ್ರ ಮತ್ತು ತಂಡ, ಆಯೋಜನೆ: ಪ್ರಣತಿ ಪ್ರತಿಷ್ಠಾನ, ಸ್ವರ ಲಯ ಸಾಹಿತ್ಯ, ಸ್ಥಳ: ಸಂಸ ಬಯಲು ರಂಗಮಂದಿರ, ರವೀಂದ್ರ ಕಲಾಕ್ಷೇತ್ರ ಆವರಣ, ಜೆ.ಸಿ. ರಸ್ತೆ, ಸಂಜೆ 5.30

'ಭಕ್ತಿ ಮತ್ತು ಸಾಹಿತ್ಯ' ಉಪನ್ಯಾಸ: ಲಕ್ಷ್ಮೀಶ ತೋಳ್ಪಾಡಿ, ಆಯೋಜನೆ: ಶಿವರಾಮ ಕಾರಂತ ವೇದಿಕೆ, ಸ್ಥಳ: ಗಾಂಧಿ ಭವನ, ಕುಮಾರಕೃಪಾ ರಸ್ತೆ, ಸಂಜೆ 6

ವೈದ್ಯಕೀಯ ಉಪನ್ಯಾಸ: 'ಚಿಂತೆ ಬಿಟ್ಟು ನೆಮ್ಮದಿಯಿಂದಿರುವುದು ಹೇಗೆ?' ವಿಷಯದ ಬಗ್ಗೆ: ಡಾ.ಸಿ.ಆರ್. ಚಂದ್ರಶೇಖರ್, ಆಯೋಜನೆ: ದಶಾವತಾರ ಲಕ್ಷ್ಮೀಕಾಂತಸ್ವಾಮಿ ಟೆಂಪಲ್ ಕಾಂಪ್ಲೆಕ್ಸ್ ಟ್ರಸ್ಟ್, ಸ್ಥಳ: ದಶಾವತಾರ ಲಕ್ಷ್ಮೀಕಾಂತಸ್ವಾಮಿ ದೇವಸ್ಥಾನ, ಪದ್ಮನಾಭನಗರ, ಸಂಜೆ 6



ಡಾ.ಸಿ.ಆರ್. ಚಂದ್ರಶೇಖರ್

ತಿಂಗಳ ನಾಟಕ ಸಂಭ್ರಮ: ತಿಂಗಳ ಅತಿಥಿ: ನಾಗರತ್ನಮ್ಮ ಮರಿಯಮ್ಮನಹಳ್ಳಿ, ಅಧ್ಯಕ್ಷತೆ: ಕೆ.ವಿ. ನಾಗರಾಜಮೂರ್ತಿ, ಕೃಷ್ಣ ಕೊಲ್ಹಾರ ಕುಲಕರ್ಣಿ ಅವರು ರಚಿಸಿರುವ 'ನಾ ಸತ್ತಿಲ್ಲ' ನಾಟಕ ಪ್ರದರ್ಶನ, ನಿರ್ದೇಶನ: ಕೃಷ್ಣ ಕುಲಕರ್ಣಿ, ಆಯೋಜನೆ: ಕರ್ನಾಟಕ ನಾಟಕ ಅಕಾಡೆಮಿ, ಸ್ಥಳ: ಸಾಂಸ್ಕೃತಿಕ ಸಮುಚ್ಚಯ, ಕಲಾಗ್ರಾಮ, ಮಲ್ಲತ್ತಹಳ್ಳಿ, ಸಂಜೆ 6.30

'ನಾಯಿ ಮತ್ತು ಚಪ್ಪಲಿ' ನಾಟಕ ಪ್ರದರ್ಶನ: ರಚನೆ: ಮನೋಜ್ ಎಂ., ಸಂತೋಷ್ ಗಡಾದ್, ನಿರ್ದೇಶನ: ಆಕಾಶ್ ನಾಗ್, ಗಿರೀಶ್ ಆಲಾಜೆ, ಆಯೋಜನೆ: ದಾಟು ಥಿಯೇಟರ್, ಸ್ಥಳ: ಕೆಇಎ ಪ್ರಭಾತ್ ರಂಗಮಂದಿರ, ಬಸವೇಶ್ವರನಗರ, ಸಂಜೆ 7


'ಸೂರ್ಯ ಪುತ್ರ ಶನಿದೇವ' ನೃತ್ಯ ನಾಟಕ ಪ್ರದರ್ಶನ: ಅತಿಥಿಗಳು: ಎನ್. ತಿಪ್ಪೇಸ್ವಾಮಿ, ಸಿ.ಕೆ. ರಾಮಮೂರ್ತಿ, ವಿವೇಕ್ ಸುಬ್ಬಾ ರೆಡ್ಡಿ, ಆಯೋಜನೆ: ಕೈಲಾಸ ಕಲಾಧರ, ಸ್ಥಳ: ರವೀಂದ್ರ ಕಲಾಕ್ಷೇತ್ರ, ಜೆ.ಸಿ.ರಸ್ತೆ, ಸಂಜೆ 4.30

ರಸ್ತೆಯಲ್ಲಿ ಅಡ್ಡಗಟ್ಟಿ ಹಲ್ಲೆ: ಚಾಲಕ ಸೆರೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪೊಲೀಸರ ಸೋಗಿನಲ್ಲಿ ಕಾರು ಚಾಲಕನನ್ನು ಅಡ್ಡಗಟ್ಟಿ ಹಲ್ಲೆ ನಡೆಸಿದ್ದ ಆರೋಪದ ಅಡಿ ಕ್ಯಾಬ್ ಚಾಲಕ ನಿತುಲ್ ರಾಜ್ ಎಂಬಾತನನ್ನು ಪುಲಕೇಶಿನಗರ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಸಂತೋಷ್ ಕುಮಾರ್ ಎಂಬುವರು ನೀಡಿದ ದೂರು ಆಧರಿಸಿ ಆರೋಪಿಯನ್ನು ಬಂಧಿಸಲಾಗಿದೆ ಎಂದು ಪೊಲೀಸರು ಹೇಳಿದರು.



ನಿತುಲ್ ರಾಜ್

'ಕಳೆದ ವಾರ ಸಂತೋಷ್ ಕಾರಿನಲ್ಲಿ ಹೋಗುತ್ತಿದ್ದರು. ಆರೋಪಿಯ ಕಾರಿಗೆ ದೂರುದಾರರ ಕಾರು ತಾಗಿತ್ತು. ಕಾರು ನಿಲುಗಡೆ ಮಾಡದೇ ಮುಂದೆ ಹೋಗಿದ್ದರಿಂದ ಆಕ್ರೋಶಗೊಂಡ ನಿತುಲ್ ರಾಜ್, ಸೈರನ್ ಮೊಳಗಿಸಿ ಕಾರನ್ನು ಹಿಂಬಾಲಿಸಿದ್ದ. ಅಲ್ಲದೇ ಜಂಕ್ಷನ್‌ವೊಂದರಲ್ಲಿ ಕಾರು ಅಡ್ಡಗಟ್ಟಿದ್ದ' ಎಂದು ಪೊಲೀಸರು ತಿಳಿಸಿದರು.


'ಕಾರು ಅಡ್ಡಗಟ್ಟಿದ್ದ ಆರೋಪಿ, ಸಂತೋಷ್ ಅವರನ್ನು ಅವಾಚ್ಯ ಶಬ್ದಗಳಿಂದ ನಿಂದಿಸಿ ಪರಾರಿಯಾಗಿದ್ದ. ಸಂತೋಷ್ ಅವರು ಪೊಲೀಸ್ ಸಹಾಯವಾಣಿಗೆ ಕರೆ ಮಾಡಿ ತಿಳಿಸಿದ್ದರು. ಮಾಹಿತಿ ಆಧರಿಸಿ ಪ್ರಕರಣ ದಾಖಲಿಸಿಕೊಂಡ ಪೊಲೀಸರು, ಸಿಸಿಟಿವಿ ಕ್ಯಾಮೆರಾಗಳ ದೃಶ್ಯಾವಳಿಯನ್ನು ಪರಿಶೀಲನೆ ನಡೆಸಿದಾಗ ಆರೋಪಿ ಕಾರಿನ ನೋಂದಣಿ ಸಂಖ್ಯೆ ಪತ್ತೆಯಾಗಿತ್ತು. ಅದನ್ನು ಆಧರಿಸಿ ಆರೋಪಿಯನ್ನು ಬಂಧಿಸಲಾಯಿತು' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

'ರಾಷ್ಟ್ರೀಯ ಹಬ್ಬ ಸೇರಿದಂತೆ ವಿಶೇಷ ದಿನಗಳಲ್ಲಿ ಕಾರು ಅಸೋಸಿಯೇಷನ್ ವತಿಯಿಂದ ರ್‍ಯಾಲಿ ಆಯೋಜಿಸಲಾಗುತ್ತದೆ. ಆ ರ್‍ಯಾಲಿ ಮುನ್ನಡೆಸಲು ಕಾರಿಗೆ ಸೈರನ್ ಅಳವಡಿಸಿಕೊಂಡಿದ್ದ. ಅದೇ ಸೈರನ್ ಬಳಸಿಕೊಂಡು ದೂರುದಾರರನ್ನು ಬೆದರಿಸಿದ್ದ' ಎಂದು ಪೊಲೀಸರು ಹೇಳಿದರು.

‘ಸ್ಪೀಕರ್’ ಪಕ್ಷದ ವಕ್ತಾರ ಆಗಬಾರದು –ಕಪಿಲ್ ಸಿಬಲ್ • ಇದು ಅನೈತಿಕ ನಡೆ –ಡಿಎಂಕೆ

ಧನಕರ್ ‘ರಾಜಕೀಯ ಹೇಳಿಕೆ’ಗೆ ಖಂಡನೆ

ಪ್ರಜಾವಾಣಿ ವಾರ್ತೆ


ಕಪಿಲ್ ಸಿಬಲ್

ನವದೆಹಲಿ: ಸುಪ್ರೀಂ ಕೋರ್ಟ್‌ ಅನ್ನು ಟೀಕಿಸಿರುವ ರಾಜ್ಯಸಭಾ ಸಭಾಪತಿ ಜಗದೀಪ್ ಧನಕರ್ ನಡೆಯನ್ನು ರಾಜ್ಯಸಭೆ ಸದಸ್ಯ ಕಪಿಲ್ ಸಿಬಲ್ ತೀವ್ರವಾಗಿ ಖಂಡಿಸಿದ್ದಾರೆ.

‘ರಾಜ್ಯಸಭಾ ಸಭಾಪತಿ ಅವರು ಹೀಗೆ ರಾಜಕೀಯ ಹೇಳಿಕೆ ನೀಡಿದ್ದನ್ನು ನಾನು ಎಂದಿಗೂ ಕಂಡಿಲ್ಲ’ ಎಂದಿದ್ದಾರೆ.

ಮಸೂದೆಗಳಿಗೆ ಅನುಮೋದನೆ ನೀಡಲು ರಾಷ್ಟ್ರಪತಿ ಅವರಿಗೆ ಗಡುವು ನಿಗದಿಪಡಿಸಿದ್ದ ಸುಪ್ರೀಂ ಕೋರ್ಟ್‌ ತೀರ್ಪಿಗೆ ಪ್ರತಿಕ್ರಿಯಿಸಿದ್ದ ಧನಕರ್, ‘ಪ್ರಜಾಸತ್ತಾತ್ಮಕ ಅಂಗದ ಮೇಲೆ ‘ಅಣ್ವಸ್ತ್ರ ಕ್ಷಿಪಣಿ’ ಪ್ರಯೋಗಿಸುವ ಮೂಲಕ ಸುಪ್ರೀಂ ಕೋರ್ಟ್‌, ‘ಸೂಪರ್ ಪಾರ್ಲಿಮೆಂಟ್’ನಂತೆ ವರ್ತಿಸುತ್ತಿದೆ ಎಂದು ವಾಗ್ದಾಳಿ ನಡೆಸಿದ್ದರು.

ಮುಖ್ಯಾಂಶಗಳು

- ಧನಕರ್ ಮಾತಿನಿಂದ ಬೇಸರ, ಆಶ್ಚರ್ಯವಾಗಿದೆ
- ‘ಸುಪ್ರೀಂ’ ಗೆ ಅಧಿಕಾರ ನೀಡಿದ ಸಂವಿಧಾನ
- ಸಚಿವ ಸಂಪುಟದ ಸಲಹೆ ಮೇರೆಗೆ ರಾಷ್ಟ್ರಪತಿ ಕೆಲಸ: ಕಪಿಲ್ ಸಿಬಲ್

ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಈ ಮಾತಿಗೆ ಪ್ರತಿಕ್ರಿಯಿಸಿದ ಕಪಿಲ್ ಸಿಬಲ್ ಅವರು, ‘ಧನಕರ್ ಅವರ ಹೇಳಿಕೆಯಿಂದ ನನಗೆ ಬೇಸರ ಮತ್ತು ಆಶ್ಚರ್ಯ ಉಂಟಾಗಿದೆ’ ಎಂದು ಹೇಳಿದರು.


> **ಎನ್‌ಡಿಎಯೇತರ ಪಕ್ಷಗಳ ರಾಜ್ಯ ಸರ್ಕಾರಗಳ ಪದಚ್ಯುತಿಗೆ ರಾಜ್ಯಪಾಲರ ಅಧಿಕಾರ ದುರ್ಬಳಕೆ ಮಾಡಿಕೊಳ್ಳುವ ಬಿಜೆಪಿ-ಆರ್‌ಎಸ್‌ಎಸ್ ಕ್ರಮವನ್ನು ಸಕ್ರಮಗೊಳಿಸುವಂತೆ ಧನಕರ್ ಹೇಳಿಕೆ ಇದೆ. ಇತ್ತೀಚಿನ ವರ್ಷಗಳಲ್ಲಿ ಇಂತಹ ಪ್ರವೃತ್ತಿ ಅಪಾಯಕಾರಿ ಸ್ವರೂಪದಲ್ಲಿ ತೀವ್ರಗೊಳ್ಳುತ್ತಿದೆ**
> **ಡಿ.ರಾಜಾ,** ಸಿಪಿಐ ಪ್ರಧಾನ ಕಾರ್ಯದರ್ಶಿ

‘ಸಂವಿಧಾನದ ವಿಧಿ 370, ಅಯೋಧ್ಯೆಯ ಪ್ರಕರಣದಲ್ಲಿ ಮೋದಿ ಸರ್ಕಾರದ ನಡೆಗೆ ಟೀಕೆಗಳು ಕೇಳಿಬಂದಾಗ, ಅವುಗಳಿಗೆ ತಿರುಗೇಟು ನೀಡಲು ‘ಸುಪ್ರೀಂ’ ತೀರ್ಪುಗಳನ್ನೇ ಉಲ್ಲೇಖಿಸಲಾಗಿತ್ತು. ಈಗ ಅದೇ ಜನರು ಸುಪ್ರೀಂ ಕೋರ್ಟ್‌ನ ತೀರ್ಪಿನಲ್ಲಿ ಲೋಪ ಹುಡುಕುತ್ತಿದ್ದಾರೆ’ ಎಂದು ಹರಿಹಾಯ್ದರು.

ಸಂವಿಧಾನದ ವಿಧಿ 142 ಅನ್ನು ‘ಅಣ್ವಸ್ತ್ರ ಕ್ಷಿಪಣಿ’ ಎಂದು ಧನಕರ್ ಹೇಳಿದ್ದನ್ನು ಖಂಡಿಸಿದ ಸಿಬಲ್, ‘ಸುಪ್ರೀಂ ಕೋರ್ಟ್‌ಗೆ ಇಂತಹ ಅಧಿಕಾರವನ್ನು ಸಂವಿಧಾನ ನೀಡಿದೆ, ಯಾವುದೇ ಸರ್ಕಾರಗಳಲ್ಲ. ರಾಷ್ಟ್ರಪತಿ ಅವರು ಕೇಂದ್ರ ಸಚಿವ ಸಂಪುಟದ ಸಲಹೆಯ ಅನುಸಾರ ಕಾರ್ಯನಿರ್ವಹಿಸುತ್ತಾರೆ. ಅವರಿಗೆ ವ್ಯಕ್ತಿಗತವಾಗಿ ಯಾವುದೇ ಅಧಿಕಾರ ಇರದು. ಧನಕರ್ ಅವರು ಇದನ್ನು ತಿಳಿದುಕೊಳ್ಳಬೇಕು’ ಎಂದು ತಿರುಗೇಟು ನೀಡಿದರು.

‘ನಾನು ದೀರ್ಘಕಾಲದಿಂದ ಸಂಸತ್ತಿನಲ್ಲಿದ್ದೇನೆ. ಅಧ್ಯಕ್ಷ ಸ್ಥಾನದಲ್ಲಿದ್ದವರು ಹೀಗೆ ರಾಜಕೀಯ ಹೇಳಿಕೆ ನೀಡಿದ್ದನ್ನು ನಾನು ಎಂದಿಗೂ ನೋಡಿರಲಿಲ್ಲ. ಬಿಜೆಪಿಯಿಂದ ಅಧ್ಯಕ್ಷ ಆಗಿದ್ದವರು ಇಂತಹ ಹೇಳಿಕೆ ನೀಡಿರಲಿಲ್ಲ. ಲೋಕಸಭೆ ಸ್ಪೀಕರ್ ಎಲ್ಲ ಪಕ್ಷಗಳನ್ನು ಸಮಾನವಾಗಿ ಕಾಣಬೇಕು. ಯಾವುದೇ ಸ್ಪೀಕರ್ ಪಕ್ಷದ ವಕ್ತಾರ ಆಗಬಾರದು. ಧನ್‌ಕರ್ ಹೀಗಿದ್ದಾರೆ ಎಂದು ನಾನು ಇಲ್ಲಿ ಹೇಳುತ್ತಿಲ್ಲ’ ಎಂದು ಸಿಬಲ್ ಹೇಳಿದರು.

ಸೂಕ್ಷ್ಮತೆ ಇರಬೇಕು: ಕಾರ್ಯಾಂಗ, ನ್ಯಾಯಾಂಗ, ಶಾಸಕಾಂಗ ಮತ್ತು ಮಾಧ್ಯಮಗಳ ನಡೆ ಸಮತೋಲನದಿಂದ ಇರಬೇಕು. ಸೂಕ್ಷ್ಮತೆ ಮೆರೆಯಬೇಕು ಎಂದು ಆರ್‌ಜೆಡಿ ಸಂಸದ ಮನೋಜ್ ಕೆ ಝಾ ಪ್ರತಿಕ್ರಿಯಿಸಿದ್ದರೆ, ‘ಸುಪ್ರೀಂ’ ತೀರ್ಪು ಟೀಕಿಸುವ ಧನಕರ್ ನಡೆ ‘ಅನೈತಿಕವಾದುದು’ ಎಂದು ಡಿಎಂಕೆ ನಾಯಕ ತಿರುಚಿ ಶಿವ ಅವರು ಪ್ರತಿಕ್ರಿಯಿಸಿದರು.


ಪರಂಪರೆ ದಿನ ವಿಶ್ವ ಪರಂಪರೆ ದಿನಾಚರಣೆ ಅಂಗವಾಗಿ ಮುಂಬೈನ ಛತ್ರಪತಿ ಶಿವಾಜಿ ಮಹಾರಾಜ್ ಟರ್ಮಿನಸ್ ಅನ್ನು (ಸಿಎಸ್‌ಎಂಟಿ) ವಿದ್ಯುತ್ ದೀಪಗಳಿಂದ ಶುಕ್ರವಾರ ಅಲಂಕರಿಸಲಾಗಿತ್ತು –ಪಿಟಿಐ ಚಿತ್ರ

ಮರ್ಯಾದೆಗೇಡು ಹತ್ಯೆ: ಆರೋಪ ಹೊರಿಸಲು ‘ಸುಪ್ರೀಂ’ ಆದೇಶ



ನವದೆಹಲಿ (ಪಿಟಿಐ): ಮರ್ಯಾದೆಗೇಡು ಹತ್ಯೆ ಪ್ರಕರಣವೊಂದರಲ್ಲಿ ಆರೋಪಿಗಳ ವಿರುದ್ಧ ‘ಕೊಲೆ ಎನಿಸದ ಅಪರಾಧಿಕ ಹತ್ಯೆ’ ಆರೋಪ ಹೊರಿಸಿದ್ದಕ್ಕೆ ಅಸಮಾಧಾನ ವ್ಯಕ್ತಪಡಿಸಿರುವ ಸುಪ್ರೀಂ ಕೋರ್ಟ್‌, ಆರೋಪಿಗಳ ವಿರುದ್ಧ ಕೊಲೆಗೆ ಸಂಬಂಧಿಸಿದ ಕಠಿಣ ಅವಕಾಶಗಳಡಿ ಆರೋಪ ಹೊರಿಸುವಂತೆ ಆದೇಶಿಸಿದೆ.

ಈ ಪ್ರಕರಣದಲ್ಲಿ ಆರೋಪಿಗಳಾಗಿರುವ ಒಂದೇ ಕುಟುಂಬದ ಸದಸ್ಯರ ವಿರುದ್ಧ ‘ಕೊಲೆ ಎನಿಸದ ಅಪರಾಧಿಕ ಹತ್ಯೆ’ ಆರೋಪ ಹೊರಿಸಿ ವಿಚಾರಣಾ ನ್ಯಾಯಾಲಯ ಹಾಗೂ ಉತ್ತರ ಪ್ರದೇಶ ಹೈಕೋರ್ಟ್ ಹೊರಡಿಸಿದ್ದ ಆದೇಶವನ್ನು ಸುಪ್ರೀಂ ಕೋರ್ಟ್ ರದ್ದು ಮಾಡಿದೆ.

ಮುಖ್ಯನ್ಯಾಯಮೂರ್ತಿ ಸಂಜೀವ್ ಖನ್ನಾ ಹಾಗೂ ನ್ಯಾಯಮೂರ್ತಿ ಸಂಜಯ್ ಕುಮಾರ್ ಅವರು ಇದ್ದ ಪೀಠ ಈ ಕುರಿತ ಅರ್ಜಿ ವಿಚಾರಣೆ ನಡೆಸಿತು.

‘ಹತ್ಯೆಯಾಗಿರುವ 26 ವರ್ಷದ ಜಿಯಾ ಉರ್ ರಹಮಾನ್ ತಂದೆ ಅಯ್ಯುಬ್ ಅಲಿ ಅವರೊಂದಿಗೆ ಸಮಾಲೋಚಿಸಿ, ಸಹಾರನಪುರ ನ್ಯಾಯಾಲಯದಲ್ಲಿ ವಿಚಾರಣೆ ನಡೆಸಬೇಕು. ಇದಕ್ಕಾಗಿ ವಿಶೇಷ ಸರ್ಕಾರಿ ವಕೀಲರನ್ನು (ಎಸ್‌ಪಿಪಿ) ನೇಮಕ ಮಾಡಬೇಕು’ ಎಂದು ಉತ್ತರ ಪ್ರದೇಶ ಮುಖ್ಯ ಕಾರ್ಯದರ್ಶಿಗೆ ಪೀಠವು ನಿರ್ದೇಶನ ನೀಡಿದೆ.


ನಾಲ್ವರು ಆರೋಪಿಗಳು ಜಾಮೀನು ಕೋರಿ ಹೊಸದಾಗಿ ಅರ್ಜಿ ಸಲ್ಲಿಸುವಂತೆಯೂ ಪೀಠ ಸೂಚನೆ ನೀಡಿದೆ.

2023ರಲ್ಲಿ ರಹಮಾನ್, ಅನ್ಯಕೋಮಿಗೆ ಸೇರಿದ ತನ್ನ ಸಂಗಾತಿಯೊಂದಿಗೆ ಇದ್ದಾಗ, ಅವರ ಮೇಲೆ ಕಬ್ಬಿಣದ ಸರಳು ಹಾಗೂ ಬಡಿಗೆಗಳಿಂದ ಹಲ್ಲೆ ನಡೆಸಲಾಗಿತ್ತು. ಗಂಭೀರ ಗಾಯಗಳಿಂದಾಗಿ ರಹಮಾನ್ ಮೃತಪಟ್ಟಿದ್ದರು.

ಈ ಸಂಬಂಧ ರಹಮಾನ್ ತಂದೆ ಅಲಿ ಅವರು ಸಲ್ಲಿಸಿದ್ದ ಅರ್ಜಿಯನ್ನು ತಿರಸ್ಕರಿಸಿ ಸಹಾರನಪುರ ನ್ಯಾಯಾಲಯ ಕಳೆದ ವರ್ಷ ಫೆಬ್ರುವರಿ 27ರಂದು ಆದೇಶಿಸಿತ್ತು. ನಂತರ ಹೈಕೋರ್ಟ್ ಕೂಡ ಇವರು ಸಲ್ಲಿಸಿದ್ದ ಮೇಲ್ಮನವಿ ತಿರಸ್ಕರಿಸಿ ಕಳೆದ ವರ್ಷ ಆಗಸ್ಟ್ 31ರಂದು ಆದೇಶಿಸಿತ್ತು.

ಎಂಜಿನಿಯರ್ ಹುದ್ದೆಗೆ ಆಯ್ಕೆಯಾದ ನಗರಸಭೆ ಅಧ್ಯಕ್ಷೆ

ಪ್ರಜಾವಾಣಿ ವಾರ್ತೆ


ಪ್ರಿಯಾಂಕಾ ನಾಯಕ್

ಸಿಂಧನೂರು (ರಾಯಚೂರು ಜಿಲ್ಲೆ): ನಗರಸಭೆ ಅಧ್ಯಕ್ಷೆ ಪ್ರಿಯಾಂಕಾ ನಾಯಕ್ ಅವರಿಗೆ ಕರ್ನಾಟಕ ವಿದ್ಯುತ್ ನಿಗಮ (ಕೆಪಿಸಿಎಲ್)ದ ಸಹಾಯಕ ಎಂಜಿನಿಯರ್ ಹುದ್ದೆ ಒಲಿದು ಬಂದಿದೆ.

ಎಂಜಿನಿಯರಿಂಗ್ ಪದವೀಧರರಾಗಿರುವ ಅವರು ಎಇ ಹುದ್ದೆಗೆ 2018–19ರಲ್ಲಿ ಸ್ಪರ್ಧಾತ್ಮಕ ಪರೀಕ್ಷೆ ಬರೆದಿದ್ದರು. ಕೆಲ ದಿನಗಳ ಹಿಂದೆ ಅದರ ಅಂತಿಮ ಪಟ್ಟಿ ಪ್ರಕಟಗೊಂಡಿದೆ. ನೇಮಕಗೊಂಡ ಬೆನ್ನಲ್ಲೇ ಅಧ್ಯಕ್ಷ ಹಾಗೂ ಸದಸ್ಯ ಸ್ಥಾನಕ್ಕೆ ಪ್ರಿಯಾಂಕಾ ರಾಜೀನಾಮೆ ನೀಡಿದ್ದಾರೆ.

‘ಸಂಘಟನೆಗೆ ಬೇಕು ಸಂವೇದನೆ’

ರಾಜಕುಮಾರ್ ಪ್ರಶಸ್ತಿ ಪ್ರದಾನ ಮಾಡಿದ ಎಚ್‌.ಎಸ್‌. ರಾಘವೇಂದ್ರ ರಾವ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಹಳ ಬಾರಿ ಪ್ರತಿಭಟನೆ ಮಾಡುವವರಿಗೆ ಸಂಘಟನೆ ಮಾಡಲು ಗೊತ್ತಿರುವುದಿಲ್ಲ. ಸಂಘಟಕರಿಗೆ ಒಳ ವಿಮರ್ಶೆ ಗೊತ್ತಿರುವುದಿಲ್ಲ. ಸಂವೇದನೆ ಇಲ್ಲದೇ ಇದ್ದರೆ ಪ್ರತಿಭಟನೆ, ಸಂಘಟನೆ ಎರಡೂ ಒಣಗಿ ಹೋಗುತ್ತವೆ ಎಂದು ವಿಮರ್ಶಕ ಎಚ್‌.ಎಸ್‌. ರಾಘವೇಂದ್ರ ರಾವ್ ತಿಳಿಸಿದರು.

ಕನ್ನಡ ಜನಶಕ್ತಿ ಕೇಂದ್ರದ ವತಿಯಿಂದ ಸಾಹಿತಿ ಬರಗೂರು ರಾಮಚಂದ್ರಪ್ಪ ಅವರಿಗೆ ‘ವರನಟ ಡಾ. ರಾಜಕುಮಾರ್’ ಪ್ರಶಸ್ತಿಯನ್ನು ಶುಕ್ರವಾರ ಪ್ರದಾನ ಮಾಡಿ ಅವರು ಮಾತನಾಡಿದರು.

ಸಂಘಟನೆಯನ್ನೂ ಪ್ರತಿಭಟನೆಯನ್ನೂ ಮಾಡುತ್ತಲೇ ಸಂವೇದನಾಶೀಲರಾಗಿರುವ ಕೆಲವೇ ವ್ಯಕ್ತಿಗಳಲ್ಲಿ ಬರಗೂರು ಒಬ್ಬರು. ಚಳವಳಿಗಳಲ್ಲಿ ತೊಡಗಿಸಿಕೊಂಡವರು ಬರಹಗಾರರಾಗಿದ್ದು ಕಡಿಮೆ. ಬರಹಗಾರರು ಹೋರಾಟಕ್ಕೆ ಇಳಿದಿದ್ದು ಕಡಿಮೆ. ಅಂಥ ಕಡಿಮೆ ಜನರಲ್ಲಿ ಬರಗೂರು ಇದ್ದಾರೆ ಎಂದು ಶ್ಲಾಘಿಸಿದರು.

ಕನ್ನಡದ ಸಾಹಿತಿಗಳು ಚಲನಚಿತ್ರ ಗಂಭೀರವಾಗಿ ಪರಿಗಣಿಸಿಲ್ಲ. ಒಳ್ಳೆಯ ಸಿನಿಮಾ ಮತ್ತು ಸಾಹಿತ್ಯದ ನಡುವೆ ಸೇತುವೆ ಕಟ್ಟಿದ ರಾಮಚಂದ್ರಪ್ಪ ಅವರು ನಾಡಿನ ಹತಭಾಗ್ಯರ, ನೋವುಂಡವರ ಬಗ್ಗೆ ಸಿನಿಮಾ ತೋರಿಸಬೇಕು ಎಂದು ಹಾತೊರೆದವರು. ಬರಗೂರು ಅವರಿಗೆ ಕಾರ್ಲ್‌ಮಾರ್ಕ್ಸ್‌, ಅಂಬೇಡ್ಕರ್, ಗಾಂಧಿ ಚಿಂತನೆಗಳು ತಾತ್ವಿಕ ತಳಹದಿಯನ್ನು ಕಟ್ಟಿಕೊಟ್ಟಿದ್ದರೆ , ಎಚ್. ನರಸಿಂಹಯ್ಯ, ಎಸ್. ಬಂಗಾರಪ್ಪ ಮತ್ತು ಡಾ. ರಾಜಕುಮಾರ್ ವೈಯಕ್ತಿಕ ಬದುಕಿನ ಮಾರ್ಗದರ್ಶಕರಾಗಿದ್ದರು ಎಂದರು.


ಬರಗೂರು ರಾಮಚಂದ್ರಪ್ಪ ಅವರಿಗೆ ‘ವರನಟ ಡಾ. ರಾಜಕುಮಾರ್’ ಪ್ರಶಸ್ತಿ ನೀಡಿ ಗೌರವಿಸಲಾಯಿತು. ಎಸ್‌.ವಿ. ರಾಜೇಂದ್ರಸಿಂಗ್ ಬಾಬು, ಸಿ.ಕೆ. ರಾಮೇಗೌಡ, ಕೆ. ಮೋಹನ್ ರಾವ್ ಮತ್ತು ಎಚ್. ಎಸ್. ರಾಘವೇಂದ್ರ ರಾವ್ ಉಪಸ್ಥಿತರಿದ್ದರು –ಪ್ರಜಾವಾಣಿ ಚಿತ್ರ

ಪ್ರಶಸ್ತಿ ಸ್ವೀಕರಿಸಿದ ಬರಗೂರು ರಾಮಚಂದ್ರಪ್ಪ ಮಾತನಾಡಿ, ‘ಸಾಂಸ್ಕೃತಿಕ ರಾಜಕಾರಣವು ವಿಧಾನಸೌಧದ ರಾಜಕಾರಣಕ್ಕಿಂತ ದೊಡ್ಡದು. 1975ರಲ್ಲಿಯೇ ನನ್ನ ಮೊದಲ ಕೃತಿಗೆ ಅತ್ಯುತ್ತಮ ಕೃತಿಗೆ ಪ್ರಶಸ್ತಿ ಬಂದಿತ್ತು. ಆದರೆ, ನಾನು ಸಾಮಾಜಿಕ ಚಳವಳಿಗಳಲ್ಲಿ ತೊಡಗಿಸಿಕೊಂಡ ಬಳಿಕ ನನ್ನನ್ನು ನೋಡುವ ದೃಷ್ಟಿಯೇ ಬದಲಾಯಿತು. ನನ್ನ ಯಾವ ಕೃತಿಗೂ ಆಮೇಲೆ ಪ್ರಶಸ್ತಿ ಬಂದಿಲ್ಲ’ ಎಂದರು.

ಚಿತ್ರರಂಗದ ಬೆಳವಣಿಗೆಗೆ, ಉಳಿಯುವಿಕೆಗೆ ರಾಜಕುಮಾರ್ ಕೊಡುಗೆ ಮಹತ್ವದ್ದು. ಕುವೆಂಪು ನಿಸರ್ಗದಲ್ಲಿ ದೇವರನ್ನು ಕಂಡರೆ ರಾಜಕುಮಾರ್ ಅಭಿಮಾನಿಗಳಲ್ಲಿ ದೇವರನ್ನು ಕಂಡರು. ನುಡಿ ಮತ್ತು ನಡೆಯಲ್ಲಿ ನೈತಿಕತೆಯನ್ನು ಇಟ್ಟುಕೊಂಡಿದ್ದರಿಂದಲೇ ಅವರು ಸಾಂಸ್ಕೃತಿಕ ನಾಯಕರಾದರು ಎಂದು ವಿವರಿಸಿದರು.

ಬರಗೂರು ಅವರ ‘ಜನಪದ ನಾಯಕ ಡಾ. ರಾಜಕುಮಾರ್ ಜನರಿಗೆ ಕೊಟ್ಟಿದ್ದೇನು?’ ಕೃತಿ ಬಿಡುಗಡೆ ಮಾಡಲಾಯಿತು. ಚಲನಚಿತ್ರ ನಿರ್ದೇಶಕ ಎಸ್‌.ವಿ. ರಾಜೇಂದ್ರಸಿಂಗ್ ಬಾಬು, ಹೋಟೆಲ್ ಉದ್ಯಮಿ ಕೆ. ಮೋಹನ್‌ರಾವ್, ಕನ್ನಡ ಜನಶಕ್ತಿ ಕೇಂದ್ರದ ಅಧ್ಯಕ್ಷ ಸಿ.ಕೆ. ರಾಮೇಗೌಡ ಉಪಸ್ಥಿತರಿದ್ದರು.

ಸಂಕ್ಷಿಪ್ತ ಸುದ್ದಿ

ಜೆಇಇ (ಮುಖ್ಯ ಪರೀಕ್ಷೆ) ಎರಡನೇ ಆವೃತ್ತಿ ಫಲಿತಾಂಶ ಇಂದು

ನವದೆಹಲಿ (ಪಿಟಿಐ): ‘ಜೆಇಇ (ಮುಖ್ಯಪರೀಕ್ಷೆ) ಎರಡನೇ ಆವೃತ್ತಿಯ ಫಲಿತಾಂಶವು ಏ.19ರಂದು ಪ್ರಕಟವಾಗಲಿದೆ’ ಎಂದು ರಾಷ್ಟ್ರೀಯ ಪರೀಕ್ಷಾ ಏಜೆನ್ಸಿಯ (ಎನ್‌ಟಿಎ) ಶುಕ್ರವಾರ ತಿಳಿಸಿದೆ.

ಪರೀಕ್ಷೆಯ ಅಂತಿಮ ಕೀ ಉತ್ತರಗಳನ್ನು ಶುಕ್ರವಾರ ಬಿಡುಗಡೆಗೊಳಿಸಿದೆ. ‘ಏ.18ರಂದೇ ಜೆಇಇ (ಮುಖ್ಯಪರೀಕ್ಷೆ) ಕೀ ಉತ್ತರಗಳನ್ನು ಡೌನ್‌ಲೋಡ್ ಮಾಡಿಕೊಳ್ಳಲು ಜೆಇಇ ವೆಬ್‌ಸೈಟ್‌ನಲ್ಲಿ ಲಭ್ಯವಿದೆ. ಫಲಿತಾಂಶವನ್ನು ಏ.19ರಂದು ಪ್ರಕಟಿಸಲಾಗುವುದು’ ಎಂದು ಎನ್‌ಟಿಎ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ತಾತ್ಕಾಲಿಕ ಕೀ ಉತ್ತರಗಳಲ್ಲಿ ದೋಷಗಳಿರುವ ಕುರಿತು ಹಲವಾರು ಮಂದಿ ಎನ್‌ಟಿಎಗೆ ದೂರು ಸಲ್ಲಿಸಿದ್ದರು. ಅಂತಿಮ ಕೀ ಉತ್ತರಗಳು ಬರುವ ತನಕ ಯಾವುದೇ ತೀರ್ಮಾನ ಮಾಡಬಾರದು ಎಂದು ಉತ್ತರಿಸಿತ್ತು. ಪರೀಕ್ಷೆಯು ಏ.2, 3, 4, 7 ಹಾಗೂ 8ರಂದು ನಡೆದಿತ್ತು.

ಸನ್ನಿ ದೇವಲ್, ಹೂಡಾ ವಿರುದ್ಧ ಎಫ್‌ಐಆರ್


ಸನ್ನಿ ದೇವಲ್

ಜಲಂಧರ್ (ಪಿಟಿಐ): ‘ಜಾಟ್’ ಸಿನಿಮಾದಲ್ಲಿ ಕ್ರಿಶ್ಚಿಯನ್ನರ ಧಾರ್ಮಿಕ ಭಾವನೆಗೆ ಧಕ್ಕೆ ಮಾಡಲಾಗಿದೆ ಎಂಬ ದೂರಿಗೆ ಸಂಬಂಧಿಸಿದಂತೆ ನಟ ಸನ್ನಿ ದೇವಲ್, ರಣದೀಪ್ ಹೂಡಾ ಮತ್ತು ಇತರ ಮೂವರ ವಿರುದ್ಧ ಎಫ್‌ಐಆರ್ ದಾಖಲಿಸಲಾಗಿದೆ.

ಏಪ್ರಿಲ್ 10ರಂದು ಬಿಡುಗಡೆಯಾದ ಸಿನಿಮಾ ವಿರುದ್ಧ ಕ್ರಿಶ್ಚಿಯನ್ ಸಮುದಾಯದ ನಾಯಕರೊಬ್ಬರು ದೂರು ನೀಡಿದ್ದರು. ಸಿನಿಮಾದಲ್ಲಿ ಜೀಸಸ್ ಕ್ರಿಸ್ತ ಮತ್ತು ಕ್ರೈಸ್ತ ಧರ್ಮದ ಆಚರಣೆಗಳಿಗೆ ಅಗೌರವ ತೋರಲಾಗಿದೆ ಎಂದು ದೂರಿದ್ದರು.

ಹಿಂಸಾಚಾರ: ಬಾಂಗ್ಲಾ ಹೇಳಿಕೆ ತಿರಸ್ಕರಿಸಿದ ಭಾರತ


ರಣಧೀರ್ ಜೈಸ್ವಾಲ್

ನವದೆಹಲಿ (ಪಿಟಿಐ): ಪಶ್ಚಿಮ ಬಂಗಾಳದಲ್ಲಿ ಹಿಂಸಾಚಾರದ ಕುರಿತು ಬಾಂಗ್ಲಾದೇಶದ ಅಧಿಕಾರಿಗಳ ಹೇಳಿಕೆಯನ್ನು ಭಾರತ ತಿರಸ್ಕರಿಸಿದೆ.

ಜನಪ್ರಿಯತೆ ಮತ್ತು ಪ್ರಖ್ಯಾತಿಗಾಗಿ ಇಂಥ ಕೆಲಸದಲ್ಲಿ ತೊಡಗುವ ಬದಲು ತನ್ನ ದೇಶದಲ್ಲಿರುವ ಅಲ್ಪಸಂಖ್ಯಾತರ ಹಕ್ಕುಗಳ ರಕ್ಷಣೆಗೆ ಗಮನ ನೀಡುವಂತೆ ಬಾಂಗ್ಲಾದೇಶಕ್ಕೆ ಭಾರತ ಸಲಹೆ ನೀಡಿದೆ.

ಈ ಕುರಿತು ಶುಕ್ರವಾರ ಪ್ರತಿಕ್ರಿಯಿಸಿದ ವಿದೇಶಾಂಗ ವ್ಯವಹಾರಗಳ ವಕ್ತಾರ ರಣಧೀರ್ ಜೈಸ್ವಾಲ್, ‘ಪಶ್ಚಿಮ ಬಂಗಾಳ ಹಿಂಸಾಚಾರದ ಕುರಿತ ಬಾಂಗ್ಲಾದೇಶದ ಹೇಳಿಕೆಯನ್ನು ನಾವು ತಿರಸ್ಕರಿಸುತ್ತೇವೆ. ಬಾಂಗ್ಲಾದೇಶದಲ್ಲಿ ಅಪರಾಧಿಗಳು ನಿರಾಳವಾಗಿ ಓಡಾಡುತ್ತಿದ್ದಾರೆ. ಬಾಂಗ್ಲಾದೇಶದ ಹೇಳಿಕೆಯು ಅಲ್ಪಸಂಖ್ಯಾತರ ಮೇಲೆ ದೌರ್ಜನ್ಯಗಳ ಕುರಿತ ಭಾರತದ ಕಳವಳವನ್ನು ಮರೆಮಾಚುವ ಯತ್ನವಾಗಿದೆ’ ಎಂದು ಹೇಳಿದ್ದಾರೆ.

ಪಶ್ಚಿಮ ಬಂಗಾಳದ ಹಿಂಸಾಚಾರದ ಕುರಿತು ಗುರುವಾರ ಪ್ರಸ್ತಾಪಿಸಿದ್ದ ಬಾಂಗ್ಲಾದೇಶ ಸರ್ಕಾರದ ಮುಖ್ಯ ಸಲಹೆಗಾರ ಮೊಹಮ್ಮದ್ ಯೂನುಸ್ ಅವರ ಮಾಧ್ಯಮ ಕಾರ್ಯದರ್ಶಿ, ‘ಅಲ್ಪಸಂಖ್ಯಾತ ಮುಸ್ಲಿಂ ಸಮುದಾಯದವರ ರಕ್ಷಣೆಗಾಗಿ ಭಾರತ ಸರ್ಕಾರ ಮತ್ತು ಪಶ್ಚಿಮ ಬಂಗಾಳ ಸರ್ಕಾರ ಅಗತ್ಯವಿರುವ ಎಲ್ಲ ಕ್ರಮಗಳನ್ನು ಕೈಗೊಳ್ಳಬೇಕು. ಮುಸ್ಲಿಮರ ಮೇಲಿನ ದಾಳಿ ಮತ್ತು ಸಾವು–ನೋವು ಹಾಗೂ ಆಸ್ತಿಗೆ ಧಕ್ಕೆಯಾಗುವ ಹಿಂಸಾಚಾರವನ್ನು ಖಂಡಿಸುತ್ತೇವೆ’ ಎಂದಿದ್ದರು.

‘ಆಸ್ತಿ ಮೇಲೆ ಸೋನಿಯಾ, ರಾಹುಲ್ ಕಣ್ಣು’

ನವದೆಹಲಿ(ಪಿಟಿಐ): ‘ಒಂದು ಪೈಸೆಯನ್ನೂ ಹೂಡಿಕೆ ಮಾಡದೆ ಕಾಂಗ್ರೆಸ್ ನಾಯಕರಾದ ಸೋನಿಯಾ ಗಾಂಧಿ ಮತ್ತು ರಾಹುಲ್ ಗಾಂಧಿ ₹2,000 ಕೋಟಿ ಆಸ್ತಿ ಮೇಲೆ ಕಣ್ಣಿಟ್ಟಿದ್ದಾರೆ’ ಎಂದು ಬಿಜೆಪಿ ಶುಕ್ರವಾರ ಆರೋಪಿಸಿದೆ.

‘ಕಾಂಗ್ರೆಸ್ ಪಕ್ಷವು ಪತ್ರಿಕೆಯನ್ನು ತನ್ನ ಎಟಿಎಂ ಆಗಿ ಬಳಸಿಕೊಂಡಿದೆ. ಸೋನಿಯಾ ಗಾಂಧಿ ಮತ್ತು ರಾಹುಲ್ ತಮ್ಮ ಜೇಬಿನಿಂದ ಒಂದು ಪೈಸೆಯನ್ನೂ ಹೂಡಿಕೆ ಮಾಡದೆ ನ್ಯಾಷನಲ್ ಹೆರಾಲ್ಡ್‌ನ ₹2,000 ಕೋಟಿ ಮೌಲ್ಯದ ಆಸ್ತಿಯನ್ನು ಸ್ವಾಧೀನಪಡಿಸಿಕೊಳ್ಳಲು ಪ್ರಯತ್ನಿಸಿದ್ದಾರೆ’ ಎಂದು ಕೇಂದ್ರದ ಮಾಜಿ ಸಚಿವ ಅನುರಾಗ್ ಠಾಕೂರ್ ಆರೋಪಿಸಿದ್ದಾರೆ.

ಸೋನಿಯಾ ಮತ್ತು ರಾಹುಲ್ ಇಬ್ಬರೂ ಯಂಗ್ ಇಂಡಿಯನ್ ಕಂಪನಿಯಲ್ಲಿ ಶೇ 76ರಷ್ಟು ಪಾಲು ಹೊಂದಿದ್ದು, ಕಾಂಗ್ರೆಸ್‌ನಿಂದ ₹50 ಲಕ್ಷ ಸಾಲ ನೀಡಲಾಗಿದೆ. ಯಾವುದಾದರೂ ರಾಜಕೀಯ ಪಕ್ಷ ಸಾಲ ನೀಡುತ್ತದೆಯೇ ಎಂದು ಅವರು ಪ್ರಶ್ನಿಸಿದ್ದಾರೆ.

ಕಾಂಗ್ರೆಸ್ ಆಡಳಿತವಿರುವ ರಾಜ್ಯಗಳಲ್ಲಿ ಮುಖ್ಯಮಂತ್ರಿಗಳು ವಾರ ಪತ್ರಿಕೆಗಳ ಜಾಹೀರಾತಿಗೆ ಸಾರ್ವಜನಿಕ ಹಣವನ್ನು ಬಳಸಿಕೊಳ್ಳುತ್ತಿದ್ದಾರೆ ಎಂದು ಠಾಕೂರ್ ಹೇಳಿದ್ದಾರೆ.

ಜಾರಿ ನಿರ್ದೇಶನಾಲಯದ ಕ್ರಮವು ‘ರಾಜಕೀಯ ಪ್ರೇರಿತ’ವಾಗಿದೆ ಎಂಬ ಆರೋಪದ ಕುರಿತ ಪ್ರಶ್ನೆಗೆ ಅವರು, ಭ್ರಷ್ಟಾಚಾರ ಆರೋಪ ಎದುರಿಸುತ್ತಿರುವ ಕಾಂಗ್ರೆಸ್ ನಾಯಕರು ತಮ್ಮ ವಿರುದ್ಧದ ಪ್ರಕರಣಗಳಲ್ಲಿ ತ್ವರಿತ ಮತ್ತು ಕಾಲಮಿತಿಯ ವಿಚಾರಣೆಯನ್ನು ಕೋರಿ ನ್ಯಾಯಾಲಯಗಳ ಮೊರೆ ಹೋಗಲಿ ಸವಾಲು ಹಾಕಿದ್ದಾರೆ.

ವಾಸನೆಯುಕ್ತ ನೀರು ಸಮಸ್ಯೆ ನಿವಾರಿಸುವ ಭರವಸೆ

ಪ್ರಜಾವಾಣಿ ವಾರ್ತೆ

ಕೆ.ಆರ್.ಪುರ: ವಾಸನೆಯುಕ್ತ ನೀರು ಪೂರೈಕೆಯಾಗುತ್ತಿದ್ದ ದೇವಸಂದ್ರ ಮುಖ್ಯ ರಸ್ತೆಯ ಕಾವೇರಿ ಬೇಕರಿ ಹಿಂಭಾಗದಲ್ಲಿರುವ ಮಂಜುನಾಥ ಬಡಾವಣೆಗೆ ಶುಕ್ರವಾರ ಜಲಮಂಡಳಿ ಅಧಿಕಾರಿಗಳು ಭೇಟಿ ನೀಡಿ, ಕಲುಷಿತ ನೀರು ಮಿಶ್ರಣವಾಗುತ್ತಿರುವ ಸ್ಥಳವನ್ನು ಪರಿಶೀಲಿಸಿದರು. ಶೀಘ್ರವೇ ಸಮಸ್ಯೆ ಬಗೆಹರಿಸುವ ಕುರಿತು ಸ್ಥಳೀಯ ನಿವಾಸಿಗಳಿಗೆ ಭರವಸೆ ನೀಡಿದರು.

‘ಪ್ರಜಾವಾಣಿ’ಯ ಗುರುವಾರದ ಸಂಚಿಕೆಯಲ್ಲಿ ‘ವಾಸನೆಯುಕ್ತ ನೀರು ಪೂರೈಕೆ: ಜನರಲ್ಲಿ ಆತಂಕ’ ಶೀರ್ಷಿಕೆಯಡಿ ವರದಿ ಪ್ರಕಟವಾಗಿತ್ತು. ವರದಿಯಿಂದ ಎಚ್ಚೆತ್ತ ಜಲಮಂಡಳಿ ಅಧಿಕಾರಿಗಳು, ಸ್ಥಳಕ್ಕೆ ಭೇಟಿ ನೀಡಿ, ಪರಿಶೀಲನೆ ನಡೆಸಿದರು.

‘ಕಾವೇರಿ ನೀರಿಗೆ ಕಲುಷಿತ ನೀರು ಸೇರುತ್ತಿರುವ ಬಗ್ಗೆ ಗಮನಕ್ಕೆ ಬಂದಿದೆ. ತ್ವರಿತಗತಿಯಲ್ಲಿ ಸಮಸ್ಯೆ ಬಗೆಹರಿಸಲು ಮುಂದಾಗಿದ್ದೇವೆ. ಎರಡು ಕಡೆ ರಸ್ತೆ ಅಗೆದು ಕೊಳವೆ ಜೋಡಣೆ ಪರಿಶೀಲಿಸಿದ್ದೇವೆ. ಶನಿವಾರದೊಳಗೆ ಸಮಸ್ಯೆ ಬಗೆಹರಿಸುತ್ತೇವೆ’ ಎಂದು ಜಲಮಂಡಳಿಯ ಸಹಾಯಕ ಕಾರ್ಯಪಾಲಕ ಎಂಜಿನಿಯರ್ ವೆಂಕಟರಮಣ ಹೇಳಿದರು.

ಮೂರು ತಿಂಗಳಿಂದ ಮಂಜುನಾಥ ಬಡಾವಣೆಯ ಮನೆಗಳಿಗೆ ಜಲಮಂಡಳಿ ಪೂರೈಸುವ ನೀರು ದುರ್ವಾಸನೆ ಬೀರುತ್ತಿತ್ತು. ಸ್ಥಳೀಯರು ಹಲವು ಬಾರಿ ಜಲಮಂಡಳಿಗೆ ದೂರು ನೀಡಿದ್ದರು. ಈ ಬಗ್ಗೆ ಶಾಸಕ ಬೈರತಿ ಬಸವರಾಜ ಅವರಿಗೂ ಮನವರಿಕೆ ಮಾಡಲಾಗಿತ್ತು. ಆದರೂ ಸಮಸ್ಯೆ ಬಗ್ಗೆ ಜಲಮಂಡಳಿ ಗಮನ ಹರಿಸಿರಲಿಲ್ಲ.

ದುಬೈ ಕೋರ್ಟ್ ತೀರ್ಪು: ‘ಸುಪ್ರೀಂ’ ಟೀಕೆ

ನವದೆಹಲಿ (ಪಿಟಿಐ): ದಂಪತಿ ನಡುವಿನ ಕಲಹ ಪ್ರಕರಣವೊಂದರಲ್ಲಿ ಅಪ್ರಾಪ್ತ ವಯಸ್ಸಿನ ಮಗುವಿನ ಪ್ರಯಾಣವನ್ನು ನಿರ್ಬಂಧಿಸುವ ದುಬೈ ನ್ಯಾಯಾಲಯದ ಆದೇಶವನ್ನು ಸುಪ್ರೀಂ ಕೋರ್ಟ್ ಟೀಕಿಸಿದ್ದು, ಅದನ್ನು ‘ಅತಿ ಕ್ರೂರ’ ಮತ್ತು ‘ಮಾನವ ಹಕ್ಕುಗಳ ಉಲ್ಲಂಘನೆ’ ಎಂದು ಹೇಳಿದೆ.

ಘಾನಾ ಪ್ರಜೆಯಾಗಿರುವ ಮತ್ತು ಯುಎಇಯ ದುಬೈನಲ್ಲಿ ವಾಸಿಸುವ ಮಗುವಿನ ತಂದೆಯು ಸಲ್ಲಿಸಿದ್ದ ಹೇಬಿಯಸ್ ಕಾರ್ಪಸ್ ಅರ್ಜಿಯ ವಿಚಾರಣೆ ನಡೆಸಿದ ನ್ಯಾಯಮೂರ್ತಿಗಳಾದ ಸೂರ್ಯ ಕಾಂತ್ ಮತ್ತು ಎನ್. ಕೋಟೀಶ್ವರ್ ಸಿಂಗ್ ಅವರನ್ನೊಳಗೊಂಡ ಪೀಠ, ಪ್ರತಿವಾದಿಗಳಿಗೆ ನೋಟಿಸ್ ಜಾರಿಗೊಳಿಸಿತು.

ದಾಂಪತ್ಯ ಕಲಹ ಪ್ರಕರಣದಲ್ಲಿ ನ್ಯಾಯಾಲಯವು ಪ್ರಯಾಣ ನಿಷೇಧವನ್ನು ವಿಧಿಸುವುದು ವಾಸ್ತವಿಕವಾಗಿ ‘ಗೃಹಬಂಧನ’ಕ್ಕೆ ಸಮಾನವಾಗಿರುತ್ತದೆ ಎಂದು ಪೀಠವು ಹೇಳಿತು.

ಬೆಂಗಳೂರಿನ ನಿವಾಸಿಯಾಗಿರುವ ತನ್ನ ಪರಿತ್ಯಕ್ತ ಪತ್ನಿ ದುಬೈ ನ್ಯಾಯಾಲಯದ ಆದೇಶವನ್ನು ಉಲ್ಲಂಘಿಸಿ ತಮ್ಮ ಮಗನನ್ನು ದುಬೈನಿಂದ ಭಾರತಕ್ಕೆ ಕರೆದುಕೊಂಡು ಹೋಗಿದ್ದಾರೆಂದು ತಂದೆ ಅರ್ಜಿಯಲ್ಲಿ ಆರೋಪಿಸಿದ್ದಾರೆ.

ವಾಸ್ತವಾಂಶಗಳನ್ನು ಪರಿಶೀಲಿಸಿದ ನ್ಯಾಯಮೂರ್ತಿಗಳಾದ ಸೂರ್ಯ ಕಾಂತ್, ‘ದಾಂಪತ್ಯ ಕಲಹ ಪ್ರಕರಣದಲ್ಲಿ ನ್ಯಾಯಾಲಯವು ಮಗುವಿನ ಮೇಲೆ ಪ್ರಯಾಣ ನಿಷೇಧವನ್ನು ಹೊರಡಿಸಿದ್ದು ಹೇಗೆ’ ಎಂದು ಅರ್ಜಿದಾರರ ಪರ ಹಾಜರಿದ್ದ ಹಿರಿಯ ವಕೀಲ ನಿಖಿಲ್ ಗೋಯೆಲ್ ಅವರನ್ನು ಪ್ರಶ್ನಿಸಿದರು.

‘ಮಾನವ ಹಕ್ಕುಗಳಲ್ಲಿ ನಂಬಿಕೆ ಇಡುವ ಯಾವುದೇ ನ್ಯಾಯಾಲಯವು ಇಂತಹ ಆದೇಶ ಹೊರಡಿಸಲು ಸಾಧ್ಯವಿಲ್ಲ. ಏಕೆಂದರೆ, ಅದು ತಪ್ಪಿತಸ್ಥರೆಂದು ಸಾಬೀತಾಗದವರನ್ನು ಗೃಹಬಂಧನದಲ್ಲಿ ಇರಿಸುವುದಕ್ಕೆ ಸಮನಾಗುತ್ತದೆ’ ಎಂದು ಪೀಠ ಹೇಳಿದೆ.

ಈ ವಿವಾದವನ್ನು ಬಗೆಹರಿಸಲು ಸ್ಥಳೀಯ ಕೌಟುಂಬಿಕ ನ್ಯಾಯಾಲಯದ ಮೊರೆ ಹೋಗುವಂತೆ ಕರ್ನಾಟಕ ಹೈಕೋರ್ಟ್ ತಿಳಿಸಿರುವುದು ಸರಿಯಾಗಿಯೇ ಇದೆ ಎಂದು ಪೀಠ ಹೇಳಿತು. ಕಳೆದ ವರ್ಷ ಡಿ.10ರಂದು ಹೈಕೋರ್ಟ್ ನೀಡಿದ್ದ ಆದೇಶವನ್ನು ಪತಿ ಪ್ರಶ್ನಿಸಿದ್ದರು.

‘ರೋಹಿತ್ ವೇಮುಲ ಕಾಯ್ದೆ ರೂಪಿಸಿ’

ಒಂದನೇ ಪುಟದಿಂದ...

ಬಿ.ಆರ್. ಅಂಬೇಡ್ಕರ್ ತಮ್ಮ ಜೀವಿತಾವಧಿಯಲ್ಲಿ ಎದುರಿಸಿದ್ದ ತಾರತಮ್ಯಕ್ಕೆ ಸಂಬಂಧಿಸಿದ ಹಲವು ಘಟನೆಗಳನ್ನು ರಾಹುಲ್ ಗಾಂಧಿ ಪತ್ರದಲ್ಲಿ ವಿವರಿಸಿದ್ದು, ಈ ಪತ್ರವನ್ನು ಅವರು ‘ಎಕ್ಸ್’ನಲ್ಲಿ ಹಂಚಿಕೊಂಡಿದ್ದಾರೆ.

‘ಅಂಬೇಡ್ಕರ್ ಅವರು ಎದುರಿಸಿದಂತಹ ಅವಮಾನವನ್ನು ದೇಶದ ಯಾವ ಮಗುವೂ ಎದುರಿಸಬಾರದು ಎಂಬ ಮಾತನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಒಪ್ಪುತ್ತಾರೆ’ ಎಂದು ಹೇಳಿದ್ದಾರೆ.

ದಲಿತ ಸಮುದಾಯದ ರೋಹಿತ್ ವೇಮುಲ, ತಾನು ಅಧ್ಯಯನ ಮಾಡುತ್ತಿದ್ದ ಶಿಕ್ಷಣ ಸಂಸ್ಥೆಯಲ್ಲಿ ಜಾತಿ ಆಧಾರಿತ ತಾರತಮ್ಯದಿಂದಾಗಿ 2016ರಲ್ಲಿ ಆತ್ಮಹತ್ಯೆ ಮಾಡಿಕೊಂಡಿದ್ದರು.

‘ರೋಹಿತ್ ವೇಮುಲ, ಪಾಯಲ್ ತಡ್ವಿ ಮತ್ತು ದರ್ಶನ್ ಸೋಳಂಕಿ ಅವರಂತಹ ಪ್ರತಿಭಾವಂತರ ಕೊಲೆಯನ್ನು ಒಪ್ಪಲಾಗದು. ತಾರತಮ್ಯವು ಈ ಪ್ರತಿಭಾವಂತರನ್ನು ಬಲಿ ಪಡೆದಿದೆ. ಇಂತಹ ಭೀಕರ ಘಟನೆಗಳನ್ನು ಯಾವುದೇ ಕಾರಣಕ್ಕೂ ಸಹಿಸಬಾರದು ಹಾಗೂ ಇಂತಹ ಅನ್ಯಾಯಕ್ಕೆ ಅಂತ್ಯ ಹಾಡಲೇಬೇಕಾದ ಸಮಯ ಬಂದಿದೆ’ ಎಂದೂ ಅವರು ಪ್ರತಿಪಾದಿಸಿದ್ದಾರೆ.

‘ದಲಿತ, ಆದಿವಾಸಿ ಹಾಗೂ ಒಬಿಸಿ ಸಮುದಾಯಕ್ಕೆ ಸೇರಿದ ಶಿಕ್ಷಕರು ಹಾಗೂ ವಿದ್ಯಾರ್ಥಿಗಳನ್ನು ನಾನು ಸಂಸತ್ ಭವನದಲ್ಲಿ ಇತ್ತೀಚೆಗೆ ಭೇಟಿ ಮಾಡಿದ್ದೆ. ಕಾಲೇಜು ಹಾಗೂ ವಿಶ್ವವಿದ್ಯಾಲಯಗಳಲ್ಲಿ ತಾವು ಎದುರಿಸುತ್ತಿರುವ ತಾರತಮ್ಯ ಕುರಿತು ಅವರು ವಿವರಿಸಿದರು. ಹಲವು ದಶಕಗಳ ನಂತರವೂ ನಮ್ಮ ಶಿಕ್ಷಣ ವ್ಯವಸ್ಥೆಯಲ್ಲಿ ಲಕ್ಷಾಂತರ ವಿದ್ಯಾರ್ಥಿಗಳು ಜಾತಿ ತಾರತಮ್ಯ ಎದುರಿಸಬೇಕಾಗಿರುವುದು ದುರದೃಷ್ಟಕರ’ ಎಂದು ಹೇಳಿದ್ದಾರೆ.

‘ಇಂತಹ ತಾರತಮ್ಯ ಹೋಗಲಾಡಿಸಲು ಹಾಗೂ ಜಾತಿ ಪದ್ಧತಿ ನಿರ್ಮೂಲನೆ ಮಾಡಲು ಶಿಕ್ಷಣವೊಂದೇ ಸಾಧನ. ತುಳಿತಕ್ಕೆ ಒಳಗಾದ ವ್ಯಕ್ತಿಯ ಸಬಲೀಕರಣವೂ ಶಿಕ್ಷಣದಿಂದ ಮಾತ್ರ ಸಾಧ್ಯ’ ಎಂದು ವಿವರಿಸಿದ್ದಾರೆ.

ಜನಿವಾರ ವಿವಾದ: ವರದಿ ಕೇಳಿದ ಕೆಇಎ

ಒಂದನೇ ಪುಟದಿಂದ...

‘ಜನಿವಾರದ ಕಾರಣಕ್ಕಾಗಿ ವಿದ್ಯಾರ್ಥಿಗೆ ಪರೀಕ್ಷೆ ಬರೆಯಲು ಅವಕಾಶ ಕಲ್ಪಿಸದ ಪ್ರಕರಣದ ಬಗ್ಗೆ ಉಪವಿಭಾಗಾಧಿಕಾರಿ ದರ್ಜೆಯ ಅಧಿಕಾರಿಯಿಂದ ತನಿಖೆ ನಡೆಸಿ, ನಿಯಮಾನುಸಾರ ಶಿಸ್ತು ಕ್ರಮ ಜರುಗಿಸಬೇಕು. 24 ಗಂಟೆಯೊಳಗೆ ವರದಿ ಸಲ್ಲಿಸಬೇಕು’ ಎಂದು ಸಚಿವ ಈಶ್ವರ ಬಿ. ಖಂಡ್ರೆ ಅವರು ಜಿಲ್ಲಾಧಿಕಾರಿಗೆ ನಿರ್ದೇಶನ ನೀಡಿದ್ದರು.

ಪೊಲೀಸರಿಗೆ ದೂರು:

ಶಿವಮೊಗ್ಗದ ಶರಾವತಿ ನಗರದ ಆದಿಚುಂಚನಗಿರಿ ಕಾಲೇಜಿನ ಪರೀಕ್ಷಾ ಕೇಂದ್ರದಲ್ಲಿ ಬುಧವಾರ ಸಿಇಟಿ ಬರೆಯಲು ಬಂದ ವಿದ್ಯಾರ್ಥಿಗಳ ಜನಿವಾರ ತೆಗೆಸಿದ್ದನ್ನು ಆಕ್ಷೇಪಿಸಿ ದೊಡ್ಡಪೇಟೆ ಪೊಲೀಸ್ ಠಾಣೆಯಲ್ಲಿ ಬ್ರಾಹ್ಮಣ ಮಹಾಸಭಾ ಜಿಲ್ಲಾ ಘಟಕದಿಂದ ಶುಕ್ರವಾರ ದೂರು ಸಲ್ಲಿಸಲಾಗಿದೆ.

‘ಕೆಎಸ್‌ಆರ್‌ಟಿಸಿ ಬಸ್‌ಗಳಲ್ಲಿ ಇರಲ್ಲ ತಂಬಾಕು ಜಾಹೀರಾತು’

ಬೆಂಗಳೂರು: ನಿಗಮದ ಬಸ್‌ಗಳಲ್ಲಿ ಇನ್ನು ಮುಂದೆ ತಂಬಾಕು, ಮಾದಕ ದ್ರವ್ಯಕ್ಕೆ ಸಂಬಂಧಿಸಿದ ಜಾಹೀರಾತುಗಳನ್ನು ಪ್ರದರ್ಶಿಸದಿರಲು ಕೆಎಸ್‌ಆರ್‌ಟಿಸಿ ನಿರ್ಧರಿಸಿದೆ.

‘ಇಂಥ ಜಾಹೀರಾತುಗಳನ್ನು ಪ್ರದರ್ಶಿಸದಂತೆ ಪರವಾನಗಿದಾರರಿಗೆ ಈಗಾಗಲೇ ನೋಟಿಸ್ ನೀಡಲಾಗಿದೆ. ಬಸ್‌ಗಳಲ್ಲಿ ಅಳವಡಿಸಲಾಗಿದ್ದ ಕೂಲ್ ಲಿಪ್ ಜಾಹೀರಾತುಗಳನ್ನು ತೆರವುಗೊಳಿಸಲು ಕ್ರಮವಹಿಸಲಾಗಿದೆ. ಇಂತಹ ಜಾಹೀರಾತುಗಳನ್ನು ಪ್ರದರ್ಶನ ಮಾಡದಂತೆ ಸೂಕ್ತ ಕ್ರಮ ಕೈಗೊಳ್ಳಲಾಗುವುದು’ ಎಂದು ಕೆಎಸ್‌ಆರ್‌ಟಿಸಿ ಮುಖ್ಯ ಸಂಚಾರ ವ್ಯವಸ್ಥಾಪಕಿ ವೀಣಾ ದೇಸಾಯಿ ತಿಳಿಸಿದ್ದಾರೆ.

ಮಹಾರಾಷ್ಟ್ರದ ಔಂಧಾದಲ್ಲಿ ₹1,600 ಕೋಟಿ ವೆಚ್ಚದಲ್ಲಿ ನಿರ್ಮಾಣ

ಗುರುತ್ವಾಕರ್ಷಣೆ ತರಂಗ ವೀಕ್ಷಣಾಲಯ ಸ್ಥಾಪನೆ ಸನ್ನಿಹಿತ

ಪ್ರಜಾವಾಣಿ ವಾರ್ತೆ

ನವದೆಹಲಿ: ಹಲವು ಖಗೋಳ ವಿದ್ಯಮಾನಗಳಿಂದಾಗಿ ಹೊರ ಹೊಮ್ಮುವ ಅತಿ ದುರ್ಬಲ ಗುರುತ್ವಾಕರ್ಷಣೆ ತರಂಗಗಳನ್ನು ಪತ್ತೆ ಮಾಡುವ ಉದ್ದೇಶದ, ಅತ್ಯಾಧುನಿಕ ವೀಕ್ಷಣಾಲಯ ಸ್ಥಾಪಿಸುವ ಕಾರ್ಯಕ್ಕೆ ಕೊನೆಗೂ ಚಾಲನೆ ಸಿಕ್ಕಿದೆ.

‘ಲೇಸರ್ ಇಂಟರ್‌ಫೆರೋಮೀಟರ್ ಗ್ರ್ಯಾವಿಟೇಶನಲ್ ವೇವ್ ಆಬ್ಸರ್ವೇಟರಿ’ (ಎಲ್‌ಐಜಿಒ) ಎಂದು ಕರೆಯಲಾಗುವ ಈ ವೀಕ್ಷಣಾಲಯವನ್ನು ₹1,600 ಕೋಟಿ ವೆಚ್ಚದಲ್ಲಿ ನಿರ್ಮಿಸಲಾಗುತ್ತಿದೆ.

ಮಹಾರಾಷ್ಟ್ರದ ಹಿಂಗೋಲಿ ಜಿಲ್ಲೆಯ ಔಂಧಾ ಬಳಿ ಮುಂದಿನ ನಾಲ್ಕು ವರ್ಷಗಳಲ್ಲಿ ಈ ಸುಸಜ್ಜಿತ ವೀಕ್ಷಣಾಲಯ ತಲೆ ಎತ್ತಲಿದೆ ಎಂದು ಅಣುಶಕ್ತಿ ಇಲಾಖೆಯ ದಾಖಲೆಗಳು ಹೇಳುತ್ತವೆ.



ಕಪ್ಪುರಂಧ್ರಗಳು ಹಾಗೂ ನ್ಯೂಟ್ರಾನ್ ತಾರೆಗಳು ವಿಲೀನದಂತಹ ಖಗೋಳ ವಿದ್ಯಮಾನಗಳ ವೇಳೆ ಬಹಳ ದುರ್ಬಲವಾದ ತರಂಗಗಳು ಉತ್ಪತ್ತಿಯಾಗುತ್ತವೆ. ಇವುಗಳ ಪತ್ತೆ ಹಾಗೂ ಅಧ್ಯಯನವು ಬ್ರಹ್ಮಾಂಡ ಕುರಿತ ಹೊಸ ಹೊಳಹುಗಳನ್ನು ನೀಡಲಿದೆ.

‘ಔಂಧಾ ಪ್ರದೇಶದಲ್ಲಿ ಭೂಕಂಪನ ಸಂಭವಿಸುವುದು ಬಹಳ ಅಪರೂಪ. ಅಲ್ಲದೇ, ಕಂಪನ ತೀವ್ರತೆ ಕೂಡ ಅತ್ಯಂತ ಕಡಿಮೆ ಇರುತ್ತದೆ. ಈ ಪ್ರದೇಶದಲ್ಲಿ ಕಡಿಮೆ ಮಳೆ ಬೀಳುತ್ತದೆ ಹಾಗೂ ಗಾಳಿಯ ವೇಗವೂ ಅಧಿಕ ಇರುವುದಿಲ್ಲ. ಈ ಎಲ್ಲ ಅಂಶಗಳು, ಸೂಕ್ಷ್ಮವಾದ ಗುರುತ್ವಾಕರ್ಷಣೆ ತರಂಗಗಳ ಪತ್ತೆಗೆ ಅನುಕೂಲಕರ ಪರಿಸರ ಒದಗಿಸುತ್ತವೆ. ಹೀಗಾಗಿ, ವೀಕ್ಷಣಾಲಯ ಸ್ಥಾಪನೆಗೆ ಔಂಧಾ ಪ್ರದೇಶವನ್ನೇ ಆಯ್ಕೆ ಮಾಡಲಾಗಿದೆ’ ಎಂದು ಪುಣೆಯ ಇಂಟರ್ ಯುನಿವರ್ಸಿಟಿ ಸೆಂಟರ್ ಫಾರ್ ಆಸ್ಟ್ರಾನಮಿ ಅಂಡ್ ಆಸ್ಟ್ರೊಫಿಜಿಕ್ಸ್‌ನ ಹಿರಿಯ ವಿಜ್ಞಾನಿ ಸಂಜಿತ್ ಮಿತ್ರ ಹೇಳಿದ್ದಾರೆ.

ಅಮೆರಿಕದ ಹ್ಯಾನ್‌ಫೋರ್ಡ್ ಹಾಗೂ ಲಿವಿಂಗ್‌ಸ್ಟನ್‌ನಲ್ಲಿ ಇಂತಹ ವೀಕ್ಷಣಾಲಯಗಳು ಇವೆ. ಔಂಧಾದಲ್ಲಿ ನಿರ್ಮಿಸಲಾಗುವ ವೀಕ್ಷಣಾಲಯವು ಈ ಸರಣಿಯಲ್ಲಿನ 3ನೇ ಸೌಲಭ್ಯವಾಗಿದೆ.

ಖಭೌತ ವಿಜ್ಞಾನಿಗಳ ಬಹುದಿನಗಳ ಬೇಡಿಕೆ

ಗುರುತ್ವಾಕರ್ಷಣೆ ತರಂಗ ವೀಕ್ಷಣಾಲಯ ಸ್ಥಾಪನೆಯು ಭಾರತದ ಖಭೌತವಿಜ್ಞಾನಿಗಳ ಬಹುದಿನಗಳ ಬೇಡಿಕೆಯಾಗಿತ್ತು. ‘ಎಲ್‌ಐಜಿಒ–ಇಂಡಿಯಾ’ ಪ್ರಾಜೆಕ್ಟ್ ಕುರಿತು ಯೋಜನಾ ಅಯೋಗವು 2011ರಲ್ಲಿ ಪ್ರಸ್ತಾವ ಸಲ್ಲಿಸಿತ್ತು.

ಅಮೆರಿಕದ ರಾಷ್ಟ್ರೀಯ ವಿಜ್ಞಾನ ಮಂಡಳಿಯು ತನ್ನ ಒಂದು ವೀಕ್ಷಣಾಲಯವನ್ನು ಭಾರತಕ್ಕೆ ಸ್ಥಳಾಂತರಿಸಲು 2012ರಲ್ಲಿ ಒಪ್ಪಿಗೆ ನೀಡಿತ್ತು.

ಈ ವೀಕ್ಷಣಾಲಯ ಸ್ಥಾಪನೆಗೆ ಕೇಂದ್ರ ಸರ್ಕಾರ 2016ರಲ್ಲಿ ತಾತ್ವಿಕ ಒಪ್ಪಿಗೆ ನೀಡಿತ್ತು. 2023ರ ಏಪ್ರಿಲ್‌ನಲ್ಲಿ ಕೇಂದ್ರ ಸಚಿವ ಸಂಪುಟ ₹2,600 ಕೋಟಿ ವೆಚ್ಚದ ಈ ಪ್ರಾಜೆಕ್ಟ್‌ಗೆ ಒಪ್ಪಿಗೆ ನೀಡಿತು. ಇದಾದ ತಿಂಗಳ ಬಳಿಕ ಪ್ರಧಾನಿ ನರೇಂದ್ರ ಮೋದಿ ಅವರು ವೀಕ್ಷಣಾಲಯ ಸ್ಥಾಪನೆಗೆ ಶಂಕುಸ್ಥಾಪನೆ ನೆರವೇರಿಸಿದ್ದರು.

₹1,600 ಕೋಟಿ ವೆಚ್ಚದಲ್ಲಿ ವೀಕ್ಷಣಾಲಯ ಸ್ಥಾಪಿಸಲಾಗುತ್ತಿದ್ದರೆ, ಈ ವ್ಯವಸ್ಥೆಗೆ ಬೇಕಾದ ಸಂವೇದಕಗಳು ಹಾಗೂ ಇತರ ಸಾಧನಗಳ ಖರೀದಿಗೆ ₹1,000 ಕೋಟಿ ತೆಗೆದಿರಿಸಲಾಗುತ್ತದೆ.

ಇಂತಹ ವೀಕ್ಷಣಾಲಯಗಳು ಯುರೋಪ್ ಮತ್ತು ಜಪಾನ್‌ನಲ್ಲಿವೆ.

ಮಂಗನ ಕಾಯಿಲೆಗೆ ಬಾಲಕ ಸಾವು


ಪ್ರಜಾವಾಣಿ ವಾರ್ತೆ

ಶಿವಮೊಗ್ಗ: ಮಂಗನ ಕಾಯಿಲೆಯಿಂದ (ಕ್ಯಾಸನೂರು ಫಾರೆಸ್ಟ್ ಡಿಸೀಸ್- ಕೆಎಫ್‌ಡಿ) ಬಳಲುತ್ತಿದ್ದ ಜಿಲ್ಲೆಯ ತೀರ್ಥಹಳ್ಳಿ ತಾಲ್ಲೂಕಿನ ದತ್ತರಾಜಪುರ ಗ್ರಾಮದ ಎಂಟು ವರ್ಷದ ಬಾಲಕ ಗುರುವಾರ ರಾತ್ರಿ ಮಣಿಪಾಲ ಆಸ್ಪತ್ರೆಯಲ್ಲಿ ಮೃಪಟ್ಟಿದ್ದಾನೆ.

ಡಿ.ಆರ್. ರಚಿತ್ ಮೃತ ಬಾಲಕ. 15 ದಿನಗಳ ಹಿಂದೆ ಆತನಿಗೂ, ಆತನ ಅಕ್ಕನಿಗೂ ಕೆಎಫ್‌ಡಿ ದೃಢಪಟ್ಟಿತ್ತು. ತೀರ್ಥಹಳ್ಳಿಯ ಜೆ.ಸಿ. ಆಸ್ಪತ್ರೆಯಲ್ಲಿ ಚಿಕಿತ್ಸೆ ಕೊಡಿಸಿ, ಹೆಚ್ಚಿನ ಚಿಕಿತ್ಸೆಗಾಗಿ ಮಣಿಪಾಲ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಮಣಿಪಾಲ ಆಸ್ಪತ್ರೆಯಲ್ಲಿ 12 ದಿನ ಚಿಕಿತ್ಸೆ ಪಡೆದಿದ್ದ ಬಾಲಕ ಗುರುವಾರ ಮೃತಪಟ್ಟಿದ್ದಾನೆ.

ಭೂಮಿಕಾ

ಮಹಿಳೆಯ ಆಪ್ತ ಸಂಗಾತಿ



ಒಂದು ಮುಟ್ಟಿನ ಕಥೆ...

ಮಂಜುಶ್ರೀ ಎಂ. ಕಡಕೋಳ

ಮುನ್ನಿ, ಮೇರಿ, ಮಲ್ಲಿಕಾ... ಹೆಸರು ಯಾವುದಾರೂ ಅಂದುಕೊಳ್ಳಿ. ನನಗಾಗ ಹತ್ತೋ–ಹನ್ನೆರಡೋ ವರ್ಷ. ಗೆಳತಿಯರೊಂದಿಗೆ ಹಗ್ಗದಾಟ ಆಡುತ್ತಿದ್ದೆ. ಇದ್ದಕ್ಕಿದ್ದಂತೆ ಕಿಬ್ಬೊಟ್ಟೆಯಲ್ಲಿ ಏನೋ ತಳಮಳ, ವಿಪರೀತ ನೋವು, ಒಳ ಉಡುಪಿಗೆ ಏನೋ ಅಂಟಿದಂತೆ ಭಾಸ. ಆಟಕ್ಕೆ ವಿರಾಮ ಕೊಟ್ಟು ಸೀದಾ ಬಚ್ಚಲಿಗೆ ಹೋಗಿ ನೋಡಿದರೆ ಒಳ ಉಡುಪೆಲ್ಲಾ ಕೆಂಪು ಕೆಂಪು. ಓಹ್ ನನಗೇನೋ ಗಾಯವಾಗಿರಬಹುದು ಎಂಬ ಭಯ ಆವರಿಸಿತ್ತು. ಬಚ್ಚಲಿನಿಂದಲೇ ಅಮ್ಮನನ್ನು ಕೂಗಿ ಕರೆದಾಗಲೇ ತಿಳಿದದ್ದು ನಾನು ಮುಟ್ಟಾಗಿದ್ದೇನೆ ಅಂತ.

ಓರಗೆಯ ಗೆಳತಿಯರಲ್ಲಿ ನಾನೇ ಮೊದಲು ಮುಟ್ಟಾಗಿದ್ದೆ. ಆಡುವುದಿರಲಿ ಶಾಲೆಗೆ ಹೋಗದಂತೆಯೂ ಅಮ್ಮ ತಾಕೀತು ಮಾಡಿದಳು. ಏಳು ದಿನಗಳು ನನ್ನ ಪಾಲಿಗೆ ಯಾತನದಾಯಕವಾಗಿದ್ದವು. ಒಂದೆಡೆ ರಕ್ತಸ್ರಾವ. ಮತ್ತೊಂದೆಡೆ ತೀವ್ರ ಹೊಟ್ಟೆನೋವು, ಒಮ್ಮೊಮ್ಮೆ ವಾಂತಿ ಬಂದಂತೆ, ಸುಮ್ಮನೆ ಮುದುಡಿ ಮಲಗಬೇಕೆನ್ನುವ ಸ್ಥಿತಿ. ಆ ನಡುವೆ ಮುಟ್ಟಿನ ಸಂಭ್ರಮವನ್ನು ಆಚರಿಸಿದ್ದ ಮನೆಯವರು ತಿನ್ನಲು ತರಹೇವಾರಿ ತಿಂಡಿಗಳ ರಾಶಿಯನ್ನೇ ಮುಂದಿಟ್ಟಿದ್ದರು. ಇಂಥ ತಿಂಡಿ ಎಲ್ಲ ಗೆಳತಿಯರಿಗೂ ಅವರು ಮುಟ್ಟಾದಾಗ ಸಿಗಲಿಲ್ಲ ಅನ್ನೋದು ಮುಂದೆ ತಿಳೀತು.

ನನ್ನ ಗೆಳತಿಯೊಬ್ಬಳು ಮುಟ್ಟಾದಾಗ ಅವಳು ಪಟ್ಟ ಪಾಡು ಮಾತ್ರ ಹೇಳತೀರದು. ಭಿನ್ನ ಜಾತಿಯವಳಾದ ಕಾರಣ ಆಕೆಯನ್ನು ಅವರ ಮನೆಯವರು ಹೊರಗೆ ಕೂರಿಸಿದ್ದರು. ಹಗಲಿರಲಿ, ರಾತ್ರಿಯೂ ಅಲ್ಲೇ ಕಳೆಯಬೇಕಿತ್ತು ಅವಳು. ಪರೀಕ್ಷೆ ಸಮಯದಲ್ಲೇ ಆಗಿದ್ದರಿಂದ ಅವಳೆಷ್ಟೇ ಬೇಡಿಕೊಂಡರೂ ಅವರ ಮನೆಯವರು ಮೈಲಿಗೆ ಅಂತ ಪರೀಕ್ಷೆ ಬರೆಸಲೇ ಇಲ್ಲ. ಅಲ್ಲ, ಶಾಲೆಯಲ್ಲಿ ನಮ್ಮ ಟೀಚರ್, ಮುಟ್ಟು ಅನ್ನೋದು ಸಹಜ ಕ್ರಿಯೆ ಅಂತ ಹೇಳಿಕೊಟ್ಟಿದ್ರು. ಹಾರ್ಮೋನ್‌ಗಳ ಪ್ರಭಾವದಿಂದ ಅಂಡಾಶಯಗಳು ಕ್ರಿಯಾಶೀಲವಾಗಿ ಅಂಡಾಣು ಬಿಡುಗಡೆ ಆಗುತ್ತವೆ. ಅವು ಫಲಿತವಾಗದಿದ್ದಾಗ ಹೊರಗೆ ಹೋಗುವ ಕ್ರಿಯೆಯೇ ಮುಟ್ಟು ಅಂತ ಹೇಳಿದ್ದರು.

ಈಚೆಗೆ ತಮಿಳುನಾಡಿನಲ್ಲಿ ಬಾಲಕಿಯೊಬ್ಬಳು ಮುಟ್ಟಾಗಿದ್ದಳು ಅನ್ನೋ ಕಾರಣಕ್ಕೆ ಟೀಚರ್ ಹೊರಗೆ ಕೂರಿಸಿ ಪರೀಕ್ಷೆ ಬರೆಸಿದ್ದರಂತೆ. ಅಲ್ಲ, ಆ ಟೀಚರ್‌ಗೇ ಮೊದಲು ಮುಟ್ಟಿನ ಪಾಠ ಹೇಳಿಕೊಡಬೇಕು ಅನಿಸ್ತು. ಟೀಚರ್ ಹೋಗಲಿ, ಅದ್ಯಾರೋ ಸ್ವಾಮೀಜಿ,

> ಮುಟ್ಟು ಮುಟ್ಟು ಅಂತ ಹೇಳಿ ಹೆಣ್ಣುಮಕ್ಕಳನ್ನು ಮುಟ್ಟಿಸಿಕೊಳ್ಳದಿರುವ ನಮ್ಮ ಸಮಾಜದ ಮನಸ್ಥಿತಿ ಬದಲಾಗಬೇಕಿದೆ...

'ಮುಟ್ಟಾದ ಹೆಣ್ಣು ಅಡುಗೆ ಮಾಡಿದ್ರೆ ಮುಂದಿನ ಜನ್ಮದಲ್ಲಿ ನಾಯಿಯಾಗಿ ಹುಟ್ತಾರೆ' ಅಂದಿದ್ದರು. ಅಲ್ಲ, ಈಗಿರುವ ಜನ್ಮದಲ್ಲೇ ಹೆಣ್ಮಕ್ಕಳಿಗೆ ಮುಟ್ಟಿನ ದಿನಗಳನ್ನು ಆರಾಮದಾಯಕ ಮಾಡೋದು ಬಿಟ್ಟು, ಮುಂದಿನ ಜನ್ಮದ್ದು ಕಟ್ಕೊಂಡು ಏನ್ ಮಾಡೋದು? ಅಲ್ಲ, ಈ ಗಂಡಸರಿಗೆ 'ಮುಟ್ಟು' ಅಂದರೇನು ಅಂತ ಮೊದಲು ಅರ್ಥ ಮಾಡಿಸಬೇಕು. ಹೆಣ್ಮಕ್ಕಳು ಮುಟ್ಟಾಗದಿದ್ದರೆ ನೀವು ಹುಟ್ಟುತ್ತಿರಲಿಲ್ಲ ಕಣ್ರೀ. ಹೆಣ್ಣಿನ ದೇಹದ ಕುರಿತು ಮಾತಾಡೋಕೆ ನಿಮಗೇನಿದೆ ಅಧಿಕಾರ ಅಂತ ಕೇಳಬೇಕು ಅನ್ಸುತ್ತೆ.

ಮೊದಲ ಸಲ ಮುಟ್ಟಾದಾಗ ಮನೆಯಲ್ಲೇ ಇದ್ದೆ. ಆದರೆ, ಶಾಲೆಯಲ್ಲಿದ್ದಾಗ ಮುಟ್ಟಾದರೆ ಏನ್ಮಾಡೋದು ಅನ್ನೋ ಚಿಂತೆ ನನ್ನಂತೆ ಅನೇಕರದ್ದು. ನಮ್ ಶಾಲೆಯಲ್ಲಿ ಬಾತ್‌ರೂಂ ಏನೋ ಇದೆ. ಆದರೆ ನೀರಿಲ್ಲ. ಸ್ಯಾನಿಟರಿ ಪ್ಯಾಡ್ ವೆಂಡಿಂಗ್ ಮಷೀನ್. ಆಮೇಲೆ ಆ ಪ್ಯಾಡ್ ವಿಲೇವಾರಿಗೆ ಮಷೀನ್ ಕೂಡಾ ಇಲ್ಲ. ಹಾಗಾಗಿ, ನನ್ನ ಅನೇಕ ಗೆಳತಿಯರು ಮುಟ್ಟು ಕಾಣಿಸಿಕೊಂಡ ಮೇಲೆ ಶಾಲೆಯನ್ನೇ ಬಿಟ್ಟಿದ್ದಾರೆ. ಅವರಪ್ಪಮ್ಮ ಕೂಡಾ ಮಗಳು ಮುಟ್ಟಾದ ಒಂದೆರಡು ವರ್ಷದಲ್ಲೇ ಮದ್ವೆ ಮಾಡಿ ಗಂಡನ ಮನೆಗೆ ಕಳಿಸಿದ್ದಾರೆ. ಮೇರಿ, ಮಮತಾ, ಮುಮ್ತಾಜ್ ಎಷ್ಟೊಂದು ಗೆಳತಿಯರು ಡಾಕ್ಟ್ರು, ಎಂಜಿನಿಯರ್, ಟೀಚರ್ ಆಗಬೇಕೆಂಬ ಕನಸು ಕಂಡವರೆಲ್ಲ ಈಗ ಒಂದೊಂದು ಮಕ್ಕಳ ತಾಯಿಯಾಗಿಯೋ, ಕೆಲವರು ಮಗು ಹಡೆಯುತ್ತಲೇ ಸತ್ತೂ ಹೋಗಿದ್ದಾರೆ. ಇದನ್ನೆಲ್ಲ ನೆನೆದು ದುಃಖ ಆಗುತ್ತೆ ನನಗೆ. ಅಲ್ಲ ಮುಟ್ಟು ಅನ್ನೋದು ಹೆಣ್ಣುಮಕ್ಕಳಿಗೆ ಅಷ್ಟೊಂದು ದೊಡ್ಡ ಶಾಪ ನಾ ಅಂತ?

ದೇವರ ಮನೆಗೆ ಬಿಡಲ್ಲ, ಅಡುಗೆ ಮನೆಗೆ ಬಿಡಲ್ಲ, ಎಲ್ಲರ ಜತೆಗೆ ಬೆರೆಯಲು ಬಿಡಲ್ಲ, ಗಿಡ ಮುಟ್ಟುವಂತಿಲ್ಲ, ಉಪ್ಪಿನಕಾಯಿ ಮುಟ್ಟುವಂತಿಲ್ಲ, ಪುಟ್ಟಮಕ್ಕಳನ್ನೂ ಮುದ್ದು ಮಾಡುವಂತಿಲ್ಲ... ಈ ಇಲ್ಲಗಳ ಪಟ್ಟಿ ಬೆಳೆಯುತ್ತಲೇ ಹೋಗುತ್ತೆ. ಅಲ್ಲ ದೇವರು ಕೂಡಾ ಹೆಣ್ಣಾಗಿದ್ದರೆ ಆಕೆ ಕೂಡಾ ಮುಟ್ಟಾಗ್ತಾಳೆ ಅಲ್ವಾ ಅವಳನ್ನು ಹೇಗೆ ಹೊರಗೆ ಇಡ್ತೀರಿ ಅಂತ ಕೇಳಬೇಕೆನ್ನಿಸುತ್ತೆ.

ನಿಜ ಹೇಳಬೇಕು ಅಂದರೆ ಮುಟ್ಟಿನ ಕುರಿತು ನಮಗೆ ಶಾಲೆಯಲ್ಲಿ ತಿಳಿವಳಿಕೆ ನೀಡುವಂಥ ವಾತಾವರಣ ಬೇಕು. ಒಳ್ಳೆಯ ಶೌಚಾಲಯದ ಜತೆಗೆ ಪ್ಯಾಡ್ ಸುಲಭವಾಗಿ ಸಿಗುವಂಥ ವ್ಯವಸ್ಥೆ, ಅದನ್ನು ವಿಲೇವಾರಿ ಮಾಡುವ ಯಂತ್ರ, ಕುಡಿಯಲು ಶುದ್ಧನೀರು ಇಷ್ಟಾದರೂ ಬೇಕು. ಶಾಲೆಯಲ್ಲಿ ಹೋಗಲಿ ನಮ್ಮತ್ತೆ ಕೆಲಸ ಮಾಡುವ ಆಫೀಸಿನಲ್ಲೂ ಇಂಥ ಸೌಲಭ್ಯವಿಲ್ಲವಂತೆ. ಹಾಗಾಗಿ, ಆ ದಿನಗಳಲ್ಲಿ ನಮ್ಮತ್ತೆ ತುಂಬಾ ಹಿಂಸೆ ಅನುಭವಿಸ್ತಾರೆ.

ಇನ್ನು ಕೂಲಿ ಕೆಲಸ ಮಾಡೋ ಹೆಣ್ಮಕ್ಕಳ ಕಥೆ ಏನಿರಬಹುದು? ಸರ್ಕಾರ ಏನೇನೋ ಯೋಜನೆ ಮಾಡುತ್ತೆ. ಹೆಣ್ಣುಮಕ್ಕಳಿಗೆ ಕನಿಷ್ಠ ಮುಟ್ಟಿನ ದಿನಗಳಲ್ಲಾದರೂ ನಿರಾಳವಾಗಿ ಇರುವಂಥ ಪರಿಸರ ಕಲ್ಪಿಸಲು ಆಗಲ್ಲವಾ? ಎಲ್ಲವನ್ನೂ ಸರ್ಕಾರವೇ ಮಾಡ್ಬೇಕಾ, ನಮ್ಮ ಸಮಾಜದ್ದೂ ಜವಾಬ್ದಾರಿ ಇರೋದಿಲ್ಲವಾ?

ಮತ್ತೆ ಟಿ.ವಿಯಲ್ಲಿ ಮೊನ್ನೆ ಒಂದು ಜಾಹೀರಾತು ನೋಡಿದೆ. ಅದರಲ್ಲಿ ಅವರಮ್ಮ ಮಗನಿಗೆ ಕೊಟ್ಟ ರೇಷನ್ ಪಟ್ಟಿಯಲ್ಲಿ ಪ್ಯಾಡ್ ಕೂಡಾ ಇತ್ತು. ಮಗ ಇದೇನಮ್ಮಾ ಅಂತ ಕೇಳಿದಾಗ ಅವಳು ಅದನ್ನು ಮಗನಿಗೆ ವಿವರಿಸಿ ಹೇಳಿದ್ಲು, ಅಷ್ಟೇ ಅಲ್ಲ ತಂಗಿ ಮುಟ್ಟಾದಾಗ ಹೇಗೆ ನೋಡಿಕೊಳ್ಳಬೇಕು ಅಂತಾನೂ ಹೇಳಿದ್ಲು.

ಎಲ್ಲ ಅಮ್ಮಂದಿರು ಈ ಥರ ಯೋಚನೆ ಮಾಡಿದ್ರೆ ಎಷ್ಟು ಚಂದ ಅಲ್ವಾ? ಈ ಜಾಹೀರಾತು ನಮ್ಮಪ್ಪನ ಕಾಲದಲ್ಲೇ ಬಂದಿದ್ರೆ ಅಮ್ಮನಿಗೆ ಆ ದಿನಗಳಲ್ಲಿ ಸ್ವಲ್ಪನಾದರೂ ವಿಶ್ರಾಂತಿ ಸಿಗುತ್ತಿತ್ತೇನೋ? ಸಿಟಿಯಲ್ಲಿ ಓದುವ ಅಕ್ಕನಿಗೆ ಸಹಪಾಠಿಗಳೇ ಪ್ಯಾಡ್ ತಂದುಕೊಟ್ಟಿದ್ದೂ ಇದೆಯಂತೆ. ಇದೆಲ್ಲ ಕೇಳಿದಾಗ ಗಂಡ್ಮಕ್ಕಳಿಗೂ ಮುಟ್ಟಿನ ಬಗ್ಗೆ ಅರಿವು ಮೂಡಿಸುತ್ತಾ ಇರೋದು ಒಳ್ಳೇದು ಅನಿಸುತ್ತೆ. ಆದರೂ, ಮುಟ್ಟು ಮುಟ್ಟು ಅಂತ ಹೇಳಿ ನಮ್ಮನ್ನೇ ಮುಟ್ಟಿಸಿಕೊಳ್ಳದಿರುವ ನಮ್ಮ ಸಮಾಜದ ಮನಸ್ಥಿತಿ ಬದಲಾಗಬೇಕು ಅನಿಸುತ್ತೆ. ಆ ದಿನಗಳಲ್ಲಿ ಒಂದಿಷ್ಟೂರು ಪ್ರೀತಿ, ತುಸು ವಿರಾಮ ಇಷ್ಟಾದರೂ ನಮ್ಮ ನಡುವಿನವರು ಕಲ್ಪಿಸಿಕೊಟ್ಟರೆ ನಾವ್ ಹೆಣ್ಮಕ್ಕಳು ಮುಟ್ಟಿನ ನೋವನ್ನು ಮೆಟ್ಟಿ ನಿಲ್ಲಬಲ್ಲೆವು ಅನಿಸುತ್ತೆ. ❖

ದಾಹ ತಣಿಸಲು ಕಲ್ಲಂಗಡಿ ಹಣ್ಣು

ಕಲ್ಲಂಗಡಿ ಹಣ್ಣು ಬೇಸಿಗೆ ಕಾಲಕ್ಕೆ ಒಳ್ಳೆಯದು. ಇದು ರುಚಿಯಲ್ಲಿ ಅದ್ಭುತ ಮತ್ತು ಕಡಿಮೆ ಕ್ಯಾಲೋರಿ ಅಂಶವನ್ನು ಹೊಂದಿದೆ. ಬೇಸಿಗೆಯಲ್ಲಿ ದೇಹವನ್ನು ಹೈಡ್ರೇಟ್ ಆಗಿರುವಂತೆ ಸಹಾಯ ಮಾಡುತ್ತದೆ. ಇವುಗಳ ರೆಸಿಪಿ ನೀಡಿದ್ದಾರೆ

ವೇದಾವತಿ ಎಚ್.ಎಸ್.



ಮೊಜಿಟೊ

ಬೇಕಾಗುವ ಸಾಮಗ್ರಿಗಳು: 1 ಟೀ ಚಮಚ ನಿಂಬೆರಸ, ಕಲ್ಲಂಗಡಿ ಹಣ್ಣು 1 ಕಪ್ ಕ್ಯೂಬ್‌ಆಗಿ ಕತ್ತರಿಸಿದ್ದು, ಪುದೀನ ಎಲೆ 20, 2 ರಿಂದ 3 ಟೀ ಚಮಚ ಸಕ್ಕರೆ ಪುಡಿ, ಐಸ್ ಕ್ಯೂಬ್ 1/2 ಗ್ಲಾಸ್, ನಿಂಬೆ ಹಣ್ಣಿನ ಹೋಳು 2, ಸೋಡಾ 1/2 ಕಪ್, ಚಿಟಿಕೆ ಉಪ್ಪು.

ತಯಾರಿಸುವ ವಿಧಾನ: ಒಂದು ಗ್ಲಾಸ್ ತೆಗೆದುಕೊಂಡು ಕಲ್ಲಂಗಡಿ ಹಣ್ಣಿನ ತುಂಡುಗಳು, 15 ಪುದೀನ ಎಲೆ, ಸಕ್ಕರೆ ಪುಡಿ, ನಿಂಬೆರಸ ಮತ್ತು ಉಪ್ಪನ್ನು ಸೇರಿಸಿ 1 ರಿಂದ 2 ನಿಮಿಷ ನಿಧಾನವಾಗಿ ಕುಟ್ಟಿ ಪುಡಿ ಮಾಡಿ ರಸವನ್ನು ತಯಾರಿಸಿಕೊಳ್ಳಿ. ಈ ರಸಕ್ಕೆ ಐಸ್ ಕ್ಯೂಬ್ ಮತ್ತು ಸೋಡ ಸೇರಿಸಿ ಚೆನ್ನಾಗಿ ಮಿಶ್ರಣ ಮಾಡಿ ಸವಿಯಿರಿ.

ಐಸ್‌ಕ್ರೀಮ್

ಬೇಕಾಗುವ ಸಾಮಗ್ರಿಗಳು: ಎರಡೂವರೆ ಕಪ್ ಕಲ್ಲಂಗಡಿ ಹಣ್ಣಿನ ರಸ, 200ಗ್ರಾಂ ಮಿಲ್ಕ್ ಮೇಡ್.

ತಯಾರಿಸುವ ವಿಧಾನ: ಕಲ್ಲಂಗಡಿ ಹಣ್ಣಿನ ಬೀಜವನ್ನು ತೆಗೆದು ಚಿಕ್ಕದಾಗಿ ಕ್ಯೂಬ್ ರೀತಿಯಲ್ಲಿ ಹೆಚ್ಚಿ. ಬಳಿಕ ರೆಫ್ರಿಜರೇಟರ್‌ನಲ್ಲಿ ಎರಡರಿಂದ ಮೂರು ಗಂಟೆ ಇಡಿ. ನಂತರ ಹಣ್ಣನ್ನು ಮಿಕ್ಸಿ ಜಾರಿಗೆ ಹಾಕಿ ರಸವನ್ನು ತಯಾರಿಸಿಕೊಳ್ಳಿ. ಈ ರಸಕ್ಕೆ ಮಿಲ್ಕ್ ಮೇಡ್ ಹಾಕಿ ಚೆನ್ನಾಗಿ ಮಿಶ್ರಣ ಮಾಡಿ. ಬಳಿಕ ಒಂದು ಬಾಕ್ಸಿಗೆ ಮಿಶ್ರಣವನ್ನು ಹಾಕಿ ಗಟ್ಟಿಯಾಗಿ ಮುಚ್ಚಳವನ್ನು ಮುಚ್ಚಿ. ಇದನ್ನು ಎಂಟು ಗಂಟೆ ಡೀ ಫ್ರೀಜರ್‌ನಲ್ಲಿಡಿ. ಬಳಿಕ ಐಸ್‌ಕ್ರೀಮ್ ಸ್ಕೂಪ್‌ನಲ್ಲಿ ತೆಗೆದು ಸರ್ವಿಂಗ್ ಬೌಲಿಗೆ ಹಾಕಿ ಸವಿಯಿರಿ.





ಕಲ್ಲಂಗಡಿ ಹಣ್ಣಿನ ಜ್ಯೂಸ್

ಬೇಕಾಗುವ ಸಾಮಗ್ರಿಗಳು: ಮಧ್ಯಮ ಗಾತ್ರದ ಕಲ್ಲಂಗಡಿ ಹಣ್ಣು 1, ಸಕ್ಕರೆ 4 ಟೇಬಲ್ ಚಮಚ, 20 ರಿಂದ 25 ಪುದೀನ ಎಲೆಗಳು, ನಿಂಬೆಹಣ್ಣು 1/2, ಬ್ಲ್ಯಾಕ್ ಸಾಲ್ಟ್ 1/4 ಟೀ ಚಮಚ, ಕಾಳುಮೆಣಸಿನ ಪುಡಿ 1/4 ಟೀ ಚಮಚ, ಐಸ್ ಕ್ಯೂಬ್ ಸ್ವಲ್ಪ.

ತಯಾರಿಸುವ ವಿಧಾನ: ಕಲ್ಲಂಗಡಿ ಹಣ್ಣಿನ ಬೀಜವನ್ನು ತೆಗೆದು ಚಿಕ್ಕದಾಗಿ ಕತ್ತರಿಸಿಕೊಂಡು ಮಿಕ್ಸಿ ಜಾರಿಗೆ ಹಾಕಿ. ಬಳಿಕ ಸಕ್ಕರೆ, ಪುದೀನ ಎಲೆ, ನಿಂಬೆರಸ, ಬ್ಲ್ಯಾಕ್ ಸಾಲ್ಟ್, ಕಾಳುಮೆಣಸಿನ ಪುಡಿಯನ್ನು ಸೇರಿಸಿ ನುಣ್ಣಗೆ ರುಬ್ಬಿಕೊಳ್ಳಿ. ಸರ್ವಿಂಗ್ ಗ್ಲಾಸಿಗೆ ಐಸ್ ಕ್ಯೂಬ್ ಮತ್ತು ತಯಾರಿಸಿದ ಜ್ಯೂಸ್ ಹಾಕಿ ಪುದೀನ ಸೊಪ್ಪಿನಿಂದ ಅಲಂಕರಿಸಿ ಸವಿಯಿರಿ.

ರಿಫ್ರೆಶಿಂಗ್ ಶೇಕ್

ಬೇಕಾಗುವ ಸಾಮಗ್ರಿಗಳು: ಬಾದಾಮಿ ಮತ್ತು ಗೋಡಂಬಿ ಹತ್ತರಂತೆ ತೆಗೆದುಕೊಂಡು ನೀರಿನಲ್ಲಿ ಒಂದು ಗಂಟೆ ನೆನೆಸಿ. ಬಾದಾಮಿ ಸಿಪ್ಪೆ ಬಿಡಿಸಿಕೊಳ್ಳಿ. ಬಳಿಕ ಅವುಗಳನ್ನು ಮಿಕ್ಸಿಯಲ್ಲಿ ಹಾಕಿ 1/4 ಕಪ್ ಹಾಲನ್ನು ಸೇರಿಸಿ ನುಣ್ಣಗೆ ಪೇಸ್ಟ್ ತಯಾರಿಸಿಕೊಳ್ಳಿ. ಚಿಕ್ಕದಾಗಿ ಹೆಚ್ಚಿದ ಕಲ್ಲಂಗಡಿ ಹಣ್ಣು 1 ಕಪ್, ಹಾಲು 1/2 ಕಪ್, ಬೇಸಿಲ್ ಸೀಡ್ಸ್ 1 ಟೇಬಲ್ ಚಮಚ, 1/2 ಕಪ್ ನೀರು, ಸಕ್ಕರೆ 1/4 ಕಪ್ (ನಿಮ್ಮ ಸಿಹಿಗೆ ಅನುಗುಣವಾಗಿ ಹಾಕಿ), ಬಾದಾಮಿ ಮತ್ತು ಪಿಸ್ತಾ ಚೂರುಗಳು ಒಂದೊಂದು ಟೇಬಲ್ ಚಮಚ, 2 ಟೇಬಲ್ ಚಮಚ ರೋಸ್ ಸಿರಪ್, ಸ್ವಲ್ಪ ಐಸ್ ಕ್ಯೂಬ್.

ತಯಾರಿಸುವ ವಿಧಾನ: ಬೇಸಿಲ್ ಸೀಡ್ಸ್‌ಗೆ ನೀರನ್ನು ಹಾಕಿ 5 ನಿಮಿಷ ಬಿಡಿ. ಬಾಣಲೆಗೆ ಹಾಲನ್ನು ಹಾಕಿ ಕುದಿಸಿ. ಬಳಿಕ ಸಕ್ಕರೆ, ತಯಾರಿಸಿಕೊಂಡ ಗೋಡಂಬಿ ಮತ್ತು ಬಾದಾಮಿ ಪೇಸ್ಟ್ ಮತ್ತು ಬಾದಾಮಿ ಮತ್ತು ಪಿಸ್ತಾದ ಚೂರುಗಳನ್ನು ಸೇರಿಸಿ ಕುದಿಸಿ. ಬಳಿಕ ಆರಲು ಬಿಡಿ. ಹಾಲಿನ ಮಿಶ್ರಣವನ್ನು ಒಂದು ಗಂಟೆ ರಿಫ್ರಿಜರೇಟರ್‌ನಲ್ಲಿಡಿ. ಬಳಿಕ ಫ್ರಿಜ್‌ನಿಂದ ತಗೆದು ಕಲ್ಲಂಗಡಿ ಹಣ್ಣು, ಬೇಸಿಲ್ ಸೀಡ್ಸ್, ರೋಸ್ ಸಿರಪ್, ಐಸ್ ಕ್ಯೂಬ್ ಸೇರಿಸಿ ಮಿಶ್ರಣ ಮಾಡಿ. ಬಳಿಕ ಸರ್ವಿಂಗ್ ಗ್ಲಾಸಿಗೆ ಹಾಕಿ ಸವಿಯಿರಿ.





ತೆಳ್ಳಗಾಗಲು ಹೋಗಿ...

ಡಾ. ಟಿ ರಮಾಲಕ್ಷ್ಮಿ

ತೂಕ ಇಳಿಸಿಕೊಳ್ಳಲು ಹೋಗಿ ಪ್ರಾಣ ಕಳೆದುಕೊಂಡ ಯುವತಿ ಎಂಬ ಘಟನೆ ಇತ್ತೀಚೆಗೆ ಭಾರಿ ಸುದ್ದಿ ಮಾಡಿತ್ತು. ಕೇರಳದ ಕಣ್ಣೂರಿನ 18 ವರ್ಷದ ಯುವತಿ ಪ್ರಾಣ ಕಳೆದುಕೊಂಡಿದ್ದಳು. ಸರಿಯಾದ ಸಮಯದಲ್ಲಿ ಸರಿಯಾದ ಪ್ರಮಾಣದಲ್ಲಿ ಆಹಾರವನ್ನು ಸೇವಿಸಿ, ಅದನ್ನು ಅರಗಿಸಿಕೊಳ್ಳುವಷ್ಟು ದೈಹಿಕ ಚಟುವಟಿಕೆಗಳಿಂದ ಇರುವುದು ಬಹುಮುಖ್ಯ. ಜತೆಗೆ ದೇಹಕ್ಕೆ ವಿಶ್ರಾಂತಿ ಸಿಗಲು ಅಗತ್ಯವಿರುವಷ್ಟು ನಿದ್ದೆ ಮಾಡುವುದು ಕೂಡ ಆರೋಗ್ಯವನ್ನು ಕಾಪಾಡುವ ಸೂತ್ರ. ಯಾವುದೇ ವಿಧಾನಗಳ ಡಯೆಟ್‌ನಲ್ಲಿನ ಮೂಲ ಈ ಸೂತ್ರವೇ ಆಗಿರುತ್ತದೆ.

ಹೌದು ತೂಕ ಕಡಿಮೆ ಮಾಡಿಕೊಳ್ಳಬೇಕೆಂಬ ಹಟಕ್ಕೆ ಬಿದ್ದು ಆನ್‌ಲೈನ್‌ನಲ್ಲಿ ಸಿಗುವ ಅರೆಬರೆ ಮಾಹಿತಿಯನ್ನು ನಂಬುವ ಮುನ್ನ ಯೋಚಿಸಿ. ಕೇರಳದ ಪ್ರಕರಣದಲ್ಲಿ ಆ ಹುಡುಗಿ, ಆನ್‌ಲೈನ್‌ನಲ್ಲಿ ಸಿಕ್ಕ ಮಾಹಿತಿಯನುಸಾರ ಆಹಾರಪದ್ಧತಿಯನ್ನು ಅನುಸರಿಸಿದ್ದಾಳೆ. 6 ತಿಂಗಳ ಕಾಲ ಆಹಾರವಿಲ್ಲದೆ ಕೇವಲ ನೀರನ್ನು ಕುಡಿದು ಜೀವಿಸಿದ್ದಾಳೆ. ತದನಂತರ ಆಸ್ಪತ್ರೆಗೆ ದಾಖಲಾಗಿದ್ದು, ಚಿಕಿತ್ಸೆಗೆ ಸ್ಪಂದಿಸದೆ ಸಾವನ್ನಪ್ಪಿದ್ದಾಳೆ. ಇದನ್ನು ವೈದ್ಯಕೀಯವಾಗಿ ಅನೋರೆಕ್ಸಿಯಾ ನರ್ವೋಸಾ ಎಂದು ಕರೆಯಲಾಗುತ್ತದೆ. ಇದೊಂದು ಬರೀ ಅಸ್ವಸ್ಥತೆಯಲ್ಲ, ಮಾನಸಿಕ ಸ್ಥಿತಿಯೂ ಆಗಿದೆ.

ಈ ಕಾಯಿಲೆಯಿಂದ ಬಳಲುವವರು ತೂಕ ಜಾಸ್ತಿ ಹೊಂದಿದ್ದೇನೆ ಎಂಬ ಭ್ರಮೆಯಲ್ಲಿರುತ್ತಾರೆ. ಅಥವಾ ತೂಕ ಜಾಸ್ತಿಯಾಗುತ್ತದೆ ಎಂಬ ಭಯದಲ್ಲಿ ಆಹಾರವನ್ನು ತ್ಯಜಿಸುತ್ತಾರೆ. ಇದರಿಂದ ಕ್ರಮೇಣ ತಮ್ಮ ಹಸಿವಿನ ಪ್ರಜ್ಞೆಯನ್ನು ಕಳೆದುಕೊಳ್ಳುತ್ತಾರೆ. ಈ ಕಾಯಿಲೆ ಕೆಲವರಿಗೆ ಆನುವಂಶಿಕವಾಗಿಯೂ ಬರಬಹುದು.

ಮನುಷ್ಯನು ಸರಿಯಾಗಿ ಆಹಾರ ಸೇವಿಸದಿದ್ದರೆ ಆಯಾಸ, ತಲೆತಿರುಗುವಿಕೆ, ರಕ್ತದೊತ್ತಡ, ನಿರ್ಜಲೀಕರಣ ಹಾಗೂ ಎಲಕ್ಟ್ರೋಲೈಟ್ ಅಸಮತೋಲನ ಸಮಸ್ಯೆಗಳು ಉಂಟಾಗಬಹುದು.

ಸರಿಯಾದ ಮಾಹಿತಿಯಿಲ್ಲದೆ ತೂಕ ಇಳಿಸುವುದು ಅಪಾಯವನ್ನು ಆಹ್ವಾನಿಸಿದಂತೆ. ದೈನಂದಿನ ಚಟುವಟಿಕೆಗಳಲ್ಲಿ ತೊಡಗಿಕೊಳ್ಳಲು ದೇಹಕ್ಕೆ ಅಗತ್ಯ ಶಕ್ತಿ ಬೇಕೇಬೇಕು. ಹೆಚ್ಚಿನ ಮಂದಿ ತೆಳ್ಳಗಾಗಲು ಅಥವಾ ದಪ್ಪಗಾಗಲು ತಪ್ಪಾದ ಆಹಾರ ಕ್ರಮವನ್ನು ಅನುಸರಿಸುತ್ತಾರೆ. ತೆಳ್ಳಗಾಗಲು ಕಡಿಮೆ ತಿನ್ನವುದು, ಅತಿಯಾಗಿ ತಿಂದರೆ ಬೊಜ್ಜು ಬರುತ್ತದೆ ಎಂದು ಅನೇಕರು ತಪ್ಪು ತಿಳಿವಳಿಕೆಯಲ್ಲಿರುತ್ತಾರೆ. ದೇಹಕ್ಕೆ ಅಗತ್ಯವಿರುವ ಕ್ಯಾಲೋರಿ ಸೇವನೆ ಮಾಡುವುದು, ಅದರಲ್ಲಿ ಸಮತೋಲನ ಸಾಧಿಸುವುದು ಬಹುಮುಖ್ಯ.

ದೈಹಿಕ ವ್ಯಾಯಾಮ ಮಾಡುವುದು ಕೂಡ ಪ್ರಮುಖವಾಗಿರುತ್ತದೆ. ವ್ಯಾಯಾಮ ಮಾಡದೇ ತೂಕ ಇಳಿಸಿಕೊಳ್ಳಲು ಬೇರೆ ದಾರಿಯಿಲ್ಲ. ಊಟ ಬಿಡುವುದರಿಂದ ಆರೋಗ್ಯ ಕೆಡುತ್ತದೆ. ಕೆಲವೊಮ್ಮೆ ದಪ್ಪಗಾಗಿದ್ದೇನೆ ಎಂದು ಅಂದುಕೊಳ್ಳುತ್ತಲೇ ಮಾನಸಿಕ ಒತ್ತಡ ಅಥವಾ ಖಿನ್ನತೆಗೆ ಒಳಗಾಗುತ್ತಾರೆ. ಹಾಗಾದಾಗ ಹಸಿವೆಂಬುದು ಕಾಣಿಸಿಕೊಳ್ಳದೇ ಹೋಗಬಹುದು. ಇದು ಕೂಡ ಆರೋಗ್ಯದ ಮೇಲೆ ಪರಿಣಾಮ ಬೀರುತ್ತದೆ.

ಈ ಕಾಯಿಲೆಯಿಂದ ಬಳಲುತ್ತಿರುವವರಿಗೆ ಮಾನಸಿಕ ಚಿಕಿತ್ಸೆ, ಔಷಧಿಗಳು ಹಾಗೂ ವೈದ್ಯರ ಸಮಾಲೋಚನೆ ಬೇಕಿರುತ್ತದೆ. ಅಗತ್ಯವಿದ್ದಲ್ಲಿ ಆಸ್ಪತ್ರೆಗೆ ದಾಖಲಾಗಿ ಚಿಕಿತ್ಸೆ ಪಡೆಯಬೇಕಿರುತ್ತದೆ. ❖

ಹಿಡಿ ಪ್ರೀತಿಗೆ ಮುಗಿಯದ ಹಂಬಲ..!

ಅಂತರಂಗ



ಅಕ್ಷರ ದಾಮ್ಲೆ

- **ಸರ್ ನನಗೀಗ 27 ವರ್ಷ. ಹಿಡಿ ಪ್ರೀತಿಗಾಗಿ ಇಷ್ಟು ವರ್ಷಗಳ ಹಂಬಲಿಸುತ್ತಲೇ ಇದ್ದೇನೆ. ಇಷ್ಟರೊಳಗೆ ಮೂರು ಬಾರಿ ಪ್ರೀತಿ ಮಾಡಿದ್ದೇನೆ. ಎಲ್ಲವೂ ವೈಫಲ್ಯದ ತುತ್ತುತುದಿಯೆ. ಓದಿನಲ್ಲಿಯೂ ಹುಶಾರು, ಒಳ್ಳೆಯ ಕೆಲಸ ಇದೆ. ನನ್ನನ್ನು ನಾನೇ ಗೇಲಿ ಮಾಡಿಕೊಂಡು, ನಗುತ್ತಲೇ ಎಲ್ಲವನ್ನು ಸ್ವೀಕರಿಸಿದ್ದೇನೆ. ಆದರೆ, ನಿಜವಾದ ಪ್ರೀತಿಯನ್ನು ಕಾಣದೇ ಮನಸ್ಸು ಸದಾ ಅನಾಥ ಭಾವ ಅನುಭವಿಸುತ್ತದೆ. ಪ್ರೀತಿಯಲ್ಲಿ ಎಲ್ಲವೂ ಸಾಧ್ಯ ಎನ್ನುತ್ತಾರೆ. ನನಗೆ ಮಾತ್ರ ಮೋಸ, ವಂಚನೆ, ಹತಾಶೆ, ನೋವು, ಸಂಕಟಗಳಷ್ಟೆ ಸಾಧ್ಯವಾಗಿದೆ. ಅಪ್ಪ ಅಮ್ಮನದು ಆದರ್ಶ ಬದುಕು, ಕಟ್ಟುನಿಟ್ಟಿನ ನಿಲುವು. ನನಗೆ ಅಲ್ಲಿಯೂ ಸರಿ ಹೋಗುವುದಿಲ್ಲ. ಸ್ನೇಹಿತರಲ್ಲಿ ಪ್ರೀತಿ ಸಿಗುತ್ತದೆ ಅದು ಸಾಲುವುದಿಲ್ಲ. ಪ್ರೀತಿಯ ಸಂಬಂಧ ಉಳಿಸಿಕೊಳ್ಳಲು ಇರುವ ಮಾರ್ಗವೇನು?**

ನಿಮ್ಮ ಪ್ರಶ್ನೆಯಲ್ಲೇ ಒಂದು ಸಣ್ಣ ಎಳೆಯನ್ನು ನೀವೇ ಬಿಡಿಸಿಟ್ಟಿದ್ದೀರಿ. ಆದರೆ ಬಹುಶಃ ಅದೇ ನಿಮ್ಮ ಈ ಸಂದಿಗ್ಧ ಪರಿಸ್ಥಿತಿಗೆ ಮೂಲ ಕಾರಣವಿರಬಹುದು ಎಂಬುವುದನ್ನು ನಿಮಗೆ ಗುರುತಿಸಲು ಸಾಧ್ಯವಾಗದೇ ಇರಬಹುದು.

ಎಷ್ಟೋ ಬಾರಿ ವಯಸ್ಕರಾದ ಮೇಲೆ ಕಂಡುಬರುವಂತಹ ಸಮಸ್ಯೆಗಳಿಗೆ ಮೂಲ ಬಾಲ್ಯದಲ್ಲಿ ಇರುತ್ತದೆ ಎಂಬುವುದನ್ನು ಅನೇಕರು ಅರ್ಥಮಾಡಿಕೊಳ್ಳುವುದಿಲ್ಲ. ಇದು ಕೆಲವರಿಗೆ ನಂಬುವುದಕ್ಕೆ ಸುಲಭ ಸಾಧ್ಯವಲ್ಲದಿದ್ದರೂ, ಇದು ನಿಜ. ಸುಲಭವಾಗಿ ವಿವರಿಸುವುದಾದರೆ, ಇವತ್ತು ನಾವು ಏನಾಗಿದ್ದೇವೋ ಅದಕ್ಕೆ ನಾವು ಭೂತಕಾಲದಲ್ಲಿ ಮಾಡಿದಂತಹ ನಿರ್ಧಾರಗಳು ಅಥವಾ ಕೆಲಸಗಳೇ ಕಾರಣವಲ್ಲವೇ? ಹಾಗೆಯೇ ನಾವು ಇವತ್ತು ನಾವು ಏನನ್ನು ಭಾವನಾತ್ಮಕವಾಗಿ ಅನುಭವಿಸುತ್ತಿದ್ದೇವೆಯೋ ಅದಕ್ಕೆ ನಮಗೆ ಹಿಂದೆ ಆಗಿರುವಂತಹ ಭಾವನಾತ್ಮಕ ಗಾಸಿ ಕಾರಣವಾಗಿರಬಹುದು.

ನೀವು ನಿಮ್ಮ ನಿತ್ಯಜೀವನದಲ್ಲಿ ನಗುತ್ತಲೇ ಇರುವ ವ್ಯಕ್ತಿಯೇ ಆಗಿದ್ದರೂ, ಎಲ್ಲೋ ಒಂದು ಕಡೆ ನಿಮ್ಮ ಮನಸ್ಸಿನಲ್ಲಿ ಯಾವುದೋ ನೋವು ಖಂಡಿತವಾಗಿಯೂ ಕಾಡುತ್ತಿರಬಹುದು. ಮತ್ತು ಆ ನೋವಿನಿಂದ ಹೊರಬರುವುದಕ್ಕೆ ನೀವು ನಗುವನ್ನು ಒಂದು ಮಾಧ್ಯಮವಾಗಿಯೂ ಬಳಸಿಕೊಳ್ಳುತ್ತಿರಬಹುದು. ಅಥವಾ ಅದು ನಿಮ್ಮ ಸಹಜ ವ್ಯಕ್ತಿತ್ವವೂ ಆಗಿರಬಹುದು.

ಮೂರು ಬಾರಿ ಪ್ರೀತಿ ಮಾಡಿಯೂ ವಿಫಲರಾಗಿದ್ದೀರಿ ಎಂದ ಮಾತ್ರಕ್ಕೆ ಅದನ್ನು ಒಂದು ಋಣಾತ್ಮಕ ಹಣೆಪಟ್ಟಿಯಾಗಿ ಕಟ್ಟಿಕೊಳ್ಳಬೇಕಿಲ್ಲ. ಆದರೆ ಇಲ್ಲಿ ಆಳವಾಗಿ ನಾವು ಗಮನಿಸಬೇಕಾದುದು ಇನ್ನೇನೋ ಇದೆ. ಸಾಧಾರಣವಾಗಿ ಈ ರೀತಿಯ ಸಂದರ್ಭಗಳಲ್ಲಿ

ಗಮನಿಸಬೇಕಾದಂತಹ ಅಂಶಗಳು

- **ನಿಮ್ಮ ಮೂರೂ ಜನ ಸಂಗಾತಿಗಳಲ್ಲಿ ಏನಾದರೂ ಸಾಮ್ಯತೆ ಇತ್ತಾ?**
- **ಅವರೆಲ್ಲರಲ್ಲೂ ಯಾವುದಾದರೂ ಹವ್ಯಾಸವೋ ಅಥವಾ ಅಭ್ಯಾಸವೋ ಸಾಮಾನ್ಯವಾಗಿ ಕಂಡುಬಂದಿತ್ತಾ?**
- **ಈ ಮೂರೂ ಜನರೂ ನಿಮ್ಮನ್ನು ಭೇಟಿ ಮಾಡಿ ಮಾತನಾಡಿಸಿದ ರೀತಿಯಲ್ಲಿ ಎಲ್ಲಾದರೂ ಸಾಮಾನ್ಯ ಅಂಶಗಳಿದ್ದುವೋ?**
- **ಈ ಮೂವರ ಜೊತೆಗಿನ ನಿಮ್ಮ ಸಂಬಂಧದಲ್ಲಿ ಯಾವುದಾದರೂ ಒಂದೇ ನಮೂನೆಯ ಪ್ಯಾಟರ್ನ್‌ಗಳು ಕಾಣಸಿಗುತ್ತವೆಯೋ?**

ಈ ಎಲ್ಲಾ ಪ್ರಶ್ನೆಗಳಿಗೂ 'ಹೌದು' ಎನ್ನುವ ಉತ್ತರ ನಿಮ್ಮದಾಗಿದ್ದರೆ, ಅದಕ್ಕೆ ಮೂಲ ಕಾರಣ ನಿಮ್ಮ ಬಾಲ್ಯದಲ್ಲಿ ಇರುತ್ತದೆ. ಎಷ್ಟೋ ಬಾರಿ ಆದರ್ಶಮಯ ಜೀವನವನ್ನು ನಡೆಸುವವರು ಕೆಲವೊಂದು ಸೂಕ್ಷ್ಮವಾದಂತಹ ಭಾವನಾತ್ಮಕ ವಿಚಾರಗಳಿಗೆ ಗಮನ ಕೊಡುವುದಿಲ್ಲ. ಉದಾಹರಣೆಗೆ, ನಮ್ಮ ಪಾರಂಪರಿಕ ಮೌಲ್ಯಗಳ ಪ್ರಕಾರ ತಂದೆಯಾದವನು ತನ್ನ ಪ್ರೀತಿಯನ್ನು ಮುಕ್ತವಾಗಿ ಹಂಚಿಕೊಳ್ಳಬಾರದು. ಸಾಧ್ಯವಾದಷ್ಟು ಉಗ್ರವಾಗಿಯೋ ಅಥವಾ ಗಂಭೀರವಾಗಿಯೋ ಇರಬೇಕು. ಹಾಗಾದಾಗ ಎಷ್ಟೋ ಬಾರಿ ಮಕ್ಕಳಿಗೆ ತಂದೆಯಿಂದ ನಿಜವಾಗಿಯೂ ಸಿಗಬೇಕಾದ ಮತ್ತು ಸಿಗಬಹುದಾದ ಪ್ರೀತಿ ಸಿಗದೇ ಹೋಗಿರುತ್ತದೆ.

ಅಥವಾ ಇದು ತಂದೆ - ತಾಯಿ ಇಬ್ಬರಿಂದಲೂ ಉಂಟಾದಂತಹ ಗಾಸಿಯೂ ಇರಬಹುದು. ಉದಾಹರಣೆಗೆ, ನಿಮ್ಮ ಬಾಲ್ಯದಲ್ಲಿ ಅವರುಗಳು ತಮ್ಮದೇ ಆದಂಥ ಜವಾಬ್ದಾರಿಗಳನ್ನು ನಿರ್ವಹಿಸುವ ಕಾರಣದಿಂದಾಗಿ ನಿಮಗೆ ಅವರಿಂದ ಎಷ್ಟು ಗಮನ (attention) ಬೇಕಿತ್ತೋ ಅಷ್ಟು ಕೊಟ್ಟಿಲ್ಲದಿದ್ದರೆ ಅದರಿಂದಾಗಿಯೂ ವಯಸ್ಕರಾದ ಮೇಲೆ ಯಾರು ನಮಗೆ ಗಮನ ಹೆಚ್ಚು ಕೊಡುತ್ತಾರೋ ಅವರೆಡೆಗೆ ನಾವು ಸೆಳೆಯಲ್ಪಡುತ್ತೇವೆ. ಎಷ್ಟೋ ಮಂದಿಗೆ ಬಾಲ್ಯದ ಇಂತಹ ಗಾಸಿ ಇದ್ದಂಥ ಸಂದರ್ಭದಲ್ಲಿ ಒಂದು ಸ್ವಲ್ಪ ಅಟೆಂಷನ್ ಸಿಕ್ಕಿದ ಕೂಡಲೇ, ಬರಡಾಗಿದ್ದ ಭೂಮಿಯ ಮೇಲೆ ನೀರು ಚಿಮುಕಿಸಿದಂತೆ ಭಾಸವಾಗುತ್ತದೆ ಮತ್ತು ಅಂಥ ವ್ಯಕ್ತಿಗಳ ಜೊತೆಗೆ ಸಂಬಂಧವನ್ನು ಬೆಳೆಸುತ್ತಾರೆ. ಆದರೆ, ಒಂದಷ್ಟು ಸಮಯವಾದ ಮೇಲೆ, ಅದೇ ವ್ಯಕ್ತಿಗಳು ಹಿಂಸೆ, ಕ್ರೌರ್ಯ, ಮೋಸ, ವಂಚನೆ ಇಂತಹ ಕೃತ್ಯಗಳನ್ನು ಮಾಡುತ್ತಾರೆ. ಆದರೆ, ತಮಗೆ ಆ ರೀತಿಯಲ್ಲಾದರೂ ಅಟೆಂಷನ್ (ಗಮನ) ಸಿಗುತ್ತದಲ್ಲಾ ಎಂಬ ಕಾರಣಕ್ಕೆ ಅಂತಹ ವ್ಯಕ್ತಿಗಳ ಜೊತೆ ಸಂಬಂಧವನ್ನು ಅನೇಕರು ಮುಂದುವರಿಸುತ್ತಾರೆ. ಮತ್ತೆ ಯಾವಾಗ ಸಂಬಂಧ ವಿಷಮಯವಾಗುತ್ತದೋ ಆವಾಗ ಅದರಿಂದ ಹೊರಬರುತ್ತಾರೆ. ಆದರೆ, ದುರದೃಷ್ಟವಶಾತ್ ಮತ್ತೆ ಅಂತಹುದೇ ವ್ಯಕ್ತಿಯ ಬಲೆಗೆ ಬೀಳುತ್ತಾರೆ. ಹೀಗೆ ಸರಣಿ ಸಂಬಂಧಗಳಲ್ಲಿ ಬೆಂದು ಹೋಗುತ್ತಾರೆ. ಆಮೇಲೆ ಪ್ರೀತಿ - ಮದುವೆ ಮುಂತಾದ ವಿಚಾರಗಳಲ್ಲಿ ನಂಬಿಕೆಯನ್ನೂ ಕಳೆದುಕೊಳ್ಳುತ್ತಾರೆ.



ಈ ಬರಹವನ್ನು ಓದುವಾಗ ನಿಮಗೆ ಎಲ್ಲಾದರೂ ನಿಮ್ಮದೇ ಕಥೆಯನ್ನು ಓದಿದ ಹಾಗೆ ಅನ್ನಿಸಿದರೆ, ಅಥವಾ ನಿಮ್ಮ ಕಥೆಗೆ ಬಹಳ ಹತ್ತಿರವಿದೆ ಅಂತ ಅನಿಸಿದರೆ, ಅದಕ್ಕೆ ಮೂಲ ಕಾರಣ ನಿಮ್ಮ ಬಾಲ್ಯಕಾಲದ ಗಾಸಿಗಳು. ಅವುಗಳನ್ನು ರಿಗ್ರೆಷನ್ ಥೆರಪಿಯ ಮೂಲಕವಷ್ಟೇ ತೆಗೆಯಬಹುದು. ಆದರೆ ಅಂಥ ಪ್ಯಾಟರ್ನ್ ಇದೆ ಅಂತಾದರೆ ಅದನ್ನು ಸರಿಪಡಿಸಿಕೊಳ್ಳುವುದು ಉತ್ತಮ. ಇಲ್ಲವಾದಲ್ಲಿ ಜೀವನ ಪರ್ಯಂತ ಕಷ್ಟವನ್ನೇ ಅನುಭವಿಸುವಂತಹ ಪರಿಸ್ಥಿತಿ ಎದುರಾಗಬಹುದು.

ಜೀವನದಲ್ಲಿರುವ ಭಾವನೆಗಳ ಭಾರವನ್ನು ಹಗುರ ಮಾಡಿದಷ್ಟೂ, ಉತ್ಸುಕತೆ ಮತ್ತು ಜೀವಂತಿಕೆ ಚಿಮ್ಮುತ್ತದೆ. ❖

ಹರಿಹರ, ಕೂಡಲಸಂಗಮ, ಆಲೂರಿನಲ್ಲಿ ಈಗಾಗಲೇ ಪೀಠ: ಇನ್ನೆರಡು ಪೀಠಗಳಿಗೂ ಸಜ್ಜು

ಪಂಚಮಸಾಲಿ: ಹಿಡಿತಕ್ಕೆ ತಿಕ್ಕಾಟ ಜೋರು

• ಬಸವರಾಜ ಹವಾಲ್ದಾರ



ಪಂಚಮಸಾಲಿ ಸಮಾಜ ದೊಡ್ಡದಿದೆ. 80 ಲಕ್ಷ ಜನಸಂಖ್ಯೆ ಇದೆ. ದೊಡ್ಡ ಜನಸಂಖ್ಯೆಗೆ ಮೂರು ಪೀಠ ಸಾಕಾಗಲ್ಲ. ಇನ್ನೂ ಎರಡು ಪೀಠ ಮಾಡುತ್ತೇವೆ

ಮುರುಗೇಶ ನಿರಾಣಿ ಮಾಜಿ ಸಚಿವ



ಏ.19 ರಂದು ಕರೆದಿದ್ದ ಸಭೆಯನ್ನು ಮಾಜಿ ಸಚಿವ ಎ.ಬಿ. ಪಾಟೀಲ, ಪ್ರಮುಖರ ಕೋರಿಕೆಯಂತೆ ಮುಂದೂಡಲಾಗಿದೆ. ಶೀಘ್ರದಲ್ಲೇ ಕೂಡಲ ಸಂಗಮದಲ್ಲಿ ಸಭೆ ಕರೆಯಲಾಗುವುದು

ವಿಜಯಾನಂದ ಕಾಶಪ್ಪನವರ, ಅಧ್ಯಕ್ಷ, ಅ.ಭಾರತ ಲಿಂಗಾಯತ ಪಂಚಮಸಾಲಿ ಟ್ರಸ್ಟ್



ವಿನಯ ಕುಲಕರ್ಣಿ, ಎಚ್.ಎಸ್. ಶಿವಶಂಕರ, ಹಿರಿಯ ನಾಯಕರ ಸಲಹೆ ಮೇರೆಗೆ ಕೂಡಲಸಂಗಮದಲ್ಲಿ ಕರೆದಿದ್ದ ರಾಜ್ಯಮಟ್ಟದ ಸಭೆ ಮುಂದೂಡಲಾಗಿದೆ.

ಬಸವಜಯಮೃತ್ಯುಂಜಯ ಸ್ವಾಮೀಜಿ, ಪಂಚಮಸಾಲಿ ಪೀಠಾಧ್ಯಕ್ಷ, ಕೂಡಲಸಂಗಮ

ಬಾಗಲಕೋಟೆ: ರಾಜ್ಯದ ಪ್ರಬಲ ಸಮುದಾಯವಾದ ಪಂಚಮಸಾಲಿ ಸಮಾಜದಲ್ಲಿ ಆಂತರಿಕ ಕಲಹ ತಾರಕಕ್ಕೇರಿದೆ. ಕೂಡಲಸಂಗಮ ಪೀಠ ಹಾಗೂ ಸಮಾಜದ ಮೇಲೆ ಹಿಡಿತ ಸಾಧಿಸಲು ಎರಡು ಗುಂಪುಗಳ ನಡುವೆ ತಿಕ್ಕಾಟ ಏರ್ಪಟ್ಟಿದೆ.

ಕೂಡಲಸಂಗಮ ಪೀಠದ ಭವಿಷ್ಯ ನಿರ್ಧರಿಸಲು ಏ.19ರಂದು ಅಖಿಲ ಭಾರತ ಪಂಚಮಸಾಲಿ ಸಮಾಜ ಟ್ರಸ್ಟ್ ಕರೆದಿದ್ದ ಸಭೆ, ಏ.20 ರಂದು ಪೀಠಾಧ್ಯಕ್ಷ ಬಸವಜಯಮೃತ್ಯುಂಜಯ ಸ್ವಾಮೀಜಿ ಕರೆದಿದ್ದ ಸಭೆ ತಾತ್ಕಾಲಿಕವಾಗಿ ಮುಂದೂಡಲ್ಪಟ್ಟಿವೆ. ಆದರೆ, ಸಮಾಜದ ನಾಯಕರೊಳಗಿನ ಅಸಮಾಧಾನ ಶಮನವಾಗಿಲ್ಲ.

'ಪಂಚಮಸಾಲಿ ಸಮಾಜಕ್ಕೆ 2ಎ ಮೀಸಲಾತಿ ಕೊಡಬೇಕು ಎಂಬ ಹೋರಾಟವು ರಾಜಕೀಯ ಮೇಲಾಟಕ್ಕೆ ಬಳಕೆ ಆಗುತ್ತಿದೆ. ಬಿಜೆಪಿ ಸರ್ಕಾರವಿದ್ದಾಗ, ಕಾಂಗ್ರೆಸ್ ಶಾಸಕರು ಹೋರಾಟದ ನೇತೃತ್ವ ವಹಿಸಿದ್ದರು. ಬಿಜೆಪಿ ಶಾಸಕರು ಅಂತರ ಕಾಯ್ದುಕೊಂಡಿದ್ದರು. ಈಗ ಕಾಂಗ್ರೆಸ್ ಸರ್ಕಾರ ಆಡಳಿತವಧಿಯಲ್ಲಿ ಬಿಜೆಪಿ ಶಾಸಕರು ಹೋರಾಟದ ಮುಂಚೂಣಿಯಲ್ಲಿದ್ದರೆ, ಕಾಂಗ್ರೆಸ್ ಶಾಸಕರು ಅಂತರ ಕಾಯ್ದುಕೊಂಡಿದ್ದಾರೆ' ಎಂಬ ಆರೋಪವಿದೆ.

ಬೆಳಗಾವಿಯಲ್ಲಿ ನಡೆದ ಚಳಿಗಾಲ ಅಧಿವೇಶನ ಸಂದರ್ಭದಲ್ಲಿ ಮೀಸಲಾತಿಗಾಗಿ ಹೋರಾಟಕ್ಕಿಳಿದಿದ್ದ ಪಂಚಮಸಾಲಿ ಹೋರಾಟಗಾರರ ಮೇಲೆ ಲಾಠಿ ಪ್ರಹಾರವಾಗಿತ್ತು. ಅಲ್ಲಿಂದಲೇ ಸಮಾಜದೊಳಗೆ ತಿಕ್ಕಾಟ ತೀವ್ರವಾಗಿತ್ತು. ಶಾಸಕ ಬಸನಗೌಡ ಪಾಟೀಲ ಯತ್ನಾಳ ಅವರ ಉಚ್ಚಾಟನೆಯೊಂದಿಗೆ ಅದು ತಾರಕಕ್ಕೇರಿದೆ.

ಶಾಸಕ ಬಸನಗೌಡ ಯತ್ನಾಳ ಅವರನ್ನು ಬಿಜೆಪಿಯಿಂದ ಉಚ್ಚಾಟಿಸಿದ್ದು ಖಂಡಿಸಿ ಕೂಡಲಸಂಗಮ ಪೀಠದ ಬಸವಜಯಮೃತ್ಯುಂಜಯ ಸ್ವಾಮೀಜಿ ಬಹಿರಂಗವಾಗಿ ಹೋರಾಟದ ಹೇಳಿಕೆ ನೀಡುತ್ತಿದ್ದಾರೆ. ಇದಕ್ಕೆ ಪೂರಕವಾಗಿ ಸ್ವಾಮೀಜಿ ಪರ, ವಿರೋಧ ಹೇಳಿಕೆಗಳು ವ್ಯಕ್ತವಾಗುತ್ತಿವೆ. ಪೀಠದಿಂದ ಅವರನ್ನು ಕೆಳಗೆ ಇಳಿಸುವ ಯತ್ನವೂ ನಡೆದಿವೆ.

'ಪೀಠ ಸ್ಥಾಪನೆ ಹೊಸದಲ್ಲ'

ಪಂಚಮಸಾಲಿ ಸಮಾಜದ ಮೊದಲ ಪೀಠ ಹರಿಹರದಲ್ಲಿದೆ. ರಾಜಕೀಯ ಮೇಲಾಟದ ಕಾರಣಕ್ಕೆ ಕೂಡಲಸಂಗಮದಲ್ಲಿ ಎರಡನೇ ಪೀಠ ಆರಂಭವಾಯಿತು. ಎರಡನೇ ಪೀಠದ ಸ್ವಾಮೀಜಿ ತಮಗೆ ಸಮರ್ಪಕವಾಗಿ ಸ್ಪಂದಿಸಲಿಲ್ಲ ಎಂಬ ಕಾರಣಕ್ಕೆ ಕೆಲ ರಾಜಕಾರಣಿಗಳು ಬಾಗಲಕೋಟೆ ಜಿಲ್ಲೆಯ ಜಮಖಂಡಿ ತಾಲ್ಲೂಕಿನ ಆಲಗೂರಿನಲ್ಲಿ ಮೂರನೇ ಪೀಠ ಸ್ಥಾಪಿಸಿದರು.

'ಕೂಡಲಸಂಗಮ ಪೀಠದಿಂದ ಬಸವಜಯಮೃತ್ಯುಂಜಯ ಸ್ವಾಮೀಜಿ ಅವರನ್ನು ಕೆಳಗಿಳಿಸಿದರೆ, ಅಲ್ಲಿಯೇ ಜಾಗ ತೆಗೆದುಕೊಂಡು ಮತ್ತೊಂದು ಪೀಠ ಸ್ಥಾಪಿಸಲಾಗುವುದು' ಎಂದು ಮಾಜಿ ಸಚಿವ ಸಿ.ಸಿ. ಪಾಟೀಲ ಎಚ್ಚರಿಸಿದ್ದಾರೆ.

ಈರುಳ್ಳಿ ಬೆಲೆ ಕುಸಿತ: ಕುರಿ ಮೇಯಿಸಿ ಬೆಳೆ ಸಂಪೂರ್ಣ ನಾಶಪಡಿಸಿದ ರೈತ



ಹೂವಿನಹಡಗಲಿ ತಾಲ್ಲೂಕು ಉತ್ತಂಗಿಯ ರೈತ ಶರಣಪ್ಪ ಮೂಲಿಮನಿ ಅವರು ಹೊಲದಲ್ಲಿ ಕುರಿಗಳನ್ನು ಮೇಯಿಸಿ ಈರುಳ್ಳಿ ಫಸಲನ್ನು ನಾಶಪಡಿಸಿದರು

ಪ್ರಜಾವಾಣಿ ವಾರ್ತೆ

ಹೂವಿನಹಡಗಲಿ (ವಿಜಯನಗರ ಜಿಲ್ಲೆ): ಈರುಳ್ಳಿ ಬೆಲೆ ಕುಸಿತದಿಂದ ಕಂಗಾಲಾದ ತಾಲ್ಲೂಕಿನ ಉತ್ತಂಗಿಯ ರೈತ ಶರಣಪ್ಪ ಮೂಲಿಮನಿ ಅವರು ಮೂರು ಎಕರೆ ಹೊಲದಲ್ಲಿ ಕುರಿಗಳನ್ನು ಮೇಯಿಸಿ, ಕಟಾವು ಹಂತದ ಈರುಳ್ಳಿ ಫಸಲನ್ನು ನಾಶಪಡಿಸಿದ್ದಾರೆ.

ಬೆಂಗಳೂರು ಮಾರುಕಟ್ಟೆಯಲ್ಲಿ ಈರುಳ್ಳಿ ಬೆಲೆ ಕ್ವಿಂಟಲ್‌ಗೆ ₹1,000ದಿಂದ ₹800 ಇದೆ. ಈರುಳ್ಳಿ ಕಿತ್ತು, ಗ್ರೇಡಿಂಗ್ ಮಾಡಿ ಮಾರುಕಟ್ಟೆಗೆ ಸಾಗಿಸಲು 50 ಕೆ.ಜಿಯ ಪ್ರತಿ ಪ್ಯಾಕೆಟ್‌ಗೆ ₹300ರಿಂದ ₹400 ಖರ್ಚು ತಗುಲುತ್ತದೆ. ಕಟಾವು, ಸಾಗಣೆ ವೆಚ್ಚದ ಹಣವೂ ಸಿಗದ ಕಾರಣ ರೈತರು ಬೆಳೆ ನಾಶಕ್ಕೆ ಮುಂದಾಗಿದ್ದಾರೆ.

'ಮೂರು ಎಕರೆಯಲ್ಲಿ ಈರುಳ್ಳಿ ಬೆಳೆಯಲು ₹1.30 ಲಕ್ಷ ಖರ್ಚು ಮಾಡಿರುವೆ. ಸದ್ಯ ಮಾರುಕಟ್ಟೆಯಲ್ಲಿ ಬೆಲೆ ಕುಸಿದಿದ್ದು, ಮಾರಾಟದಿಂದ ಬಂದ ಹಣ ಕಟಾವು ಖರ್ಚಿಗೂ ಸಾಲುವುದಿಲ್ಲ' ಎಂದು ಶರಣಪ್ಪ 'ಪ್ರಜಾವಾಣಿ'ಗೆ ತಿಳಿಸಿದರು.

ಹಸುಳೆ ಸಾವು: ವೈದ್ಯರ ನಿರ್ಲಕ್ಷ್ಯ ಆರೋಪ

ಪ್ರಜಾವಾಣಿ ವಾರ್ತೆ

ಕಾಗವಾಡ (ಬೆಳಗಾವಿ ಜಿಲ್ಲೆ): 'ತಾಲ್ಲೂಕಿನ ಮೋಳೆ ಗ್ರಾಮದ ಸರ್ಕಾರಿ ಆಸ್ಪತ್ರೆ ವೈದ್ಯರು ಮತ್ತು ಶುಶ್ರೂಷಕರ ಹೆಚ್ಚಿನ ಪ್ರಮಾಣದಲ್ಲಿ ಡೋಸ್ ನೀಡಿ, ನಿರ್ಲಕ್ಷ್ಯ ತೋರಿದ ಪರಿಣಾಮ ಒಂದೂವರೆ ತಿಂಗಳ ಹಸುಗೂಸು ಮೃತಪಟ್ಟಿದೆ' ಎಂದು ಆರೋಪಿಸಿ ಹಸುಳೆಯ ಪಾಲಕರು ಅಥಣಿ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ್ದಾರೆ.

'ಅಥಣಿ ತಾಲ್ಲೂಕಿನ ಭರಮಣಕೊಡಿ ದುಂಡಪ್ಪ ಬೇವನೂರ ಅವರ ಮಗುವಿಗೆ ಗುರುವಾರ ಕಾಗವಾಡ ತಾಲ್ಲೂಕಿನ ಮೋಳೆ ಪ್ರಾಥಮಿಕ ಆರೋಗ್ಯ ಕೇಂದ್ರದ ಶುಶ್ರೂಷಕರು ಪೋಲಿಯೊಗೆ ಸಂಬಂಧಿಸಿದಂತೆ ಅಗತ್ಯ ಲಸಿಕೆ ನೀಡಿದ್ದರು. ರಾತ್ರಿ ಮಗುವಿಗೆ ಜ್ವರ ಕಾಣಿಸಿದ್ದರಿಂದ ಅಥಣಿಯ ಖಾಸಗಿ ಆಸ್ಪತ್ರೆಗೆ ದಾಖಲಿಸಿದ್ದರು. ಮಗುವಿನ ಸ್ಥಿತಿ ಹದಗೆಟ್ಟಿದ್ದಕ್ಕೆ ಅಥಣಿ ತಾಲ್ಲೂಕು ಆಸ್ಪತ್ರೆಗೆ ದಾಖಲಿಸಿದ್ದರು. ಅಷ್ಟರಲ್ಲಿ ಮಗು ಮೃತಪಟ್ಟಿದೆ' ಎಂದು ಪೊಲೀಸರು ತಿಳಿಸಿದ್ದಾರೆ.

'ಮಗುವಿಗೆ ಹೃದಯ ತೊಂದರೆ ಇತ್ತು. ಆದರೂ ಮಗುವಿಗೆ ಲಸಿಕೆ ನೀಡಬಹುದು. ಲಸಿಕೆ ನೀಡಿದಾಗ ಸ್ವಲ್ಪ ಮಟ್ಟಿಗೆ ಜ್ವರ ಬರುತ್ತವೆ. ಈಗಾಗಲೇ ನಾಲ್ಕೈದು ಮಕ್ಕಳಿಗೆ ನೀಡಲಾಗಿದೆ. ಏನೂ ತೊಂದರೆ ಆಗಿಲ್ಲ. ಮಗುವಿಗೆ ರಾತ್ರಿ ಜ್ವರ ಹೆಚ್ಚಾದರೂ ಆಸ್ಪತ್ರೆಗೆ ತೋರಿಸದ ಪಾಲಕರು, ಬೆಳಿಗ್ಗೆ ಅಥಣಿ ಖಾಸಗಿ ಆಸ್ಪತ್ರೆಗೆ ತೋರಿಸಿದ್ದಾರೆ. ಬಳಿಕ ಸರ್ಕಾರಿ ಆಸ್ಪತ್ರೆಗೆ ಚಿಕಿತ್ಸೆ ಮಾಡಲು ಮುಂದಾಗಿದ್ದು ಆಸ್ಪತ್ರೆಗೆ ಬರುವುದಕ್ಕಿಂತ ಮೊದಲೇ ಮಗು ಸಾವನಪ್ಪಿತ್ತು' ಎಂದು ಅಥಣಿ ತಾಲ್ಲೂಕು ಆರೋಗ್ಯ ಅಧಿಕಾರಿ ಡಾ.ಬಸಗೌಡ ಕಾಗೆ ತಿಳಿಸಿದ್ದಾರೆ.



ಜಾತ್ರಾ ಸಂಭ್ರಮ... ಬಾಗಲಕೋಟೆ ಜಿಲ್ಲೆಯ ಕೂಡಲಸಂಗಮದ ಸಂಗಮೇಶ್ವರ ರಥೋತ್ಸವ ಶುಕ್ರವಾರ ವಿಜೃಂಭಣೆಯಿಂದ ಜರುಗಿತು

ವಕ್ಫ್ ತಿದ್ದುಪಡಿ ವಿರುದ್ಧ ತೀವ್ರ ಆಕ್ರೋಶ

ಮಂಗಳೂರು: ಅಡ್ಯಾರ್ ಷಾ ಮೈದಾನದಲ್ಲಿ ಜನಸಾಗರ; ಮೊಳಗಿದ 'ಆಜಾದಿ' ಘೋಷಣೆಗಳು

ಪ್ರಜಾವಾಣಿ ವಾರ್ತೆ

ಮಂಗಳೂರು: ಮೊಳಗಿದ 'ಆಜಾದಿ' ಘೋಷಣೆಗಳು, ಹಾರಾಡಿದ ರಾಷ್ಟ್ರಧ್ವಜಗಳು, ಧಾರ್ಮಿಕ ಮುಖಂಡರಿಂದ ಕೇಳಿಬಂದ ಭರವಸೆಯ ನುಡಿಗಳು... ವಕ್ಫ್ ಕಾಯ್ದೆ ತಿದ್ದುಪಡಿ ವಿರೋಧಿಸಿ ಕರ್ನಾಟಕ ಉಲಮಾ ಒಕ್ಕೂಟ ನಗರ ಹೊರವಲಯದ ಅಡ್ಯಾರ್ ಷಾ ಗಾರ್ಡನ್‌ನಲ್ಲಿ ಶುಕ್ರವಾರ ಆಯೋಜಿಸಿದ್ದ ಪ್ರತಿಭಟನಾ ಸಮಾವೇಶ ಇದೆಲ್ಲದಕ್ಕೂ ಸಾಕ್ಷಿಯಾಯಿತು.

ದುವಾದೊಂದಿಗೆ ಆರಂಭಗೊಂಡು ಕ್ರಾಂತಿಗೀತೆ, ಪ್ರಮಾಣ ವಚನ ಮತ್ತು ಠರಾವು ಮಂಡನೆಯೊಂದಿಗೆ ಮುಕ್ತಾಯ ಕಂಡ ಸಮಾವೇಶದಲ್ಲಿ ತಿದ್ದುಪಡಿ ಕಾಯ್ದೆ ಜಾರಿಗೊಳಿಸಲು ಬಿಡುವುದೇ ಇಲ್ಲ ಎಂಬ ಸಂದೇಶ ರವಾನಿಸಲಾಯಿತು. ಸುಪ್ರಿಂ ಕೋರ್ಟ್‌ನಿಂದ ಮುಸ್ಲಿಮರಿಗೆ ಪೂರಕವಾದ ತೀರ್ಪು ಬರುವ ಭರವಸೆ ಇದೆ ಎಂದು ಹೇಳಿದ ಧಾರ್ಮಿಕ ಮುಖಂಡರು, ಕೇಂದ್ರ ಸರ್ಕಾರ ಮತ್ತು ಪ್ರಧಾನಿ ನರೇಂದ್ರ ಮೋದಿ ವಿರುದ್ಧ ಪರೋಕ್ಷ ವಾಗ್ದಾಳಿ ನಡೆಸಿದರು.

ಉಲಮಾಗಳ ಒಕ್ಕೂಟದ ಕೋಶಾಧಿಕಾರಿ ಎಂ.ಕೆ ಶಾಫಿ ಸಅದಿ ಮಾತನಾಡಿ, ವಕ್ಫ್ ತಿದ್ದುಪಡಿ ಕಾಯ್ದೆ ಅವೈಜ್ಞಾನಿಕ ಮತ್ತು ಅಸಾಂವಿಧಾನಿಕವಾಗಿದ್ದು ಮುಸ್ಲಿಮರ ಕುರುಹುಗಳನ್ನೇ ನಾಮಾವಶೇಷ ಮಾಡುವ ಹುನ್ನಾರ ಅದರಲ್ಲಿ ಅಡಗಿದೆ. ಆದ್ದರಿಂದ ಸುಪ್ರಿಂ ಕೋರ್ಟ್ ಆದೇಶ ಹೊರಬೀಳುವ ವರೆಗೆ ಪ್ರತಿಭಟನೆಯ ಧ್ವನಿ ಮೊಳಗುತ್ತಲೇ ಇರಲಿದೆ ಎಂದರು.

ಯು.ಕೆ ಅಬ್ದುಲ್ ಅಝೀಝ್ ದಾರಿಮಿ ಚೊಕ್ಕಬೆಟ್ಟು ಅವರು, 'ಪಂಕ್ಚರ್ ಹಾಕುವವರು ಎಂದು ಮುಸ್ಲಿಮರನ್ನು ಲೇವಡಿ ಮಾಡುವವರು ಈಗ ಅಂಬೇಡ್ಕರ್ ಕೊಟ್ಟ ಸಂವಿಧಾನವನ್ನೇ ಪಂಕ್ಚರ್ ಮಾಡಲು ಹೊರಟಿದ್ದಾರೆ. ತಮ್ಮ ವಿರುದ್ಧದ ಸಂಚು ಹಿಮ್ಮೆಟ್ಟಿಸುವ ತಾಕತ್ತು ಮುಸ್ಲಿಮರಿಗಿದೆ. ಎಷ್ಟು ದಾಳಿ ಮಾಡಿದರೂ ನಾವು ಮುನ್ನುಗ್ಗುತ್ತೇವೆ. ಎಷ್ಟು ಆಳಕ್ಕೆ ತಳ್ಳಿದರೂ ಎದ್ದು ಬರುತ್ತೇವೆ. ಲಾಭದ ದೃಷ್ಟಿಯಿಂದ ಅರಬ್ ದೊರೆಗಳನ್ನು ಕೆಂಪು ಹಾಸು ಹಾಕಿ ಸ್ವಾಗತಿಸುವ ಸರ್ಕಾರ ಇದೇ ನೆಲದ ಮುಸಲ್ಮಾನರು ಮಸೀದಿ ಮೇಲೆ ನಮಾಜ್ ಮಾಡುವಾಗ ಡ್ರೋನ್ ಹಾರಿಸಿ ಕಣ್ಣಿಡುತ್ತದೆ. ಇದು ಯಾಕೆ' ಎಂದು ಪ್ರಶ್ನಿಸಿದರು.

ಪ್ರಾಸ್ತಾವಿಕವಾಗಿ ಮಾತನಾಡಿದ ಒಕ್ಕೂಟದ ಪ್ರಧಾನ ಕಾರ್ಯದರ್ಶಿ ಉಸ್ಮಾನುಲ್ ಫೈಜಿ ತೋಡಾರ್, 'ಇದು ಮುಸ್ಲಿಮರನ್ನು ಪ್ರತ್ಯೇಕವಾಗಿಸುವ ಕಾಯ್ದೆ. ವಕ್ಫ್ ಹೇಗಿರಬೇಕು ಎಂಬುದನ್ನು ನಿರ್ಧರಿಸುವ ಹಕ್ಕು ಇರುವುದು ಮುಸ್ಲಿಂ ಪಂಡಿತರಿಗೆ ಮಾತ್ರ. ಅದರಲ್ಲಿ ಮೂಗು ತೂರಿಸಲು ಸರ್ಕಾರಕ್ಕೆ ಅವಕಾಶವಿಲ್ಲ' ಎಂದರು.

'ಕಾಯ್ದೆ ತಿದ್ದುಪಡಿಗೆ ಸಂಬಂಧಿಸಿದ ವಾದ ಆಲಿಸುವಾಗ ಸುಪ್ರಿಂ ಕೋರ್ಟ್ ಕೇಳಿರುವ ಪ್ರಶ್ನೆಗಳಿಗೆ ಉತ್ತರಿಸಲು ಸರ್ಕಾರಕ್ಕೆ ಸಾಧ್ಯವಾಗಲಿಲ್ಲ. ಇದರಿಂದ ಭರವಸೆ ಮೂಡಿದೆ. ಸುಪ್ರೀಂ ಕೋರ್ಟ್‌ನಿಂದ ಪೂರಕ ಆದೇಶ ಹೊರಬೀಳುವ ವಿಶ್ವಾಸವಿದೆ' ಎಂದು ಅವರು ಹೇಳಿದರು.

ದಕ್ಷಿಣ ಕನ್ನಡ ಜಿಲ್ಲಾ ಖಾಝಿ ತ್ವಾಖಾ ಅಹ್ಮದ್ ಮುಸ್ಲಿಯಾರ್, ಉಡುಪಿ ಸಂಯುಕ್ತ ಖಾಝಿ ಅಬ್ದುಲ್ ಹಮೀದ್ ಮುಸ್ಲಿಯಾರ್ ಮಾಣಿ, ಒಕ್ಕೂಟದ ಅಧ್ಯಕ್ಷ ಇಸ್ಮಾಯಿಲ್ ತಂಙಳ್, ದಕ್ಷಿಣ ಕನ್ನಡ ಜಿಲ್ಲಾ ವಕ್ಫ್ ಮಂಡಳಿ ಸದಸ್ಯ ಅಬ್ದುಲ್ ನಾಜಿರ್ ಲಕ್ಕಿ ಸ್ಟಾರ್, ಎಂಎಸ್‌ಎಂ ಜೈನಿ ಅಬ್ದುಲ್ ರಶೀದ್, ಅಬ್ದುಲ್ ಅಝೀಜ್ ಧಾರಿಮಿ ಚೊಕ್ಕಬೆಟ್ಟು ಮತ್ತಿತರರು ಪಾಲ್ಗೊಂಡಿದ್ದರು.

'ಮಮತಾಗಿರುವ ಧೈರ್ಯ ಇತರರಿಗೆ ಯಾಕಿಲ್ಲ?'

ಉಲಮಾಗಳ ಒಕ್ಕೂಟದ ನಿರ್ದೇಶಕ ಹಾಗೂ ಬಂಬ್ರಾಣ ಉಸ್ತಾದ್ ಅಬ್ದುಲ್ ಖಾದರ್ ಬಿಜೆಪಿಯೇತರ ಸರ್ಕಾರಗಳು ಆಡಳಿತದಲ್ಲಿರುವ ರಾಜ್ಯಗಳ ಪೈಕಿ ಪಶ್ಚಿಮ ಬಂಗಾಳದ ಮಮತಾ ಬ್ಯಾನರ್ಜಿ ಅವರಿಗೆ ಇರುವಷ್ಟು ಧೈರ್ಯ ಇತರ ಯಾರಿಗೂ ಇಲ್ಲ ಎಂದರು.

'ಜಾತ್ಯತೀತ ನಿಲುವುಗಳಿಗೆ ಧಕ್ಕೆಯಾದಾಗಲೆಲ್ಲ ಮಮತಾ ಬ್ಯಾನರ್ಜಿ ತಮ್ಮ ರಾಜ್ಯದಲ್ಲಿ ಅದನ್ನು ಜಾರಿಗೆ ತರಲು ಆಗುವುದಿಲ್ಲ ಎಂದಿದ್ದಾರೆ. ವಕ್ಫ್ ವಿಷಯದಲ್ಲೂ ಅದೇ ನಿಲುವು ತಾಳಿದ್ದಾರೆ. ಅವರ ಹಾಗೆ ಇತರ ಮುಖ್ಯಮಂತ್ರಿಯವರು ನುಡಿದಿದ್ದರೆ ಭರವಸೆ ಉಳಿಸಿಕೊಳ್ಳಬಹುದಿತ್ತು' ಎಂದು ಅಬ್ದುಲ್ ಖಾದರ್ ಹೇಳಿದರು.

ತ್ರಿವಳಿ ತಲಾಕ್ ಸೇರಿದಂತೆ ಹಲವು ವಿಷಯಗಳಲ್ಲಿ ಈಗಿನ ಕೇಂದ್ರ ಸರ್ಕಾರ ಮುಸ್ಲಿಮರನ್ನು ಗುರಿಯಾಗಿಸಿಕೊಂಡಿದೆ. ಅದರ ಮುಂದುವರಿದ ಭಾಗವೇ ವಕ್ಫ್ ಕಾಯ್ದೆ ತಿದ್ದುಪಡಿ ಎಂದರು.

ಭಟ್ಕಳದಲ್ಲಿ ಬೃಹತ್ ಪ್ರತಿಭಟನೆ

ಪ್ರಜಾವಾಣಿ ವಾರ್ತೆ

ಭಟ್ಕಳ (ಉತ್ತರ ಕನ್ನಡ ಜಿಲ್ಲೆ): ವಕ್ಫ್ ಕಾಯ್ದೆಗೆ ತಿದ್ದುಪಡಿ ತಂದಿರುವ ಕೇಂದ್ರ ಸರ್ಕಾರದ ಕ್ರಮವನ್ನು ಖಂಡಿಸಿ ಮಜ್ಲಿಸೆ ಇಸ್ಲಾಹ್-ವ-ತಂಜೀಮ್ ಸಂಸ್ಥೆಯ ನೇತೃತ್ವದಲ್ಲಿ ಶುಕ್ರವಾರ ಪಟ್ಟಣದ ಆಡಳಿತ ಸೌಧದ ಆವರಣದಲ್ಲಿ ಬೃಹತ್ ಪ್ರತಿಭಟನೆ ನಡೆಯಿತು.

ಶುಕ್ರವಾರದ ನಮಾಜ್ ಬಳಿಕ ಆಡಳಿತ ಸೌಧದ ಆವರಣದಲ್ಲಿ ಸೇರಿದ ಮುಸ್ಲಿಂ ಸಮುದಾಯದ ಜನರು ವಕ್ಫ್ ಕಾಯ್ದೆಗೆ ತಿದ್ದುಪಡಿ ತಂದಿರುವ ಸರ್ಕಾರದ ಕ್ರಮವನ್ನು ಖಂಡಿಸಿ, ಭಿತ್ತಿ ಫಲಕಗಳನ್ನು ಪ್ರದರ್ಶಿಸಿದರು.

ತಂಜೀಮ್ ಅಧ್ಯಕ್ಷ ಇನಾಯತುಲ್ಲಾ ಶಾಬಂದ್ರಿ ಮಾತನಾಡಿ, 'ವಕ್ಫ್ ಆಸ್ತಿಗಳ ಮೇಲೆ ಸರ್ಕಾರದ ನಿಯಂತ್ರಣ ಹೇರುವ ಕಾಯ್ದೆ ಸಂವಿಧಾನ ವಿರೋಧಿ. ಮುಸ್ಲಿಂ ಸಮುದಾಯದ ಧಾರ್ಮಿಕ ಸ್ವಾತಂತ್ರ್ಯಕ್ಕೆ ಧಕ್ಕೆ ತರಲಾಗಿದೆ.

ವಕ್ಫ್ ತಿದ್ದುಪಡಿ ಕಾಯ್ದೆಯಿಂದ ಮುಸ್ಲಿಂ ಸಮುದಾಯಕ್ಕೆ ತೀವ್ರ ಹಾನಿಯಾಗಲಿದೆ. ಇದು ಮೂಲಭೂತ ಹಕ್ಕು ಕಸಿಯುವ ಪ್ರಯತ್ನ

ಜೆ.ಡಿ.ನಾಯ್ಕ ಮಾಜಿ ಶಾಸಕ

ಈ ಕಾಯ್ದೆಯನ್ನು ಒಪ್ಪಿಕೊಳ್ಳಲು ಸಾಧ್ಯವಿಲ್ಲ. ಜನವಿರೋಧಿ ಕಾಯ್ದೆಯನ್ನು ಕೇಂದ್ರ ಸರ್ಕಾರ ಕೂಡಲೇ ಹಿಂಪಡೆಯಬೇಕು' ಎಂದರು.

ಅಖಿಲ ಭಾರತ ಮುಸ್ಲಿಂ ವೈಯಕ್ತಿಕ ಕಾನೂನು ಮಂಡಳಿಯ ಪ್ರಧಾನ ಕಾರ್ಯದರ್ಶಿ ಅಬ್ದುಲ್ ರಕೀಬ್ ಎಂ.ಜೆ, 'ಹೋರಾಟವು ಯಾವುದೇ ಜಾತಿ, ಧರ್ಮ, ಅಥವಾ ರಾಜಕೀಯ ಪಕ್ಷದ ವಿರುದ್ಧವಲ್ಲ. ಇದು ಕೇವಲ ಒಂದು ಕಾನೂನಿನ ವಿರುದ್ಧವಾಗಿದೆ' ಎಂದರು. ಮಾಜಿ ಶಾಸಕ ಜೆ.ಡಿ.ನಾಯ್ಕ, ವಕ್ಫ್ ತಿದ್ದುಪಡಿ ವಿರೋಧಿ ಹೋರಾಟ ಸಮಿತಿ ಸಂಚಾಲಕ ಮೌಲಾನ ಮುಹಮ್ಮದ್ ಇಲಿಯಾಸ್ ನದ್ವಿ ಮತ್ತಿತರರು ಇದ್ದರು.

ಸಮಸ್ಯೆಗಳು ಜಟಿಲ: ಆತಂಕವೂ ಇಲ್ಲ, ಅವಸರವೂ ಬೇಕಿಲ್ಲ –ಸಚಿವ ಸತೀಶ ಜಾರಕಿಹೊಳಿ

ಜಾತಿ ಗಣತಿ: ನಿರ್ಧಾರ ಒಂದು ವರ್ಷ ತಡ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆ (ಜಾತಿ ಜನ ಗಣತಿ) ಕುರಿತು ಕರೆಯಲಾಗಿದ್ದ ಸಂಪುಟ ಸಭೆ ನಿರ್ದಿಷ್ಟ ತೀರ್ಮಾನವಿಲ್ಲದೆ ಮುಕ್ತಾಯವಾಗಿತ್ತು. ಈ ಬಗ್ಗೆ ಮಾತನಾಡಿದ ಕೆಲವು ಸಚಿವರು, ಸರ್ಕಾರ ಅಂತಿಮ ನಿರ್ಧಾರ ತೆಗೆದುಕೊಳ್ಳಲು ಇನ್ನಷ್ಟು ಸಮಯ ಹಿಡಿಯಲಿದೆ ಎಂಬ ಸುಳಿವು ನೀಡಿದ್ದಾರೆ.



ಸತೀಶ ಜಾರಕಿಹೊಳಿ

ಸುದ್ದಿಗಾರರ ಜತೆ ಮಾತನಾಡಿದ ಲೋಕೋಪಯೋಗಿ ಸಚಿವ ಸತೀಶ ಜಾರಕಿಹೊಳಿ, ಜಾತಿ ಜನ ಗಣತಿ ತ್ವರಿತವಾಗಿ ನಿರ್ಧಾರ ಮಾಡುವ ವಿಷಯವಲ್ಲ. ಸಮಸ್ಯೆಗಳು ಜಟಿಲವಾಗಿವೆ. ಗಣತಿ ವಿಚಾರದಲ್ಲಿ ಆತಂಕವೂ ಇಲ್ಲ, ಅವಸರವೂ ಬೇಕಿಲ್ಲ. ಸಮಗ್ರವಾಗಿ ಚರ್ಚೆ ನಡೆದು, ತೀರ್ಮಾನಕ್ಕೆ ಬರಲು ಒಂದು ವರ್ಷವಾದರೂ ಬೇಕಾಗುತ್ತದೆ ಎಂದರು.

ಸಂಪುಟ ಸಭೆಯಲ್ಲಿ ಯಾರೂ ವಾಗ್ವಾದ ನಡೆಸಿಲ್ಲ. ಅವರವರ ಸಮುದಾಯಗಳ ಅನಿಸಿಕೆಗಳನ್ನು ಮುಕ್ತವಾಗಿ ಹಂಚಿಕೊಂಡಿದ್ದಾರೆ. ಕೆಲ ಜಾತಿಗಳ ಸಂಖ್ಯೆ ಕಡಿಮೆ ನಮೂದಾಗಿದೆ. ವಾಸ್ತವದಲ್ಲಿ ಹೆಚ್ಚಿದೆ ಎನ್ನುವುದು ಅವರ ವಾದ. ಮೀಸಲಾತಿಗಾಗಿ ವ್ಯತ್ಯಾಸ ಮಾಡಿಕೊಂಡಿರುವ ಸಾಧ್ಯತೆಯೂ ಇದೆ. ಕೆಲವರು ಮೀಸಲಾತಿಗಾಗಿ ನೈಜ ಜಾತಿ ಮರೆಮಾಚುವ ಕೆಲಸ ಮಾಡಿರಬಹುದು. ಇದು ಆಯೋಗದ ಲೋಪವಲ್ಲ. ನಮೂದಿಸಿದ ಸ್ಥಾನ ಬದಲಾವಣೆಗೆ ಅವಕಾಶ ಮಾಡಿಕೊಟ್ಟು, ಇಂತಹ ಎಲ್ಲ ಸಮಸ್ಯೆಗಳನ್ನು ಬಗೆಹರಿಸಿಕೊಂಡು ಖಚಿತ ನಿರ್ಧಾರ ಮಾಡಲಾಗುತ್ತದೆ ಎಂದರು.

ಆಹಾರ ಸಚಿವ ಕೆ.ಎಚ್. ಮುನಿಯಪ್ಪ ಮಾತನಾಡಿ, ಲಿಂಗಾಯತ–ಒಕ್ಕಲಿಗ ಸೇರಿದಂತೆ ಯಾವ ಜಾತಿ, ಸಮುದಾಯಗಳಿಗೂ ಅನ್ಯಾಯವಾಗದಂತೆ ಎಲ್ಲರೂ ಒಪ್ಪುವ ತೀರ್ಮಾನವನ್ನು ಸರ್ಕಾರ ಮಾಡಲಿದೆ ಎಂದರು.

'ಯಾವ ಸಚಿವರೂ ವಿರೋಧಿಸಿಲ್ಲ'



ಜಾತಿ ಗಣತಿ ಕುರಿತು ಸಂಪುಟ ಸಭೆಯಲ್ಲಿ ಯಾರೂ ವಿರೋಧ ಮಾಡಿಲ್ಲ. ವಾಗ್ವಾದವೂ ನಡೆದಿಲ್ಲ. ಅದೆಲ್ಲ ಊಹಾಪೋಹ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.ಸುದ್ದಿಗಾರರ ಜತೆ ಮಾತನಾಡಿದ ಅವರು,' ಸಂಪುಟ ಸಭೆಯಲ್ಲಿ ನಡೆದ ಚರ್ಚೆ ಅಪೂರ್ಣವಾಗಿದೆ. ಮುಂದಿನ ಸಭೆಯಲ್ಲಿ ಮುಂದುವರಿಸುತ್ತೇವೆ. ಎಲ್ಲರ ಅಭಿಪ್ರಾಯ ಪಡೆದು ನಿರ್ಧಾರ ಮಾಡುತ್ತೇವೆ' ಎಂದರು.

ಮಾಧ್ಯಮಗಳ ವರದಿ ಸುಳ್ಳು: ಡಿಕೆಶಿ



'ಜಾತಿ ಗಣತಿ ವಿಚಾರವಾಗಿ ಮಾಧ್ಯಮಗಳಲ್ಲಿ ಬರುತ್ತಿರುವ ಸುದ್ದಿಗಳು ಸುಳ್ಳು. ನಾವು ಏರು ಧ್ವನಿಯಲ್ಲೂ ಮಾತಾಡಿಲ್ಲ, ಕೆಳ ಧ್ವನಿಯಲ್ಲೂ ಮಾತಾಡಿಲ್ಲ. ವಿಚಾರ ವಿನಿಮಯ ಮಾಡಿದ್ದೇವೆ ಅಷ್ಟೇ' ಎಂದು ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿದರು.

'ಸಂಪುಟ ಸಭೆಯ ಚರ್ಚೆಯಲ್ಲಿ ಯಾವುದೇ ಪ್ರತಿರೋಧ ಇರಲಿಲ್ಲ. ಸಚಿವರು ತಮ್ಮ ಸಲಹೆ ನೀಡಿದ್ದಾರೆ. ಇದರ ಹೊರತಾಗಿ ಬೇರೆ ಯಾವುದೇ ತೀರ್ಮಾನವಾಗಿಲ್ಲ' ಎಂದರು.

ಮರು ಸಮೀಕ್ಷೆಗೆ ಸಿದ್ಧಗಂಗಾ ಸ್ವಾಮೀಜಿ ಆಗ್ರಹ

ತುಮಕೂರು: 'ಹತ್ತು ವರ್ಷಗಳ ಹಿಂದೆ ನಡೆದ ಜಾತಿ ಜನಗಣತಿಯನ್ನು ಈಗ ಒಪ್ಪಬಾರದು. ಮತ್ತೊಮ್ಮೆ ವೈಜ್ಞಾನಿಕವಾಗಿ ಸಮೀಕ್ಷೆ ನಡೆಸಬೇಕು' ಎಂದು ಸಿದ್ಧಗಂಗಾ ಮಠಾಧ್ಯಕ್ಷ ಸಿದ್ಧಲಿಂಗ ಸ್ವಾಮೀಜಿ ಆಗ್ರಹಿಸಿದ್ದಾರೆ.



ಸಿದ್ಧಲಿಂಗ ಸ್ವಾಮೀಜಿ

'ತಮ್ಮನ್ನು ಭೇಟಿ ಮಾಡಿದ ಸುದ್ದಿಗಾರರೊಂದಿಗೆ ಮಾತನಾಡಿ, 'ಕಳೆದ ಹತ್ತು ವರ್ಷಗಳಲ್ಲಿ ಏನೆಲ್ಲ ಬದಲಾವಣೆ ಆಗಿರಬಹುದು. ಜನಸಂಖ್ಯೆ ಸಹ ಹೆಚ್ಚಳವಾಗಿದೆ. ಇದನ್ನು ಸೂಕ್ಷ್ಮವಾಗಿ ಅರಿತು ಮರು ಸಮೀಕ್ಷೆ ಮಾಡಿಸಬೇಕು' ಎಂದರು.

ಅಪಸ್ವರ: ಕುರುಬರ ಸಂಘ ಬೇಸರ

ಬೆಂಗಳೂರು: ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆ (ಜಾತಿ ಗಣತಿ) ವರದಿಯ ಬಗ್ಗೆ ಪೂರ್ಣ ತಿಳಿಯದೆ ಅಪಸ್ವರ ಎತ್ತಿರುವುದು ಸರಿಯಲ್ಲ. ಆಯೋಗದ ಶಿಫಾರಸುಗಳನ್ನು ಸರ್ಕಾರ ಜಾರಿ ಮಾಡಬೇಕು ಎಂದು ಕರ್ನಾಟಕ ಪ್ರದೇಶ ಕುರುಬರ ಸಂಘದ ಪ್ರಧಾನ ಕಾರ್ಯದರ್ಶಿ ಎಂ.ವಿ.ಸೋಮಶೇಖರ್ ಆಗ್ರಹಿಸಿದರು.

ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಅವರು, 'ವರದಿ ಅವೈಜ್ಞಾನಿಕ ಎಂದು ವಿರೋಧಿಸಲಾಗುತ್ತಿದೆ. ಬಡವರು, ಶೋಷಿತರಿಗೆ ಮೀಸಲಾತಿ ಹೆಚ್ಚಿಸಲು ಇದು ಸಹಾಯಕ ಎಂದೂ ತಿಳಿಯದೆ ರಾಜಕೀಯ ನಾಯಕರು ಹೇಳಿಕೆ ನೀಡುತ್ತಿದ್ದಾರೆ' ಎಂದರು.

ಸಮೀಕ್ಷೆ ವೇಳೆ ಮನೆಯ ಒಬ್ಬ ಸದಸ್ಯರ ಸಹಿ ಪಡೆದು ವೈಜ್ಞಾನಿಕವಾಗಿ ವರದಿ ತಯಾರಿಸಲಾಗಿದೆ ಎಂದು ಆಯೋಗವೇ ತಿಳಿಸಿದೆ ಎಂದು ಸಂಘದ ಖಜಾಂಚಿ ಕೆ.ಎಂ. ಕೃಷ್ಣಮೂರ್ತಿ ಹೇಳಿದರು.

ಎಚ್.ಡಿ.ಕುಮಾರಸ್ವಾಮಿ ಅವರು ಸಿ.ಎಂ ಆಗಿದ್ದಾಗ ಎಚ್.ಕಾಂತರಾಜ ನೇತೃತ್ವದಲ್ಲಿ ಸಿದ್ಧಪಡಿಸಿದ ವರದಿ ಸ್ವೀಕರಿಸಿರಲಿಲ್ಲ. ಈಗ ತಗಾದೆ ತೆಗೆಯುವುದು ಸರಿಯಲ್ಲ' ಎಂದು ಅಭಿಪ್ರಾಯಪಟ್ಟರು.

ಗೋಷ್ಠಿಯಲ್ಲಿ ಸಂಘದ ನಿರ್ದೇಶಕರಾದ ಆರ್.ರಾಮಕೃಷ್ಣ, ಬಿ.ಟಿ.ಜಗದೀಶ್ ಇದ್ದರು.

ಅವೈಜ್ಞಾನಿಕ : ನೇಕಾರ ಸಮುದಾಯ

ಬೆಂಗಳೂರು: 'ಜಾತಿ ಜನಗಣತಿ ವರದಿಯು ಅವೈಜ್ಞಾನಿಕವಾಗಿದ್ದು, ವಿವಿಧ ಉಪ ಪಂಗಡಗಳಲ್ಲಿ ಗುರುತಿಸಿಕೊಂಡಿರುವ ನೇಕಾರ ಸಮುದಾಯದ ಜನಸಂಖ್ಯೆಯನ್ನು ನಿಖರವಾಗಿ ನೀಡುವಲ್ಲಿ ಆಯೋಗ ವಿಫಲವಾಗಿದೆ' ಎಂದು ನೇಕಾರ ಸಮುದಾಯದ ಸ್ವಾಮೀಜಿಗಳು ಶುಕ್ರವಾರ ಬೇಸರ ವ್ಯಕ್ತಪಡಿಸಿದರು.


ಗುಳೇದಗುಡ್ಡದ ಬಸವರಾಜ ಪಟ್ಟದಾರ್ಯ ಸ್ವಾಮೀಜಿ ಅವರು, 'ನೇಕಾರ ಸಮುದಾಯದವರ ಜನಸಂಖ್ಯೆ 50 ಲಕ್ಷದಷ್ಟಿದೆ. ವರದಿಯಲ್ಲಿ ಕೇವಲ 9.5 ಲಕ್ಷ ಎಂದು ನಮೂದಿಸಿರುವುದು ವರದಿಯಾಗಿದೆ. ದೇವಾಂಗ, ತೊಗಟವೀರ, ಪದ್ಮಶಾಲಿ, ಪಟ್ಟಸಾಲೆ, ಸ್ವಕುಳ ಸಾಳಿ ಸೇರಿ 27 ಪ್ರಮುಖ ಒಳ ಪಂಗಡಗಳಿವೆ. ವರದಿ ವಾಸ್ತವಕ್ಕೆ ಹತ್ತಿರವಿಲ್ಲ. ಸರ್ಕಾರ ವರದಿಯನ್ನು ತಿರಸ್ಕರಿಸಲಿ' ಎಂದು ಸುದ್ದಿಗೋಷ್ಠಿಯಲ್ಲಿ ಆಗ್ರಹಿಸಿದರು.

ದೊಡ್ಡಬಳ್ಳಾಪುರದ ದಿವ್ಯಜ್ಞಾನಾನಂದಗಿರಿ ಸ್ವಾಮೀಜಿ, 'ಸಮುದಾಯಕ್ಕೆ ಆಗಿರುವ ಅನ್ಯಾಯವನ್ನು ಸರಿಪಡಿಸಬೇಕು' ಎಂದು ಆಗ್ರಹಿಸಿದರು.

ಮುಖಂಡ ಲಿಂಗರಾಜು ಡಿ. ನೊಣವಿನಕೆರೆ, 'ಮತ್ತೊಮ್ಮೆ ಸಮೀಕ್ಷೆ ನಡೆಸಬೇಕು' ಎಂದು ಒತ್ತಾಯಿಸಿದರು. ಹರಿಹರದ ಪ್ರಭುಲಿಂಗ ಸ್ವಾಮೀಜಿ, ಘನಲಿಂಗ ಸ್ವಾಮೀಜಿ ಉಪಸ್ಥಿತರಿದ್ದರು.

'ಕೋಟಿ ಮಕ್ಕಳು ಯಾವ ವರ್ಗಕ್ಕೆ?'

ಬೆಂಗಳೂರು: 'ಜಾತಿ ಗಣತಿ ನಡೆಸಿ 10 ವರ್ಷವಾಗಿದೆ. ಈ ಅವಧಿಯಲ್ಲಿ ಜನಿಸಿರುವ ಕೋಟಿ ಮಕ್ಕಳನ್ನು ಯಾವ ವರ್ಗಕ್ಕೆ ಸೇರಿಸುತ್ತೀರಿ' ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್.ಅಶೋಕ ಪ್ರಶ್ನಿಸಿದರು.



ಆರ್.ಅಶೋಕ

ಸುದ್ದಿಗಾರರ ಜತೆ ಮಾತನಾಡಿದ ಅವರು, 'ಈ ಹೊಸ ಪೀಳಿಗೆ ಭವಿಷ್ಯವೇನು? ಮೀಸಲಾತಿಗೆ ಮಾನದಂಡವೇನು' ಎಂದು ಪ್ರಶ್ನಿಸಿದರು.


'ಸಿದ್ದಗಂಗಾ ಮಠಕ್ಕೇ ಸಮೀಕ್ಷೆ ಮಾಡುವವರು ಹೋಗಿಲ್ಲ. ದಾವಣಗೆರೆಯ ಶಾಸಕರೂ ಕೂಡ ಅದನ್ನೇ ಹೇಳಿದ್ದಾರೆ. ಜಾತಿ ಗಣತಿ ಮಾಡಿರುವ ವಿಧಾನವೇ ಅವೈಜ್ಞಾನಿಕ. 'ವರದಿಗೆ ಕಾಂತರಾಜ ಅವರು ಸಹಿ ಹಾಕಿರಲಿಲ್ಲ. ಜಯಪ್ರಕಾಶ್ ಹೆಗ್ಡೆ ವರದಿ ನೋಡಿದಾಗ ಅದು ಅಸಲಿ ಅಲ್ಲ. ಒಂದು ಪ್ರತಿಯಷ್ಟೇ ಇದೆ ಎಂದು ತಿಳಿದಿತ್ತು. ಈ ಬಗ್ಗೆ ಹೆಗ್ಡೆ ಸರ್ಕಾರಕ್ಕೆ ಪತ್ರ ಬರೆದಿದ್ದರು' ಎಂದರು.

'ಜೆಡಿಎಸ್–ಕಾಂಗ್ರೆಸ್ ಸಮ್ಮಿಶ್ರ ಸರ್ಕಾರವಿದ್ದಾಗ ಸಿದ್ದರಾಮಯ್ಯ ಬಾಯಿಗೆ ಹೊಲಿಗೆ ಹಾಕಿಕೊಂಡಿದ್ದರು. ಆಗಲೇ ವರದಿ ಬಿಡುಗಡೆ ಮಾಡಬಹುದಿತ್ತು' ಎಂದು ಹೇಳಿದರು.

'ವರದಿ ತಿರಸ್ಕರಿಸಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಹಿಂದುಳಿದ ವರ್ಗಗಳ ಆಯೋಗವು ಸರ್ಕಾರಕ್ಕೆ ಸಲ್ಲಿಸಿರುವ ಜಾತಿ ಜನಗಣತಿ ವರದಿಯು ಅವೈಜ್ಞಾನಿಕವಾಗಿದ್ದು, ಇದನ್ನು ತಿರಸ್ಕರಿಸಬೇಕು' ಎಂದು ಅಖಿಲ ಹವ್ಯಕ ಮಹಾಸಭೆಯು ರಾಜ್ಯ ಸರ್ಕಾರವನ್ನು ಆಗ್ರಹಿಸಿದೆ.



ಡಾ.ಗಿರಿಧರ ಕಜೆ

'ಸಮೀಕ್ಷೆಯ ವರದಿಯಲ್ಲಿ ಕೇವಲ 85 ಸಾವಿರ ಹವ್ಯಕ ಬ್ರಾಹ್ಮಣರಿದ್ದಾರೆಂದು ನಮೂದಿಸಿರುವುದು ಮಾಧ್ಯಮಗಳಲ್ಲಿ ವರದಿಯಾಗಿದೆ. ಹವ್ಯಕ ಬ್ರಾಹ್ಮಣರು ರಾಜ್ಯದ ಉತ್ತರ ಕನ್ನಡ, ಶಿವಮೊಗ್ಗ, ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಪ್ರಬಲ ಸಮುದಾಯವಾಗಿದೆ. ಕಳೆದ ಡಿಸೆಂಬರ್‌ನಲ್ಲಿ ಬೆಂಗಳೂರಿನಲ್ಲಿ ಆಯೋಜಿಸಿದ್ದ ತೃತೀಯ ವಿಶ್ವ ಹವ್ಯಕ ಸಮ್ಮೇಳನದಲ್ಲಿಯೇ ಸುಮಾರು 2 ಲಕ್ಷ ಜನರು ಭಾಗವಹಿಸಿದ್ದರು. ಹವ್ಯಕ ಸಮುದಾಯದ ಜನಸಂಖ್ಯೆ 5 ಲಕ್ಷಕ್ಕೂ ಅಧಿಕವಿದೆ. ಆದ್ದರಿಂದ ಈ ಅವೈಜ್ಞಾನಿಕ ಸಮೀಕ್ಷಾ ವರದಿಯನ್ನು ತಿರಸ್ಕರಿಸಬೇಕು' ಎಂದು ಮಹಾಸಭೆಯ ಅಧ್ಯಕ್ಷ ಡಾ. ಗಿರಿಧರ ಕಜೆ ಒತ್ತಾಯಿಸಿದ್ದಾರೆ.

'ವಿಶ್ವಕರ್ಮ ಸಮಾಜಕ್ಕೆ ಅನ್ಯಾಯ'

ಬೆಂಗಳೂರು: 'ಹಿಂದುಳಿದ ವರ್ಗಗಳ ಆಯೋಗ ನಡೆಸಿರುವ ಜಾತಿ ಜನಗಣತಿಯಲ್ಲಿ ವಿಶ್ವಕರ್ಮ ಸಮುದಾಯಕ್ಕೆ ಅನ್ಯಾಯವಾಗಿದ್ದು, ಆಯೋಗ ಸಲ್ಲಿಸಿರುವ ವರದಿಯನ್ನು ಪರಿಷ್ಕರಿಸುವ ಮೂಲಕ ನ್ಯಾಯ ಒದಗಿಸಬೇಕು' ಎಂದು ಕರ್ನಾಟಕ ವಿಶ್ವಕರ್ಮ ಜನಸೇವಾ ಸಂಘವು ರಾಜ್ಯ ಸರ್ಕಾರವನ್ನು ಆಗ್ರಹಿಸಿದೆ.

ಶುಕ್ರವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಸಂಘದ ರಾಜ್ಯ ಘಟಕದ ಅಧ್ಯಕ್ಷ ಎಂ. ಸೋಮಶೇಖರ್, 'ಆಯೋಗ ನಡೆಸಿರುವ ಸಮೀಕ್ಷೆಯ ವರದಿಯು ದೋಷಪೂರಿತವಾಗಿದೆ. ಈ ವರದಿಯಿಂದ ಸಮಾಜದಲ್ಲಿ ಗೊಂದಲ ಉಂಟಾಗಿದೆ. ನಮ್ಮ ಸಮುದಾಯದವರ ಸಂಖ್ಯೆ ಕೇವಲ 6.4 ಲಕ್ಷವೆಂದು ಮಾಧ್ಯಮಗಳಲ್ಲಿ ವರದಿಯಾಗಿದೆ. ನಮ್ಮ ಸಮುದಾಯದ ಜನಸಂಖ್ಯೆ ಸುಮಾರು 20 ಲಕ್ಷದಷ್ಟಿದೆ. ಆದ್ದರಿಂದ ವರದಿ ಪರಿಷ್ಕರಿಸಬೇಕು' ಎಂದು ಒತ್ತಾಯಿಸಿದರು.

'ಸಮುದಾಯದ ಬಹುತೇಕರ ಮನೆಗಳಿಗೆ ಆಯೋಗದ ಪ್ರತಿನಿಧಿಗಳು ಭೇಟಿ ನೀಡಿಲ್ಲ. ಆದ್ದರಿಂದ ವರದಿಯನ್ನು ಒಪ್ಪಲು ಸಾಧ್ಯವಿಲ್ಲ. ಈ ವರದಿಯ ಪರಿಷ್ಕರಣೆ ಸಾಧ್ಯವಾಗದಿದ್ದಲ್ಲಿ ತಿರಸ್ಕರಿಸಿ, ಮತ್ತೊಮ್ಮೆ ವೈಜ್ಞಾನಿಕವಾಗಿ ಜಾತಿ ಗಣತಿ ಮಾಡಬೇಕು' ಎಂದು ಒತ್ತಾಯಿಸಿದರು.

ಎಂ.ಬಿ.ಪಾಟೀಲ– ಶಿವಾನಂದ ಪಾಟೀಲ ವಾಗ್ವಾದ

ಬೆಂಗಳೂರು: ಗುರುವಾರ ಸಂಪುಟ ವಿಶೇಷ ಸಭೆಯಲ್ಲಿ ಸಚಿವರಾದ ಎಂ.ಬಿ. ಪಾಟೀಲ ಮತ್ತು ಶಿವಾನಂದ ಪಾಟೀಲರ ಮಧ್ಯೆ ವಾಗ್ವಾದ ನಡೆದಿದೆ.

ಸಭೆಗೆ ಮುನ್ನ ಎಂ.ಬಿ.ಪಾಟೀಲ ಅವರ ನಿವಾಸದಲ್ಲಿ ನಡೆದಿದ್ದ ಲಿಂಗಾಯತ ಸಚಿವರ ಸಭೆಯಲ್ಲಿ, 'ಈಗಿರುವಂತೆ ಸಮೀಕ್ಷಾ ವರದಿ ಒಪ್ಪಿದರೆ ಲಿಂಗಾಯತ ಸಮುದಾಯಕ್ಕೆ ಅನ್ಯಾಯವಾಗುತ್ತದೆ. ಇದನ್ನು ಸಂಪುಟ ಸಭೆಯಲ್ಲಿ ಸ್ಪಷ್ಟವಾಗಿ ತಿಳಿಸಬೇಕು' ಎಂದು ತೀರ್ಮಾನಿಸಲಾಗಿತ್ತು.


ಸಭೆ ಆರಂಭವಾದಾಗ ಸಚಿವ ಎಂ.ಬಿ.ಪಾಟೀಲ ಅವರು ಈ ಅಭಿಪ್ರಾಯವನ್ನು ಸಿ.ಎಂ ಗಮನಕ್ಕೆ ತಂದರು. ಆಗ ಶಿವಾನಂದ ಪಾಟೀಲರು, ಪ್ರತ್ಯೇಕ ಲಿಂಗಾಯತ ಧರ್ಮ ಮಾಡಲು ಹೋಗಿ 2018 ರ ಚುನಾವಣೆಯಲ್ಲಿ ಪಕ್ಷ ಸೋಲು ಅನುಭವಿಸಿತು' ಎಂದು ಸಭೆಯ ಗಮನಕ್ಕೆ ತಂದರು ಎಂದು ಮೂಲಗಳು ತಿಳಿಸಿವೆ.

'ಮುಖ್ಯಮಂತ್ರಿ ಮತ್ತು ಎಂ.ಬಿ. ಪಾಟೀಲ ಅವರು ಈ ಮಾತನ್ನು ಒಪ್ಪಲಿಲ್ಲ. ಪ್ರತ್ಯೇಕ ಧರ್ಮದ ವಿಚಾರ ಚುನಾವಣೆ ಮೇಲೆ ಪರಿಣಾಮ ಬೀರಿದ್ದರೆ ಎಂ.ಬಿ. ಪಾಟೀಲ ಅವರೂ ಸೋಲಬೇಕಿತ್ತು. ಅವರು ಅತಿ ಹೆಚ್ಚು ಮತಗಳಿಂದ ಗೆದ್ದಿದ್ದಾರಲ್ಲ. ನಿಮ್ಮ ಮಾತನ್ನು ಒಪ್ಪಲಾರೆ' ಎಂದು ಸಿದ್ದರಾಮಯ್ಯ ಹೇಳಿದರು ಎನ್ನಲಾಗಿದೆ.

' ಪಕ್ಷದ ಮೇಲೆ ಪರಿಣಾಮ ಬೀರಬಹುದು. ಎಚ್ಚರಿಕೆ ವಹಿಸಬೇಕು' ಎಂಬುದಾಗಿ ಶಿವಾನಂದ ಪಾಟೀಲ ಹೇಳಿದರೆಂದು ಮೂಲಗಳು ಹೇಳಿವೆ.

'ಚುನಾವಣೆಗೂ ಪ್ರತ್ಯೇಕ ಧರ್ಮದ ವಿಚಾರಕ್ಕೂ ಸಂಬಂಧವಿಲ್ಲ. ಚುನಾವಣೆ ಸೋತಿದ್ದು ಬೇರೆಯದ್ದೇ ಕಾರಣಗಳಿಗೆ' ಎಂದು ಎಂ.ಬಿ.ಪಾಟೀಲ ತಿರುಗೇಟು ನೀಡಿದರು.

ಎಸ್.ಎಸ್.ಮಲ್ಲಿಕಾರ್ಜುನ್ ಅವರು, ಜಾತಿಗಣತಿ ವರದಿ ಒಪ್ಪಿದರೆ ಲಿಂಗಾಯತ ಸಮುದಾಯದ ಆಕ್ರೋಶಕ್ಕೆ ಗುರಿ ಆಗಬೇಕಾದಿತು. ಇದನ್ನು ಯಾರೂ ಒಪ್ಪಲು ತಯಾರಿಲ್ಲ ಹೇಳಿದರು' ಎಂದು ಮೂಲಗಳು ತಿಳಿಸಿವೆ.



ಸುಭಾಷಿತ

ನಾನು ನರಕದಲ್ಲಿಯೂ ಒಳ್ಳೆಯ ಪುಸ್ತಕಗಳನ್ನು ಸ್ವಾಗತಿಸುವೆ. ಅವು ಇದ್ದಲ್ಲಿ ಸ್ವರ್ಗ ತಂತಾನೇ ಹುಟ್ಟುತ್ತದೆ.
-ರವೀಂದ್ರನಾಥ ಟ್ಯಾಗೋರ್

ವಕ್ಫ್ ಕಾಯ್ದೆ: ವಿವಾದಿತ ಅಂಶಗಳು ಗಂಭೀರ ಪರಿಶೀಲನೆಗೆ ಒಳಪಡಲಿ

ವಕ್ಫ್ (ತಿದ್ದುಪಡಿ) ಕಾಯ್ದೆಯಲ್ಲಿ ಇರುವ ಕೆಲವು ಪ್ರಮುಖ ಅಂಶಗಳ ಕುರಿತು ವ್ಯಕ್ತವಾಗಿರುವ ಕಳವಳವನ್ನು ಸುಪ್ರೀಂ ಕೋರ್ಟ್ ಗಣನೆಗೆ ತೆಗೆದುಕೊಂಡಿದೆ. ಪ್ರಮುಖ ಅಂಶಗಳನ್ನು ಮುಂದಿನ ವಿಚಾರಣೆವರೆಗೆ ಜಾರಿಗೆ ತರಬಾರದು, ಯಥಾಸ್ಥಿತಿ ಕಾಯ್ದುಕೊಳ್ಳಬೇಕು ಎಂದು ಹೇಳಿದೆ. ವಿವಾದಾತ್ಮಕ ತಿದ್ದುಪಡಿಗಳಿಗೆ ಸಂಬಂಧಿಸಿ ಕೆಲವು ಮಹತ್ವದ ಪ್ರಶ್ನೆಗಳನ್ನು ನ್ಯಾಯಪೀಠವು ಕೇಳಿದೆ. ಈ ಪ್ರಶ್ನೆಗಳಿಗೆ ತೃಪ್ತಿಕರವಾದ ಉತ್ತರವನ್ನು ಸರ್ಕಾರ ನೀಡಿಲ್ಲ. ಕೇಂದ್ರ ವಕ್ಫ್ ಪರಿಷತ್ ಮತ್ತು ರಾಜ್ಯ ವಕ್ಫ್ ಮಂಡಳಿಗಳಿಗೆ ಮುಸ್ಲಿಮೇತರರನ್ನೂ ಸದಸ್ಯರನ್ನಾಗಿ ಸೇರಿಸುವುದು, ವಕ್ಫ್ ಎಂದು ಘೋಷಿಸಲಾಗಿರುವ ಆಸ್ತಿಯನ್ನು ಡಿನೋಟಿಫೈ ಮಾಡುವುದು, ವಕ್ಫ್ ಆಸ್ತಿಯ ಸಿಂಧುತ್ವವನ್ನು ರದ್ದು ಮಾಡಲು ಜಿಲ್ಲಾಧಿಕಾರಿಗೆ ಪರಮಾಧಿಕಾರ ನೀಡುವುದು ಮುಂತಾದ ವಿಚಾರಗಳಲ್ಲಿ ಪ್ರಶ್ನೆ ಕೇಳಲಾಗಿದೆ. ಮೇ 5ರಂದು ಮುಂದಿನ ವಿಚಾರಣೆ ನಡೆಯಲಿದೆ. ಅಲ್ಲಿಯವರೆಗೆ ಈ ಯಾವುದೇ ಅಂಶವನ್ನು ಜಾರಿಗೆ ತರುವುದಿಲ್ಲ ಎಂದು ಸರ್ಕಾರವು ಸುಪ್ರೀಂ ಕೋರ್ಟ್‌ಗೆ ಅನಿವಾರ್ಯವಾಗಿ ಭರವಸೆ ಕೊಡಬೇಕಾಯಿತು.



ಕಾಯ್ದೆಯಲ್ಲಿನ ವಿವಾದಾತ್ಮಕವಾದ ಎಲ್ಲ ಅಂಶಗಳನ್ನು ಗಂಭೀರವಾದ ಪರಿಶೀಲನೆಗೆ ಒಳಪಡಿಸಲಾಗುವುದು ಎಂದು ಕೋರ್ಟ್ ಹೇಳಿರುವುದು ಗಮನಾರ್ಹ

ತಿದ್ದುಪಡಿ ಕಾಯ್ದೆಗೆ ನ್ಯಾಯಾಲಯವು ತಡೆ ನೀಡಿದೆ ಎಂದು ಹೇಳಲಾಗದು. ಆದರೆ, ಕಾಯ್ದೆಯಲ್ಲಿ ಇರುವ ಕೆಲವು ಅಂಶಗಳ ಜಾರಿಯು ನಿರ್ದಿಷ್ಟ ಅವಧಿಯವರೆಗೆ ಸಾಧ್ಯವಿಲ್ಲ. ನ್ಯಾಯಾಲಯಕ್ಕೆ ಬೇಕಿದ್ದ ಭರವಸೆಯನ್ನು ನೀಡುವ ಮೂಲಕ ತಡೆಯಿಂದ ತಪ್ಪಿಸಿಕೊಳ್ಳುವಲ್ಲಿ ಸರ್ಕಾರ ಯಶಸ್ವಿಯಾಗಿದೆ. ಸರ್ಕಾರಕ್ಕೆ ಇನ್ನಷ್ಟು ಸಮಯ ಬೇಕಿತ್ತು. ಅದಕ್ಕಾಗಿ ಎರಡನೇ ದಿನದ ವಿಚಾರಣೆಯ ಸಂದರ್ಭದಲ್ಲಿ ವಿಚಾರಣೆ ಮುಂದೂಡುವಂತೆ ಮನವಿ ಮಾಡಿದೆ. ಲಿಖಿತ ಹೇಳಿಕೆಗಳನ್ನು ಸಲ್ಲಿಸಬೇಕಿರುವುದರಿಂದ ಸಮಯ ಬೇಕು ಎಂಬ ಕಾರಣ ಕೊಟ್ಟಿದೆ. ಸಾಂವಿಧಾನಿಕವಾಗಿ ಮತ್ತು ಪ್ರಾಯೋಗಿಕವಾಗಿ ಕಾಯ್ದೆಯ ಪರಿಣಾಮಗಳ ಕುರಿತು ನ್ಯಾಯಪೀಠವು ಆರಂಭದಲ್ಲಿಯೇ ಪ್ರಶ್ನೆಗಳನ್ನು ಎತ್ತಿತು. ಹಾಗಾಗಿ, ನ್ಯಾಯಾಲಯವು ಸರ್ಕಾರದ ನಿಲುವಿಗೆ ಪೂರಕವಾಗಿ ಇಲ್ಲ ಎಂಬುದು ಆರಂಭದಲ್ಲಿಯೇ ಸ್ಪಷ್ಟವಾಗಿತ್ತು. ಮುಖ್ಯ ನ್ಯಾಯಮೂರ್ತಿ ಸಂಜೀವ್ ಖನ್ನಾ, ನ್ಯಾಯಮೂರ್ತಿಗಳಾದ ಸಂಜಯ ಕುಮಾರ್ ಮತ್ತು ಕೆ.ವಿ. ವಿಶ್ವನಾಥನ್ ಅವರ ಪೀಠವು ಕಾಯ್ದೆಯನ್ನು ಪ್ರಶ್ನಿಸಿ ಸಲ್ಲಿಸಲಾಗಿರುವ ಅರ್ಜಿಗಳ ವಿಚಾರಣೆ ನಡೆಸುತ್ತಿದೆ.

ಮುಸ್ಲಿಂ ಸಮುದಾಯ ಮತ್ತು ಸಮುದಾಯದ ಸಂಘಟನೆಗಳು ಕಾಯ್ದೆಯ ಕೆಲವು ಅಂಶಗಳನ್ನು ವಿರೋಧಿಸಿ ಪ್ರತಿಭಟನೆ ನಡೆಸುತ್ತಿವೆ. ಇತರರು ಕೂಡ ಕಾಯ್ದೆಯ ಈ ಅಂಶಗಳ ಕುರಿತು ಕಳವಳ ವ್ಯಕ್ತಪಡಿಸಿದ್ದಾರೆ. ಸಂವಿಧಾನವು ನೀಡಿರುವ ಸಮಾನತೆಯ ಹಕ್ಕು, ಧಾರ್ಮಿಕ ಸ್ವಾತಂತ್ರ್ಯದ ಹಕ್ಕಿಗೆ ಈ ಅಂಶಗಳು ವ್ಯತಿರಿಕ್ತವಾಗಿವೆ ಎಂಬ ಅಭಿಪ್ರಾಯವೂ ವ್ಯಕ್ತವಾಗಿದೆ. ಹಿಂದೂ ಧಾರ್ಮಿಕ ಟ್ರಸ್ಟ್‌ಗಳು ಮತ್ತು ದತ್ತಿಗಳಿಗೆ ಹಿಂದೂಯೇತರರನ್ನು ಸದಸ್ಯರನ್ನಾಗಿ ನೇಮಕ ಮಾಡಲು ಸರ್ಕಾರ ಸಿದ್ಧವಿದೆಯೇ ಎಂಬ ಪ್ರಶ್ನೆಯನ್ನು ನ್ಯಾಯಪೀಠವು ಕೇಳಿದೆ. ವಕ್ಫ್ ಕಾನೂನು ಸುಧಾರಣೆಯು ಸರ್ಕಾರದ ಉದ್ದೇಶ ಅಲ್ಲ; ಬದಲಿಗೆ ವಕ್ಫ್ ಮೇಲೆ ನಿಯಂತ್ರಣ ಹೇರಿ, ಅದರ ನಿರ್ವಹಣೆಯನ್ನು ಕೈಗೆ ತೆಗೆದುಕೊಳ್ಳುವುದು ಅದರ ಉದ್ದೇಶ ಎಂಬ ಸಂದೇಹಕ್ಕೆ ಇವೆಲ್ಲವೂ ಕಾರಣವಾಗಿವೆ. ವಕ್ಫ್ ಆಸ್ತಿಯ ನಿರ್ವಹಣೆಯ ಹೆಸರಿನಲ್ಲಿ ಎಲ್ಲ ಆಸ್ತಿಯನ್ನು ಸರ್ಕಾರ ವಶಕ್ಕೆ ಪಡೆಯಬಹುದು ಎಂಬ ಆತಂಕವು ಮುಸ್ಲಿಂ ಸಮುದಾಯದಲ್ಲಿ ಇದೆ. ಮಸೂದೆ ರಚನೆಗೆ ಮುನ್ನ ಸಮುದಾಯದ ಜೊತೆಗೆ ಸಮಾಲೋಚನೆ ನಡೆಸಿಲ್ಲ. ಜಂಟಿ ಸಂಸದೀಯ ಸಮಿತಿಯ ಪರಿಶೀಲನೆಗೆ ವಕ್ಫ್ (ತಿದ್ದುಪಡಿ) ಮಸೂದೆಯನ್ನು ಒಪ್ಪಿಸಲಾಗಿತ್ತು. ಆದರೆ, ಇಲ್ಲಿ ಅರ್ಥಪೂರ್ಣವಾದ ಸಮಾಲೋಚನೆ ನಡೆಯಲೇ ಇಲ್ಲ. ವಿರೋಧ ಪಕ್ಷಗಳ ಸದಸ್ಯರು ಮುಂದಿಟ್ಟ ಯಾವುದೇ ಶಿಫಾರಸನ್ನು ಮಸೂದೆಗೆ ಸೇರಿಸಿಕೊಂಡಿಲ್ಲ. ಕಾಯ್ದೆಯಲ್ಲಿ ಕೆಲವು ಉತ್ತಮ ಅಂಶಗಳೂ ಇವೆ ಎಂಬುದನ್ನು ನ್ಯಾಯಾಲಯ ಗುರುತಿಸಿದೆ. ಈ ಅಂಶಗಳನ್ನು ಉಳಿಸಿಕೊಳ್ಳಬೇಕು ಎಂದೂ ಹೇಳಿದೆ. ಆದರೆ, ವಿವಾದಾತ್ಮಕವಾದ ಎಲ್ಲ ಅಂಶಗಳನ್ನು ಗಂಭೀರ ಪರಿಶೀಲನೆಗೆ ಒಳಪಡಿಸಲಾಗುವುದು ಎಂಬುದನ್ನು ಸ್ಪಷ್ಟಪಡಿಸಿದೆ.

ದಿನದ ಟ್ವೀಟ್

ಯಾವುದಕ್ಕೆ ಆದ್ಯತೆ?

ಪ್ರಸಿದ್ಧ ದೇವಸ್ಥಾನವೊಂದಕ್ಕೆ ಹೋಗಿದ್ದಾಗ ನನ್ನಲ್ಲಿ ಪ್ರಶ್ನೆಯೊಂದು ಮೂಡಿತು. ಜನ ದೇವಸ್ಥಾನಕ್ಕೆ ಬರುವುದು ದರ್ಶನಕ್ಕೋ ಫೋಟೊ ಶೂಟ್ ಮಾಡಿಕೊಂಡು ದೇವರಿಗೆ ತಮ್ಮ ದರ್ಶನ ಮಾಡಿಸಲೋ? ಏಕೆಂದರೆ, 2 ಗಂಟೆ ನಾನು ಅಲ್ಲಿದ್ದಾಗ, ಬಹುತೇಕ ಯುವಜನ 2 ನಿಮಿಷದಲ್ಲಿ ದರ್ಶನ ಮುಗಿಸಿ ಬಂದು, ದೇವಸ್ಥಾನದ ಆವರಣದಲ್ಲಿ ಸಂಪೂರ್ಣವಾಗಿ ಫೋಟೊ ಶೂಟ್‌ನಲ್ಲಿ ಮಗ್ನರಾಗಿದ್ದರು. ಇದು ನನ್ನ ಪೀಳಿಗೆಯವರ ಸಮಸ್ಯೆ ಎಂದು ಆರಂಭದಲ್ಲಿ ಅಂದುಕೊಂಡೆ. ಆದರೆ ನನ್ನ ತಂದೆ ತಾಯಿಯ ಪೀಳಿಗೆಯವರೂ ತಮ್ಮ ಮಕ್ಕಳೊಂದಿಗೆ ಇದೇ ಕೆಲಸದಲ್ಲಿ ನಿರತರಾಗಿದ್ದರು... ಕಾರ್ಯಕ್ರಮದ ನೆನಪಿಗಾಗಿ ಫೋಟೊ ತೆಗೆಯುವುದು ಸರಿ, ಆದರೆ ಅದೇ ಮುಖ್ಯವಾದರೆ...

ವೆಂಕಟ್ರಮಣ ರಾವ್ ಪಿ.

ಕಿಡಿನುಡಿ

ಗಣತಿ ಮಾಡಬೇಕಾಗಿರುವುದು ಜಾತಿಯನ್ನಲ್ಲ... ಭವಿಷ್ಯದ ಕನಸುಗಳ ಗಣತಿ! ಅತಿ ವೇಗದಲ್ಲಿ ಎಲ್ಲವೂ ಬದಲಾಗುತ್ತಿರುವ ಈ ಕಾಲಮಾನದಲ್ಲಿ ನಮಗೆ ಬೇಕಾಗಿರುವುದು ಜಾತಿ ಜನಗಣತಿ ಅಲ್ಲ... ಶಾಸಕರು, ಸಂಸದರು, ಮಂತ್ರಿ ಮಹೋದಯರ ಆಸ್ತಿ ಎಷ್ಟು ಹೆಚ್ಚಾಗಿದೆ ಅನ್ನುವುದರ ಗಣತಿ. ಅವರು ಸಮಾಜಕ್ಕೆ ಎಷ್ಟು ಸೇವೆ ಮಾಡಿದ್ದಾರೆ ಅನ್ನುವುದರ ಗಣತಿ. ಅಧಿಕಾರಿಗಳು ಭ್ರಷ್ಟಾಚಾರ ಮಾಡಿ ಕೊಳ್ಳೆ ಹೊಡೆದ ಹಣದ ಗಣತಿ...

ನಿರಂಜನ್ ಸ್ವಾಮಿ ಮಠದ, ಎಂಜಿನಿಯರ್

25 ವರ್ಷಗಳ ಹಿಂದೆ

ಬುಧವಾರ, 19-4-2000

• ಆರೋಪಿಗಳಿಗೆ ಮತದಾನದ ಹಕ್ಕು ನಿರಾಕರಣೆ: ಗಿಲ್ ಪ್ರಸ್ತಾವ

ನವದೆಹಲಿ, ಏ. 18 (ಯುಎನ್‌ಐ)– ಕನಿಷ್ಠ ಐದು ವರ್ಷ ಜೈಲುವಾಸದ ಶಿಕ್ಷೆ ನೀಡಲು ಅವಕಾಶವಿರುವಂಥ ಆರೋಪಗಳನ್ನು ಎದುರಿಸುತ್ತಿರುವ ವ್ಯಕ್ತಿಗಳು ಚುನಾವಣೆಯಲ್ಲಿ ಭಾಗವಹಿಸುವುದನ್ನು ನಿಷೇಧಿಸಬೇಕು ಎಂಬ ಸಲಹೆಯನ್ನು ಚುನಾವಣಾ ಆಯೋಗ ಮಂಡಿಸಿದೆ.

ಇದನ್ನು ಚುನಾವಣಾ ಕಮಿಷನರ್ ಎಂ.ಎಸ್.ಗಿಲ್ ಅವರು ರಾಜ್ಯ ಚುನಾವಣಾ ಕಮಿಷನರ್‌ಗಳ ಒಂದು ದಿನದ ಸಮ್ಮೇಳನದಲ್ಲಿ ತಿಳಿಸಿದರು.

ಕೆಲವು ರಾಜಕೀಯ ನಾಯಕರು ಈ ಪ್ರಸ್ತಾವವನ್ನು ವಿರೋಧಿಸಿದ್ದಾರೆ. 'ಅಭ್ಯರ್ಥಿಗಳಾಗುವವರ ವಿರುದ್ಧ ಇಂಥ ಕ್ರಿಮಿನಲ್ ಆರೋಪಗಳನ್ನು ಕ್ಷಿಪ್ರವಾಗಿ ಹುಟ್ಟುಹಾಕಿ ಕೋರ್ಟಿನಲ್ಲಿ ದಾವೆ ಹೂಡುವುದು ಸುಲಭ ಎಂಬುದು ನಿಜ. ಇದು ನಿಜವಾಗಿಯೂ ವಿಚಾರಿಸತಕ್ಕ ವಿಷಯ' ಎಂದು ಹೇಳಿದ ಗಿಲ್ 'ಆದರೂ ರಾಜಕೀಯದಲ್ಲಿ ಅಪರಾಧ ಪ್ರವೃತ್ತಿಯನ್ನು ತಡೆಯಲು ರಾಜಕೀಯ ಪಕ್ಷಗಳು ಬೇಗ ಕ್ರಮ ಕೈಗೊಳ್ಳಬೇಕಾಗಿದೆ' ಎಂದು ಹೇಳಿದರು.

• ಕ್ರಿಕೆಟ್ ಆಟಗಾರರಿಗೆ ನೀತಿಸಂಹಿತೆ ರೂಪಿಸಲು ಕ್ರಮ

ಕಲ್ಕತ್ತ, ಏ. 18– ದೇಶದಲ್ಲಿ ಮೋಸದಾಟ ಮತ್ತು ಬಾಜಿ ವ್ಯವಹಾರದ ಬಗ್ಗೆ ಮುನ್ನೆಚ್ಚರಿಕೆ ವಹಿಸಲು ಹಲವಾರು ಕ್ರಮಗಳನ್ನು ಕೈಗೊಳ್ಳಲಾಗುವುದು, ಆಟಗಾರರಿಗಾಗಿ ನೀತಿಸಂಹಿತೆ ರೂಪಿಸಲಾಗುವುದು ಎಂದು ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿ ಪ್ರಕಟಿಸಿದೆ.

50 ವರ್ಷಗಳ ಹಿಂದೆ

ಶನಿವಾರ, 19-4-1975

• ಗಡಿ ವಿವಾದ ಇತ್ಯರ್ಥ ಸೂಕ್ಷ್ಮ ಘಟ್ಟದಲ್ಲಿ

ಮುಂಬೈ, ಏ. 18– ಕರ್ನಾಟಕ– ಮಹಾರಾಷ್ಟ್ರ ಗಡಿ ವಿವಾದವು 'ಇತ್ಯರ್ಥವಾಗುವುದು ಸೂಕ್ಷ್ಮ ಘಟ್ಟದಲ್ಲಿದೆ' ಎಂದು ಮಹಾರಾಷ್ಟ್ರ ಮುಖ್ಯಮಂತ್ರಿ ಎಸ್.ಬಿ. ಚವಾಣ್ ತಿಳಿಸಿದರು.

ಈ ವಿಷಯವನ್ನು ಅವರು ಬೆಳಗಾವಿಯಿಂದ ಬಂದಿದ್ದ ಮಹಾರಾಷ್ಟ್ರ ಏಕೀಕರಣ ಸಮಿತಿಯ 150 ಸ್ವಯಂಸೇವಕರಿಗೆ ತಿಳಿಸುತ್ತಾ, ಪರಿಹಾರದಿಂದ ಹಿಂದಕ್ಕೆ ಸರಿಯುವ ವಾತಾವರಣವನ್ನು ಸೃಷ್ಟಿಸಬಾರದೆಂದು ಜನತೆಗೆ ಮನವಿ ಮಾಡಿಕೊಂಡರು.

• ದೇವಸ್ಥಾನ ಸಮಿತಿಗಳಲ್ಲಿ ಹರಿಜನ– ಗಿರಿಜನ ಪ್ರತಿನಿಧಿ

ಬೆಂಗಳೂರು, ಏ. 18– ಪ್ರತಿಯೊಂದು ದೇವಸ್ಥಾನ ಸಮಿತಿಗೆ ಹರಿಜನ ಇಲ್ಲವೆ ಗಿರಿಜನರ ಪ್ರತಿನಿಧಿ ನೇಮಕ -ಇದು ಸರ್ಕಾರದ ದೃಢನೀತಿ ಎಂದು ಸಚಿವ ಎನ್.ಹುಚ್ಚಮಾಸ್ತಿ ಗೌಡ ಅವರು ವಿಧಾನಸಭೆಗೆ ತಿಳಿಸಿದರು.

ಮುಂಬೈ ಕರ್ನಾಟಕ, ಹಳೆಯ ಮದ್ರಾಸ್ ಹಾಗೂ ಮೈಸೂರು ಪ್ರದೇಶಗಳಲ್ಲಿ ಇರುವ ಶಾಸನಗಳು ಬೇರೆ ಬೇರೆ ಆಗಿವೆ ಎಂದೂ ಆದರೂ ದೇವಸ್ಥಾನ ಸಮಿತಿಗೆ ಹರಿಜನ-ಗಿರಿಜನರ ಪ್ರತಿನಿಧಿ ನೇಮಿಸಲು ಸರ್ಕಾರದ ದೃಢ ನಿರ್ಧಾರ ಆಗಿದೆ ಎಂದೂ ಸಚಿವರು ಎಂ.ಎಚ್.ಜಯಪ್ರಕಾಶ್ ನಾರಾಯಣ ಅವರಿಗೆ ತಿಳಿಸಿದರು.

ಬೆಂಗಳೂರು ಜಿಲ್ಲೆಯ 11 ದೇವಸ್ಥಾನ ಬಿಟ್ಟು ಬಾಕಿ ಎಲ್ಲ ಮುಜರಾಯಿ ದೇವಸ್ಥಾನ ಧರ್ಮದರ್ಶಿಗಳ ಸಮಿತಿಗೆ ಹರಿಜನ-ಗಿರಿಜನರ ಪ್ರತಿನಿಧಿಯನ್ನು ನೇಮಿಸಲಾಗಿದೆ ಎಂದು ಹೇಳಿದರು.

ಚರ್ಚೆ ನಡೆಯಬೇಕಿರುವುದು ಜನಸಂಖ್ಯೆ ಬಗೆಗಲ್ಲ, ಮೀಸಲಾತಿ ಪ್ರಮಾಣದ ಬಗೆಗೆ

ಏರಬೇಕಿದೆ ಮೀಸಲಾತಿ ಪ್ರಮಾಣ



ವಿಶ್ಲೇಷಣೆ

ದಿನೇಶ್ ಅಮಿನ್ ಮಟ್ಟು

ಕರ್ನಾಟಕ ಸರ್ಕಾರದ ಮುಂದೆ ಎರಡು ಆಯೋಗಗಳ ವರದಿಗಳಿವೆ. ಮೊದಲನೆಯದು, ಎಚ್. ಕಾಂತರಾಜ ಅಧ್ಯಕ್ಷತೆಯ ಆಯೋಗ ನೀಡಿರುವ ಸಾಮಾಜಿಕ, ಆರ್ಥಿಕ ಮತ್ತು ಶೈಕ್ಷಣಿಕ ಸಮೀಕ್ಷೆಯ ಒಂದು ವರದಿ ಮತ್ತು ಈ ವರದಿಯನ್ನು ಆಧರಿಸಿ ಜಯಪ್ರಕಾಶ್ ಹೆಗ್ಡೆ ಅಧ್ಯಕ್ಷತೆಯ ಆಯೋಗ ಶಿಫಾರಸು ಮಾಡಿರುವ ಪರಿಷ್ಕೃತ ಮೀಸಲಾತಿ ಪಟ್ಟಿಯ ಇನ್ನೊಂದು ವರದಿ.

ಮಾಧ್ಯಮಗಳಲ್ಲಿ ಪ್ರಕಟವಾಗುತ್ತಿರುವ ಮಾಹಿತಿಗಳನ್ನು ಮುಂದಿಟ್ಟುಕೊಂಡು, ಈ ಎರಡು ಆಯೋಗಗಳ ವರದಿಗಳ ಬಗ್ಗೆ ಚರ್ಚೆ ನಡೆಯುತ್ತಿದೆ. ಎರಡರಲ್ಲಿ ಹೆಚ್ಚು ವಿವಾದಗಳನ್ನು ಸೃಷ್ಟಿಸಿರುವುದು ಕಾಂತರಾಜ ಅಧ್ಯಕ್ಷತೆಯ ಆಯೋಗದ ವರದಿ. ಇದರಲ್ಲಿ ನಮೂದಿಸಲಾಗಿರುವ ಜಾತಿವಾರು ಜನಸಂಖ್ಯೆಯೇ ಈಗಿನ ವಿವಾದದ ಮುಖ್ಯ ವಿಷಯ. ಈ ವರದಿಯ ವಿಶ್ವಾಸಾರ್ಹತೆಯನ್ನು ಪ್ರಶ್ನಿಸುತ್ತಿರುವವರು ಮುಖ್ಯವಾಗಿ ಮೂರು ಆಕ್ಷೇಪಗಳನ್ನು ಎತ್ತಿದ್ದಾರೆ. ವರದಿಯು ಮಂಡನೆಯ ಪೂರ್ವದಲ್ಲಿಯೇ ಸೋರಿಕೆಯಾಗಿದೆ, ಸಮೀಕ್ಷೆಯು ರಾಜ್ಯದ ಸಂಪೂರ್ಣ ಜನಸಂಖ್ಯೆಯನ್ನು ಒಳಗೊಂಡಿಲ್ಲ ಮತ್ತು ಸಮೀಕ್ಷೆಯು ವೈಜ್ಞಾನಿಕವಾಗಿ ನಡೆದಿಲ್ಲ ಎನ್ನುವುದು ಈ ಮೂರು ಆರೋಪಗಳು.

ಈಗ ಮಾಧ್ಯಮಗಳಲ್ಲಿ ಸೋರಿಕೆಯಾಗಿ ಚರ್ಚೆಯಾಗುತ್ತಿರುವ ವರದಿಗಳ ಮುಖ್ಯಾಂಶಗಳ ಜೊತೆ ಹಳೆಯ ಸೋರಿಕೆಯನ್ನು ಆಧರಿಸಿದ ವರದಿಗಳನ್ನು ಹೋಲಿಸಿ ನೋಡಿದರೆ, ಹಿಂದೆ ಜಾತಿ ಜನಗಣತಿಯ ಮಾಹಿತಿ ಸೋರಿಕೆಯಾಗಿತ್ತು ಎಂಬ ಆರೋಪವೇ ನಿರಾಧಾರವಾದುದು ಎಂದು ಮನವರಿಕೆಯಾಗಬಹುದು.

ಸಮೀಕ್ಷೆಯಲ್ಲಿ ಒಂದಷ್ಟು ಕುಟುಂಬಗಳು ಬಿಟ್ಟುಹೋಗಿವೆ ಎನ್ನುವ ಎರಡನೇ ಆರೋಪವನ್ನು ಖಂಡಿತ ನಿರಾಕರಿಸಲಾಗದು. ಜಾತಿ-ಉಪಜಾತಿಗಳ ಮಾಹಿತಿಯೇ ಒಂದು ಗೊಂದಲದ ಗೂಡು. ಈಗ ರಾಜ್ಯದಲ್ಲಿ ಅನುಷ್ಠಾನದಲ್ಲಿರುವ ಮೀಸಲಾತಿ ಪಟ್ಟಿಯನ್ನು ಅವಲೋಕಿಸಿದರೆ, ನಿಖರ ಮಾಹಿತಿ ಸಂಗ್ರಹ ಎಷ್ಟು ಕಷ್ಟದ್ದು ಎನ್ನುವುದು ಅರಿವಾಗಬಹುದು. ಉದಾಹರಣೆಗೆ, ವೀರಶೈವ-ಲಿಂಗಾಯತ ಸಮುದಾಯಗಳಿಗೆ ಪ್ರವರ್ಗ 3ಬಿಯಲ್ಲಿ ನೀಡಲಾಗಿರುವ ಮೀಸಲಾತಿ ಪಟ್ಟಿಯಲ್ಲಿ ಹೆಳವ, ಅಂಬಿಗ, ಬೋಯಿ, ಸುಣಗಾರ, ಹೂಗಾರ, ಕುರುಬ, ಕುಂಬಾರ, ಹಡಪದ ಸೇರಿದಂತೆ 23 ಉಪಜಾತಿಗಳ ಹೆಸರುಗಳಿವೆ. ಇವುಗಳಲ್ಲಿ ಕೆಲವು ಉಪಜಾತಿಗಳ ಹೆಸರುಗಳು ಪ್ರವರ್ಗ 1ರಲ್ಲಿ ಮತ್ತು ಇನ್ನು ಕೆಲವು ಪ್ರವರ್ಗ 2ಎಯಲ್ಲಿ ಹಿಂದುಳಿದ ಜಾತಿಗಳಿಗೆ ನೀಡಲಾಗಿರುವ ಮೀಸಲಾತಿ ಪಟ್ಟಿಯಲ್ಲಿಯೂ ಇವೆ.


ಈ ಬಾರಿಯ ಸಮೀಕ್ಷೆಯ ಕಾಲದಲ್ಲಿ ಈ 23 ಉಪಜಾತಿಗಳಲ್ಲಿ ಬಹಳಷ್ಟು ಮಂದಿ ತಮ್ಮನ್ನು ಲಿಂಗಾಯತರೆಂದು ಕರೆದುಕೊಳ್ಳದೆ (ಲಿಂಗಾಯತ ಹಡಪದ, ಲಿಂಗಾಯತ ಹೂಗಾರ ಇತ್ಯಾದಿ) ಬರೀ ಉಪಜಾತಿಗಳನ್ನು ನಮೂದಿಸಿದ್ದಾರೆ ಎನ್ನುವ ಅಭಿಪ್ರಾಯ ಇದೆ. 3ಬಿಯಲ್ಲಿ ಶೇಕಡ 5ರಷ್ಟು ಮೀಸಲಾತಿ ಇದ್ದರೆ, ಪ್ರವರ್ಗ 2ಎಯಲ್ಲಿ ಶೇಕಡ 15ರಷ್ಟು ಮೀಸಲಾತಿ ಇರುವುದು ಇದಕ್ಕೆ ಮುಖ್ಯ ಕಾರಣ. ಇದರಿಂದಾಗಿ ಲಿಂಗಾಯತರ ಸಂಖ್ಯೆ ನಿರೀಕ್ಷೆಗಿಂತ ಕಡಿಮೆಯಾಗಿರುವ ಎಲ್ಲ ಸಾಧ್ಯತೆಗಳಿವೆ.

ಈ ಗೊಂದಲಕ್ಕೆ ಯಾರನ್ನಾದರೂ ಹೊಣೆ ಮಾಡುವುದಾದರೆ ಅಣ್ಣ ಬಸವಣ್ಣನವರನ್ನು ಮಾಡಬೇಕು. ವಚನ ಚಳವಳಿಯ ಕಾಲದಲ್ಲಿ ಹಿಂದುಳಿದ ಮತ್ತು ದಲಿತ ಸಮುದಾಯಕ್ಕೆ ಸೇರಿದ ಲಕ್ಷಾಂತರ ಕುಟುಂಬಗಳವರು ಲಿಂಗಧಾರಣೆ ಮಾಡಿ ಲಿಂಗಾಯತರಾದರು, ಉಳಿದವರು ತಮ್ಮ ಮೂಲಜಾತಿಗಳಲ್ಲಿಯೇ ಉಳಿದುಕೊಂಡಿದ್ದರು. ಆದರೆ ಎರಡೂ ಕಡೆಯವರು ತಮ್ಮ ಉಪಜಾತಿಗಳ ಹೆಸರುಗಳನ್ನು ಕೈಬಿಡದೆ ಇರುವುದರಿಂದ ಗೊಂದಲ ಸೃಷ್ಟಿಯಾಗಿದೆ. ಇದನ್ನು ಸರಿಪಡಿಸುವುದು ಹೇಗೆ ಎನ್ನುವುದನ್ನು ಲಿಂಗಾಯತ ಸಮಾಜದ ನಾಯಕರು ಕೂತು ಪರಸ್ಪರ ವಿಚಾರ ವಿನಿಮಯ ಮಾಡಿಕೊಂಡು ಪರಿಹಾರವನ್ನು ಕಂಡುಕೊಳ್ಳಬೇಕು. ಇದರಲ್ಲಿ ಸರ್ಕಾರಕ್ಕೆ ಹೆಚ್ಚಿನ ಪಾತ್ರ ಇಲ್ಲ.

ಒಂದಷ್ಟು ಕುಟುಂಬಗಳ ಮಾಹಿತಿ ಬಿಟ್ಟುಹೋಗಿರುವುದನ್ನು ಎರಡೂ ಆಯೋಗಗಳ ಅಧ್ಯಕ್ಷರು ಒಪ್ಪಿಕೊಂಡಿದ್ದಾರೆ. ಅವರ ಪ್ರಕಾರ, ರಾಜ್ಯದ 5.98 ಕೋಟಿ ಜನರ ಸಮೀಕ್ಷೆಯಾಗಿದೆ, ಸುಮಾರು 40 ಲಕ್ಷ ಜನರ ಮಾಹಿತಿಯನ್ನು ಸಮೀಕ್ಷೆ ಒಳಗೊಂಡಿಲ್ಲ.

ಶೇಕಡ 5ರಷ್ಟು ಜನರ ಮಾಹಿತಿ ಇಲ್ಲ ಎನ್ನುವ ಕಾರಣಕ್ಕಾಗಿ ಸಂಪೂರ್ಣವಾಗಿ ಸಮೀಕ್ಷಾ ವರದಿಯನ್ನು ತಿರಸ್ಕರಿಸುವುದು ಸರಿಯೇ ಎನ್ನುವುದು ಈಗಿನ ಪ್ರಶ್ನೆ. ರಾಜ್ಯದ ಮಿಲ್ಲರ್, ನಾಗನಗೌಡ, ಹಾವನೂರು, ವೆಂಕಟಸ್ವಾಮಿ ಮತ್ತು ಚಿನ್ನಪ್ಪ ರೆಡ್ಡಿ ಅಧ್ಯಕ್ಷತೆಯ ಹಿಂದುಳಿದ ವರ್ಗಗಳ ಆಯೋಗಗಳು ಮತ್ತು ಕೇಂದ್ರದಲ್ಲಿ ಮೀಸಲಾತಿ ಶಿಫಾರಸು ಮಾಡಿರುವ ಕಾಕಾ ಕಾಲೇಲ್ಕರ್ ಮತ್ತು ಮಂಡಲ್ ಆಯೋಗಗಳು ಮೀಸಲಾತಿಯನ್ನು ಶಿಫಾರಸು ಮಾಡಿರುವುದು ಮಾದರಿ ಸಮೀಕ್ಷೆಗಳ ಆಧಾರದಲ್ಲಿ. ಇದು ಹೆಚ್ಚು ಕಡಿಮೆ ಶೇಕಡ ಒಂದೆರಡರಷ್ಟು ಜನಸಂಖ್ಯೆಯ ಮಾದರಿಗಳನ್ನು ಆಧರಿಸಿದ್ದು.

ಇಷ್ಟು ವರ್ಷಗಳ ಕಾಲ ಶೇಕಡ ಒಂದೆರಡರಷ್ಟು ಜನಸಂಖ್ಯೆಯ ಮಾದರಿಗಳ ಆಧಾರದ ಮೀಸಲಾತಿಯನ್ನು ಸರ್ಕಾರ ಮತ್ತು ನ್ಯಾಯಾಲಯ ಒಪ್ಪಿಕೊಂಡಿರುವಾಗ ಶೇಕಡ 95ರಷ್ಟು ಜನರಿಂದ ಸಂಗ್ರಹಿಸಿದ ಮಾಹಿತಿಯನ್ನು ಒಳಗೊಂಡ ಸಮೀಕ್ಷೆ ಆಧಾರಿತ ಮೀಸಲಾತಿಯನ್ನು ಒಪ್ಪಿಕೊಳ್ಳಲು ಏನು ಅಡ್ಡಿ ಇದೆ ಎನ್ನುವ ಪ್ರಶ್ನೆ ಕೂಡ ಇದೆ. ನಮ್ಮ ಈಗಿನ ಸಾಮಾಜಿಕ ಪರಿಸ್ಥಿತಿಯಲ್ಲಿ ಒಂದಲ್ಲ ಹತ್ತು ಸಮೀಕ್ಷೆಗಳನ್ನು ನಡೆಸಿದರೂ ಶೇಕಡ 100ರಷ್ಟು ನಿಖರತೆಯನ್ನು ಪಡೆಯುವುದು ಅಸಾಧ್ಯ. ಆದ್ದರಿಂದ ಕಾಂತರಾಜ ಆಯೋಗದ ವರದಿಯ ಬಗೆಗಿನ ವಿರೋಧಗಳನ್ನು ಮುಕ್ತ ಮನಸ್ಸಿನ ಮತ್ತು ಪೂರ್ವಗ್ರಹ ರಹಿತ ಸಮಾಲೋಚನೆಯಿಂದ ಬಗೆಹರಿಸಿಕೊಳ್ಳಬೇಕಾಗಿದೆ. ಇದು ಸರ್ಕಾರ ಮತ್ತು ಕಾನೂನಿನ ವ್ಯಾಪ್ತಿಯನ್ನು ಮೀರಿದ್ದಾಗಿದೆ.



ಸದ್ಯ ರಾಜ್ಯ ಸರ್ಕಾರದ ಮುಂದೆ ಇವೆಲ್ಲಕ್ಕಿಂತಲೂ ದೊಡ್ಡ ಸವಾಲು ಇದೆ. ಅದು ಜಯಪ್ರಕಾಶ್ ಹೆಗ್ಡೆ ಅಧ್ಯಕ್ಷತೆಯ ಆಯೋಗವು ಸಾಮಾಜಿಕ, ಆರ್ಥಿಕ ಮತ್ತು ಶೈಕ್ಷಣಿಕ ಸಮೀಕ್ಷೆ ಆಧರಿಸಿ ಶಿಫಾರಸು ಮಾಡಿರುವ ಮೀಸಲಾತಿ ಪ್ರಮಾಣ ಹೆಚ್ಚಳವನ್ನು ನ್ಯಾಯಾಲಯದಲ್ಲಿ ಸಮರ್ಥಿಸಿಕೊಂಡು ಯಶಸ್ವಿಯಾಗಿ ಜಾರಿಗೊಳಿಸುವುದು. ಈ ವಿಷಯದ ಮೇಲೆ ಇಂದು ನಿಜವಾದ ಚರ್ಚೆ ನಡೆಯಬೇಕಾಗಿದೆ.


ಮಂಡಲ್ ವರದಿಗೆ ಸಂಬಂಧಿಸಿದ ಇಂದಿರಾ ಸಹಾನಿ ಪ್ರಕರಣದಲ್ಲಿ, ಮೀಸಲಾತಿಯು ಶೇಕಡ 50 ಮೀರಬಾರದೆಂದು ಸುಪ್ರೀಂ ಕೋರ್ಟ್ ಆದೇಶ ನೀಡಿತ್ತು. 1990ರಲ್ಲಿಯೇ ತಮಿಳುನಾಡು ಸರ್ಕಾರ ಮೀಸಲಾತಿಯನ್ನು ಶೇಕಡ 69ಕ್ಕೆ ಹೆಚ್ಚಿಸಿ ಸಂವಿಧಾನದ ಒಂಬತ್ತನೇ ಶೆಡ್ಯೂಲ್‌ಗೆ ಸೇರಿಸಿರುವುದನ್ನು ಬಿಟ್ಟರೆ 1992ರ ನಂತರ ಮೀಸಲಾತಿ ಪ್ರಮಾಣ ಹೆಚ್ಚಳಕ್ಕೆ ಇತ್ತೀಚಿನ ವರ್ಷಗಳವರೆಗೆ ಸುಪ್ರೀಂ ಕೋರ್ಟ್ ಅನುಮತಿ ನೀಡಿಲ್ಲ. ಆದರೆ ಹಿಂದಿನ ಕೆಲವು ವರ್ಷಗಳಲ್ಲಿ ನಡೆದಿರುವ ಬೆಳವಣಿಗೆಗಳನ್ನು ಆಧರಿಸಿ ಮೀಸಲಾತಿ ಪ್ರಮಾಣ ಹೆಚ್ಚಳಕ್ಕೆ ನ್ಯಾಯಾಲಯದ ಅಂಗೀಕಾರ ಪಡೆಯುವುದು ಹೆಚ್ಚು ಕಷ್ಟವಾಗಲಾರದು. ಎನ್‌ಡಿಎ ಸರ್ಕಾರವು ಆರ್ಥಿಕವಾಗಿ ಹಿಂದುಳಿದವರಿಗೆ ಶೇಕಡ 10ರಷ್ಟು ಮೀಸಲಾತಿಯನ್ನು ಕಲ್ಪಿಸುವ ಮೂಲಕ ಮೀಸಲಾತಿಯ ಶೇಕಡ 50ರ ಮಿತಿಯನ್ನು ಮುರಿಯಲಾಗಿದೆ.

ಕರ್ನಾಟಕದಲ್ಲಿ ಪರಿಶಿಷ್ಟ ಜಾತಿಯ ಮೀಸಲಾತಿಯನ್ನು ಶೇಕಡ 17ಕ್ಕೆ ಮತ್ತು ಪರಿಶಿಷ್ಟ ಪಂಗಡಗಳ ಮೀಸಲಾತಿಯನ್ನು ಶೇಕಡ 7ಕ್ಕೆ ಹೆಚ್ಚಿಸುವ ಮೂಲಕ ಇಲ್ಲಿ ಕೂಡ ಶೇಕಡ 50ರ ಮಿತಿಯನ್ನು ಮೀರಲಾಗಿದೆ. ಇದೇ ರೀತಿ ಜಾರ್ಖಂಡ್ ರಾಜ್ಯವೂ ಸೇರಿದಂತೆ ಹಲವಾರು ರಾಜ್ಯಗಳಲ್ಲಿ ಮೀಸಲಾತಿ ಪ್ರಮಾಣವನ್ನು ಹೆಚ್ಚಿಸುವ ಪ್ರಯತ್ನ ನಡೆಯುತ್ತಿದೆ.

ಈ ಎಲ್ಲ ಬೆಳವಣಿಗೆಗಳ ಹಿನ್ನೆಲೆಯಲ್ಲಿ ಕರ್ನಾಟಕದ ಮೀಸಲಾತಿ ಪ್ರಮಾಣವನ್ನು ಶೇಕಡ 81ಕ್ಕೆ ಹೆಚ್ಚಿಸಲು ಸುಪ್ರೀಂ ಕೋರ್ಟ್‌ಗೆ ಮನವರಿಕೆ ಮಾಡಿಕೊಡುವುದು ಕಷ್ಟ ಆಗಲಾರದು. ಇದಕ್ಕಾಗಿ ಇಡೀ ರಾಜ್ಯದ ಜನ ತಮ್ಮೊಳಗಿನ ಜಾತಿ ಪೈಪೋಟಿಯ ಒಳಜಗಳಗಳನ್ನು ಕೈಬಿಟ್ಟು, ಎಲ್ಲರೂ ಒಗ್ಗೂಡಿ ಮೀಸಲಾತಿ ಏರಿಕೆಗಾಗಿ ಪ್ರಯತ್ನಿಸಿದರೆ ರಾಜ್ಯ ಸರ್ಕಾರದ ಕೆಲಸ ಇನ್ನೂ ಸುಲಭವಾಗಬಹುದು.

ತಮ್ಮ ತಮ್ಮ ಜಾತಿಯ ಜನರ ಸಂಖ್ಯೆಯನ್ನು ಮುಂದಿಟ್ಟು ವಾದ-ವಿವಾದ ಮಾಡುತ್ತಿರುವವರೆಲ್ಲರೂ ತಮ್ಮನ್ನು ತಾವು ಕೇಳಿಕೊಳ್ಳಬೇಕಾದ ಮುಖ್ಯ ಪ್ರಶ್ನೆ ಇದೆ. ಅದು, ತನ್ನ ಜಾತಿಯ ಜನಸಂಖ್ಯೆ ಹೆಚ್ಚಿದೆ ಎನ್ನುವ ಕೀರ್ತಿ ಕಿರೀಟ ಮುಖ್ಯವೋ ತನ್ನ ಜಾತಿಯ ಯುವಜನರಿಗೆ ಉದ್ಯೋಗ, ಶಿಕ್ಷಣದಲ್ಲಿ ಹೆಚ್ಚಿನ ಅವಕಾಶ ಲಭ್ಯವಾಗುವ ಮೀಸಲಾತಿ ಪ್ರಮಾಣದ ಹೆಚ್ಚಳ ಮುಖ್ಯವೋ ಎನ್ನುವ ಪ್ರಶ್ನೆ. ಇದಕ್ಕೆ ಉತ್ತರ ಕಂಡುಕೊಂಡರೆ, ಬೆಟ್ಟದಷ್ಟು ಭಾರದ ಸಮಸ್ಯೆಯನ್ನು ಹೂವನ್ನು ಎತ್ತಿಕೊಂಡಷ್ಟು ಸುಲಭದಲ್ಲಿ ಇತ್ಯರ್ಥಪಡಿಸಿಕೊಳ್ಳಬಹುದು.

ಚುರುಮುರಿ



ಗಣತಿ ಫಜೀತಿ!

• ತುರುವೇಕೆರೆ ಪ್ರಸಾದ್

'ಏನೋ ಗುದ್ಲಿಂಗ, ಈ ವಾರವೆಲ್ಲಾ ನಿನ್ ಮುಖದರ್ಶನನೇ ಇಲ್ಲ' ಎಂದ ಮಾಲಿಂಗ.

'ಅದು ನಮ್ ಅಂದಾನಪ್ನೋರ್ ಕುಟ್ಟೆ ಗಣತಿಗೆ ಓಗಿದ್ದೆ ಕಣ್ಲಾ!'

'ವರದಿನೇ ಕೊಟ್ಟಾಗೈತಲ್ಲ! ನಿಂದೆಂತ ಗಣತಿನೋ?'

'ಈಗ ಕೊಟ್ಟರೋ ವರದಿ ಸರಿಯಿಲ್ಲ ಅಂತ ನಮ್ ಅಪ್ನೋರು ತಾವೇ ಒಂದು ಗಣತಿ ಮಾಡ್ತಾವ್ರೆ. ಬೆಳಿಗ್ಗೆ ಗಣತಿ, ರಾತ್ರಿ ಅಧ್ಯಯನ'.

'ನಮ್ ರಾಜಕೀಯದೋರು ಕಾಲೇಜಲ್ಲಿ ಇದ್ದಾಗ್ಲೆ ಇಂಗ್ ರಾತ್ರಿ ಹಗಲು ಪಠ್ಯಪುಸ್ತಕ ಅಧ್ಯಯನ ಮಾಡಿದ್ರೆ ಅರ್ಧಕ್ಕರ್ಧ ಜನ ರಾಜಕೀಯ ಬಿಟ್ಟು ಒಳ್ಳೆ ಕೆಲಸಕ್ಕೆ ಸೇರಿರೋರು'.

'ಅದೂ ನಿಜವೇ ಅನ್ನು. ಮನುಷ್ಯ ಕುಲಂ ತಾನೊಂದೇ ವಲಂ, ಜಾತಿ ಬೇಲಿಯೇ ಎದ್ದು ಮೇದೊಡೆ ಹೊಲಂ, ಪರೀಕ್ಷೆಯಿದು ಜಾತಿಗಳ ಬಲಾಬಲಂ ಅನ್ನೋ ಅಂಗಾಗದೆ. ನೀನು ನಿಮ್ ಅಪ್ನೋರ ಜೊತೆ ಗಣತಿ ಮಾಡುದ್ಯಲ್ಲ, ಏನೇನ್ ಕಂಡುಹಿಡ್ದಿದೀರಿ?'

'ರಾಜಕೀಯ ಮಾಡೋ ಜಾತಿ, ಮಾಡ್ದೇ ಇರೋ ಜಾತಿ, ಸೋಶಿಯಲ್ ಸ್ಟಡೀಸ್ ಓದ್ಕಂಡಿರೋ 'ಓಬಿ'ರಾಯನ ಕಾಲದೋವು, ಸೋಶಿಯಲ್ ಮೀಡಿಯಾ ನೋಡೋ ಎ.ಐ ಕಾಲ್ದೋವು ಅಂತ ಬೇಕಾದಷ್ಟು ಕೆಟಗರಿ ಐತೆ. ಇವೆಲ್ಲಾ ಮಿಕ್ಸಪ್ಪಾಗಿ ತಲೆ ಕೆಟ್ಟೋಗದೆ ಕಣ್ಲಾ! ಎಂಗೋ ನಂಗೂ ಅಪ್ಪಾವ್ರಿಗೂ ನಮ್ ಒರಿಜಿನಲ್ ಜಾತಿ ಯಾವ್ದು ಅಂತ ಅಧ್ಯಯನದಿಂದ ಗೊತ್ತಾಯ್ತು! ನಂಗೂ ಒಂದು ನೆಲೆ ಸಿಕ್ಕಂಗಾತು'.

'ನೆಲೆ ಸಿಕ್ಕೋದಾ? ಅಂಗಂದ್ರೆ?'

'ಈಗ ಬೇಕಾದಷ್ಟು ಹೊಸ ಜಾತಿ ಸಿಕ್ಕವಂತೆ. ಅದ್ರಲ್ಲಿ ನಂದೂ ಒಂದು. ಅದಕ್ಕೆ ಪೀಠ, ಸ್ವಾಮಿಗಳು ಎರಡೂ ಇಲ್ಲ. ಅಪ್ನೋರು ನನ್ನೇ ಸ್ವಾಮಿ ಮಾಡ್ತೀನಿ ಅಂತ ಯೋಳವ್ರೆ'.

'ನೀನು ಸ್ವಾಮಿ ಆದ್ರೆ ಹೆಂಡ್ತಿ ಸುಮ್ನಿರ್ತಾಳಾ?'

'ಲೇಯ್! ಅವಳ್ಗೆ ನಾನು ಬೇರೆ ಒಳಜಾತಿಗೆ ಸೇರ್ದೋನು ಅಂತ ಗೊತ್ತಾಗೈತೆ. ಸುಳ್ ಯೋಳಿ ಮದ್ವೆ ಆಗಿದೀಯ ಅಂತ ಉಗುದು ತವರಿಗೆ ಒಂಟೋದ್ಲು... ನಂಗಿನ್ನು ಮಠನೇ ಗತಿ ಕಣ್ಲಾ' ಎಂದು ಅಲವತ್ತುಕೊಂಡ ಗುದ್ಲಿಂಗ. ಎಲ್ಲಾ 'ಅಯ್ಯೋ ಪಾಪ' ಎಂದು ಲೊಚಗುಟ್ಟಿದರು.

ಸಂಗತ

ಎಳೆಯರಿಗೊಂದು ಒಲುಮೆಯ ದಾರಿ

ಮಕ್ಕಳ ಒಳಗೊಂದು ವಿಶಾಲ ಮನೋಭೂಮಿಕೆ ನಿರ್ಮಾಣ ಆಗಬೇಕು

• ಸತೀಶ್ ಜಿ.ಕೆ. ತೀರ್ಥಹಳ್ಳಿ

ಆಧುನಿಕತೆಯ ಬಿರುಗಾಳಿಯ ಅಬ್ಬರದಲ್ಲಿ ಬದುಕು-ಬಾಂಧವ್ಯದ ಸೂಕ್ಷ್ಮತೆಯನ್ನು ಕಳೆದುಕೊಳ್ಳುತ್ತಿರುವ ಯುಗವೊಂದಕ್ಕೆ ನಾವೀಗ ಎದುರಾಗುತ್ತಿರುವ ಸಂದರ್ಭವಿದು. ಸಂವೇದನಾರಾಹಿತ್ಯ, ಶುಷ್ಕ ಸ್ಥಿತಿಗತಿಯಿಂದ ನಾವಿರುವ ಸಮಾಜವನ್ನು ಆಚೆ ತರಲು ಮಾಡಬೇಕಾದುದು ಏನು ಎಂಬ ಬಗ್ಗೆ ಹಿರಿಯರೊಬ್ಬರು ಒಡನಾಡಿಗಳೊಂದಿಗೆ ಚರ್ಚಿಸುತ್ತಿದ್ದರು. ಪ್ರಸ್ತುತ ಕಾಲಘಟ್ಟದ ಅನಿವಾರ್ಯ ಎಂಬಂತೆ ಆಗಿರುವ ಹಣ, ಆಸ್ತಿ, ಅಂತಸ್ತು, ಅಧಿಕಾರದ ಬೆನ್ನು ಬಿದ್ದಿರುವ ಇಂದಿನ ಜಾಯಮಾನಕ್ಕೆ ಆರೋಗ್ಯ, ನೆಮ್ಮದಿ ಎಂಬ ಜೀವಾಮೃತದ ಮಹತ್ವ ಮರೆತುಹೋಗಿದೆ.

ಏಕಮುಖವಾಗಿ ಬೆಳೆದು ನಿಂತವರು, ಬಲಿತರನ್ನು ಬದಲಿಸುವುದು ಸುಲಭವಲ್ಲ. ಹಾಗಾಗಿ, ಸಮಾಜದ ಮುಂದಿನ ತಲೆಮಾರುಗಳಲ್ಲಿ ವಿವೇಕ ಮತ್ತು ಮಾನವೀಯ ಮೌಲ್ಯಗಳನ್ನು ಬಿತ್ತುವುದೇ ಸೂಕ್ತ ಮತ್ತು ಸಾಧ್ಯ ಮಾರ್ಗವೆಂಬ ಒಮ್ಮತದ ಅಭಿಪ್ರಾಯವೂ ಮೂಡಿತು. ಆದರೆ ಇದೀಗ ಯುವ ಮನಸ್ಸುಗಳ ಭವಿಷ್ಯವನ್ನು ಕಸಿಯುತ್ತಿರುವ ಟಿ.ವಿ, ಮೊಬೈಲ್ ಫೋನ್ ಗೀಳು, ಆನ್‌ಲೈನ್ ಗೇಮ್, ಬೆಟ್ಟಿಂಗ್ ದಂಧೆ, ಮದ್ಯ, ಮಾದಕವ್ಯಸನ ಹಾಗೂ ದ್ವೇಷ, ಅಸಹಿಷ್ಣುತೆ, ಕ್ರೌರ್ಯದ ಮನಃಸ್ಥಿತಿಗಳಿಂದ ಅವರನ್ನು ಪಾರು ಮಾಡಬೇಕಿದೆ. ಈಗಿರುವ ಹಂತದಿಂದ ನಮ್ಮ ಸಾಮಾಜಿಕ ವ್ಯವಸ್ಥೆಯನ್ನು ಸುಧಾರಿಸಲು ಶಾಲಾ ಪಠ್ಯದಲ್ಲಿ ಮೌಲ್ಯಯುತ ಶಿಕ್ಷಣದ ಕಡ್ಡಾಯ ಅಳವಡಿಕೆಗೂ ಒತ್ತಾಯ ಕೇಳಿಬಂತು. ಜೊತೆಗೆ ಪೋಷಕವರ್ಗ ಅಗತ್ಯವಾಗಿ ಕೈಗೊಳ್ಳಬೇಕಾದ ಹತ್ತಾರು ಹೊಣೆಗಾರಿಕೆಗಳ ಬಗ್ಗೆಯೂ ಚರ್ಚೆಯಾಯಿತು.

ರಜಾ ಅವಧಿಯಲ್ಲಿ ಮಕ್ಕಳಿಗೆ ಪುಸ್ತಕದಾಚೆಯ ನೈಜಲೋಕದ ಅನಾವರಣ ಆಗಬೇಕಾದ್ದು ಅವಶ್ಯ. ಪೋಷಕರ ನಿತ್ಯದ ಜಂಜಡದ ನಡುವೆಯೂ ಮಕ್ಕಳಿಗಿಷ್ಟು ಸಮಯವನ್ನು ಕಡ್ಡಾಯವಾಗಿ ಮೀಸಲಿಡಬೇಕು. ಹಣ-ಆಸ್ತಿ ಕೂಡಿಡಲು ಹೆಣಗಾಡುವ ಬದಲು ಅವರೊಂದು ಆರೋಗ್ಯಕರ ವ್ಯಕ್ತಿತ್ವವನ್ನು ಕಟ್ಟಿಕೊಳ್ಳಲು ನೆರವಾಗುವುದನ್ನು ಬದುಕಿನ ಧ್ಯೇಯ ಆಗಿಸಿಕೊಳ್ಳಬೇಕು. ಬಾಲ್ಯದಲ್ಲಿ ಮಕ್ಕಳಿಗೆ ಮಾತು, ಗ್ರಹಿಕೆ, ಕುತೂಹಲಕಾರಿ ಪ್ರಶ್ನೆಗಳು ಮೂಡುವ ಹೊತ್ತಿಗೆ ಮನೆಯಲ್ಲೊಂದು ಆರೋಗ್ಯಕರ ಸಾಂಸಾರಿಕ ವಾತಾವರಣವನ್ನು ಕಾಪಿಡಬೇಕಾದ್ದು ಅಗತ್ಯ. ಮನೆಯು ಸದಾ ಕಾಳಜಿ, ಪ್ರೀತಿ, ಕರುಣೆಯನ್ನು ಪೊರೆಯಬೇಕು. ಮನೆಮಂದಿಯ ವರ್ತನೆಯು ಮಗುವಿನ ನಾಳೆಯ ನೀಲಿನಕ್ಷೆಯನ್ನು ರೂಪಿಸುತ್ತದೆಂಬ ಅರಿವಿರಬೇಕು.

ಪೋಷಕರು ಯಾಂತ್ರಿಕತೆ, ಕೃತಕತೆ, ಬಾಹ್ಯಾಡಂಬರ, ಉದಾಸೀನವನ್ನು ಪ್ರೋತ್ಸಾಹಿಸದೆ ಮಕ್ಕಳೊಟ್ಟಿಗೆ ಆಗಾಗ ಹಳ್ಳಿಗಾಡು, ಗದ್ದೆ-ತೋಟ, ನದಿ-ತೊರೆ, ಕಡಲತೀರ, ಜಲಪಾತ, ಕಾಡು-ಕಣಿವೆ ಸುತ್ತಾಡುವಷ್ಟು ಬಿಡುವು ಮಾಡಿಕೊಳ್ಳಬೇಕು. ಮಕ್ಕಳು ಬೀಜ ಮೊಳೆಯುವ, ಸಸಿ ಚಿಗುರುವ, ಹೂ ಬಿರಿಯುವ, ಫಲ ಕಟ್ಟುವ ನೈಸರ್ಗಿಕ ಸೊಬಗನ್ನು ಬೆರಗಾಗಿ ಸವಿಯಬೇಕು. ಬೀಸುವ ಗಾಳಿ, ಸೂರ್ಯೋದಯ, ಪಶುಪಕ್ಷಿಗಳ ಸ್ವಚ್ಛಂದ ಬದುಕಿನೆಡೆಗೆ ಮನಸ್ಸು ಹೊರಳಬೇಕು. ಜೀವಸಂಕುಲದ ಸಹಜೀವನ, ಅನನ್ಯತೆ, ಪರಿಸರದ ತಾದಾತ್ಮ್ಯ, ಸೃಷ್ಟಿಯ ವಿಸ್ಮಯಗಳನ್ನು ಎಳೆಯ ಗೆಳೆಯರು ಗ್ರಹಿಸುವಂತೆ ಆಗಬೇಕು.

ಸಮಾಜದಲ್ಲಿ ಪರಸ್ಪರರೊಡನೆಯ ಬಾಂಧವ್ಯ ಸುಧಾರಣೆ, ಆತ್ಮೀಯ ಒಡನಾಟವು ಮಕ್ಕಳ ವೈಯಕ್ತಿಕ, ಸಾಮಾಜಿಕ ಬೆಳವಣಿಗೆಯ ನೆಲೆಯಲ್ಲಿ ಪ್ರಮುಖವಾಗುತ್ತದೆ. ರಜಾ ಅವಧಿಯಲ್ಲಿ ಮಕ್ಕಳನ್ನು ಐತಿಹಾಸಿಕ, ಶೈಕ್ಷಣಿಕ ಮತ್ತು ಧಾರ್ಮಿಕ ಕ್ಷೇತ್ರಗಳ ಪ್ರವಾಸಕ್ಕೆ ಕರೆದೊಯ್ಯುವ ಮೂಲಕ ಅವರ ಭಾವವಲಯದ ವಿಸ್ತರಣೆಗೆ ಕಾರಣವಾಗಬಹುದು. ಮನಸ್ಸು ಅರಳಿಸುವ ಹಾಡು, ಸಾಹಿತ್ಯ, ಸಂಗೀತ, ಚಿತ್ರಕಲೆಯಂತಹ ಚಟುವಟಿಕೆಗಳ ಒಳಗೊಳ್ಳುವಿಕೆಯಿಂದಲೂ ಹಬ್ಬ, ಜಾತ್ರೆಯಂತಹ ಧಾರ್ಮಿಕ ಕಾರ್ಯಕ್ರಮಗಳಲ್ಲಿನ ಭಕ್ತಿಪೂರ್ವಕವಾದ ಪಾಲ್ಗೊಳ್ಳುವಿಕೆಯಿಂದಲೂ ಸಾಮರಸ್ಯದ ಪಾಠ ಕಲಿಸಬಹುದು. ನಾಟಕ, ಸಿನಿಮಾ, ಸರ್ಕಸ್ ಸೇರಿದಂತೆ ವಿವಿಧ ಪಂದ್ಯಾಟಗಳಲ್ಲಿಯೂ ಮನರಂಜನೆ ಹೊಂದುವ ಮೂಲಕ ವ್ಯಕ್ತಿತ್ವ ವಿಕಸನೆಯ ಸಾಧುಮಾರ್ಗವನ್ನು ಕಂಡುಕೊಳ್ಳಬಹುದು.



ಬೆಳೆಯುವ ಹಂತದಲ್ಲಿರುವ ಮಕ್ಕಳನ್ನು ಗ್ರಂಥಾಲಯ, ಕ್ರೀಡಾಂಗಣ, ವಸ್ತುಸಂಗ್ರಹಾಲಯ, ಖಗೋಳ ವೀಕ್ಷಣೆಗೆ ಕರೆದೊಯ್ಯಬೇಕಾದದ್ದು ಬಹುಮುಖ್ಯ. ಅಲ್ಲಿಯ ಭೇಟಿ, ಮಾಹಿತಿಗಳಿಂದ ಬದುಕಿನಲ್ಲಿ ಶ್ರದ್ಧೆ-ಶ್ರಮ, ಸೋಲು-ಗೆಲುವು, ಹೊಂದಾಣಿಕೆಯ ಮಹತ್ವವನ್ನು ಅರಿಯುವುದರೊಟ್ಟಿಗೆ ವಿಶ್ವವಿಸ್ತಾರ ಮತ್ತದರ ಅಗಾಧತೆಯನ್ನು ಅನುಭವಿಸಲೂ ಸಾಧ್ಯ. ಇಂತಹದರ ಪಾಲ್ಗೊಳ್ಳುವಿಕೆಯಿಂದ ಮಕ್ಕಳೊಳಗೊಂದು ವಿಶಾಲ ಮನೋಭೂಮಿಕೆಯ ನಿರ್ಮಾಣ ಕ್ರಮೇಣ ಈಡೇರುತ್ತದೆ.

ಮಕ್ಕಳನ್ನು ಸಾಧ್ಯವಾದಾಗೆಲ್ಲಾ ರೈತರು, ಕಾರ್ಮಿಕರು, ಶ್ರಮಿಕರು, ಆಸ್ಪತ್ರೆಯ ರೋಗಿಗಳು ಮತ್ತು ಅನಾಥರ ನೆಲೆಗಳಿಗೆ ಕರೆದೊಯ್ದು ಮುಖಾಮುಖಿಯಾಗಿಸಿ ಅಲ್ಲಿಯ ಪರಿಸ್ಥಿತಿಯನ್ನು ಅರಿಯಲು ನೆರವಾಗಬೇಕು. ಶ್ರಮದ ದುಡಿಮೆ, ಸರಳ ಜೀವನಶೈಲಿ, ನಿಯತ್ತಿನ ಬೆಲೆ, ಆರೋಗ್ಯದ ಕಾಳಜಿ, ದುಃಖ, ನೋವು, ಅಸಹಾಯಕತೆಯ ಹಸಿಹಸಿ ಅನುಭವಗಳು ಅವರಲ್ಲಿ ಗಾಢವಾಗುತ್ತಾ ಸಂವೇದನಾಶೀಲ ವ್ಯಕ್ತಿತ್ವವೊಂದು ಪಕ್ವಗೊಳ್ಳಲು ವೇದಿಕೆ ನಿರ್ಮಿಸಿಕೊಟ್ಟಂತೆ ಆಗುತ್ತದೆ.

ಹೀಗೆ ಪೋಷಕ ವರ್ಗವು ಸರಳ ಮತ್ತು ಕೈಗೆಟುಕುವ ಹತ್ತಾರು ಮಾರ್ಗಗಳಲ್ಲಿ ತಮ್ಮ ಮಕ್ಕಳ ಮನೋವಿಕಾಸಕ್ಕೆ ಅವಕಾಶ ನೀಡಿದಾಗ ಸನ್ನಡತೆ, ಬದ್ಧತೆ, ಹೊಣೆಗಾರಿಕೆಯುಳ್ಳ ಸತ್ಪ್ರಜೆಗಳು ಮನೆಗಷ್ಟೇ ಅಲ್ಲ ಸಮಾಜಕ್ಕೂ ದಕ್ಕುತ್ತಾರೆ. ಆ ಮೂಲಕ ಟಿ.ವಿ, ಮೊಬೈಲ್ ಗೀಳಿನಿಂದ, ಆನ್‌ಲೈನ್ ಗೇಮ್, ಮಾದಕ ವ್ಯಸನ ಹಾಗೂ ದ್ವೇಷ, ಕ್ರೌರ್ಯದ ಮನಃಸ್ಥಿತಿಯಿಂದ ಮಕ್ಕಳು ಪಾರಾಗಲಿ ಎಂಬುದು ಆಶಯ.

ವಾಚಕರ ವಾಣಿ

ಸಿನಿಮಾ ಸಂಖ್ಯೆ ಮುಖ್ಯವಲ್ಲ

ಶುಕ್ರವಾರ ಬರುವುದೇ ತಡ ಸಾಲು ಸಾಲು ಕನ್ನಡ ಸಿನಿಮಾಗಳು ಬಿಡುಗಡೆಯಾಗುತ್ತವೆ. ಆದರೆ ಅವು ಯಾವಾಗ ಚಿತ್ರಮಂದಿರಕ್ಕೆ ಬಂದು ಹೋಗುತ್ತವೆ ಎನ್ನುವುದೇ ಗೊತ್ತಾಗುವುದಿಲ್ಲ! ಕನ್ನಡ ಚಲನಚಿತ್ರಗಳು ಯಾಕೆ ಇಷ್ಟೊಂದು ಹೀನಾಯ ಸ್ಥಿತಿಗೆ ತಲುಪಿವೆ ಎಂದು ಒಮ್ಮೆ ಯೋಚಿಸಿದರೆ, ಉತ್ತರ ಸ್ಪಷ್ಟವಾಗುತ್ತದೆ. ಒಳ್ಳೆಯ ಕತೆ– ಚಿತ್ರಕತೆಯ ಕೊರತೆ ಎದ್ದುಕಾಣುತ್ತದೆ. ಇದರ ಜೊತೆಗೆ ಜನರ ಕೈಯಲ್ಲಿ ಇರುವ ಮೊಬೈಲ್ ಫೋನ್!

ಜನರಿಗೆ ಸಿನಿಮಾ ಬಗೆಗಿನ ಆಸಕ್ತಿ ಇನ್ನೂ ಹೋಗಿಲ್ಲ. ವಿಭಿನ್ನವಾದ ಕತೆಗಳನ್ನು ಹೆಣೆಯಬೇಕು, ಅದಕ್ಕೆಲ್ಲ ದೊಡ್ಡ ಬಜೆಟ್ ಬೇಕು ಎಂದು ಮೂಗು ಮುರಿಯುವ ನಿರ್ಮಾಪಕ- ನಿರ್ದೇಶಕರಿಗೆ ಇತ್ತೀಚಿನ ವರ್ಷಗಳಲ್ಲಿ ಬಿಡುಗಡೆಯಾದ ಕೆಲವು ಚಿತ್ರಗಳು ಒಳ್ಳೆಯ ಸಂದೇಶ ರವಾನಿಸಿವೆ. ಕಡಿಮೆ ಬಜೆಟ್‌ನಲ್ಲಿ ಗಟ್ಟಿ ಕತೆಯನ್ನು ಇಟ್ಟುಕೊಂಡು ಕನ್ನಡ ಸಿನಿಮಾವನ್ನು ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಮಟ್ಟಕ್ಕೆ ಕೊಂಡೊಯ್ದವರು ಇದ್ದಾರೆ. ಅಂತಹ ವಿಭಿನ್ನ ಶೈಲಿಯ ಕತೆಗಳನ್ನು ಇಟ್ಟುಕೊಂಡು ಸಿನಿಮಾ ಮಾಡಿದರೆ ಖಂಡಿತ ಕನ್ನಡಿಗರು ಎಂದಿಗೂ ಕೈ ಬಿಡುವುದಿಲ್ಲ. ಇದನ್ನು ಸಿನಿಮಾ ಮಂದಿ ಅರ್ಥ ಮಾಡಿಕೊಳ್ಳಬೇಕು. ಬರೀ ಪ್ರಚಾರಕ್ಕೋ ಹವ್ಯಾಸಕ್ಕೋ ಖುಷಿಗೋ ಸಿನಿಮಾ ಮಾಡದೆ ಜನರಿಗೋಸ್ಕರ ಸಿನಿಮಾ ಮಾಡಿದರೆ ಒಂದಲ್ಲ ಒಂದು ದಿನ ಗೆದ್ದೇ ಗೆಲ್ಲುತ್ತಾರೆ.

ರಾಜು ಬಿ. ಲಕ್ಕಂಪುರ, ಜಗಳೂರು

ಆಧುನಿಕ ತಂತ್ರಜ್ಞಾನ ಇರುವುದೇಕೆ?

ಇತ್ತೀಚೆಗೆ ನಡೆದ ಸಿಇಟಿ ಪರೀಕ್ಷೆಯಲ್ಲಿ ಜನಿವಾರ ತೆಗೆಯದ ವಿದ್ಯಾರ್ಥಿಗೆ ಪರೀಕ್ಷೆ ಬರೆಯಲು ಅನುಮತಿ ನೀಡದಿರುವುದು, ಜನಿವಾರ ಮತ್ತು ಕೈಗೆ ಕಟ್ಟಿಕೊಂಡಿದ್ದ ಕಾಶಿ ದಾರವನ್ನು ಕತ್ತರಿಸಿರುವುದು ನಿಜಕ್ಕೂ ಅವಮಾನಕರ. ಬಹುಶಃ ಜನಿವಾರಕ್ಕೆ ಬ್ಲೂ ಟೂತ್ ಸಿಕ್ಕಿಸಿ ಪರೀಕ್ಷೆಗಳಲ್ಲಿ ನಕಲು ಮಾಡಲು ಸಾಧ್ಯ ಎಂಬುದು ಇದಕ್ಕೆ ಕಾರಣವಾಗಿರಬಹುದು. ಆದರೆ ನಕಲಿಗೆ ಅನುವಾಗಿಸುವ ವಿದ್ಯುನ್ಮಾನ ಸಾಧನಗಳನ್ನು ವಿದ್ಯಾರ್ಥಿಗಳು ಒಳಗೆ ತರುತ್ತಾರೆಯೇ ಎಂಬುದನ್ನು ಆಧುನಿಕ ತಂತ್ರಜ್ಞಾನದ ಮೂಲಕ ಕಂಡುಕೊಳ್ಳಬಹುದಲ್ಲವೇ? ಅಲ್ಲದೆ ವಿದ್ಯಾರ್ಥಿಗಳನ್ನು ಒಳಬಿಡುವ ಮುನ್ನ ಲೋಹ ಪರೀಕ್ಷಕ ಯಂತ್ರದಲ್ಲಿ ಸ್ಕ್ಯಾನಿಂಗ್ ಮಾಡಿ, ಕೂಲಂಕಷವಾಗಿ ತಪಾಸಣೆ ಮಾಡಲಾಗುತ್ತದೆ. ಹೀಗಿರುವಾಗ, ಜನಿವಾರದಲ್ಲಿ ಅಂತಹ ವಸ್ತು ಕಂಡುಬಂದಿದ್ದರೆ ಅದನ್ನು ತೆಗೆಸಬಹುದಿತ್ತಲ್ಲವೇ? ಅಷ್ಟಕ್ಕೂ ಪರೀಕ್ಷಾ ಕೇಂದ್ರಗಳಲ್ಲಿ ಜಾಮರ್ ಅಳವಡಿಸುವ ಯೋಚನೆಯನ್ನು ಕೂಡ ಮಾಡಬಹುದಿತ್ತು. ಅದು ಬಿಟ್ಟು ಒಂದು ಸಮುದಾಯದ ನಂಬಿಕೆಯ ಪ್ರತೀಕವಾದ ಜನಿವಾರವನ್ನು ತೆಗೆಸಿರುವುದು ಖೇದಕರ ಮತ್ತು ಇದಕ್ಕೆ ಕಾರಣರಾದವರ ಮೇಲೆ ಸೂಕ್ತ ಕ್ರಮ ಜರುಗಿಸಬೇಕು.

ವಿಜಯ್ ಹೆಮ್ಮಿಗೆ, ಮೈಸೂರು

ಕನಿಷ್ಠ ವಯೋಮಿತಿ: ಗೊಂದಲ ಸಲ್ಲ

ಒಂದನೇ ತರಗತಿಗೆ ಪ್ರವೇಶ ಪಡೆಯುವ ಮಗುವಿನ ಕನಿಷ್ಠ ವಯೋಮಿತಿಯನ್ನು, ಈ ಒಂದು ವರ್ಷಕ್ಕೆ ಆರು ವರ್ಷದಿಂದ ಐದು ವರ್ಷ ಐದು ತಿಂಗಳಿಗೆ ನಿಗದಿಪಡಿಸಿ ಸರ್ಕಾರ ಆದೇಶ ಹೊರಡಿಸಿರುವುದು ವರದಿಯಾಗಿದೆ. ಕೇಂದ್ರೀಯ ಮತ್ತು ನವೋದಯ ಸಂಸ್ಥೆಗಳಲ್ಲಿ ಒಂದನೇ ತರಗತಿಗೆ ಕನಿಷ್ಠ ಆರು ವರ್ಷಗಳ ವಯೋಮಿತಿ ಕಡ್ಡಾಯ. ರಾಜ್ಯ ಸರ್ಕಾರ ವಯೋಮಿತಿಯನ್ನು ಆಗಾಗ್ಗೆ ಹೀಗೆ ಬದಲಾಯಿಸುವುದು ಎಷ್ಟು ಸರಿ? ಅದೂ ಒಂದು ವರ್ಷಕ್ಕೆ ಮಾತ್ರ ಎಂದು ಸೀಮಿತಗೊಳಿಸುವುದು ಕೂಡ ಸರಿಯಾದ ಕ್ರಮವಲ್ಲ. ಶಿಕ್ಷಣ ಸಂಸ್ಥೆಗಳಲ್ಲಿ ಪ್ರವೇಶ ಪಡೆಯುವಾಗ ಈ ರೀತಿಯ ಗೊಂದಲಗಳು ಪೋಷಕರಲ್ಲಿ ಕೋಪಾವೇಶವನ್ನು ಉಂಟುಮಾಡುತ್ತವೆ. ಹೀಗೇಕೆ, ಮುಂದಿನ ವರ್ಷ ಹೇಗೆ, ಹೀಗಾದರೆ ನಮ್ಮ ಮಕ್ಕಳ ಪಾಡೇನು ಎಂಬಂತಹ ಪ್ರಶ್ನೆಗಳು ಅವರನ್ನು ಕಾಡುತ್ತವೆ. ಮಕ್ಕಳ ಹಿತದೃಷ್ಟಿಯಿಂದ ಏಕರೂಪದ ವಯೋಮಿತಿಯನ್ನು ನಿರ್ದಿಷ್ಟಪಡಿಸಿ, ಗೊಂದಲ ನಿವಾರಿಸಿ.

ಮಲ್ಲತಹಳ್ಳಿ ಎಚ್. ತುಕಾರಾಂ, ಬೆಂಗಳೂರು

ಜಾತಿಗೆ ಅಂಟಿಕೊಂಡವರಿಂದ ಜನಸೇವೆ ಸಾಧ್ಯವೇ?

ಬಹುಶಃ ಜಾತ್ಯತೀತ ಎನ್ನುವ ಪದದ ಅರ್ಥ ವಿವರಣೆಯ ವ್ಯಾಖ್ಯಾನವನ್ನು ಬದಲಾಯಿಸಬೇಕಾಗಿದೆಯೇನೋ ಅನ್ನುವಷ್ಟರ ಮಟ್ಟಿಗೆ ಎಲ್ಲ ಕ್ಷೇತ್ರಗಳಲ್ಲೂ ಜಾತೀಯತೆಯು ಪಾರಮ್ಯ ಸಾಧಿಸಿದೆ. ಎಲ್ಲ ಸಮುದಾಯಗಳಿಂದ ಮತ ಪಡೆದು ಎಲ್ಲರ ಪ್ರತಿನಿಧಿಯಾಗಿ ಆಯ್ಕೆಯಾಗಿ ಬಂದಂತಹ ವ್ಯಕ್ತಿಯು ಸಮಯ ಬಂದಾಗ ಎಲ್ಲರನ್ನೂ ಮರೆತು, ತನ್ನ ಜಾತಿಯ ಪ್ರತಿನಿಧಿಯಾಗಿ ಕರ್ತವ್ಯ ನಿರ್ವಹಿಸುತ್ತಿರುವುದನ್ನು ಬಹಿರಂಗವಾಗಿಯೇ ಕಾಣುತ್ತಿದ್ದೇವೆ. ಜಾತಿ ಜನಗಣತಿಯಾಗಲೀ ಸಾಮಾಜಿಕ ಮತ್ತು ಆರ್ಥಿಕ ಸಮೀಕ್ಷೆಯಾಗಲೀ ಇಲ್ಲಿ ಜನಪ್ರತಿನಿಧಿಗಳಿಗೆ ಇರುವ ಕರ್ತವ್ಯ ಎಂದರೆ, ಯಾವ ವರ್ಗ ತುಳಿತಕ್ಕೆ ಒಳಗಾಗಿದೆಯೋ ಅದನ್ನು ಗುರುತಿಸಿ ಮುಖ್ಯವಾಹಿನಿಗೆ ತರಬೇಕು ಎಂಬುದಷ್ಟೇ. ಅದುಬಿಟ್ಟು ತನ್ನ ಜಾತಿಯನ್ನೇ ಮುಂದೆ ತರಬೇಕೆಂದು ಹೋರಾಟ ಮಾಡಿ, ಜಾತಿಯ ಶಾಸಕರ ಸಭೆಗಳನ್ನು ನಡೆಸುವ, ಬಹಿರಂಗವಾಗಿಯೇ ತಮ್ಮ ಜಾತಿಯನ್ನು ಮಾತ್ರ ಬೆಂಬಲಿಸಿ ಮಾತನಾಡುವ ಪ್ರಬಲ ವರ್ಗದವರು ಹೇಗೆ ಸಾಮಾಜಿಕವಾಗಿ ಹಿಂದುಳಿದವರ ಹಿತ ಕಾಪಾಡಲು ಸಾಧ್ಯ?

ಈ ಬಗ್ಗೆ ನಡೆದ ಸಚಿವ ಸಂಪುಟ ಸಭೆಯಲ್ಲಿಯೂ ಜನಸಾಮಾನ್ಯರ ಪ್ರತಿನಿಧಿಗಳು ಅವರ ಜಾತಿಯ ಪ್ರತಿನಿಧಿಗಳಂತೆ ನಡೆದುಕೊಂಡಿರುವುದು ವಿಷಾದನೀಯ. ಹಾಗಾದರೆ ಇವರಿಗೆ ಮತ ಹಾಕಿದ ಬೇರೆ ಜಾತಿಯವರನ್ನು ಪ್ರತಿನಿಧಿಸುವವರು ಯಾರು? ಹಿಂದೆ ಪ್ರಬಲರು ಎನಿಸಿಕೊಂಡಿದ್ದವರಿಂದ ಯಾರು ತುಳಿತಕ್ಕೆ ಒಳಗಾಗಿದ್ದರೋ ಅವರಲ್ಲಿ ಕೆಲವೊಂದು ವರ್ಗ ಇಂದು ಪ್ರಬಲರಾಗಿ, ತುಳಿತಕ್ಕೆ ಒಳಗಾಗಿರುವವರು ಮೇಲೆ ಬರಲು ಅವಕಾಶ ನೀಡದಂತಹ ಪರಿಸ್ಥಿತಿ ಇದೆ. ಅಂದಿಗೂ ಇಂದಿಗೂ ಯಾವ ವ್ಯತ್ಯಾಸವೂ ಕಾಣುತ್ತಿಲ್ಲ. ಇವರು ತಮ್ಮ ತಮ್ಮ ಜಾತಿಯನ್ನೇ ಪ್ರತಿನಿಧಿಸುವುದಾದರೆ, ಶಾಸನಸಭೆಯಲ್ಲಿ ಎಲ್ಲ ಜಾತಿಯವರಿಗೂ ಅವರ ಜನಸಂಖ್ಯೆಯ ಅನುಸಾರ ಪ್ರಾತಿನಿಧ್ಯವನ್ನು ನೀಡುವುದು ಒಳಿತೇನೊ. ಅಸಮಾನತೆಯನ್ನು ಹೋಗಲಾಡಿಸುವ ಸುಧಾರಣೆಗಳನ್ನು ಅಷ್ಟು ಸುಲಭವಾಗಿ ಒಪ್ಪದ ಅಂದಿನವರನ್ನು ನಾವು ನಿಂದಿಸುತ್ತೇವೆ. ಆದರೆ ಇಂದು ನಡೆಯುತ್ತಿರುವುದೇನು?

ಕೆ.ಎಂ.ನಾಗರಾಜು, ಮೈಸೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. To know more about The Printers (Mysore) Private Ltd, visit www.printersmysore.com.

ಎಲ್‌ಪಿಜಿ ಹೊರೆ ಬಡ ಮಹಿಳೆಯರಿಗೆ ಬರೆ

ಭಾರತದಲ್ಲಿ ಗೃಹಬಳಕೆಯ ಅಡುಗೆ ಅನಿಲ (ಎಲ್‌ಪಿಜಿ) ಸಿಲಿಂಡರ್ ದರವನ್ನು ಕೇಂದ್ರ ಸರ್ಕಾರವು ₹50 ಹೆಚ್ಚಿಸಿದೆ. ಪ್ರಧಾನ ಮಂತ್ರಿ ಉಜ್ವಲಾ ಯೋಜನೆಯ ಫಲಾನುಭವಿಗಳೂ ಸೇರಿದಂತೆ ಎಲ್ಲ ಗೃಹ ಬಳಕೆದಾರರೂ ಎಲ್‌ಪಿಜಿಗೆ ಹೆಚ್ಚು ಹಣ ತೆರಬೇಕಾಗಿದೆ. ಪೆಟ್ರೋಲ್, ಡೀಸೆಲ್ ಮತ್ತು ಪೆಟ್ರೋಲಿಯಂ ಉತ್ಪನ್ನಗಳ ಬೆಲೆಯನ್ನು ಅನಿಯಮಿತವಾಗಿ ಪರಿಷ್ಕರಣೆ ಮಾಡಲಾಗುತ್ತಿದೆ. ಬೆಲೆ ಏರಿಕೆಯು ಬಡ ಕುಟುಂಬಗಳು ಎಲ್‌ಪಿಜಿ ಬಳಕೆ ಬಿಟ್ಟು ಮತ್ತೆ ಉರುವಲಿನ ಮೊರೆ ಹೋಗುವಂತೆ ಮಾಡುವ ಸಂಭವ ಇದ್ದು, ಇದು ಮಹಿಳೆಯರ ಆರೋಗ್ಯದ ಮೇಲೆ ಗಂಭೀರ ಪರಿಣಾಮ ಉಂಟುಮಾಡಲಿದೆ ಎಂದು ವಿಶ್ಲೇಷಿಸಲಾಗುತ್ತಿದೆ

ಪ್ರಜಾವಾಣಿ ವಾರ್ತೆ



ಆರು ತಿಂಗಳ ಹಿಂದೆ ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಕಚ್ಚಾ ತೈಲದ ಬೆಲೆ ಬ್ಯಾರಲ್‌ಗೆ ₹6,660 (78 ಡಾಲರ್) ಇತ್ತು. ಈಗ ಅದರ ಬೆಲೆ ₹5,294ಕ್ಕೆ (62 ಡಾಲರ್) ಕುಸಿದಿದೆ. ಆದಾಗ್ಯೂ, ಕೇಂದ್ರ ಸರ್ಕಾರವು ಉಜ್ವಲಾ ಫಲಾನುಭವಿಗಳೂ ಸೇರಿದಂತೆ ಗೃಹಬಳಕೆಯ ಎಲ್‌ಪಿಜಿ (14.2 ಕೆ.ಜಿ.) ಸಿಲಿಂಡರ್ ದರವನ್ನು ₹50 ಹೆಚ್ಚಿಸಿದೆ. ಎಲ್‌ಪಿಜಿ ಪೂರೈಕೆ ಮಾಡುವ ಇಂಧನ ಕಂಪನಿಗಳ ಲಾಭವನ್ನು ಉತ್ತೇಜಿಸುವ ಸಲುವಾಗಿ ಬೆಲೆ ಹೆಚ್ಚಳ ಮಾಡಲಾಗಿದೆ ಎಂದು ಕೇಂದ್ರ ಹೇಳಿದೆ. ರಾಜ್ಯದಲ್ಲಿ ಉಜ್ವಲಾ ಫಲಾನುಭವಿಗಳು ಸಿಲಿಂಡರ್‌ಗೆ ₹555 ತೆರಬೇಕಿದೆ. ಇತರ ಬಳಕೆದಾರರು ಸಿಲಿಂಡರ್‌ಗೆ ₹855 ವೆಚ್ಚ ಮಾಡಬೇಕಿದೆ.

ಕೇಂದ್ರ ಸರ್ಕಾರ ಪೆಟ್ರೋಲ್, ಡೀಸೆಲ್, ಎಲ್‌ಪಿಜಿ ಸಿಲಿಂಡರ್‌ಗಳ ಬೆಲೆ ಪರಿಷ್ಕರಣೆ ನಿರ್ಧಾರವನ್ನು ಯಾವಾಗ ಮತ್ತು ಹೇಗೆ ತೆಗೆದುಗೊಳ್ಳುತ್ತದೆ ಎನ್ನುವ ಬಗ್ಗೆ ಸ್ಪಷ್ಟತೆಯೇ ಇಲ್ಲವಾಗಿದೆ. ದೇಶದಲ್ಲಿ ಬಳಸಲಾಗುತ್ತಿರುವ ತೈಲದಲ್ಲಿ ಹೆಚ್ಚಿನ ಪ್ರಮಾಣವು ಒಪೆಕ್ ರಾಷ್ಟ್ರಗಳು ಮತ್ತು ರಷ್ಯಾದಿಂದ ಆಮದಾಗಿ ಬರುತ್ತಿದೆ. ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿನ ದರಕ್ಕೆ ಅನುಗುಣವಾಗಿ ಪೆಟ್ರೋಲಿಯಂ ಉತ್ಪನ್ನಗಳ ದರ ಪರಿಷ್ಕರಿಸಲಾಗುತ್ತದೆ ಎಂಬುದು ಕೇಂದ್ರ ಸರ್ಕಾರದ ಹೇಳಿಕೆ. ಆದರೆ, ಅದಕ್ಕೆ ವ್ಯತಿರಿಕ್ತವಾಗಿ, ಕೇಂದ್ರ ಸರ್ಕಾರವು ತನಗೆ ಬೇಕಾದಾಗಲೆಲ್ಲ ಪೆಟ್ರೋಲಿಯಂ ಉತ್ಪನ್ನಗಳ ದರಗಳ ಏರಿಳಿಕೆ ಮಾಡುತ್ತಿದೆ. ಆರ್ಥಿಕ ಕಾರಣ ಇಲ್ಲವೇ ಜನಕಲ್ಯಾಣದ ಆಶಯದಿಂದ ಬೆಲೆಯಲ್ಲಿ ಏರಿಳಿಕೆ ಮಾಡುವ ಬದಲು ಬಹುತೇಕ ಸಂದರ್ಭಗಳಲ್ಲಿ ರಾಜಕೀಯದ ಉದ್ದೇಶಕ್ಕಾಗಿ ಎಲ್‌ಪಿಜಿ ಮತ್ತು ಇತರ ಇಂಧನಗಳ ಬೆಲೆ ಪರಿಷ್ಕರಣೆ ಮಾಡಲಾಗುತ್ತಿದೆ ಎಂಬ ಆರೋಪ ಇದೆ.

ಇದಕ್ಕೆ ಪುಷ್ಟಿ ನೀಡುವಂತೆ ಈ ಹಿಂದೆ, ಅನೇಕ ಸಲ ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ತೈಲ ಬೆಲೆ ಇಳಿಕೆ ಆದಾಗಲೂ ಸರ್ಕಾರ ಅದರ ಲಾಭವನ್ನು ಗ್ರಾಹಕರಿಗೆ ವರ್ಗಾವಣೆ ಮಾಡಿರಲಿಲ್ಲ. ಆದರೆ, ವಿವಿಧ ರಾಜ್ಯಗಳ ವಿಧಾನಸಭಾ ಚುನಾವಣೆಗಳ ಸಂದರ್ಭದಲ್ಲಿ ಮತ್ತು ಲೋಕಸಭಾ ಚುನಾವಣೆಗೆ ಮುಂಚೆ ಪೆಟ್ರೋಲ್, ಡೀಸೆಲ್, ಎಲ್‌ಪಿಜಿ ಬೆಲೆ ಇಳಿಕೆಯಾಗಿತ್ತು. ಎಲ್‌ಪಿಜಿ ಸಿಲಿಂಡರ್ ಬೆಲೆ 2023ರ ಆಗಸ್ಟ್‌ನಲ್ಲಿ ₹200 ಮತ್ತು 2024ರ ಮಾರ್ಚ್‌ನಲ್ಲಿ ₹100 ಇಳಿಸಲಾಗಿತ್ತು. ಅದಾಗಿ ಇತ್ತೀಚಿನವರೆಗೂ ದರವನ್ನು ಪರಿಷ್ಕರಿಸಿರಲಿಲ್ಲ.

ದರ ನಿಗದಿ ಹೇಗೆ?

ಜಾಗತಿಕ ಮಾರುಕಟ್ಟೆಯಲ್ಲಿ ಎಲ್‌ಪಿಜಿ ಮತ್ತು ಪೆಟ್ರೋಲಿಯಂ ಉತ್ಪನ್ನಗಳ ಬೆಲೆಯ ಆಧಾರದಲ್ಲಿ ದೇಶದಲ್ಲಿ ಎಲ್‌ಪಿಜಿ ದರವನ್ನು ನಿಗದಿ ಪಡಿಸಲಾಗುತ್ತದೆ. ಎಲ್‌ಪಿಜಿಯ ಒಟ್ಟು ಆಮದು ವೆಚ್ಚವನ್ನು ಗಣನೆಗೆ ತೆಗೆದುಕೊಳ್ಳುವುದರ ಜೊತೆಗೆ ಸೌದಿ ಒಪ್ಪಂದದ ಬೆಲೆಯನ್ನೂ ಆಧರಿಸಿ ದರ ನಿಗದಿ ಪಡಿಸಲಾಗುತ್ತದೆ.


ಬಡವರಿಗೆ ಹೊರೆ

ಈಗಿನ ಬೆಲೆ ಹೆಚ್ಚಳವು ಜನರ ಮೇಲೆ, ಅದರಲ್ಲೂ ಕಡಿಮೆ ಆದಾಯದ ಕುಟುಂಬಗಳ ಮೇಲೆ ಗಂಭೀರ ಪರಿಣಾಮ ಬೀರುವ ಸಾಧ್ಯತೆ ಇದೆ. ಔಷಧ, ಆಹಾರ ಧಾನ್ಯಗಳು, ಹಾಲು ಸೇರಿದಂತೆ ಅಗತ್ಯ ವಸ್ತುಗಳ ಬೆಲೆ ಏರಿಕೆ ಆಗಿದ್ದು, ಜನ ಪರಿತಪಿಸುತ್ತಿದ್ದಾರೆ. ಇದರ ನಡುವೆ ಎಲ್‌ಪಿಜಿಗಾಗಿ ಇಷ್ಟು ಮೊತ್ತ ವ್ಯಯಿಸುವುದು ಬಡ ಮತ್ತು ಕೆಳಮಧ್ಯಮ ವರ್ಗದ ಕುಟುಂಬಗಳಿಗೆ ಕಷ್ಟವಾಗಲಿದೆ. ಇದರ ಹೊರೆ ಬಡ ಕುಟುಂಬಗಳ ಮಹಿಳೆಯರ ಮೇಲೆ ಬೀಳಲಿದೆ.

ಉರುವಲು, ಕಲ್ಲಿದ್ದಲು ಇತ್ಯಾದಿ ಬಳಸಿ ಸಾಂಪ್ರದಾಯಿಕ ರೀತಿಯಲ್ಲಿ ಅಡುಗೆ ಮಾಡುವ ಮಹಿಳೆಯರು ಹೊಗೆ ಮತ್ತಿತರ ಕಾರಣಗಳಿಂದ ಶ್ವಾಸಕೋಶದ ಕ್ಯಾನ್ಸರ್, ಹೃದಯ ಕಾಯಿಲೆಗಳು, ಪಾರ್ಶ್ವವಾಯು ಮುಂತಾದವುಗಳಿಗೆ ಒಳಗಾಗುತ್ತಿದ್ದರು. ಅದನ್ನು ತಪ್ಪಿಸುವ ಸಲುವಾಗಿ, ಅವರಿಗೆ ಶುದ್ಧ ಇಂಧನ ಲಭ್ಯವಾಗುವಂತೆ ಮಾಡಲು ಉಜ್ವಲಾ ಯೋಜನೆ ಜಾರಿಗೊಳಿಸಿ, ಉಚಿತ ಅನಿಲ ಸಂಪರ್ಕ ನೀಡಲಾಗಿತ್ತು. ಸಿಲಿಂಡರ್‌ಗಳನ್ನು ರಿಯಾಯಿತಿ ದರದಲ್ಲಿ ಪೂರೈಸುವುದಾಗಿ ಹೇಳಿತ್ತು. ಸಬ್ಸಿಡಿ ರಹಿತ ಗೃಹಬಳಕೆ ಎಲ್‌ಪಿಜಿ ಸಿಲಿಂಡರ್‌ಗಳ ಬೆಲೆಗೆ ಹೋಲಿಸಿದರೆ ಉಜ್ವಲಾ ಸಂಪರ್ಕಗಳ ಸಿಲಿಂಡರ್‌ಗಳ ಬೆಲೆ ₹300 ಕಡಿಮೆ ಇದೆ. ಹಾಗಿದ್ದರೂ, ಅನೇಕ ಕುಟುಂಬಗಳು ಎಲ್‌ಪಿಜಿ ಬಳಸುವುದನ್ನು ಈಗಾಗಲೇ ನಿಲ್ಲಿಸಿವೆ. ಈಗಿನ ಬೆಲೆ ಹೆಚ್ಚಳದಿಂದ ಇಂಥ ಮತ್ತಷ್ಟು ಕುಟುಂಬಗಳು ಉರುವಲು ಮತ್ತಿತರ ಘನ ಇಂಧನದ ಮೊರೆ ಹೋಗುವ ಸಂಭವ ಇದೆ.

ಕೇಂದ್ರ ಸರ್ಕಾರವು ಪೆಟ್ರೋಲ್ ಮತ್ತು ಡೀಸೆಲ್ ಮೇಲಿನ ಅಬಕಾರಿ ಸುಂಕವನ್ನೂ ಪ್ರತಿ ಲೀಟರ್‌ಗೆ ₹2 ಹೆಚ್ಚಿಸಿದೆ. ಸದ್ಯಕ್ಕೆ ಬೆಲೆ ಹೆಚ್ಚಳವನ್ನು ಗ್ರಾಹಕರಿಗೆ ವರ್ಗಾಯಿಸಿಲ್ಲವಾದರೂ, ಅಂತಿಮವಾಗಿ ಅದರ ಹೊರೆ ಹೊರಬೇಕಾದವರು ಬಳಕೆದಾರರೇ ಆಗಿದ್ದಾರೆ.

ಗೃಹಬಳಕೆಯ ಎಲ್‌ಪಿಜಿ ಸಂಪರ್ಕ (ಕೋಟಿಗಳಲ್ಲಿ)



ವರ್ಷ	ಸಂಪರ್ಕ
2014-15	14.9
2015-16	16.6
2016-17	19.9
2017-18	22.4
2018-19	26.5
2019-20	27.9
2020-21	28.9
2021-22	30.5
2022-23	31.40
2023-24	32.42
2024-25	32.91


1.88 ಕೋಟಿ ಕರ್ನಾಟಕದಲ್ಲಿರುವ ಸಂಪರ್ಕ

ಸಂಪರ್ಕ ದುಪ್ಪಟ್ಟು

ದಶಕದಲ್ಲಿ ದೇಶದಲ್ಲಿ ಗೃಹಬಳಕೆ ಎಲ್‌ಪಿಜಿ ಸಂಪರ್ಕಗಳ ಸಂಖ್ಯೆ ದುಪ್ಪಟ್ಟಾಗಿದೆ. 2015ರಲ್ಲಿ ಎಲ್‌ಪಿಜಿ ಸಂಪರ್ಕ ಹೊಂದಿದ್ದ ಕುಟುಂಬಗಳ ಸಂಖ್ಯೆ 14.9 ಕೋಟಿ ಇದ್ದರೆ, 2025ರ ಮಾರ್ಚ್ ಕೊನೆಗೆ ಇದು 32.91 ಕೋಟಿಗೆ ಹೆಚ್ಚಳವಾಗಿದೆ. ಪ್ರಮುಖ ತೈಲ ಕಂಪನಿಗಳ ಪ್ರಕಾರ, ದೇಶದ ಶೇ 99ರಷ್ಟು ಜನ ಎಲ್‌ಪಿಜಿಯ ಪ್ರಯೋಜನ ಪಡೆಯುತ್ತಿದ್ದಾರೆ.

2016ರ ಮೇ 1ರಂದು ಕೇಂದ್ರ ಸರ್ಕಾರ ಆರಂಭಿಸಿರುವ ಬಡಕುಟುಂಬದ ಮಹಿಳೆಯರಿಗೆ ಉಚಿತವಾಗಿ ಎಲ್‌ಪಿಜಿ ಸಂಪರ್ಕ ನೀಡುವ (ಮತ್ತೆ ಸಿಲಿಂಡರ್ ಭರ್ತಿಗೆ ಹಣ ನೀಡಬೇಕು) ಪ್ರಧಾನ ಮಂತ್ರಿ ಉಜ್ವಲಾ ಯೋಜನೆಯಿಂದಾಗಿ (ಪಿಎಂಯುವೈ) ಒಟ್ಟಾರೆ ಎಲ್‌ಪಿಜಿ ಸಂಪರ್ಕಗಳ ಸಂಖ್ಯೆ ಹೆಚ್ಚಾಗಿದೆ. ಆರಂಭದಲ್ಲಿ ಎಂಟು ಕೋಟಿ ಬಡ ಕುಟುಂಬಗಳಿಗೆ ಎಲ್‌ಪಿಜಿ ಸಂಪರ್ಕ ನೀಡುವ ಗುರಿಯನ್ನು ಸರ್ಕಾರ ಹೊಂದಿತ್ತು. ಈಗ ಎರಡನೇ ಹಂತದ ಯೋಜನೆ ಜಾರಿಯಲ್ಲಿದೆ. ಒಟ್ಟು 10.35 ಕೋಟಿ ಬಡ ಕುಟುಂಬಗಳು ಉಜ್ವಲಾ ಸಂಪರ್ಕ ಹೊಂದಿವೆ.

ಒಟ್ಟು ಗೃಹಬಳಕೆಯ ಎಲ್‌ಪಿಜಿ ಸಂಪರ್ಕದಲ್ಲಿ ಮೂರನೇ ಒಂದು ಭಾಗ 'ಉಜ್ವಲಾ' ಸಂಪರ್ಕಗಳು




ಉಜ್ವಲಾ ಎಲ್‌ಪಿಜಿ ಸಂಪರ್ಕಗಳು (ಕೋಟಿಗಳಲ್ಲಿ)

ವರ್ಷ	ಸಂಪರ್ಕ
2022	8.99
2023	9.58
2024	10.32
2025	10.35

41.47 ಲಕ್ಷ ಕರ್ನಾಟದಲ್ಲಿ 'ಉಜ್ವಲಾ' ಸಂಪರ್ಕದ ಫಲಾನುಭವಿಗಳು

ಶೇ 60ರಷ್ಟು ಆಮದು


ದೇಶದಲ್ಲಿ ವರ್ಷದಿಂದ ವರ್ಷಕ್ಕೆ ಎಲ್‌ಪಿಜಿ ಬಳಕೆ ಹೆಚ್ಚುತ್ತಿದೆ. 2024–25ರಲ್ಲಿ ಇದು 3.13 ಕೋಟಿ ಟನ್ ತಲುಪಿದೆ. ಇದಕ್ಕೆ ಪ್ರತಿಯಾಗಿ ದೇಶದಲ್ಲಿ ಸಾಕಷ್ಟು ಎಲ್‌ಪಿಜಿ ಉತ್ಪಾದನೆ ಆಗುತ್ತಿಲ್ಲ. ಶೇ 60ರಷ್ಟು ಎಲ್‌ಪಿಜಿಯನ್ನು ಆಮದು ಮಾಡಿಕೊಳ್ಳಲಾಗುತ್ತಿದೆ. ಕಳೆದ ವರ್ಷ 1.17 ಕೋಟಿ ಟನ್‌ಗಳಷ್ಟು ಎಲ್‌ಪಿಜಿಯನ್ನು ದೇಶದಲ್ಲಿ ಉತ್ಪಾದಿಸಲಾಗಿದ್ದರೆ, 1.90 ಕೋಟಿ ಟನ್‌ಗಳಷ್ಟು ಅನಿಲವನ್ನು ಆಮದು ಮಾಡಿಕೊಳ್ಳಲಾಗಿದೆ. ಭಾರತವು ಕತಾರ್, ಸೌದಿ ಅರೇಬಿಯಾ ಮತ್ತು ಯುಎಇಗಳಿಂದ ಹೆಚ್ಚಿನ ಪ್ರಮಾಣದಲ್ಲಿ ಎಲ್‌ಪಿಜಿಯನ್ನು ಆಮದು ಮಾಡಿಕೊಳ್ಳುತ್ತದೆ.



(ಕೋಟಿ ಟನ್‌ಗಳಲ್ಲಿ)

ವರ್ಷ	ದೇಶದಲ್ಲಿ ಎಲ್‌ಪಿಜಿ ಬಳಕೆ	ಎಲ್‌ಪಿಜಿ ಉತ್ಪಾದನೆ	ಎಲ್‌ಪಿಜಿ ಆಮದು
2020-21	2.75	1.21	1.64
2021-22	2.82	1.22	1.70
2022-23	2.85	1.28	1.83
2023-24	2.96	1.28	1.85
2024-25	3.13	1.17	1.90

ಎಲ್‌ಪಿಜಿ ಸಬ್ಸಿಡಿಗಾಗಿ ಕೇಂದ್ರ ಮಾಡಿದ ವೆಚ್ಚ



(ಕೋಟಿಗಳಲ್ಲಿ)

ವರ್ಷ	ವೆಚ್ಚ
2021-22	₹3,421
2022-23	₹6,817
2023-24	₹12,240
2024-25	₹14,700
2025-26*	₹12,100

* ಬಜೆಟ್ ಅಂದಾಜು

ಎಲ್‌ಪಿಜಿ ಸಬ್ಸಿಡಿಗಾಗಿ ಕೇಂದ್ರ ಸರ್ಕಾರ ಈ ಸಾಲಿನ ಬಜೆಟ್‌ನಲ್ಲಿ ₹12,100 ಕೋಟಿ ಮೀಸಲಿಟ್ಟಿದೆ. 2022–23ರಲ್ಲಿ ಗೃಹ ಬಳಕೆ ಎಲ್‌ಪಿಜಿಗೆ ಸಂಬಂಧಿಸಿದಂತೆ ತೈಲ ಕಂಪನಿಗಳು ಅನುಭವಿಸುತ್ತಿರುವ ನಷ್ಟ ತುಂಬಲು ಕೇಂದ್ರ ಸರ್ಕಾರವು ₹22 ಸಾವಿರ ಕೋಟಿ ಮೊತ್ತವನ್ನು ಕಂಪನಿಗಳಿಗೆ ವರ್ಗಾಯಿಸಿತ್ತು.



ಆಧಾರ: ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ ಸಚಿವಾಲಯ ವೆಬ್‌ಸೈಟ್, ಪೆಟ್ರೋಲಿಯಂ ಯೋಜನೆ ಮತ್ತು ವಿಶ್ಲೇಷಣೆ ಕೋಶ, ಬಜೆಟ್ ದಾಖಲೆಗಳು

ರಾಷ್ಟ್ರೀಯ

'ಶಾ' ತಂತ್ರ ತಮಿಳುನಾಡಲ್ಲಿ ಫಲ ನೀಡದು –ಸ್ಟಾಲಿನ್

ಪ್ರಜಾವಾಣಿ ವಾರ್ತೆ



ಎಂ.ಕೆ.ಸ್ಟಾಲಿನ್

ಚೆನ್ನೈ: ಕೇಂದ್ರ ಗೃಹ ಸಚಿವ ಅಮಿತ್ ಶಾ ವಿರುದ್ಧ ಶುಕ್ರವಾರ ತೀವ್ರ ವಾಗ್ದಾಳಿ ನಡೆಸಿರುವ ತಮಿಳುನಾಡು ಮುಖ್ಯಮಂತ್ರಿ ಎಂ.ಕೆ.ಸ್ಟಾಲಿನ್, 'ಅಮಿತ್ ಶಾ ಅಲ್ಲ, ಯಾವ ಶಾ ಕೂಡಾ ತಮಿಳುನಾಡು ನಿಯಂತ್ರಿಸಲಾಗದು' ಎಂದು ಕಟುವಾಗಿ ಹೇಳಿದ್ದಾರೆ.

'ತಮಿಳುನಾಡು ಎಂದಿಗೂ ದೆಹಲಿಯ ನಿಯಂತ್ರಣಕ್ಕೆ ಒಳಪ-ಡುವುದಿಲ್ಲ. 2026ರ ವಿಧಾನಸಭೆ ಚುನಾವಣೆಯಲ್ಲೂ ಡಿಎಂಕೆ ಮೈತ್ರಿಕೂಟ ಗೆಲುವು ಸಾಧಿಸುವುದು ನಿಶ್ಚಿತ' ಎಂದು ಪ್ರತಿಪಾದಿಸಿದರು.

ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಬಿಜೆಪಿ ಚುನಾವಣಾ ಕಾರ್ಯ-ತಂತ್ರರಾದ ಅಮಿತ್ ಶಾ, ರಾಜ್ಯದ ವಿದ್ಯಾ-ರ್ಥಿಗಳಿಗೆ 'ನೀಟ್'ನಿಂದ ವಿನಾಯಿತಿ ನೀಡುತ್ತೇವೆ ಮತ್ತು ಲೋಕಸಭೆ ಕ್ಷೇತ್ರದ ಮರು ವಿಂಗಡಣೆಯಲ್ಲಿ ತಮಿಳುನಾಡಿನ ಪ್ರಾತಿನಿಧ್ಯ ಕುಗ್ಗದು ಎಂದು ಹೇಳಬಲ್ಲರೆ' ಎಂದು ಪ್ರಶ್ನಿಸಿದರು

ರಾಜ್ಯಗಳ ಹಕ್ಕುಗಳಿಗಾಗಿ ಬೇಡಿಕೆ ಮಂಡಿಸುವದೇ ತಪ್ಪೇ ಎಂದು ಪ್ರಶ್ನಿಸಿದ ಸ್ಟಾಲಿನ್, 'ಎಲ್ಲ ರಾಜ್ಯಗಳ ಹಕ್ಕುಗಳಿಗಾಗಿ ತಮಿಳುನಾಡು ಹೋರಾಡುತ್ತಿದೆ. ಡಿಎಂಕೆ ಶಕ್ತಿ ರಾಜ್ಯದ ಜನರಷ್ಟೇ ಅಲ್ಲ, ಭಾರತದ ಎಲ್ಲರೂ ಎಂಬುದು ಈಗ ಸ್ಪಷ್ಟವಾಗಿದೆ' ಎಂದರು. ತಮಿಳುನಾಡು ರಾಜ್ಯಪಾಲರ ವಿರುದ್ಧದ ಕಾನೂನು ಹೋರಾಟದಲ್ಲಿ ಸರ್ಕಾರದ ಗೆಲುವನ್ನು ಇದೇ ವೇಳೆ ಉಲ್ಲೇಖಿಸಿದರು.

ಬಿಜೆಪಿ –ಎಐಎಡಿಎಂಕೆ ಮೈತ್ರಿಯನ್ನು 'ಹಗರಣ' ಎಂದು ಬಣ್ಣಿಸಿದ ಅವರು, ಎಐಎಡಿಎಂಕೆ ಈ ಮೂಲಕ ರಾಜ್ಯದ ಹಕ್ಕನ್ನು ಬಿಜೆಪಿಯಲ್ಲಿ 'ಒತ್ತೆ' ಇಟ್ಟಿದೆ ಎಂದರು.

'ತಮಿಳುನಾಡು ಎಂದಿಗೂ ದೆಹಲಿಗೆ ಮಣಿಯುವುದಿಲ್ಲ. ಪಕ್ಷ ಒಡೆಯುವ ಬಿಜೆಪಿಯವರ ಕಾರ್ಯತಂತ್ರ ಎಂದಿಗೂ ತಮಿಳುನಾಡಿನಲ್ಲಿ ಫಲ ನೀಡುವುದಿಲ್ಲ' ಎಂದು ಸ್ಟಾಲಿನ್ ಸ್ಪಷ್ಟವಾಗಿ ಹೇಳಿದರು.

ಯುನೆಸ್ಕೊ 'ವರ್ಲ್ಡ್ ರಜಿಸ್ಟರ್'ನಲ್ಲಿ ಭಗವದ್ಗೀತೆ, ನಾಟ್ಯಶಾಸ್ತ್ರ ಹಸ್ತಪ್ರತಿ



ನವದೆಹಲಿ(ಪಿಟಿಐ): ಭಗವದ್ಗೀತೆ ಹಾಗೂ ಭರತ ಮುನಿಯ ನಾಟ್ಯಶಾಸ್ತ್ರದ ಹಸ್ತಪ್ರತಿಗಳನ್ನು ಯುನೆಸ್ಕೊದ 'ಮೆಮೊರಿ ಆಫ್ ದಿ ವರ್ಲ್ಡ್ ರಜಿಸ್ಟರ್'ಗೆ ಸೇರ್ಪಡೆ ಮಾಡಲಾಗಿದೆ.

ಭಗವದ್ಗೀತೆ ಹಾಗೂ ನಾಟ್ಯಶಾಸ್ತ್ರದ ಹಸ್ತಪ್ರತಿಗಳು ಸೇರಿದಂತೆ ಪರಂಪರೆ ಕುರಿತ 74 ಹೊಸ ದಾಖಲೆಗಳ ಸಂಗ್ರಹಗಳನ್ನು ಈ 'ಮೆಮೊರಿ ಆಫ್ ದಿ ವರ್ಲ್ಡ್ ರಜಿ-ಸ್ಟರ್'ನಲ್ಲಿ ಸೇರ್ಪಡೆ ಮಾಡಲಾಗಿದೆ.

ವೈಜ್ಞಾನಿಕ ಕ್ರಾಂತಿ, ಇತಿಹಾಸ ಹಾಗೂ ಬಹುಪಕ್ಷೀಯ ವಿಷಯಗಳಿಗೆ ಸಂಬಂಧಿಸಿ 72 ದೇಶಗಳ ಮಹಿಳೆಯರ ಕೊಡುಗೆ, ನಾಲ್ಕು ಅಂತರರಾಷ್ಟ್ರೀಯ ಸಂಘಟನೆಗಳ ಕುರಿತ ವಿವರಗಳು ಕೂಡ ಈ ನೋಂದಣಿಯ ಭಾಗವಾಗಿವೆ ಎಂದು ಯುನೆಸ್ಕೊ ತಿಳಿಸಿದೆ. ಏ. 18 ವಿಶ್ವ ಪಾರಂಪರಿಕ ದಿನವಾಗಿದೆ.

'ಭಗವದ್ಗೀತೆ ಹಾಗೂ ನಾಟ್ಯ-ಶಾಸ್ತ್ರದ ಹಸ್ತಪ್ರತಿಗಳು ಯುನೆಸ್ಕೊ ರಜಿಸ್ಟರ್‌ನಲ್ಲಿ ಸ್ಥಾನ ಪಡೆದಿರುವುದು ವಿಶ್ವದೆಲ್ಲೆಡೆ ಇರುವ ಭಾರತೀಯರಿಗೆ ಹೆಮ್ಮೆಯ ಸಂಗತಿ' ಎಂದು ಪ್ರಧಾನಿ ನರೇಂದ್ರ ಮೋದಿ ಅವರು 'ಎಕ್ಸ್'ನಲ್ಲಿ ಪೋಸ್ಟ್ ಮಾಡಿದ್ದಾರೆ.

'ಈ ಕ್ರಮವು ದೇಶದ ಶ್ರೀಮಂತ ಸಂಸ್ಕೃತಿ ಮತ್ತು ಜ್ಞಾನಕ್ಕೆ ಜಾಗತಿಕ ಮನ್ನಣೆ ಸಿಕ್ಕಿರುವುದನ್ನು ತೋರಿಸುತ್ತದೆ. ಗೀತೆ ಹಾಗೂ ನಾಟ್ಯಶಾಸ್ತ್ರ ಶತಮಾನಗಳಿಂದಲೂ ನಮ್ಮ ನಾಗರಿಕತೆ ಹಾಗೂ ಪ್ರಜ್ಞೆಯನ್ನು ಪೋಷಿಸಿವೆ' ಎಂದೂ ಹೇಳಿದ್ದಾರೆ.

'ಕ್ರಿಸ್ತಪೂರ್ವ 2ನೇ ಶತಮಾನದ, ಭರತ ಮುನಿ ರಚಿತ ನಾಟ್ಯಶಾ-ಸ್ತ್ರವನ್ನು ಪುಣೆಯ ಭಂಡಾರ್ಕರ್ ಓರಿಯಂಟಲ್ ರಿಸರ್ಚ್ ಇನ್‌ಸ್ಟಿಟ್ಯೂಟ್‌ನಲ್ಲಿ ಸಂರಕ್ಷಿಸಿಡಲಾಗಿದೆ. ಪ್ರದರ್ಶಕ ಕಲೆ ಕುರಿತ ಈ ಗ್ರಂಥವು 36 ಸಾವಿರ ಪದ್ಯಗಳನ್ನು ಒಳಗೊಂಡಿದ್ದು, ಗಂಧರ್ವವೇದ ಎಂದೇ ಖ್ಯಾತಿ ಹೊಂದಿದೆ' ಯುನೆಸ್ಕೊ ಹೇಳಿದೆ.

ಮುರ್ಶಿದಾಬಾದ್ ಹಿಂಸಾಚಾರ ಎನ್‌ಎಚ್‌ಆರ್‌ಸಿ ತಂಡ ಭೇಟಿ

ಮಾಲದಾ (ಪಿಟಿಐ): ಪಶ್ಚಿಮ ಬಂಗಾಳದ ಮಾಲದಾಕ್ಕೆ ಆಗಮಿಸಿರುವ ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗ (ಎನ್‌ಎಚ್‌ಆರ್‌ಸಿ) ತಂಡವು, ಇಲ್ಲಿನ ತಾತ್ಕಾಲಿಕ ನಿರಾಶ್ರಿತರ ಶಿಬಿರದಲ್ಲಿ ಆಶ್ರಯ ಪಡೆದಿರುವ ಹಿಂಸಾಚಾರ ಪೀಡಿತ ಮುರ್ಶಿದಾಬಾದ್ ಸಂತ್ರಸ್ತರನ್ನು ಶುಕ್ರವಾರ ಭೇಟಿ ಮಾಡಿತು.

ಗಲಭೆಪೀಡಿತ ಪ್ರದೇಶಗಳಲ್ಲಿ ಮಾನವ ಹಕ್ಕುಗಳ ಉಲ್ಲಂಘನೆ ಆರೋಪ ಮತ್ತು ಹಿಂಸಾಚಾರದ ಬಗ್ಗೆ ದೂರು ದಾಖಲಾದ ಬೆನ್ನಲ್ಲೇ, ಎನ್‌ಎಚ್‌ಆರ್‌ಸಿಯು ತಂಡವನ್ನು ರವಾನಿಸಿದೆ.

ಮುರ್ಶಿದಾಬಾದ್ ಜಿಲ್ಲೆಯ ಮುಸ್ಲಿಂ ಬಾಹುಳ್ಯದ ಪ್ರದೇಶಗಳಾದ ಶಮಶೇರಗಂಜ್, ಸುತಿ, ಧುಲಿಯಾನ್ ಮತ್ತು ಜಂಗಿಪುರದಲ್ಲಿ ನಡೆದ ಹಿಂಸಾಚಾರದಲ್ಲಿ ಮೂವರು ಮೃತಪಟ್ಟಿದ್ದಾರೆ. ಈ ಪ್ರದೇಶಗಳಲ್ಲಿ ವಾಸಿಸುತ್ತಿದ್ದ ಹಲವು ಜನರು ತಮ್ಮ ಪ್ರಾಣ ಉಳಿಸಿಕೊಳ್ಳಲು ತಮ್ಮ ಮನೆಗಳನ್ನು ತೊರೆದು ಮಾಲದಾ ಜಿಲ್ಲೆಯಲ್ಲಿ ಸ್ಥಾಪನೆಯಾಗಿರುವ ನಿರಾಶ್ರಿತರ ಶಿಬಿರಗಳಲ್ಲಿ ಆಶ್ರಯ ಪಡೆದಿದ್ದಾರೆ ಎಂದು ಎನ್‌ಎಚ್‌ಆರ್‌ಸಿ ಅಧಿಕಾರಿಗಳು ತಿಳಿಸಿದ್ದಾರೆ.

ಈ ಸಂಬಂಧ ಮೂರು ವಾರಗಳಲ್ಲಿ ವಿಸ್ತೃತ ವರದಿ ನೀಡಬೇಕು ಎಂದು ಎನ್‌ಎಚ್‌ಆರ್‌ಸಿ ತನ್ನ ತಂಡಕ್ಕೆ ಸೂಚನೆ ನೀಡಿದೆ. ಮುರ್ಶಿದಾಬಾದ್‌ನಲ್ಲಿ ವಕ್ಫ್ ತಿದ್ದುಪಡಿ ಕಾಯ್ದೆ ವಿರುದ್ಧದ ಪ್ರತಿಭಟನೆ ಸಂದರ್ಭದಲ್ಲಿ ಸಂಭವಿಸಿದ ಹಿಂಸಾಚಾರದ ಗಂಭೀರತೆಯನ್ನು ಅರಿತ ಆಯೋಗವು, ವಸ್ತುಸ್ಥಿತಿ ತಿಳಿಯಲು ತಂಡವನ್ನು ಮಾಲದಾಕ್ಕೆ ರವಾನಿಸಲು ನಿರ್ಧರಿಸಿರುವುದಾಗಿ ಮಂಗಳವಾರ ತಿಳಿಸಿತ್ತು.

ಪದಬಂಧ 6016


– ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ಹಿಂದೆ ನಡೆದಿರುವ ಕಥೆ (4)
3.ಕೋಲನ್ನು ಹಿಡಿದಿದ್ದಕ್ಕೇ ಈ ಗದ್ದಲ! (4)
5.ಗುಣವಂತನು ಹಿಡಿದಿರುವ ದೊಡ್ಡ ಮಡಕೆ (3)
6.ಕನ್ನಡಿಗ ಹಿಡಿದಿರುವ ಸ್ಕ್ರೂ! (3)
8.ವ್ಯಾಕರಣದಲ್ಲಿ ಗಂಡು ಜಾತಿಯನ್ನು ಸೂಚಿಸುವ ಶಬ್ದ (3)
9.ಅಂಕಣದಲ್ಲಿ ಕಾಣಿಸಿದ ಸಂಖ್ಯೆ (2)
10.ಆನೆ ಕುದುರೆಗಳನ್ನು ಕಟ್ಟುವ ಜಾಗ (2)
11.ಈ ರೀತಿ ವಂದಿಸು (3)
12.ತಿರುಗಿದ ಮಗನಿಗೆ ಇದು ಸಲೀಸು (3)
14.ಸಾರ ತೆಗೆದ ವಸ್ತು ಕೊನೆಗೆ ದೀರ್ಘವಾಗಿದೆ-ಯಲ್ಲಾ! (3)
16.ಚಾರ ಕೊನೆಗೆ ಬಂದದ್ದಕ್ಕೇ ದುರದೃಷ್ಟ (4)
17.ನಾಳದಲ್ಲಿರುವ ತೆಂಗಿನಕಾಯಿ (4)

ಮೇಲಿಂದ ಕೆಳಕ್ಕೆ

1.ಅಭ್ಯುದ್ಯಯ ಇಲ್ಲಿ ಕಾಣುತ್ತಿದೆ (3)
2.ನಡುಗುತ್ತಲೇ ಬೀರಿದ ಮಂದಹಾಸ (2)
3.ಮಹಿಷ ಇಲ್ಲಿಗೆ ಬಂದಿದೆಯಲ್ಲಾ? (2)
4.ಬಂಗಾಳದಿಂದ ತಂದಿರುವ ಸಾಂಬಾರ ದ್ರವ್ಯ (3)
7.ಈ ರೀತಿ ಸಮರ್ಥಿಸು (5)
8. ಹೀಗೆ ಮಾತಿನಲ್ಲಿ ನಯವಾಗಿ ಉಬ್ಬಿಸು (5)
11.ಉಗ್ರನ ಉಗುರಿನ ಮೊನೆ (3)
13.ಮರಳ ಬಳಿಯಿರುವ ಹುಚ್ಚ (3)
14.ಗೋಚರವಾಗಿರುವ ಜೀವಂತ ವಸ್ತುವಿದು! (2)
15.ಉಲ್ಟಾ ಬಿದ್ದಿರುವ ಮರದ ದಿಮ್ಮಿ (2)



6015ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಹರಾಹುರಿ 3.ಕಕ್ಕುಲತೆ
5.ಪುಢಾರಿ 6.ಖಚರ
8.ಪತಿತ 10.ವಿರಸ
12.ಮಾನವ 13.ಜಾತಕ
15.ಕಡಿವಾಣ
16.ಸಬಕಾರ

ಮೇಲಿಂದ ಕೆಳಕ್ಕೆ:
1.ಹಸ್ತಕ್ಷೇಪ 2.ರಿಪು 3.ಕರಿ
4.ತೆಪರ 7.ಚರಾಚರ
9.ತಿರೋಧಾನ
11.ಸರೋವರ 12.ಮಾಪಕ
13.ಜಾಣ 14.ಕಸ

ಸುಡೊಕು 6401

		4		9		1		8
	1			3			6	
		7	4		1	3		9
2	9				4	6		
1	4						3	
							9	4
3		9			5		7	
	8			1		9		3
4		1	3		9		8	

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

6400 ಸುಡೊಕು

3	4	8	2	7	9	6	5	1
9	6	1	5	8	3	2	7	4
5	7	2	1	6	4	3	9	8
6	9	4	7	3	5	1	8	2
2	8	5	6	9	1	7	4	3
1	3	7	4	2	8	9	6	5
8	5	9	3	1	6	4	2	7
7	1	6	8	4	2	5	3	9
4	2	3	9	5	7	8	1	6

ಗುಂಡಣ್ಣ



ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಶನಿವಾರ ಏಪ್ರಿಲ್ 19, 2025

ಶ್ರೀ ವಿಶ್ವಾವಸು ನಾಮ ಸಂವತ್ಸರ ಉತ್ತರಾಯಣ ವಸಂತ ಋತು ತಿಥಿ: ಚೈತ್ರ ಕೃಷ್ಣಷಷ್ಠಿ ಗಂ. 18-23 ನಕ್ಷತ್ರ: ಮೂಲ ಗಂ. 10-21 ಯೋಗ: ಶಿವ ಗಂ. 24-52 ಕರಣ: ಗರ ಗಂ. 05-49, ಮೇಷ ಮಾಸದ 06 ನೇ ದಿನ, ಮಳೆನಕ್ಷತ್ರ: ಅಶ್ವಿನಿ 2.
ರಾಹುಕಾಲ : ಬೆಳಿಗ್ಗೆ 09-00 – 10-30
ಸೂರ್ಯೋದಯ : 06-10 ಸೂರ್ಯಾಸ್ತ : 06-40
ಮುಸ್ಲಿಂ ದಿನಾಂಕ : 20 ಶವ್ವಾಲ್
ದಿನ ವಿಶೇಷ : ಈಸ್ಟರ್ ಶನಿವಾರ (ಕ್ರಿಶ್ಚಿಯನ್), ಅದೃಷ್ಟ ಸಂಖ್ಯೆ : 7, 12

ಮೇಷ: ತೆಗೆದುಕೊಂಡಂಥ ಸ್ಪಷ್ಟ ನಿರ್ಧಾರವನ್ನು, ಮಾಡಿದ ವಿಚಾರವನ್ನು ಮತ್ತೊಮ್ಮೆ ಯೋಚಿಸಲು ಅವಕಾಶಗಳು ಒದಗಿ ಬರುತ್ತವೆ. ಎಲ್ಲಾ ಕಾರ್ಯಗಳೂ ನಿಮ್ಮಿಷ್ಟದಂತೆ ನಡೆಯಲಿವೆ.

ವೃಷಭ: ಮಕ್ಕಳು ವಿದ್ಯಾಭ್ಯಾಸದಲ್ಲಿ ಉತ್ಸಾಹ ತೋರಲಿದ್ದಾರೆ. ಈ ದಿನ ಸಾರ್ವಜನಿಕರ ಹಿತಾಸಕ್ತಿಗಾಗಿ ಹಣ ಸಂಗ್ರಹ ಮಾಡುವುದು ಗೌರವಕ್ಕೆ ಚ್ಯುತಿಯನ್ನು ತರುತ್ತದೆ.

ಮಿಥುನ: ಬಂಧುಗಳ ಸಹಾಯವನ್ನು ನಯವಾಗಿ ನಿರಾಕರಿಸುವ ಮಾರ್ಗ ಅತ್ಯಂತ ಶುಭಪ್ರದವಾದದ್ದು. ವಿಚಾರಸಂಕಿರಣದಲ್ಲಿ ಭಾಗವಹಿಸಲು ಆಮಂತ್ರಣ ಸಿಗಲಿದೆ.

ಕರ್ಕಾಟಕ: ಎಲ್ಲಾ ಬೆಳವಣಿಗೆಯಲ್ಲಿ ನಾಯಕತ್ವ ವಹಿಸುವುದರಿಂದ ಕೆಟ್ಟ ಜನಗಳ ದೃಷ್ಟಿದೋಷಕ್ಕೆ ಗುರಿಯಾಗಲಿದ್ದೀರಿ. ವಂಶಪಾರಂಪರ್ಯವಾಗಿ ಬಂದ ವ್ಯಾಪಾರ ವ್ಯವಹಾರ ಏಳಿಗೆ ಕಾಣಲಿದೆ.

ಸಿಂಹ: ವರ್ತಮಾನದ ಸಮಯವನ್ನು ಚೆನ್ನಾಗಿ ಅರ್ಥೈಸಿಕೊಂಡು ಮುಂದಿನ ಹೆಜ್ಜೆ ಇಡುವುದು ಉತ್ತಮ. ಬಡ್ತಿ ಅವಕಾಶವನ್ನು ಕೈತಪ್ಪದಂತೆ ನೋಡಿಕೊಳ್ಳಿ. ಷೇರು ವ್ಯವಹಾರಗಳು ಕೂಡಿ ಬರುತ್ತವೆ.

ಕನ್ಯಾ: ನೇರ ನುಡಿಯ ಸ್ವಭಾವದಿಂದಾಗಿ ಸಹೋದ್ಯೋಗಿಗಳಲ್ಲಿ ಮನಸ್ತಾಪ ಉಂಟಾಗಬಹುದು. ಕುಟುಂಬ ವರ್ಗದಲ್ಲಿ ನಿರ್ಣಯಗಳಿಗೆ ಸಕಾರಾತ್ಮಕ ಬೆಂಬಲ ದೊರೆಯಲಿದೆ. ಮನೆಯೇ ಸೌಖ್ಯದ ತಾಣ.

ತುಲಾ: ಕಹಿ ಘಟನೆಗಳಿಗೆ ಪ್ರಾಮುಖ್ಯ ಕೊಡುವ ಅವಶ್ಯಕತೆಯಿಲ್ಲ. ಅಂಥ ಘಟನೆಗಳನ್ನು ನಿರ್ಲಕ್ಷಿಸಬಹುದು. ಅಧಿಕಾರಿಗಳಿಗೆ ಸಹಾಯಕ ದರ್ಜೆಯವರಿಂದ ನಿರೀಕ್ಷೆಗೆ ಮೀರಿದ ಸಹಾಯ ದೊರೆಯುವುದು.

ವೃಶ್ಚಿಕ: ಗಂಭೀರ ಹಂತದಲ್ಲಿರುವ ವೈಯಕ್ತಿಕ ಹಾಗೂ ಔದ್ಯೋಗಿಕ ಸಂಬಂಧಗಳನ್ನು ಸರಿಗೊಳಿಸುವ ಪ್ರಯತ್ನ ನಡೆಸಬಹುದು. ಅವಿವಾಹಿತರಿಗೆ ಸೂಕ್ತ ಸಂಬಂಧಗಳು ಸ್ನೇಹಿತರ ಬಳಗದಿಂದ ಒದಗಿಬರಬಹುದು.

ಧನು: ಹೂವು ಮತ್ತು ಹಣ್ಣಿನ ಬೆಳೆಗಾರರಿಗೆ, ವ್ಯಾಪಾರಿಗಳಿಗೆ ಲಾಭ ದೊರೆಯುತ್ತದೆ. ದೇಹಕ್ಕೆ ಆಯಾಸವಾದಲ್ಲಿ ಅದನ್ನು ಸ್ವತಃ ಆರೈಕೆ ಮಾಡಿಕೊಳ್ಳುವುದು ಉತ್ತಮ. ಅನಿರೀಕ್ಷಿತ ಶುಭ ಸುದ್ದಿ ಕೇಳುವಿರಿ.

ಮಕರ: ಅನೇಕ ಸಾಮಾಜಿಕ ಚಟುವಟಿಕೆಗಳಲ್ಲಿ ಭಾಗವಹಿಸಿ, ಪ್ರಶಂಸೆಗೆ ಪಾತ್ರ-ರಾಗುತ್ತೀರಿ. ಒತ್ತಡ ತೀವ್ರವಾದ ಕಾರಣ ಶಿರೋವೇದನೆ ಕಾಡಲಿದೆ. ಗುರು ಹಿರಿಯರ ಆಶೀರ್ವಾದ ಪಡೆಯುವಿರಿ.

ಕುಂಭ: ಉನ್ನತ ಹುದ್ದೆಯಿಂದ ಮನಸ್ಸಿಗೆ ಖುಷಿಯಿದ್ದರೂ ಕೆಲಸದ ಒತ್ತಡದಿಂದ ಕೆಲವು ಆರೋಗ್ಯ ಸಮಸ್ಯೆಗಳು ಕಾಣಿಸಬಹುದು. ಲೇವಾದೇವಿ ವ್ಯವಹಾರ ನಡೆಸುವವರು ಸಾಲ ಕೊಡದಿರಲು ನಿಶ್ಚಯಿಸುವುದು ಉತ್ತಮ.

ಮೀನ: ರಾಜಕೀಯ ವ್ಯಕ್ತಿಗಳು ಜನಪ್ರಿಯತೆಯ ಉತ್ತುಂಗಕ್ಕೆ ಏರಬಹುದು. ಎಲ್ಲವನ್ನು ನಂಬುವುದು ಕಷ್ಟವಾಗುವುದು. ಮನೆಯ ವಿಸ್ತರಣೆ ವಿಷಯವಾಗಿ ಉತ್ತಮ ಆಲೋಚನೆಗಳು ಗರಿಗೆದರಲಿವೆ.



ಟಿಮ್ ಡೇವಿಡ್ ಅರ್ಧಶತಕ: ಕಳಪೆ ಬ್ಯಾಟಿಂಗ್‌ಗೆ ದಂಡ ತೆತ್ತ ರಜತ್ ಬಳಗ

ಬೆಂಗಳೂರಿನಲ್ಲಿ ಪಂಜಾಬ್ 'ಕಿಂಗ್'

• ಗಿರೀಶ ದೊಡ್ಡಮನಿ



ಅರ್ಧ ಶತಕ ಬಾರಿಸಿದ ಟಿಂ ಡೇವಿಡ್ ಚಿತ್ರ : ಎಸ್‌.ಕೆ.ದಿನೇಶ್

ಬೆಂಗಳೂರು: ಮಳೆ, ಚಳಿಯನ್ನೂ ಲೆಕ್ಕಿಸದೇ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಕಿಕ್ಕಿರಿದು ಸೇರಿದ್ದ ಅಭಿಮಾನಿಗಳಿಗೆ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡದ ಗೆಲುವು ಕಣ್ತುಂಬಿಕೊಳ್ಳುವ ಆಸೆ ಈಡೇರಲೇ ಇಲ್ಲ. ತಂಡಕ್ಕೆ ತವರಿನಂಗಳದಲ್ಲಿ ಸತತ ಮೂರನೇ ಸೋಲಿನ ಹತಾಶೆ ಕಾಡಿತು.

ಆರ್‌ಸಿಬಿ ಅಭಿಮಾನಿಗಳ ಪಾಲಿಗೆ ಟಿಮ್ ಡೇವಿಡ್ ಅವರ ಆಕರ್ಷಕ ಅರ್ಧಶತಕ (50; 26ಎ, 4X5, 6X3) ಮಾತ್ರ ನೆನಪಿನಲ್ಲಿ ಉಳಿಯಿತು. ಅಷ್ಟು ಬಿಟ್ಟರೆ ಪಂದ್ಯದಲ್ಲಿ ಪಂಜಾಬ್ ಕಿಂಗ್ಸ್ ತಂಡದ್ದೇ ಪಾರಮ್ಯ. ಶ್ರೇಯಸ್ ಅಯ್ಯರ್ ನಾಯಕತ್ವದ ಕಿಂಗ್ಸ್ 5 ವಿಕೆಟ್‌ಗಳಿಂದ ಜಯಿಸಿತು.

ಮಳೆಯಿಂದಾಗಿ ಸುಮಾರು 2 ಗಂಟೆ 15 ನಿಮಿಷ ವಿಳಂಬವಾಗಿ ಆರಂಭವಾದ ಪಂದ್ಯದಲ್ಲಿ ಟಾಸ್ ಗೆದ್ದ ಪಂಜಾಬ್ ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತು. ಇನಿಂಗ್ಸ್‌ಗೆ 14 ಓವರ್‌ಗಳ ಆಟವನ್ನು ನಿಗದಿಪಡಿಸಲಾಯಿತು. ಪಂಜಾಬ್ ಬೌಲರ್‌ಗಳ ದಾಳಿ ಮತ್ತು ಫೀಲ್ಡರ್‌ಗಳ ಚುರುಕಾದ ಆಟದ ಮುಂದೆ ಆರ್‌ಸಿಬಿಯು ನಿಗದಿತ ಓವರ್‌ಗಳಲ್ಲಿ 9 ವಿಕೆಟ್‌ಗಳಿಗೆ 95 ರನ್ ಪೇರಿಸಿತು.

ಗುರಿ ಬೆನ್ನಟ್ಟಿದ ಪಂಜಾಬ್ ತಂಡವು 12.1 ಓವರ್‌ಗಳಲ್ಲಿ 5 ವಿಕೆಟ್‌ಗಳಿಗೆ 98 ರನ್ ಗಳಿಸಿತು. ಈಚೆಗೆ ಮುಲ್ಲನಪುರದಲ್ಲಿ ನಡೆದಿದ್ದ ಪಂದ್ಯದಲ್ಲಿ ಪಂಜಾಬ್ ತಂಡವು 'ಹಾಲಿ ಚಾಂಪಿಯನ್' ಕೋಲ್ಕತ್ತ ನೈಟ್ ರೈಡರ್ಸ್ ತಂಡಕ್ಕೆ 111 ರನ್‌ಗಳ ಅಲ್ಪಗುರಿ ನೀಡಿ ಜಯಿಸಿತ್ತು. ಕೆಕೆಆರ್ ತಂಡವನ್ನು ಕೇವಲ 95 ರನ್‌ಗಳಿಗೆ ಕಟ್ಟಿಹಾಕಿತ್ತು.

ಇಲ್ಲಿಯೂ ಆರ್‌ಸಿಬಿ ತಂಡವನ್ನು ಅಷ್ಟೇ ರನ್‌ಗಳಿಗೆ ನಿಯಂತ್ರಿಸಿತು. ಅದಕ್ಕೆ ಪ್ರಮುಖ ಕಾರಣವಾಗಿದ್ದು ಎಡಗೈ ವೇಗಿ ಅರ್ಷದೀಪ್ ಸಿಂಗ್. ತಮ್ಮ ಮೊದಲ ಸ್ಪೆಲ್‌ನಲ್ಲಿಯೇ ಅರ್ಷದೀಪ್ ಅವರು ಫಿಲ್ ಸಾಲ್ಟ್ ಮತ್ತು ವಿರಾಟ್ ಕೊಹ್ಲಿ ವಿಕೆಟ್‌ಗಳನ್ನು ಕಬಳಿಸಿದರು. ನಾಯಕ ರಜತ್ ಪಾಟೀದಾರ್ (23; 18ಎ) ಬಿಟ್ಟರೆ ಉಳಿದ ಬ್ಯಾಟರ್‌ಗಳು ಹೆಚ್ಚು ಪ್ರತಿರೋಧ ತೋರಲಿಲ್ಲ. 9 ಬ್ಯಾಟರ್‌ಗಳು ಎರಡಂಕಿ ಮುಟ್ಟಲೇ ಇಲ್ಲ.

ಡೇವಿಡ್ ಅಬ್ಬರ

ಆರ್‌ಸಿಬಿ 6.1 ಓವರ್‌ಗಳಲ್ಲಿ 33 ರನ್‌ಗಳಿಗೆ 5 ವಿಕೆಟ್ ಕಳೆದುಕೊಂಡ ಸಂದರ್ಭದಲ್ಲಿ ಕ್ರೀಸ್‌ಗೆ ಬಂದ ಟಿಮ್ ಡೇವಿಡ್ ಇನಿಂಗ್ಸ್‌ಗೆ ಜೀವ ತುಂಬಿದರು. ಅವರ ಆಟದಿಂದಾಗಿ ಕೊನೆಯ ಐದು ಓವರ್‌ಗಳಲ್ಲಿ 52 ರನ್‌ಗಳು ಹರಿದುಬಂದವು. ಅದರಲ್ಲೂ ಸ್ಪಿನ್ನರ್ ಹರಪ್ರೀತ್ ಬ್ರಾರ್ ಹಾಕಿದ ಕೊನೆಯ ಓವರ್‌ನಲ್ಲಿ 'ಸಿಕ್ಸರ್ ಹ್ಯಾಟ್ರಿಕ್' ಸಾಧಿಸಿದರು. ಇದೊಂದೇ ಓವರ್‌ನಲ್ಲಿ ಒಟ್ಟು 21 ರನ್‌ಗಳು ಸೇರಿದವು.

ಆಸ್ಟ್ರೇಲಿಯಾದ ಆರೂವರೆ ಅಡಿ ಎತ್ತರದ ಅಜಾನುಬಾಹು ಡೇವಿಡ್ ಅವರಿಗೆ ಐಪಿಎಲ್‌ನಲ್ಲಿ ಇದು ಮೊದಲ ಅರ್ಧಶತಕ. ಆರ್‌ಸಿಬಿ ಪರವಾಗಿ ಏಳನೇ ಕ್ರಮಾಂಕದಲ್ಲಿ ಬ್ಯಾಟಿಂಗ್ ಮಾಡಿ 50ಕ್ಕಿಂತ ಹೆಚ್ಚು ರನ್ ಗಳಿಸಿದ ಎರಡನೇ ಬ್ಯಾಟರ್ ಕೂಡ ಆದರು. 2022ರಲ್ಲಿ ದಿನೇಶ್ ಕಾರ್ತಿಕ್ ಇದೇ ಕ್ರಮಾಂಕದಲ್ಲಿ ಅಜೇಯ 66 ರನ್ ಗಳಿಸಿದ್ದರು.

ಡೇವಿಡ್ ಅವರು ಮುರಿಯದ 10ನೇ ವಿಕೆಟ್ ಜೊತೆಯಾಟದಲ್ಲಿ ಜೋಷ್ ಹ್ಯಾಜಲ್‌ವುಡ್ ಅವರೊಂದಿಗೆ 32 ರನ್ ಸೇರಿಸಿದರು.

ಆಸೆ ಚಿಗುರಿಸಿದ ಜೋಶ್

ಗುರಿ ಬೆನ್ನಟ್ಟಿದ ಪಂಜಾಬ್ ತಂಡಕ್ಕೆ ಆತಿಥೇಯ ಬಳಗದ ವೇಗಿ ಹ್ಯಾಜಲ್‌ವುಡ್ (14ಕ್ಕೆ3) ಮತ್ತು ಭುವನೇಶ್ವರ್ ಕುಮಾರ್ (26ಕ್ಕೆ2) ಸವಾಲೊಡ್ಡಿದರು. ಇನಿಂಗ್ಸ್ ಆರಂಭದಲ್ಲಿ ಭುವಿ ಪೆಟ್ಟುಕೊಟ್ಟರು. ಅದರಿಂದಾಗಿ ಪಂಜಾಬ್ 32ಕ್ಕೆ 2 ವಿಕೆಟ್ ಕಳೆದುಕೊಂಡಿತು. ಎಂಟನೇ ಓವರ್ ಹಾಕಿದ ಜೋಶ್ ಅವರು ಶ್ರೇಯಸ್ ಅಯ್ಯರ್ ಮತ್ತು ಇಂಗ್ಲಿಸ್ ಅವರ ವಿಕೆಟ್ ಗಳಿಸಿದರು. ಇದರಿಂದಾಗಿ ಆರ್‌ಸಿಬಿಗೆ ಜಯದ ಆಸೆ ಚಿಗುರಿತ್ತು.

ಆದರೆ, ನೆಹಲ್ ವಧೇರಾ (33; 19ಎ) ಅವರು ಅಬ್ಬರದ ಆಟದ ಮೂಲಕ ಪಂಜಾಬ್ ತಂಡವನ್ನು ಗೆಲುವಿನ ದಡ ಸೇರಿಸಿದರು.

ಪಾಯಿಂಟ್ಸ್ ಪಟ್ಟಿ

ತಂಡ	ಪಂದ್ಯ	ಜಯ	ಸೋಲು	ಅಂಕ	ಎನ್‌ಆರ್‌ಆರ್
ಡೆಲ್ಲಿ ಕ್ಯಾಪಿಟಲ್ಸ್	6	5	1	10	0.744
ಗುಜರಾತ್ ಟೈಟನ್ಸ್	6	4	2	8	1.081
ರಾಯಲ್ ಚಾಲೆಂಜರ್ಸ್ ಬೆಂಗಳೂರು	6	4	2	8	0.672
ಪಂಜಾಬ್ ಕಿಂಗ್ಸ್	6	4	2	8	0.172
ಲಖನೌ ಸೂಪರ್ ಜೈಂಟ್ಸ್	7	4	3	8	0.086
ಕೋಲ್ಕತ್ತ ನೈಟ್ ರೈಡರ್ಸ್	7	3	4	6	0.547
ಮುಂಬೈ ಇಂಡಿಯನ್ಸ್	7	3	4	6	0.239
ರಾಜಸ್ಥಾನ ರಾಯಲ್ಸ್	7	2	5	4	-0.714
ಸನ್‌ರೈಸರ್ಸ್ ಹೈದರಾಬಾದ್	7	2	5	4	-1.217
ಚೆನ್ನೈ ಸೂಪರ್ ಕಿಂಗ್ಸ್	7	2	5	4	-1.276

ಆರೇಂಜ್ ಕ್ಯಾಪ್
ನಿಕೋಲಸ್ ಪೂರನ್ (ಎಲ್‌ಎಸ್‌ಜಿ) 357 ರನ್

ಪರ್ಪಲ್ ಕ್ಯಾಪ್
ನೂರ್ ಅಹಮ್ಮದ್ (ಸಿಎಸ್‌ಕೆ) 12 ವಿಕೆಟ್

ಸ್ಕೋರ್ ಕಾರ್ಡ್

ರಾಯಲ್ ಚಾಲೆಂಜರ್ಸ್ ಬೆಂಗಳೂರು: 9 ವಿಕೆಟ್‌ಗೆ 95 (14 ಓವರುಗಳಲ್ಲಿ)
ಸಾಲ್ಟ್ ಸಿ ಇಂಗ್ಲಿಸ್ ಬಿ ಅರ್ಷದೀಪ್ 4 (4ಎ, 4x1)
ಕೊಹ್ಲಿ ಸಿ ಯಾನ್ಸೆನ್ ಬಿ ಅರ್ಷದೀಪ್ 1 (3ಎ)
ಪಾಟೀದಾರ್ ಸಿ ಬಾರ್ಟ್ಲೆಟ್ ಬಿ ಚಾಹಲ್ 23 (18ಎ, 4x1, 6x1)
ಲಿವಿಂಗ್‌ಸ್ಟೋನ್ ಸಿ ಆರ್ಯ ಬಿ ಬಾರ್ಟ್ಲೆಟ್ 4 (6ಎ, 4x1)
ಜಿತೇಶ್ ಸಿ ವಧೇರಾ ಬಿ ಚಾಹಲ್ 2 (7ಎ)
ಕೃಣಾಲ್ ಸಿ ಮತ್ತು ಯಾನ್ಸೆನ್ 1 (2ಎ)
ಟಿಂ ಡೇವಿಡ್ ಔಟಾಗದೇ 50 (26ಎ, 4x5, 6x3)
ಭಾಂಡಗೆ ಎಲ್‌ಬಿಡಬ್ಲ್ಯು ಬಿ ಯಾನ್ಸೆನ್ 1 (4ಎ)
ಭುವನೇಶ್ವರ್ ಸಿ ಬಾರ್ಟ್ಲೆಟ್ ಬಿ ಬ್ರಾರ್ 8 (13ಎ, 4x1)
ಯಶ್ ದಯಾಳ್ ಎಲ್‌ಬಿಡಬ್ಲ್ಯು ಬಿ ಬ್ರಾರ್ 0 (1ಎ)
ಹ್ಯಾಜಲ್‌ವುಡ್ ಔಟಾಗದೇ 0 (1ಎ)
ಇತರೆ: 1 (ನೋಬಾಲ್ 1)
ವಿಕೆಟ್ ಪತನ: 1-4 (ಫಿಲ್ ಸಾಲ್ಟ್, 0.4), 2-21 (ವಿರಾಟ್ ಕೊಹ್ಲಿ, 2.4), 3-26 (ಲಿಯಾಮ್ ಲಿವಿಂಗ್‌ಸ್ಟೋನ್, 3.6), 4-32 (ಜಿತೇಶ್ ಶರ್ಮಾ, 5.5), 5-33 (ಕೃಣಾಲ್ ಪಾಂಡ್ಯ, 6.1), 6-41 (ರಜತ್ ಪಾಟೀದಾರ್, 7.4), 7-42 (ಮನೋಜ್ ಭಾಂಡಗೆ, 8.2), 8-63 (ಭುವನೇಶ್ವರ ಕುಮಾರ್, 11.4), 9-63 (ಯಶ್ ದಯಾಳ್, 11.5).
ಬೌಲಿಂಗ್: ಅರ್ಷದೀಪ್ ಸಿಂಗ್ 3-0-23-2; ಝೇವಿಯರ್ ಬಾರ್ಟ್ಲೆಟ್ 3-0-26-1; ಮಾರ್ಕೊ ಯಾನ್ಸೆನ್ 3-0-10-2; ಯಜುವೇಂದ್ರ ಚಾಹಲ್ 3-0-11-2; ಹರ್‌ಪ್ರೀತ್ ಬ್ರಾರ್ 2-0-25-2

ಪಂಜಾಬ್ ಕಿಂಗ್ಸ್: 5 ವಿಕೆಟ್‌ಗೆ 98 (12.1 ಓವರ್‌ಗಳಲ್ಲಿ)
ಪ್ರಿಯಾಂಶು ಸಿ ಡೇವಿಡ್ ಬಿ ಹೇಜಲ್‌ವುಡ್ 16 (11ಎ, 4x1, 6x1)
ಪ್ರಭಸಿಮ್ರಾನ್ ಸಿ ಡೇವಿಡ್ ಬಿ ಭುವನೇಶ್ವರ 13 (9ಎ, 4x2)
ಶ್ರೇಯಸ್ ಸಿ ಜಿತೇಶ್ ಬಿ ಹೇಜಲ್‌ವುಡ್ 7 (10ಎ)
ಇಂಗ್ಲಿಸ್ ಸಿ ಸುಯಶ್ ಬಿ ಹೇಜಲ್‌ವುಡ್ 14 (17ಎ, 4x2)
ನೇಹಲ್ ಔಟಾಗದೇ 33 (19 ಎ, 4x3, 6x3)
ಶಶಾಂಕ್ ಸಿ ಸಾಲ್ಟ್ ಬಿ ಕುಮಾರ್ 1 (5 ಎ)
ಸ್ಟೋಯಿನಿಸ್ ಔಟಾಗದೇ 7 (2ಎ, 6x1)
ಇತರೆ: (ಬೈಸ್ 4,ಲೆಗ್ ಬೈ 4, ವೈಡ್ 2) 7
ವಿಕೆಟ್ ಪತನ: 1-22 (ಪ್ರಭಸಿಮ್ರಾನ್ ಸಿಂಗ್, 2.4), 2-32 (ಪ್ರಿಯಾಂಶ್ ಆರ್ಯ, 3.4), 3-52 (ಶ್ರೇಯಸ್ ಅಯ್ಯರ್, 7.4), 4-53 (ಜೋಶ್ ಇಂಗ್ಲಿಸ್, 7.6), 5-81(ಶಶಾಂಕ್ ಸಿಂಗ್ 11.3)
ಬೌಲಿಂಗ್: ಭುವನೇಶ್ವರ ಕುಮಾರ್ 3-0-26-2ಯಶ್ ದಯಾಳ್ 2.1-0-18-0ಜೋಶ್ ಹೇಜಲ್‌ವುಡ್ 3-0-14-3ಕೃಣಾಲ್ ಪಾಂಡ್ಯ 1-0-10-0ಸುಯಶ್ ಶರ್ಮಾ 3-0-25-0
ಪಂದ್ಯದ ಆಟಗಾರ: ಟಿಂ ಡೇವಿಡ್

ಫಲಿತಾಂಶ: ಪಂಜಾಬ್ ತಂಡಕ್ಕೆ 5 ವಿಕೆಟ್ ಜಯ



ಗೆಲುವಿನ ಸಂಭ್ರಮದಲ್ಲಿ ಮಾರ್ಕಸ್ ಸ್ಟೋಯಿನಿಸ್ ಮತ್ತು ವಧೇರಾ

ಡೆಲ್ಲಿ– ಟೈಟನ್ಸ್ 'ಹೈವೋಲ್ಟೇಜ್ ಪಂದ್ಯ' ಇಂದು

ಸ್ಟಾರ್ಕ್– ಸಿರಾಜ್ ಮೇಲಾಟಕ್ಕೆ ವೇದಿಕೆ



ಮಿಚೆಲ್ ಸ್ಟಾರ್ಕ್



ಮೊಹಮ್ಮದ್ ಸಿರಾಜ್

ಅಹಮದಾಬಾದ್ (ಪಿಟಿಐ): ಪಾಯಿಂಟ್ಸ್ ಪಟ್ಟಿಯಲ್ಲಿ ಅಗ್ರಸ್ಥಾನದಲ್ಲಿರುವ ಡೆಲ್ಲಿ ಕ್ಯಾಪಿಟಲ್ಸ್ ತಂಡವು ಶನಿವಾರ ಇಲ್ಲಿ ನಡೆಯುವ 'ಹೈವೋಲ್ಟೇಜ್ ಐಪಿಎಲ್ ಪಂದ್ಯದಲ್ಲಿ' ಗುಜರಾತ್ ಟೈಟನ್ಸ್ ತಂಡವನ್ನು ಎದುರಿಸಲಿದೆ. ಡೆಲ್ಲಿಯ 'ಡೆತ್ ಓವರ್' ಪರಿಣತ ಮಿಚೆಲ್ ಸ್ಟಾರ್ಕ್ ಮತ್ತು ಟೈಟನ್ಸ್‌ನ ಮೊಹಮ್ಮದ್ ಸಿರಾಜ್ ಅವರ ಕೌಶಲದ ಮೇಲಾಟಕ್ಕೆ ಈ ಪಂದ್ಯ ವೇದಿಕೆಯಾಗಿದೆ.

ಕ್ಯಾಪಿಟಲ್ಸ್ ಆರು ಪಂದ್ಯಗಳಿಂದ 10 ಅಂಕ ಗಳಿಸಿದೆ. ಶುಭಮನ್ ಗಿಲ್ ನೇತೃತ್ವದ ಗುಜರಾತ್ ಟೈಟನ್ಸ್ ಇಷ್ಟೇ ಪಂದ್ಯಗಳಿಂದ ಎಂಟು ಪಾಯಿಂಟ್ಸ್ ಗಳಿಸಿದೆ.

ರಾಯಲ್ಸ್ ವಿರುದ್ಧ ಸೂಪರ್ ಓವರ್ ಗೆಲುವಿನ ನಂತರ ಡೆಲ್ಲಿ ತಂಡದ ಆತ್ಮವಿಶ್ವಾಸ ವೃದ್ಧಿಸಿದೆ. ಇದಕ್ಕೆ ಸ್ಟಾರ್ಕ್ ಅವರ ಚಮತ್ಕಾರಿಕ 20ನೇ ಓವರ್ ಮತ್ತು ಸೂಪರ್ ಓವರ್ ಕಾರಣವಾಗಿತ್ತು. ಅವರ ನಿಖರ ಯಾರ್ಕರ್‌ಗಳ ಮುಂದೆ ರಾಜಸ್ಥಾನದ ಬ್ಯಾಟರ್‌ಗಳು ಪರದಾಡಿದ್ದರು. ಅವರು ಹಾಲಿ ಲೀಗ್‌ನಲ್ಲಿ 10 ವಿಕೆಟ್ ಪಡೆದಿದ್ದಾರೆ.

ಗುಜರಾತ್ ಟೈಟನ್ಸ್‌ನ ಪ್ರಮುಖ ಬ್ಯಾಟರ್‌ಗಳಾದ ನಾಯಕ ಶುಭಮನ್ ಗಿಲ್, ಸಾಯಿ ಸುದರ್ಶನ್, ಜೋಸ್ ಬಟ್ಲರ್ ಜೊತೆ ಸ್ಟಾರ್ಕ್ ಮುಖಾಮುಖಿ ಕುತೂಹಲಕ್ಕೆ ಎಡೆ ಮಾಡಿದೆ.

ಚಾಂಪಿಯನ್ಸ್ ಟ್ರೋಫಿ ತಂಡದಿಂದ ಹೊರಬಿದ್ದಿದ್ದ ಸಿರಾಜ್ ಆ ಅವಧಿಯಲ್ಲಿ ತಮ್ಮ ಬೌಲಿಂಗ್‌ಅನ್ನು ಮೊನಚುಗೊಳಿಸಿದ್ದಾರೆ. ಲೆಂಗ್ತ್ ಮತ್ತು ಗತಿಯ ಬದಲಾವಣೆಯಿಂದ ಯಶಸ್ಸು ಪಡೆಯುತ್ತಿದ್ದಾರೆ. 8.50ರ ಇಕಾನಮಿಯಲ್ಲಿ 10 ವಿಕೆಟ್ ಪಡೆದಿದ್ದಾರೆ. ವಿಶೇಷವಾಗಿ ಪವರ್‌ಪ್ಲೇಯಲ್ಲಿ ಪರಿಣಾಮಕಾರಿ ಎನಿಸಿದ್ದಾರೆ. ಸಿರಾಜ್ ಅವರಿಗೆ ಪ್ರಸಿದ್ಧಕೃಷ್ಣ ಅವರ ಬೆಂಬಲವಿದೆ.

ಡೆಲ್ಲಿಯ ಆರಂಭಿಕ ಆಟಗಾರ ಜೇಕ್ ಫ್ರೇಸರ್ ಮೆಕ್‌ಗುರ್ಕ್ ಲಯದಲ್ಲಿಲ್ಲ. ಕೆ.ಎಲ್.ರಾಹುಲ್, ಕರುಣ್ ನಾಯರ್, ಅಭಿಷೇಕ್ ಪೊರೆಲ್, ಟ್ರಿಸ್ಟನ್ ಸ್ಟಬ್ಸ್ ಅವರು ಕೆಲ ಪಂದ್ಯಗಳಲ್ಲಿ ಮಿಂಚಿದ್ದಾರೆ.

ಎರಡೂ ತಂಡಗಳಲ್ಲಿ ಗುಣಮಟ್ಟದ ಸ್ಪಿನ್ನರ್‌ಗಳಿದ್ದಾರೆ. ಅಕ್ಷರ್ ಅವರಿಗೆ ತವರು ಗುಜರಾತ್ ನೆಲದಲ್ಲಿ ಮಿಂಚುವ ತವಕ ಇದೆ. ಅಕ್ಷರ್, ಕುಲದೀಪ್ ಯಾದವ್, ಯುವತಾರೆ ವಿಪ್ರಜ್ ನಿಗಮ್ ಡೆಲ್ಲಿ ತಂಡದ ಪ್ರಮುಖ ಸ್ಪಿನ್ನರ್‌ಗಳಾಗಿದ್ದರೆ, ಸಾಯಿಕಿಶೋರ್ ಮತ್ತು ಅನುಭವಿ ರಶೀದ್ ಟೈಟನ್ಸ್‌ನ ಸ್ಪಿನ್ ಅಸ್ತ್ರವಾಗಿದ್ದಾರೆ.

ಪಂದ್ಯ ಆರಂಭ: ಮಧ್ಯಾಹ್ನ 3.30.

ಸಿಎಸ್‌ಕೆಗೆ ಡೆವಾಲ್ಡ್ ಬ್ರೇವಿಸ್



ನವದೆಹಲಿ (ಪಿಟಿಐ): ಫ್ರಾಂಚೈಸಿ ಕ್ರಿಕೆಟ್‌ನಲ್ಲಿ ಅಲೆಗಳನ್ನೆಬ್ಬಿಸಿರುವ ದಕ್ಷಿಣ ಆಫ್ರಿಕಾದ ಯುವ ಆಲ್‌ರೌಂಡರ್ ಡೆವಾಲ್ಡ್ ಬ್ರೆವಿಸ್ ಅವರು ಚೆನ್ನೈ ಸೂಪರ್ ಕಿಂಗ್ಸ್ ತಂಡವನ್ನು ಸೇರಿಕೊಂಡಿದ್ದಾರೆ. ಗಾಯಾಳು ವೇಗಿ ಗುರಜಪನೀತ್ ಸಿಂಗ್ ಸ್ಥಾನವನ್ನು ಅವರು ತುಂಬಿದ್ದಾರೆ.

2023ರಲ್ಲಿ ಟಿ20 ಅಂತರ ರಾಷ್ಟ್ರೀಯ ಕ್ರಿಕೆಟ್‌ಗೆ ಪದಾರ್ಪಣೆ ಮಾಡಿದ್ದ 21 ವರ್ಷ ವಯಸ್ಸಿನ ಬ್ರೆವಿಸ್, ಐಪಿಎಲ್, ಸಿಪಿಎಲ್, ಎಂಎಲ್‌ಸಿ ಮತ್ತು ಎಸ್‌ಎ20 ಟೂರ್ನಿಗಳಲ್ಲಿ ಆಡಿದ್ದಾರೆ.

ಈ ವರ್ಷ ಎಸ್‌ಎ 20 ಲೀಗ್‌ನಲ್ಲಿ ಎಂಐ ಕೇಪ್ ಟೌನ್ ತಂಡ ಮೊದಲ ಬಾರಿ ಪ್ರಶಸ್ತಿ ಗೆಲ್ಲುವಲ್ಲಿ ಅವರ ಪಾತ್ರ ಪ್ರಮುಖ. 184.17ರ ಸ್ಟ್ರೈಕ್‌ರೇಟ್‌ನಲ್ಲಿ ಅವರು 291 ರನ್ ಬಾರಿಸಿದ್ದು, ಸರ್ವಾಧಿಕ ಸ್ಕೋರ್ ಗಳಿಸಿದ ಬ್ಯಾಟರ್‌ಗಳ ಪಟ್ಟಿಯಲ್ಲಿ ಆರನೇ ಸ್ಥಾನ ಗಳಿಸಿದ್ದರು.

ಗೆಲುವಿನ ಒತ್ತಡದಲ್ಲಿ ರಾಯಲ್ಸ್



ಏಡನ್ ಮರ್ಕರಂ



ಸಂಜು ಸ್ಯಾಮ್ಸನ್

ಜೈಪುರ (ಪಿಟಿಐ): ಆತಿಥೇಯ ರಾಜಸ್ಥಾನ ರಾಯಲ್ಸ್ ತಂಡವು ಶನಿವಾರ ಇಲ್ಲಿ ನಡೆಯಲಿರುವ ಐಪಿಎಲ್ ಪಂದ್ಯದಲ್ಲಿ ಲಖನೌ ಸೂಪರ್ ಜೈಂಟ್ಸ್ ವಿರುದ್ಧ ಆಡಲಿದೆ.

ಸಂಜು ಸ್ಯಾಮ್ಸನ್ ನಾಯಕತ್ವದ ರಾಯಲ್ಸ್ ತಂಡವು ಟೂರ್ನಿಯಲ್ಲಿ ಆಡಿರುವ ಏಳು ಪಂದ್ಯಗಳಲ್ಲಿ ಎರಡರಲ್ಲಿ ಮಾತ್ರ ಜಯಿಸಿದೆ. ಅದರಲ್ಲೂ ಕಳೆದ ಪಂದ್ಯದಲ್ಲಿ ಡೆಲ್ಲಿ ಕ್ಯಾಪಿಟಲ್ಸ್ ವಿರುದ್ಧ ರೋಚಕ ಸೂಪರ್ ಓವರ್‌ನಲ್ಲಿ ಸೋತಿತ್ತು.

ಟೂರ್ನಿಯ ಅರ್ಧ ಭಾಗ ಈಗ ಮುಗಿದಿದೆ. ಉಳಿದಿರುವ ಪಂದ್ಯಗಳಲ್ಲಿ ಮೈಚಳಿ ಬಿಟ್ಟು ಆಡದೇ ಹೋದರೆ ರಾಜಸ್ಥಾನ ತಂಡಕ್ಕೆ ಪ್ಲೇ ಆಫ್ ಹಾದಿ ಕಠಿಣವಾಗಬಹುದು. ಯಶಸ್ವಿ ಜೈಸ್ವಾಲ್, ನಿತೀಶ್ ರಾಣಾ, ರಿಯಾನ್ ಪರಾಗ್ಮತ್ತು ಶಿಮ್ರಾನ್ ಹೆಟ್ಮೆಯರ್ ಲಯ ಕಾಪಾಡಿಕೊಂಡರೆ ದೊಡ್ಡ ಮೊತ್ತ ದಾಖಲಿಸಲು ಸಾಧ್ಯವಾಗಬಹುದು. ವೇಗಿ ಜೋಫ್ರಾ ಆರ್ಚರ್, ಸಂದೀಪ್ ಶರ್ಮಾ, ಸ್ಪಿನ್ನರ್ ಮಹೀಷ ತೀಕ್ಷಣ, ವಣಿಂದು ಹಸರಂಗಾ ಅವರ ಮೇಲೆ ಬೌಲಿಂಗ್ ವಿಭಾಗ ಅವಲಂಬಿತವಾಗಿದೆ.

ರಿಷಭ್ ಪಂತ್ ನಾಯಕತ್ವದ ಲಖನೌ ತಂಡದ ಸ್ಥಿತಿ ರಾಯಲ್ಸ್‌ಗಿಂತ ಸ್ವಲ್ಪ ಚೆನ್ನಾಗಿದೆ. ಏಳು ಪಂದ್ಯಗಳಲ್ಲಿ ನಾಲ್ಕು ಗೆದ್ದು, ಉಳಿದದ್ರಲ್ಲಿ ಸೋತಿದೆ. ತನ್ನ ಕಳೆದ ಪಂದ್ಯದಲ್ಲಿ ಚೆನ್ನೈ ಸೂಪರ್ ಕಿಂಗ್ಸ್ ಎದುರುಪರಾಭವಗೊಂಡಿತ್ತು.

ತಂಡದ ಬ್ಯಾಟಿಂಗ್ ವಿಭಾಗ ಉತ್ತಮವಾಗಿದೆ. ಅದರಲ್ಲೂ ನಿಕೊಲಸ್ ಪೂರನ್ ಅವರ ಬೀಸಾಟಕ್ಕೆ ತಡೆಯೊಡ್ಡುವುದೇ ಬೌಲರ್‌ಗಳಿಗೆ ಪ್ರಮುಖ ಸವಾಲು.

ಡೇವಿಡ್ ಮಿಲ್ಲರ್, ಏಡನ್ ಮರ್ಕರಂ ಹಾಗೂ ಮಿಚೆಲ್ ಮಾರ್ಷ್ ಕೂಡ ರನ್‌ಹೊಳೆ ಹರಿಸುತ್ತಿರುವ ಪ್ರಮುಖ ಬ್ಯಾಟರ್‌ಗಳು. ಶಾರ್ದೂಲ್ ಠಾಕೂರ್, ಸ್ಪಿನ್ನರ್ ದಿಗ್ವೇಶ್ ರಾಠಿ, ರವಿ ಬಿಷ್ಣೋಯಿ ತಂಡಕ್ಕೆ ಗೆಲುವು ತಂದು ಕೊಡಬಲ್ಲ ಚತುರ ಬೌಲರ್‌ಗಳಾಗಿದ್ದಾರೆ.

ಪಂದ್ಯ ಆರಂಭ: ರಾತ್ರಿ 7.30
ನೇರಪ್ರಸಾರ: ಸ್ಟಾರ್ ಸ್ಪೋರ್ಟ್ಸ್ ಜಿಯೊ ಹಾಟ್‌ಸ್ಟಾರ್ ಆ್ಯಪ್

ಇಂಡಿಯನ್ ಆಯಿಲ್‌ಗೆ ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಇಂಡಿಯನ್ ಆಯಿಲ್ ಕಂಪನಿಯ 'ಎಕ್ಸ್‌ಟ್ರಾಪವರ್ ಫ್ಲೀಟ್ ಕಾರ್ಡ್ ಲಾಯಲ್ಟಿ ಪ್ರೋಗ್ರಾಂ' 2025ರ ಪ್ರತಿಷ್ಠಿತ 'ಸ್ಕೋಚ್ ಚಿನ್ನದ ಪ್ರಶಸ್ತಿ'ಗೆ ಭಾಜನವಾಗಿದೆ.

ಇಂಡಿಯನ್ ಆಯಿಲ್‌ನ ಪ್ರಮುಖ ಯೋಜನೆಯಾದ 'ಎಕ್ಸ್‌ಟ್ರಾಪವರ್ ಫ್ಲೀಟ್ ಕಾರ್ಡ್ ಲಾಯಲ್ಟಿ ಪ್ರೋಗ್ರಾಂ'ಗೆ 'ಡಿಜಿಟಲ್ ಪರಿವರ್ತನೆ: ವ್ಯಾಪಾರ ಪ್ರಕ್ರಿಯೆ ಪರಿವರ್ತನೆ' ವಿಭಾಗದಲ್ಲಿ ಈ ಪ್ರಶಸ್ತಿ ದೊರೆತಿದೆ ಎಂದು ತಿಳಿಸಿದೆ.

ಸ್ಕೋಚ್‌ನ 100ನೇ ಶೃಂಗಸಭೆಯಲ್ಲಿ ಇಂಡಿಯನ್ ಆಯಿಲ್‌ನ ತಂಡಕ್ಕೆ ಸ್ಕೋಚ್ ಡೆವಲಪ್‌ಮೆಂಟ್ ಫೌಂಡೇಷನ್‌ನ ಅಧ್ಯಕ್ಷ ಸಮೀರ್ ಕೊಚಾರ್ ಅವರು ಪ್ರಶಸ್ತಿ ನೀಡಿದ್ದಾರೆ.

'ಈ ಪ್ರಶಸ್ತಿಯು ಸಾರಿಗೆ ಮತ್ತು ಲಾಜಿಸ್ಟಿಕ್ಸ್ ವಲಯಕ್ಕೆ ನಾವೀನ್ಯತೆಯನ್ನು ಹೆಚ್ಚಿಸುವ ಮತ್ತು ಗ್ರಾಹಕ ಕೇಂದ್ರಿತ ಡಿಜಿಟಲ್ ಸೇವೆಗಳನ್ನು ತಲುಪಿಸುವಲ್ಲಿ ಇಂಡಿಯನ್ ಆಯಿಲ್‌ನ ನಿರಂತರ ಪ್ರಯತ್ನಗಳನ್ನು ಗುರುತಿಸುತ್ತದೆ' ಎಂದು ಕಂಪನಿ ಹೇಳಿದೆ.

ಆಡಳಿತ, ಹಣಕಾಸು, ತಂತ್ರಜ್ಞಾನ, ಬ್ಯಾಂಕಿಂಗ್, ಸಾಮಾಜಿಕ–ಆರ್ಥಿಕ ವಲಯಗಳಲ್ಲಿ ಉತ್ತಮ ಕೆಲಸಗಳನ್ನು ಮಾಡುವ ಸಂಸ್ಥೆಗಳಿಗೆ ಸ್ಕೋಚ್ ಸಮೂಹವು ಪ್ರಶಸ್ತಿ ನೀಡಿ ಗೌರವಿಸುತ್ತದೆ. ಇದು ಸರ್ಕಾರೇತರ ಸ್ವತಂತ್ರ ಸಂಸ್ಥೆಯಾಗಿದೆ.

18 ಐಎಎಸ್ ಅಧಿಕಾರಿಗಳ ನೇಮಕ

ನವದೆಹಲಿ (ಪಿಟಿಐ): ಕರ್ನಾಟಕ ಕೇಡರ್‌ನ ಹಿರಿಯ ಐಎಎಸ್ ಅಧಿಕಾರಿ ಅರವಿಂದ್ ಶ್ರೀವಾಸ್ತವ ಸೇರಿದಂತೆ 18 ಐಎಎಸ್ ಅಧಿಕಾರಿಗಳನ್ನು ಕೇಂದ್ರ ಸರ್ಕಾರ ವಿವಿಧ ಹುದ್ದೆಗಳಿಗೆ ನೇಮಿಸಿದೆ.

ಶ್ರೀವಾಸ್ತವ ಅವರು 1994ರ ಬ್ಯಾಚ್‌ನ ಕರ್ನಾಟಕ ಕೇಡರ್‌ನ ಭಾರತೀಯ ಆಡಳಿತ ಸೇವೆ (ಐಎಎಸ್) ಅಧಿಕಾರಿ. ಪ್ರಸ್ತುತ ಪ್ರಧಾನ ಮಂತ್ರಿ ಕಚೇರಿಯಲ್ಲಿ (ಪಿಎಂಒ) ಹೆಚ್ಚುವರಿ ಕಾರ್ಯದರ್ಶಿಯಾಗಿ ಕೆಲಸ ಮಾಡುತ್ತಿದ್ದು, ಕೇಂದ್ರ ಹಣಕಾಸು ಸಚಿವಾಲಯದ ರೆವೆನ್ಯೂ ಇಲಾಖೆಯ ಕಾರ್ಯದರ್ಶಿಯಾಗಿ ನೇಮಕವಾಗಿದ್ದಾರೆ.

ಇದೇ ವೇಳೆ ಹಿರಿಯ ಐಎಎಸ್ ಅಧಿಕಾರಿ ಸಮೀರ್ ಕುಮಾರ್ ಸಿನ್ಹಾ ಅವರು ಸಹ ಕೇಂದ್ರ ನಾಗರಿಕ ವಿಮಾನಯಾನ ಸಚಿವಾಲಯದ ಕಾರ್ಯದರ್ಶಿಯಾಗಿದ್ದಾರೆ. ಸಿನ್ಹಾ ಮತ್ತು ಶ್ರೀವಾಸ್ತವ ಬ್ಯಾಚ್‌ಮೇಟ್ ಆಗಿದ್ದಾರೆ.

ನೇಮಕಾತಿ ಕುರಿತ ಸಂಪುಟ ಸಮಿತಿಯು (ಎಸಿಸಿ) ಕಾರ್ಯದರ್ಶಿ ಹುದ್ದೆಗೆ ನೇಮಕ ಮಾಡಲು ಅನುಮೋದನೆ ನೀಡಿದೆ ಎಂದು ಕೇಂದ್ರ ಸಿಬ್ಬಂದಿ ಸಚಿವಾಲಯ ಶುಕ್ರವಾರ ತಿಳಿಸಿದೆ.

ಪ್ರಧಾನ ಮಂತ್ರಿ ಕಚೇರಿಯಲ್ಲಿ ಕೆಲಸ ಮಾಡುತ್ತಿರುವ ಇಬ್ಬರು ಸೇರಿದಂತೆ 18 ಐಎಎಸ್ ಅಧಿಕಾರಿಗಳನ್ನು ವಿವಿಧ ಕೇಂದ್ರ ಸರ್ಕಾರಿ ಇಲಾಖೆಗಳಿಗೆ ನೇಮಿಸಿದೆ.

ಮುದ್ರೆಮನೆ ಕಾಫಿ (50 ಕೆಜಿಗೆ)



ಎಪಿ	₹28500
ಎಸಿ	₹16800
ಆರ್‌ಪಿ	₹22800
ಆರ್‌ಸಿ	₹12500

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ



ಬೆಂಗಳೂರು	
100ಕ್ಕೆ	₹440
12 ಕ್ಕೆ	₹60
ಮೈಸೂರು	
100ಕ್ಕೆ	₹440

ರಾಮನಗರ ರೇಷ್ಮೆಗೂಡು



ಮಿಶ್ರತಳಿ (ಸಿ.ಬಿ) ₹352-568
ದ್ವಿತಳಿ (ಬಿ.ವಿ) ₹405-672

ಎನ್.ಆರ್.ಪುರ ರಬ್ಬರ್



ಆರ್‌ಎಸ್‌ಎಸ್-4 ₹193
ಆರ್‌ಎಸ್‌ಎಸ್-5 ₹188
ಗುಡ್ ಲಾಟ್ ₹180
(ಪ್ರತಿ ಕೆ.ಜಿಗೆ)

ಖಾದ್ಯ ತೈಲ ಮುಂಬೈ (10 ಕೆಜಿಗೆ)



(ಆವರಣದಲ್ಲಿ ಹಿಂದಿನ ವಹಿವಾಟಿನ ದರ)

ಶೇಂಗಾ (ರಿಫೈನ್ಡ್)	₹1360 (1360)
ಸೋಯಾ (ರಿಫೈನ್ಡ್)	₹1290 (1300)
ಸೂರ್ಯಕಾಂತಿ (ರಿಫೈನ್ಡ್)	₹1390 (1390)
ಪಾಮೋಲಿನ್	₹1295 (1300)

ಕರ್ನಾಟಕದಿಂದ 1.30 ಲಕ್ಷ ಟನ್ ಖರೀದಿ: ಕೇಂದ್ರ ಕೃಷಿ ಇಲಾಖೆ ಮಾಹಿತಿ

3.40 ಲಕ್ಷ ಟನ್ ತೊಗರಿ ಖರೀದಿ



ನವದೆಹಲಿ (ಪಿಟಿಐ): ಧಾರಣೆ ಕುಸಿತದಿಂದ ತೊಂದರೆಗೆ ಸಿಲುಕಿರುವ ರೈತರ ಹಿತದೃಷ್ಟಿಯಿಂದ ಬೆಲೆ ಬೆಂಬಲ ಯೋಜನೆಯಡಿ (ಪಿಎಸ್‌ಎಸ್) ಏಪ್ರಿಲ್ 13ರ ವರೆಗೆ 3.40 ಲಕ್ಷ ಟನ್ ತೊಗರಿ ಖರೀದಿಸಲಾಗಿದೆ ಎಂದು ಕೇಂದ್ರ ಕೃಷಿ ಸಚಿವಾಲಯ ಶುಕ್ರವಾರ ತಿಳಿಸಿದೆ.

ಕರ್ನಾಟಕದಿಂದ ಅತಿಹೆಚ್ಚು 1.30 ಲಕ್ಷ ಟನ್ ತೊಗರಿ ಖರೀದಿಸಲಾಗಿದೆ. ಕೇಂದ್ರ ಸರ್ಕಾರವು ಪ್ರತಿ ಕ್ವಿಂಟಲ್‌ಗೆ ₹7,550 ಬೆಲೆ ನಿಗದಿಪಡಿಸಿದೆ. ರಾಜ್ಯ ಸರ್ಕಾರ ₹450 ಪ್ರೋತ್ಸಾಹ ಧನ ಘೋಷಿಸಿದೆ. ಇದು ಖರೀದಿ ಹೆಚ್ಚಳಕ್ಕೆ ಕಾರಣವಾಗಿದೆ.

2024–25ನೇ ಮುಂಗಾರು ಋತುವಿನಲ್ಲಿ ಕರ್ನಾಟಕ ಸೇರಿ ಆಂಧ್ರಪ್ರದೇಶ, ಛತ್ತೀಸಗಢ, ಗುಜರಾತ್, ಹರಿಯಾಣ, ಮಧ್ಯಪ್ರದೇಶ, ಮಹಾರಾಷ್ಟ್ರ, ತೆಲಂಗಾಣ ಮತ್ತು ಉತ್ತರಪ್ರದೇಶದಲ್ಲಿ ಖರೀದಿಗೆ ಸಚಿವಾಲಯವು ಅನುಮತಿ ನೀಡಿದೆ. ಮಾರುಕಟ್ಟೆಯಲ್ಲಿ ದರ ನಿಯಂತ್ರಿಸಲು ಒಟ್ಟು 13.22 ಲಕ್ಷ ಟನ್ ತೊಗರಿಯನ್ನು ಈ ರಾಜ್ಯಗಳಿಂದ ಖರೀದಿಸಲು ಸರ್ಕಾರ ಗುರಿ ಹೊಂದಿದೆ ಎಂದು ತಿಳಿಸಿದೆ.

ತೆಲಂಗಾಣ ಮತ್ತು ಮಧ್ಯಪ್ರದೇಶದಿಂದ 17 ಸಾವಿರ ಟನ್ ಕಡಲೆಕಾಳು ಖರೀದಿಸಿದೆ. 28,700 ಟನ್ ಚೆನ್ನಂಗಿ ಬೇಳೆ (ಮಸೂರ್ ದಾಲ್) ಮತ್ತು 3 ಸಾವಿರ ಟನ್ ಹೆಸರುಕಾಳು ಖರೀದಿಸಲಾಗಿದೆ ಎಂದು ತಿಳಿಸಿದೆ.

ಮುಕ್ತ ಮಾರುಕಟ್ಟೆಯಲ್ಲಿ ಕನಿಷ್ಠ ಬೆಂಬಲ ಬೆಲೆಗಿಂತ (ಎಂಎಸ್‌ಪಿ) ಕಡಿಮೆ ದರದಲ್ಲಿ ಮಾರಾಟವಾಗುತ್ತಿದ್ದರೆ ಬೆಲೆ ಬೆಂಬಲ ಯೋಜನೆಯಡಿ ಕೃಷಿ ಹುಟ್ಟುವಳಿಗಳನ್ನು ಖರೀದಿಸಲಾಗುತ್ತದೆ ಎಂದು ಹೇಳಿದೆ.

ದೇಶದಲ್ಲಿ ದ್ವಿದಳ ಧಾನ್ಯಗಳ ಉತ್ಪಾದನೆ ಹೆಚ್ಚಿಸಲು ಕೇಂದ್ರವು ಆತ್ಮನಿರ್ಭರ ಮಿಷನ್ ಅನ್ನು 2028–29ರ ವರೆಗೂ ವಿಸ್ತರಿಸಿದೆ. ಕೇಂದ್ರದ ಏಜೆನ್ಸಿಗಳ ಮೂಲಕ ರೈತರಿಂದ ತೊಗರಿ, ಚೆನ್ನಂಗಿ ಬೇಳೆ ಮತ್ತು ಉದ್ದು ಖರೀದಿಸಲಾಗುವುದು ಎಂದು ಸರ್ಕಾರವು ಬಜೆಟ್‌ನಲ್ಲಿ ಘೋಷಿಸಿದೆ.

ಹಿಂಡಿ ರಫ್ತು ಶೇ 21ರಷ್ಟು ಕುಸಿತ

2024–25ರ ಆರ್ಥಿಕ ವರ್ಷದಲ್ಲಿ ದೇಶದ ಹಿಂಡಿ (ಆಯಿಲ್‌ಮೀಲ್ಸ್) ರಫ್ತು ಶೇ 21ರಷ್ಟು ಕುಸಿತವಾಗಿದೆ ಎಂದು ಭಾರತದ ಎಣ್ಣೆ ಗಿರಣಿ ಮಾಲೀಕರ ಸಂಘ (ಎಸ್‌ಇಎ) ಶುಕ್ರವಾರ ತಿಳಿಸಿದೆ.

2023–24ರ ಆರ್ಥಿಕ ವರ್ಷದಲ್ಲಿ 48.85 ಲಕ್ಷ ಟನ್ ರಫ್ತಾಗಿತ್ತು. ಇದರ ಮೌಲ್ಯ ₹15,368 ಕೋಟಿಯಷ್ಟಾಗಿತ್ತು. ಕಳೆದ ಆರ್ಥಿಕ ವರ್ಷದ ಇದೇ ಅವಧಿಯಲ್ಲಿ 43.42 ಲಕ್ಷ ಟನ್ ರಫ್ತಾಗಿದ್ದು, ಮೌಲ್ಯವು ₹12,171 ಕೋಟಿಯಾಗಿದೆ ಎಂದು ತಿಳಿಸಿದೆ. ಮಾರಾಟದಲ್ಲಿನ ಇಳಿಕೆಯಿಂದ ರಫ್ತು ಪ್ರಮಾಣ ಕಡಿಮೆಯಾಗಿದೆ ಎಂದು ತಿಳಿಸಿದೆ.

ರಾಜಕೀಯ ಬಿಕ್ಕಟ್ಟಿನ ನಡುವೆಯೂ ಬಾಂಗ್ಲಾದೇಶ, ಭಾರತದ ಅತಿದೊಡ್ಡ ಹಿಂಡಿ ಆಮದು ರಾಷ್ಟ್ರವಾಗಿದೆ. 2023–24ರ ಆರ್ಥಿಕ ವರ್ಷದಲ್ಲಿ 8.92 ಲಕ್ಷ ಟನ್ ಆಮದಾಗಿತ್ತು. ಕಳೆದ ಆರ್ಥಿಕ ವರ್ಷದ ಇದೇ ಅವಧಿಯಲ್ಲಿ 7.42 ಲಕ್ಷ ಟನ್ ಆಮದಾಗಿದ್ದು, ಶೇ 17ರಷ್ಟು ಇಳಿಕೆಯಾಗಿದೆ ಎಂದು ತಿಳಿಸಿದೆ. ದಕ್ಷಿಣ ಕೊರಿಯಾಗೆ 6.99 ಲಕ್ಷ ಟನ್ ಮತ್ತು ಥಾಯ್ಲೆಂಡ್‌ಗೆ 4.48 ಲಕ್ಷ ಟನ್ ರಫ್ತು ಮಾಡಲಾಗಿದ್ದು, ಕ್ರಮವಾಗಿ ಶೇ 16 ಮತ್ತು ಶೇ 25ರಷ್ಟು ರಫ್ತು ಇಳಿಕೆಯಾಗಿದೆ ಎಂದು ತಿಳಿಸಿದೆ.

ಸಂಕ್ಷಿಪ್ತ ಸುದ್ದಿ

ವೊಡಾಫೋನ್ ಐಡಿಯಾ ಸೇವೆಯಲ್ಲಿ ವ್ಯತ್ಯಯ

ನವದೆಹಲಿ (ಪಿಟಿಐ): ದೇಶದ ದೂರಸಂಪರ್ಕ ಸೇವಾ ಕಂಪನಿ ವೊಡಾಫೋನ್ ಐಡಿಯಾದಲ್ಲಿ ಶುಕ್ರವಾರ ಮುಂಜಾನೆ ತಾಂತ್ರಿಕ ಸಮಸ್ಯೆ ಕಾಣಿಸಿಕೊಂಡಿದ್ದರಿಂದ ಸೇವೆಯಲ್ಲಿ ವ್ಯತ್ಯಯ ಉಂಟಾಗಿತ್ತು.

ಈಗ ಎಲ್ಲ ಸೇವೆಗಳು ಸಹಜ ಸ್ಥಿತಿಗೆ ಮರಳಿವೆ ಎಂದು ಕಂಪನಿ ತಿಳಿಸಿದೆ.

ಶುಕ್ರವಾರ ಮುಂಜಾನೆ ದೆಹಲಿಯ ನಮ್ಮ ನೆಟ್‌ವರ್ಕ್‌ನಲ್ಲಿ ಸಮಸ್ಯೆ ಕಾಣಿಸಿಕೊಂಡಿತ್ತು. ಹೆಚ್ಚಿನ ಬಳಕೆದಾರರು ಸಿಗ್ನಲ್ ತೊಂದರೆ ಕುರಿತು ದೂರು ನೀಡಿದರು. ಕೂಡಲೇ ಕಾರ್ಯಪ್ರವೃತ್ತರಾಗಿ ಸಮಸ್ಯೆ ಬಗೆಹರಿಸಿದ್ದೇವೆ. ಗ್ರಾಹಕರಿಗೆ ಉಂಟಾದ ಅಡೆಚಣೆಗೆ ಕ್ಷಮೆ ಕೋರುವುದಾಗಿ ಕಂಪನಿಯ ವಕ್ತಾರರು ತಿಳಿಸಿದ್ದಾರೆ.

ವಿದೇಶಿ ವಿನಿಮಯ ಸಂಗ್ರಹ ಏರಿಕೆ

ಮುಂಬೈ (ಪಿಟಿಐ): ಏಪ್ರಿಲ್ 11ಕ್ಕೆ ಕೊನೆಗೊಂಡ ವಾರದಲ್ಲಿ ದೇಶದ ವಿದೇಶಿ ವಿನಿಮಯ ಮೀಸಲು ಸಂಗ್ರಹವು ₹13,380 ಕೋಟಿ ಏರಿಕೆಯಾಗಿದೆ.

ಸತತ ಆರನೇ ವಾರವೂ ಸಂಗ್ರಹ ಏರಿಕೆಯಾಗಿದೆ. 2024ರ ಸೆಪ್ಟೆಂಬರ್‌ನಲ್ಲಿ ₹60.18 ಲಕ್ಷ ಕೋಟಿಯಷ್ಟಾಗಿತ್ತು. ಇದು ಸಾರ್ವಕಾಲಿಕ ಗರಿಷ್ಠವಾಗಿತ್ತು. ಸದ್ಯ ಒಟ್ಟು ಮೀಸಲು ಸಂಗ್ರಹ ₹57.87 ಲಕ್ಷ ಕೋಟಿಯಾಗಿದೆ ಎಂದು ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ಶುಕ್ರವಾರ ತಿಳಿಸಿದೆ.

ವಿದೇಶಿ ಕರೆನ್ಸಿ ಸಂಗ್ರಹ ಮೌಲ್ಯವು ₹7,616 ಕೋಟಿ ಹೆಚ್ಚಳವಾಗಿದ್ದು, ಒಟ್ಟು ಸಂಗ್ರಹ ಪ್ರಮಾಣ ₹49 ಲಕ್ಷ ಕೋಟಿ ಆಗಿದೆ. ಚಿನ್ನದ ಮೀಸಲು ಸಂಗ್ರಹವು ₹5,447 ಕೋಟಿ ಹೆಚ್ಚಳವಾಗಿದೆ. ಸ್ಪೆಷಲ್ ಡ್ರಾಯಿಂಗ್ ರೈಟ್ಸ್ (ಎಸ್‌ಡಿಆರ್) ಮೀಸಲು ₹51 ಕೋಟಿ ಕಡಿಮೆಯಾಗಿದೆ.

ಅಂತರರಾಷ್ಟ್ರೀಯ ಹಣಕಾಸು ನಿಧಿಯಲ್ಲಿನ (ಐಎಂಎಫ್) ಭಾರತದ ಮೀಸಲು ಸಂಗ್ರಹವು ₹367 ಕೋಟಿ ಹೆಚ್ಚಳವಾಗಿದ್ದು, ಒಟ್ಟು ಸಂಗ್ರಹ ಮೊತ್ತ ₹38,441 ಕೋಟಿಗೆ ಮುಟ್ಟಿದೆ ಎಂದು ತಿಳಿಸಿದೆ.

ಮುಂಬೈ ಧಾರಣೆ

ಶೇಂಗಾ
18-04-2025

ಜಾವಾ 70/80(ಹೊಸ)	11650-11700
ಜಾವಾ 80/90(ಹೊಸ)	11050-11100
ದಪ್ಪ ಮಧ್ಯಪ್ರದೇಶ(ಹೊಸ)	11000-11100
ದಪ್ಪ ಗುಜರಾತ್(ಹೊಸ)	11900-12000

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1370 (1370)
ಒಂದು ವಾರದ ಡೆಲಿವರಿ	1365 (1365)
ಪಾಮ್ ವಾರದ ಡೆಲಿವರಿ	1293 (1298)
ಸೂರ್ಯಕಾಂತಿ ಎಣ್ಣೆ ಕಚ್ಚಾ	1330 (1330)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಚಿನ್ನ 10ಗ್ರಾಂ ₹94,850 (94,500)
ಬೆಳ್ಳಿ ಕೆ.ಜಿ ₹94,850 (95,150)
ಆವರಣದಲ್ಲಿ ಹಿಂದಿನ ವಹಿವಾಟಿನ ದರ

ವಿನಿಮಯ ದರ

$ ಡಾಲರ್	85.39
£ ಪೌಂಡ್	113.24
€ ಯುರೊ	97.11
¥ ಯೆನ್ (100ಕ್ಕೆ)	60

ಉಪಗ್ರಹ ಆಧಾರಿತ ಟೋಲ್ ಸಂಗ್ರಹ ಸದ್ಯಕ್ಕಿಲ್ಲ –ಕೇಂದ್ರ

ಮುಖ್ಯಾಂಶಗಳು
- ಆಯ್ದ ಟೋಲ್ ಪ್ಲಾಜಾಗಳಲ್ಲಿ ನೂತನ ವ್ಯವಸ್ಥೆ ಜಾರಿ
- ಸುಗಮ ಸಂಚಾರಕ್ಕೆ ಅನುವು, ಪ್ರಯಾಣದ ಅವಧಿ ತಗ್ಗಿಸುವ ಉದ್ದೇಶ

ನವದೆಹಲಿ (ಪಿಟಿಐ): 'ಉಪಗ್ರಹ ಆಧಾರಿತ ಟೋಲ್ ಸಂಗ್ರಹ ವ್ಯವಸ್ಥೆಯನ್ನು ದೇಶದಾದ್ಯಂತ ಮೇ 1 ರಿಂದ ಜಾರಿಗೊಳಿಸುವ ಕುರಿತು ಯಾವುದೇ ತೀರ್ಮಾನ ಕೈಗೊಂಡಿಲ್ಲ' ಎಂದು ಕೇಂದ್ರ ರಸ್ತೆ ಮತ್ತು ಹೆದ್ದಾರಿ ಸಚಿವಾಲಯವು ಸ್ಪಷ್ಟಪಡಿಸಿದೆ.

ಮೇ 1ರಿಂದ ಹೊಸ ವ್ಯವಸ್ಥೆ ಜಾರಿಗೆ ಬರಲಿದೆ ಎಂದು ಕೆಲ ಮಾಧ್ಯಮಗಳಲ್ಲಿ ವರದಿ ಆಗಿರುವ ಹಿನ್ನಲೆಯಲ್ಲಿ ಸಚಿವಾಲಯ ಈ ಸ್ಪಷ್ಟನೆ ನೀಡಿದೆ. ಹಾಲಿ ಬಳಕೆಯಲ್ಲಿರುವ ಫಾಸ್ಟ್ಯಾಗ್ ಬದಲಿಗೆ ಹೊಸ ವ್ಯವಸ್ಥೆ ಜಾರಿಗೆ ಬರಲಿದೆ ಎಂದು ವರದಿಯಾಗಿತ್ತು.

ಸಚಿವಾಲಯ ಈ ಕುರಿತು ನೀಡಿರುವ ಹೇಳಿಕೆಯಲ್ಲಿ, 'ಸ್ವಯಂಚಾಲಿತ ವ್ಯವಸ್ಥೆಯಡಿ ವಾಹನಗಳ ನೋಂದಣಿ ಸಂಖ್ಯೆ ಗುರುತಿಸಿ, ಟೋಲ್ ಸಂಗ್ರಹಿಸುವ ನೂತನ ವ್ಯವಸ್ಥೆಯನ್ನು ಆಯ್ದ ಟೋಲ್ ಪ್ಲಾಜಾಗಳಲ್ಲಿ ಜಾರಿಗೊಳಿಸಲಾಗುವುದು' ಎಂದು ತಿಳಿಸಿದೆ.

ವಾಹನಗಳ ಸುಗಮ ಸಂಚಾರಕ್ಕೆ ಅನುವು ಮಾಡಿಕೊಡುವುದು ಮತ್ತು ಟೋಲ್ ಪ್ಲಾಜಾಗಳಲ್ಲಿ ಪ್ರಯಾಣದ ಅವಧಿ ತಗ್ಗಿಸುವುದು ಇದರ ಉದ್ದೇಶ. ಹೊಸ ವ್ಯವಸ್ಥೆಯಡಿ ನೋಂದಣಿ ಸಂಖ್ಯೆ ಗುರುತಿಸುವ ಎಎನ್‌ಪಿಆರ್ ತಂತ್ರಜ್ಞಾನ ಮತ್ತು ಟೋಲ್ ಸಂಗ್ರಹಕ್ಕಾಗಿ ಹಾಲಿ ಬಳಕೆಯಲ್ಲಿರುವ 'ಫಾಸ್ಟ್ಯಾಗ್ ವ್ಯವಸ್ಥೆ' ಒಟ್ಟಿಗೆ ಕಾರ್ಯನಿರ್ವಹಿಸಲಿವೆ ಎಂದೂ ಸಚಿವಾಲಯವು ವಿವರಿಸಿದೆ.

ನೂತನ ವ್ಯವಸ್ಥೆಯಡಿ ಉನ್ನತ ಸಾಮರ್ಥ್ಯದ ಕ್ಯಾಮೆರಾ ಬಳಸಿ ಗುರುತಿಸಲಾದ ನೋಂದಣಿ ಸಂಖ್ಯೆಗೆ ಅನುಗುಣವಾಗಿ, ಫಾಸ್ಟ್ಯಾಗ್ ಮೂಲಕ ಟೋಲ್ ಕಡಿತವಾಗಲಿದೆ. ಇದಕ್ಕಾಗಿ ಟೋಲ್ ಪ್ಲಾಜಾದಲ್ಲಿ ವಾಹನ ನಿಲುಗಡೆ ಮಾಡುವ ಅಗತ್ಯವಿಲ್ಲ ಎಂದು ವಿವರಿಸಿದೆ.

ರಾಜಕುಮಾರ್ ರಸ್ತೆಯಲ್ಲಿ ನಿಧಾನಗತಿಯಲ್ಲಿ ಸಾಗುತ್ತಿರುವ ವೈಟ್ ಟಾಪಿಂಗ್ ಕಾಮಗಾರಿ

ಅಗೆದು ಹಾಕಿದ ರಸ್ತೆ: ಸಂಚಾರಕ್ಕೆ ಸಂಚಕಾರ

• ಬಾಲಕೃಷ್ಣ ಪಿ.ಎಚ್.

ಬೆಂಗಳೂರು: ವಿವಿಧ ಜಿಲ್ಲೆಗಳಿಂದ ನಗರ ಪ್ರವೇಶಿಸುವ ವಾಹನಗಳು ಮೆಜೆಸ್ಟಿಕ್ ಸಂಪರ್ಕಿಸುವ ಪ್ರಮುಖ ಮಾರ್ಗವಾಗಿರುವ ರಾಜಕುಮಾರ್ ರಸ್ತೆಯಲ್ಲಿ ವೈಟ್ ಟಾಪಿಂಗ್ ಕಾಮಗಾರಿ ನಡೆಸಲು ರಾಜಾಜಿನಗರ ಪ್ರವೇಶ ವೃತ್ತದ ಕಡೆಯಿಂದ ನವರಂಗ್ ವೃತ್ತದವರೆಗೆ ರಸ್ತೆಯನ್ನು ಅಗೆದು ಹಾಕಿ ತಿಂಗಳು ಕಳೆದರೂ ಮುಚ್ಚಿಲ್ಲ. ಇದರಿಂದ ಸರಾಗ ವಾಹನ ಸಂಚಾರಕ್ಕೆ ತೊಡುಕುಂಟಾಗಿದೆ. ಅಂಗಡಿ, ಹೋಟೆಲ್ ವ್ಯಾಪಾರಸ್ಥರಿಗೂ ಸಮಸ್ಯೆಯಾಗಿದೆ.

ಬಿಬಿಎಂಪಿಯಿಂದ ವೈಟ್ ಟಾಪಿಂಗ್ ಕಾಮಗಾರಿ, ಜಲಮಂಡಳಿಯಿಂದ ಒಳಚರಂಡಿ ಕೊಳವೆ ಮಾರ್ಗ ಅಳವಡಿಕೆ ಕಾಮಗಾರಿ ನಡೆಯುತ್ತಿದೆ. ಜೊತೆಗೆ ಮಳೆನೀರು ಚರಂಡಿಯನ್ನೂ ನಿರ್ಮಿಸಲಾಗುತ್ತಿದೆ. ರಾಮೇಶ್ವರಂ ಕೆಫೆ ಕಡೆಯಿಂದ ರಸ್ತೆ ಬದಿಯಲ್ಲಿ ಅಗೆದು ಪೈಪ್ ಹಾಕಿ ಮುಚ್ಚಿದ್ದಾರೆ. ನವರಂಗ್ ಸರ್ಕಲ್‌ನಿಂದ ಮುಂದಕ್ಕೆ ನೆಲ ಅಗೆದು ಹಾಗೆ ಬಿಡಲಾಗಿದೆ.

ಕೆಲವು ಒಳ ರಸ್ತೆಗಳಿಂದ ಈ ರಸ್ತೆಯನ್ನು ಸಂಪರ್ಕಿಸುವ ಜಾಗದಲ್ಲಿ ಅಗೆದಿರುವುದರಿಂದ ಅಲ್ಲಲ್ಲ ವಾಹನಗಳು ಸುತ್ತಿಬಳಸಿ ಹೋಗಬೇಕಿದೆ.



ರಾಜಕುಮಾರ್ ರಸ್ತೆಯನ್ನು ಅಗೆದು ಹಾಕಿರುವುದರಿಂದ ಪ್ರಕಾಶ್‌ನಗರ ಕಡೆ ಮನೆ ಇರುವವರು ಸುತ್ತು ಹಾಕಿ ಹೋಗಬೇಕು. ಇಲ್ಲದೇ ಇದ್ದರೇ ಪೈಪ್ ಮೇಲೆ ಕಾಲಿಟ್ಟು ದಾಟಿ ಸಾಗುವಂತಾಗಿದೆ ಚಿತ್ರಗಳು: ಕಿಶೋರ್ ಕುಮಾರ್ ಬೋಳಾರ್

ಪ್ರಕಾಶನಗರ, ಗಾಯತ್ರಿನಗರ, ಸುಬ್ರಹ್ಮಣ್ಯ ನಗರದ ಜನರು ದೂಳಿನಿಂದ ತೊಂದರೆ ಅನುಭವಿಸುತ್ತಿದ್ದಾರೆ.


‘80 ಅಡಿ ಅಗಲ ಇರುವ ರಾಜಕುಮಾರ್ ರಸ್ತೆಯಲ್ಲಿ ಒಂದೇ ಒಂದು ಗುಂಡಿ ಇರಲಿಲ್ಲ. ಆದರೂ, ಅಭಿವೃದ್ಧಿ ಹೆಸರಲ್ಲಿ ಅಗೆದು ಹಾಕಿದ್ದಾರೆ. ಪ್ರಭಾವಿಗಳಿಗೆ ನೀರು ಒದಗಿಸಲು ಇರುವ ರಸ್ತೆಯನ್ನು ಅಗೆದು ಹಾಳು ಮಾಡಿದ್ದಾರೆ. ಒಂದು ತಿಂಗಳಿಗೂ ಅಧಿಕ ಸಮಯದಿಂದ ದೂಳು ತಿನ್ನುತ್ತಿದ್ದೇವೆ. ಅಂಗಡಿ, ಹೋಟೆಲ್, ಬೇಕರಿಗಳಿಗೆ ಹೋಗುವಂತಿಲ್ಲ. ಎಲ್ಲ ಕಡೆ ದೂಳು ತುಂಬಿದೆ. ಈಗ ಮಳೆ ಬರುತ್ತಿರುವುದರಿಂದ ದೂಳು ಕಡಿಮೆಯಾಗಿದೆ. ಆದರೆ, ಮಳೆ ಹೆಚ್ಚಾದರೆ ಕೆಸರಲ್ಲಿ ಕಾಲು ಇಡುವುದು ಕಷ್ಟವಾಗುವ ಪರಿಸ್ಥಿತಿ ನಿರ್ಮಾಣವಾಗುತ್ತದೆ. ವಾಹನಗಳನ್ನು ಪಾರ್ಕಿಂಗ್ ಮಾಡಲು ಸಾಧ್ಯವಾಗದ ಕಾರಣ, ಜನಸಂಚಾರವೇ ಕಡಿಮೆಯಾಗಿದೆ’ ಎಂದು ಇಲ್ಲಿನ ವ್ಯಾಪಾರಸ್ಥರು ದೂರಿದರು.

‘ವಿವಿಧ ಭಾಗಗಳಲ್ಲಿ ವೈಟ್ ಟಾಪಿಂಗ್ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗಿದೆ. ಒಳಚರಂಡಿ ಕೊಳವೆ ಅಳವಡಿಕೆ, ಮಳೆನೀರಿನ ಚರಂಡಿ ನಿರ್ಮಾಣ ಸಹಿತ ಮೂಲ ಅವಶ್ಯಕತೆಗಳೊಂದಿಗೆ ಕಾಮಗಾರಿ ನಡೆಸಬೇಕಿರುವುದರಿಂದ ಹೆಚ್ಚು ಸಮಯ ಬೇಕಾಗುತ್ತದೆ. ಒಳಚರಂಡಿ, ಚರಂಡಿ, ಯುಟಿಲಿಟಿ ಪೈಪ್ ಅಳವಡಿಸುವ ಕೆಲಸ ಮುಗಿದ ಬಳಿಕ ಕಾಂಕ್ರೀಟ್ ಹಾಕಿದ ನಂತರ, ಪಾದಚಾರಿ ಮಾರ್ಗ ನಿರ್ಮಾಣ ಕಾರ್ಯ ನಡೆಯಲಿದೆ’ ಎಂದು ಬಿಬಿಎಂಪಿ ಅಧಿಕಾರಿಯೊಬ್ಬರು ಮಾಹಿತಿ ನೀಡಿದರು.



ಅಗೆದು ಹಾಕಿರುವ ಮಣ್ಣಲ್ಲಿ ಸಿಲುಕಿರುವ ಆಟೊವನ್ನು ತಳ್ಳಿ ಮುಂದಕ್ಕೆ ಒಯ್ಯಲಾಯಿತು

ಜನ ಏನಂತಾರೆ?




ಹೊಂಡ ಅಗೆದು ಅದರ ಪಕ್ಕದಲ್ಲಿಯೇ ಮಣ್ಣು ರಾಶಿ ಹಾಕಿದ್ದಾರೆ. ಇವತ್ತು ಅದರ ಮೇಲೆ ಕಾಲು ಇಟ್ಟು ಮೂವರು ಜಾರಿ ಹೊಂಡಕ್ಕೆ ಬಿದ್ದರು. ಪುಣ್ಯಕ್ಕೆ ಯಾರಿಗೂ ಏಟು ಆಗಿಲ್ಲ. ಉದ್ದಕ್ಕೆ ಅಗೆದು ಹಾಕುವ ಬದಲು ನೂರು ಮೀಟರ್ ಅಗೆದು ಪೈಪ್ ಅಳವಡಿಸಿ ಮುಚ್ಚಿದ ಬಳಿಕ ಮುಂದಕ್ಕೆ ಅಗೆಯುವಂತೆ ವ್ಯವಸ್ಥೆಯಾಗಿ ಕಾಮಗಾರಿ ನಡೆಸಿದರೆ ಇಷ್ಟು ಸಮಸ್ಯೆ ಉಂಟಾಗುತ್ತಿರಲಿಲ್ಲ. ನಾವು ಇದ್ದದ್ದನ್ನು ಎಲ್ಲ ಅಧಿಕಾರಿಗಳನ್ನು ಸಂಪರ್ಕಿಸಿದರೂ ಪ್ರಯೋಜನವಾಗಿಲ್ಲ.

ಸಂಜಯ್ ಕುಮಾರ್, ವ್ಯವಸ್ಥಾಪಕ, ಸಾಗರ್ ಹೋಟೆಲ್



ರಸ್ತೆ ಅಗೆದು ಒಂದು ತಿಂಗಳ ಮೇಲೆ ಒಂದು ವಾರ ಆಗಿದೆ. ಮುಚ್ಚದೇ ಇರುವುದರಿಂದ ನಮ್ಮ ಪಂಕ್ಚರ್ ಅಂಗಡಿಗೆ ವಾಹನಗಳು ಬರುತ್ತಿಲ್ಲ. ಮನೆ, ಸಂಸಾರ ಇರುವ ನಾವು ಈ ಕೆಲಸವನ್ನೇ ನಂಬಿ ಬದುಕುತ್ತಿದ್ದೇವೆ. ಈ ರೀತಿ ಕೆಲಸಕ್ಕೆ ತೊಂದರೆಯಾದರೆ ಬದುಕು ನಡೆಸುವುದು ಹೇಗೆ? ಅಗಲವಾದ ರಸ್ತೆ ಇತ್ತು. ಈಗ ಒಂದು ವಾಹನ ಕಷ್ಟದಲ್ಲಿ ಸಾಗುವಂತಾಗಿದೆ.

ನಾಸೀರ್ ಪಾಷ, ರಾಜಾಜಿನಗರ ಪಂಚರ್ ಅಂಗಡಿ ಮಾಲೀಕ




ರಸ್ತೆ ಬಹಳ ಚೆನ್ನಾಗಿತ್ತು. ಸರಿ ಇಲ್ಲದ ರಸ್ತೆಗಳನ್ನು ಅಭಿವೃದ್ಧಿ ಮಾಡುವ ಬದಲು ಸರಿ ಇರುವ ರಸ್ತೆಯನ್ನು ಕಿತ್ತುಹಾಕುವುದು ಬೆಂಗಳೂರಿನ ವಿಶೇಷತೆ ಇರಬೇಕು. ಅಂಗಡಿ ಮುಂದೆ ಅಗೆದು ಹಾಕಿದ್ದನ್ನು ಬೇಗ ಮುಚ್ಚಿ ಎಂದರೆ ಮುಚ್ಚಲು ದುಡ್ಡು ಕೊಡಿ ಎಂದು ಕೆಲವರಲ್ಲಿ ಕೇಳಿದ್ದಾರೆ ಎಂಬ ದೂರುಗಳಿವೆ. ಗುಂಡಿ ಮುಚ್ಚಲು ಹಣ ಕೇಳಿದರೆ ನನಗೆ ಮಾಹಿತಿ ಕೊಡಿ. ಅವರ ವಿರುದ್ಧ ದೂರು ಕೊಡೋಣ ಎಂದು ಹೇಳಿದ್ದೇನೆ.

ಚಂದ್ರು, ಟ್ರಾವೆಲ್ ಏಜೆನ್ಸಿ ಮಾಲೀಕ



ವೈಟ್ ಟಾಪಿಂಗ್ ಕಾಮಗಾರಿ ಆಗಿರುವುದರಿಂದ ಪೂರ್ಣಗೊಳ್ಳಲು 18 ತಿಂಗಳು ಬೇಕು ಎಂದು ಗುತ್ತಿಗೆದಾರರು ಹೇಳುತ್ತಿದ್ದಾರೆ. ಈಗಲೇ ಬಹಳಷ್ಟು ತೊಂದರೆಗಳನ್ನು ಅನುಭವಿಸುತ್ತಿದ್ದೇವೆ. ಶೇ 70ರಷ್ಟು ವ್ಯಾಪಾರ ಕಡಿಮೆಯಾಗಿದೆ. ಇನ್ನೂ ಒಂದೂವರೆ ವರ್ಷ ಈ ನಷ್ಟವನ್ನು ಹೇಗೆ ತಡೆದುಕೊಳ್ಳುವುದು ಎಂಬುದು ಗೊತ್ತಾಗುತ್ತಿಲ್ಲ.

ಗಣೇಶ್



ಇದು ಎತ್ತರದ ಪ್ರದೇಶ. ಮಳೆಗಾಲದಲ್ಲಿಯೂ ನೀರು ನಿಲ್ಲುವುದಿಲ್ಲ. ಈಗ ಅಗೆದು ಹಾಕಿ ನೀರು ನಿಲ್ಲುವಂತೆ ಮಾಡಿದ್ದಾರೆ. ರಾಜಕುಮಾರ್ ರಸ್ತೆ ಒಂದೇ ಅಲ್ಲ. ನಾನು ನಿತ್ಯ ನಗರದ ಬೇರೆ ಬೇರೆ ಪ್ರದೇಶಕ್ಕೆ ಹೋಗುತ್ತೇನೆ. ಎಲ್ಲ ಕಡೆಗಳಲ್ಲಿ ಅಭಿವೃದ್ಧಿ ಹೆಸರಲ್ಲಿ ಅಗೆದು ಹಾಕಿದ್ದಾರೆ. ವಾಹನ ಚಾಲನೆ ಮಾಡುವುದೇ ಯಮಯಾತನೆ. ನಗರವನ್ನೇ ಅಧ್ವಾನ ಮಾಡಿದ್ದಾರೆ.

ಮೋಟೇಗೌಡ, ಕ್ಯಾಬ್ ಚಾಲಕ

174 ವಿದ್ಯಾರ್ಥಿಗಳಿಗೆ ಪದವಿ

ಪ್ರಜಾವಾಣಿ ವಾರ್ತೆ



ಮೊದಲನೆ ರ‍್ಯಾಂಕ್ ಪಡೆದ ವಿದ್ಯಾರ್ಥಿನಿ ಲಾವಣ್ಯ ಅವರಿಗೆ ಪ್ರಶಸ್ತಿ ನೀಡಿ ಗೌರವಿಸಲಾಯಿತು

ಈಜಿಪುರ ಮೇಲ್ಸೇತುವೆ ಉದ್ಘಾಟನೆ

ಪ್ರಜಾವಾಣಿ ವಾರ್ತೆ

ಭಕ್ತಿ ಭಾವದಿಂದ ‘ಶುಭ ಶುಕ್ರವಾರ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಯೇಸುಕ್ರಿಸ್ತರನ್ನು ಶಿಲುಬೆಗೆ ಏರಿಸಿದ ದಿನ ‘ಶುಭ ಶುಕ್ರವಾರ’ವನ್ನು ನಗರದಲ್ಲಿ ಕ್ರೈಸ್ತ ಸಮುದಾಯದವರು ಭಕ್ತಿ ಭಾವದಿಂದ ಆಚರಿಸಿದರು. ಶಿಲುಬೆಗೆ ಏರಿದ್ದನ್ನು ಸ್ಮರಿಸಿ ಕಣ್ಣೀರಿಟ್ಟರು.

ನಗರದ ಬೆಸಿಲಿಕಾ ಚರ್ಚ್, ಜಾನ್ಸ್ ಚರ್ಚ್, ಜೋಸೆಫ್ ಚರ್ಚ್, ಪ್ಯಾಟ್ರಿಕ್ ಚರ್ಚ್, ತೆರೇಸಮ್ಮ ಚರ್ಚ್, ಇನ್‌ಫೆಂಟ್ ಜೀಸಸ್ ಚರ್ಚ್, ಅಸೆಂಬ್ಲಿ ಆಫ್ ಗಾಡ್ ಚರ್ಚ್, ಪೆಂಟೆಕೋಸ್ಟಲ್ ಚರ್ಚ್, ಪ್ರೆಸ್ಬಿಟೇರಿಯನ್ ಚರ್ಚ್, ಚರ್ಚ್ ಆಫ್ ಕ್ರೈಸ್ಟ್, ಥಿಯೋನ್ ಚರ್ಚ್, ನ್ಯೂಲೈಫ್ ಚರ್ಚ್, ಫುಲ್ ಗಾಸ್ಪೆಲ್ ಚರ್ಚ್, ಮಾರ್ ತೋಮಾ ಚರ್ಚ್, ರಿವೈವಲ್ ಚರ್ಚ್, ಬ್ಯಾಪ್ಟಿಸ್ಟ್ ಚರ್ಚ್, ಸೆವೆಂತ್ ಡೇ ಅಡ್ವೆಂಟಿಸ್ಟ್ ಚರ್ಚ್, ಜಾಕೊಬೈಟ್ ಸಿರಿಯನ್ ಕ್ಯಾಥೋಲಿಕ್ ಚರ್ಚ್‌ಗಳಲ್ಲಿ ವಿಶೇಷ ಪ್ರಾರ್ಥನೆಗಳನ್ನು ನಡೆಸಲಾಯಿತು.

ಏಸು ಕ್ರಿಸ್ತರು ಶಿಲುಬೆಗೆ ಏರಿದ ಅವಧಿಯಲ್ಲಿ ಎದುರಿಸಿದ ಕಷ್ಟ, ಶೋಷಣೆಗಳನ್ನು ಸ್ಮರಿಸುವ ಶಿಲುಬೆಯ ಮಾರ್ಗ, ಆರಾಧನೆ, ಪೂಜಾ ವಿಧಿಯನ್ನು ನಡೆಸಿ, ವಿಶೇಷವಾಗಿ ಪ್ರಾರ್ಥಿಸಲಾಯಿತು.

ಯೇಸು ದೇವರು ಶಿಲುಬೆಯ ಮೇಲೆ ನುಡಿದ ಸಪ್ತ ಸಂದೇಶಗಳನ್ನು ಓದಲಾಯಿತು. ಶಿಲುಬೆಯ ಹಾದಿಯ ವಾಚನ ನಡೆಯಿತು. ಶಿಲುಬೆಗೆ ಏರಿದ್ದನ್ನು ರೂಪಕಗಳ ಮೂಲಕ ಪ್ರದರ್ಶಿಸಲಾಯಿತು. ದೇವಪುತ್ರ ಮಾಡಿದ ತ್ಯಾಗವನ್ನು ಕಂಡು ಭಕ್ತರು ಮರುಗಿದರು. ಏಸು ದೇವರ ಪಾಡು, ಮರಣದ ಬಗ್ಗೆ ಬೈಬಲ್ ಗ್ರಂಥ ವಾಚನ ಮಾಡಿದರು.

ಹಲವು ಚರ್ಚ್‌ಗಳಲ್ಲಿ ಪಾದಪೂಜೆ ನೆರವೇರಿಸುವ ಮೂಲಕ ದೀನರ ಸೇವೆಯ ಪ್ರಾಮುಖ್ಯವನ್ನು ಸಾರಲಾಯಿತು.



‘ಶುಭ ಶುಕ್ರವಾರ’ ಪ್ರಯುಕ್ತ ಬೆಂಗಳೂರಿನ ಜೆ.ಸಿ. ರಸ್ತೆಯಲ್ಲಿರುವ ಸಂತ ತೆರೇಸಮ್ಮನವರ ದೇವಾಲಯದ ಸಮುದಾಯ ಭವನದಲ್ಲಿ ಯೇಸುಕ್ರಿಸ್ತರನ್ನು ಶಿಲುಬೆಗೇರಿಸಿದ ರೂಪಕ ಪ್ರದರ್ಶಿಸಲಾಯಿತು ಪ್ರಜಾವಾಣಿ ಚಿತ್ರಗಳು



ಯೇಸುಕ್ರಿಸ್ತರನ್ನು ಶಿಲುಬೆಗೇರಿಸಿದ ರೂಪಕ ಕಂಡು ಭಕ್ತರು ಭಾವಪರವಶರಾದರು

ಆತ್ಮಹತ್ಯೆ ಮಾಡಿಕೊಂಡ ಬಿಜೆಪಿ ಕಾರ್ಯಕರ್ತ

ಆನೇಕಲ್: ಸಾಲ ಪಡೆದವರು ದೈಹಿಕ ದೌರ್ಜನ್ಯ ನಡೆಸಿದ್ದಾರೆ ಎಂದು ಆರೋಪಿಸಿ ಬಿಜೆಪಿ ಕಾರ್ಯಕರ್ತರೊಬ್ಬರು ಮರಕ್ಕೆ ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ಪಟ್ಟಣದ ಕೃಷಿ ಇಲಾಖೆ ಸಮೀಪ ಶುಕ್ರವಾರ ನಡೆದಿದೆ.

ಆತ್ಮಹತ್ಯೆ ಮಾಡಿಕೊಂಡವರನ್ನು ಪ್ರವೀಣ್ ಗೌಡ (33) ಎಂದು ಗುರುತಿಸಲಾಗಿದೆ. ಆತ್ಮಹತ್ಯೆ ಮಾಡಿಕೊಳ್ಳುವ ಮುನ್ನ ಪ್ರವೀಣ್ ಫೇಸ್‌ಬುಕ್‌ನಲ್ಲಿ ಸಾವಿಗೆ ಕಾರಣರಾದವರ ಬಗ್ಗೆ ಮಾಹಿತಿ ನೀಡಿದ್ದಾರೆ.

ಮಹಿಳೆಯೊಬ್ಬರಿಗೆ ₹4ಲಕ್ಷ ಸಾಲ ನೀಡಿದ್ದ ಪ್ರವೀಣ್‌ಗೆ ಹಂತ ಹಂತವಾಗಿ ₹1.60ಲಕ್ಷ ಮಹಿಳೆ ಪಾವತಿ ಮಾಡಿದ್ದಾರೆ. ಉಳಿದ ಹಣ ₹1.65ಲಕ್ಷ ನೀಡಬೇಕು ಎಂದು ಬಿಜೆಪಿ ಮಂಡಲ ಅಧ್ಯಕ್ಷ ಮುನಿರಾಜುಗೌಡ ಅವರ ಮನೆಯಲ್ಲಿ ನ್ಯಾಯದ ಸಂದರ್ಭದಲ್ಲಿ ತಿಳಿಸಿದ್ದಾರೆ.

ಏಪ್ರಿಲ್ 15ರಂದು ಬಿಜೆಪಿ ಮುಖಂಡ ಶ್ರೀನಿವಾಸ್ ಬಾಬು ಮತ್ತು ಮುನಿರಾಜುಗೌಡ ಅವರು ಕರೆ ಮಾಡಿ ಹಣ ನೀಡುತ್ತೇವೆ ಎಂದು ಕರೆಯಿಸಿಕೊಂಡಿದ್ದಾರೆ. ‘ಈ ಸಂದರ್ಭದಲ್ಲಿ 15-20 ಜನರು ಏಕಾಏಕಿ ದಾಳಿ ನಡೆಸಿ ಮೊಬೈಲ್ ಸ್ವಿಚ್ ಆಫ್ ಮಾಡಿಸಿ ಎರಡು ಗಂಟೆಗಳಿಗೂ ಹೆಚ್ಚು ಕಾಲ ಹಲ್ಲೆ ನಡೆಸಿದ್ದಾರೆ. ಕಿಡ್ನಿ ಭಾಗಕ್ಕೆ ಹೊಡೆದಿದ್ದಾರೆ. ಗಾಂಜಾ ಪ್ರಕರಣದಲ್ಲಿ ಪ್ರಕರಣ ದಾಖಲಿಸಲಾಗುವುದು ಎಂದು ಬೆದರಿಕೆ ಹಾಕಿ ಹಲ್ಲೆ ನಡೆಸಿದ್ದಾರೆ’ ಎಂದು ಪ್ರವೀಣ್ ಅವರು ಫೇಸ್‌ಬುಕ್‌ನಲ್ಲಿ ವಿಡಿಯೊ ಮಾಡಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಶರಣ್ ಗೌಡ, ಶರವಣ್, ಹರೀಶ್, ಭಾಸ್ಕರ್, ಮಧುಗೌಡ ಆತ್ಮಹತ್ಯೆಗೆ ಕಾರಣ ಎಂದು ವಿಡಿಯೊದಲ್ಲಿ ದೂರಿದ್ದಾರೆ.

ಆನೇಕಲ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.



ಸನ್ಮಾನ

ಬಂಜಾರ ಮಹಾಸಭಾ ವತಿಯಿಂದ ಗಾಂಧಿ ಭವನದಲ್ಲಿ ಶುಕ್ರವಾರ ನಡೆದ 134ನೇ ಅಂಬೇಡ್ಕರ್ ಜಯಂತಿ ಕಾರ್ಯಕ್ರಮದಲ್ಲಿ ಪಿಯು ಪರೀಕ್ಷೆಯಲ್ಲಿ ಪ್ರಥಮ ಸ್ಥಾನ ಪಡೆದ ಸಂಜನಾ ಬಾಯಿ, ರಾಜ್ಯ ಪತಿ ಪಡೆದ ಡಿವೈಎಸ್‌ಪಿ ಏಯರಾಜ್, ಡಿವೈಎಸ್‌ಪಿಯಾಗಿ ಪದೋನ್ನತಿ ಪಡೆದ ಕೃಷ್ಣ ಲಮಾಣಿ ಅವರನ್ನು ಸಚಿವ ಪ್ರಿಯಾಂಕ ಖರ್ಗೆ, ಬಂಜಾರ ಸಂಸ್ಕೃತಿ ಮತ್ತು ಭಾಷಾ ಅಕಾಡೆಮಿ ಅಧ್ಯಕ್ಷ ಎ. ಆರ್. ಗೋವಿಂದ ಸ್ವಾಮಿ, ಸಾಹಿತಿ ಬಿ.ಟಿ. ಲಲಿತಾ ನಾಯ್ಕ್ ಸನ್ಮಾನಿಸಿದರು

ಮರಳಿ ವೀಸಾ

ವಾಷಿಂಗ್ಟನ್ (ಎ.ಪಿ): ಅಮೆರಿಕದಲ್ಲಿ ಇತ್ತೀಚಿನ ವಾರಗಳಲ್ಲಿ 1 ಸಾವಿರಕ್ಕೂ ಅಧಿಕ ವಿದೇಶಿ ವಿದ್ಯಾರ್ಥಿಗಳಿಗೆ ವೀಸಾ ನೀಡಲಾಗಿದೆ ಅಥವಾ ಅಮೆರಿಕದಲ್ಲಿ ಅವರ ವಾಸ್ತವ್ಯಕ್ಕೆ ಕಾನೂನು ಮಾನ್ಯತೆ ದೊರೆತಿದೆ.

ಅಲ್ಲದೆ, ಅಮೆರಿಕದಲ್ಲಿ ವಾಸ್ತವ್ಯ ಹೂಡಲು ಇದ್ದ ಅನುಮತಿಯನ್ನು ಡೊನಾಲ್ಡ್ ಟ್ರಂಪ್ ಆಡಳಿತವು ಏಕಾಏಕಿ ಹಿಂಪಡೆದಿದೆ ಎಂದು ಹಲವಾರು ಮಂದಿ ಸರ್ಕಾರದ ವಿರುದ್ಧ ಮೊಕದ್ದಮೆ ಹೂಡಿದ್ದಾರೆ.

ಶಿಕ್ಷಣ ಸಂಸ್ಥೆಗಳ ದಾಖಲೆಗಳ ಪ್ರಕಾರ, 160 ಕಾಲೇಜುಗಳ ಕನಿಷ್ಠ 1,024 ವಿದ್ಯಾರ್ಥಿಗಳ ವೀಸಾ ಕಾನೂನು ಮಾನ್ಯತೆಯು ಮರುಸ್ಥಾಪಿತವಾಗಿದೆ ಎಂದು ಸುದ್ದಿಸಂಸ್ಥೆಯ ವರದಿ ತಿಳಿಸಿದೆ.

ಪಂಜಾಬ್‌ನಲ್ಲಿ ನಡೆದಿದ್ದ ಹಲವು ಭಯೋತ್ಪಾದಕ ದಾಳಿಗಳಲ್ಲಿ ಭಾಗಿಯಾಗಿದ್ದ ಆರೋಪಿ

ಭಯೋತ್ಪಾದಕ ಹರ್‌ಪ್ರೀತ್ ಸಿಂಗ್ ಬಂಧನ

ನ್ಯೂಯಾರ್ಕ್ (ಪಿಟಿಐ): ಪಾಕಿಸ್ತಾನದ ಗುಪ್ತಚರ ಸಂಸ್ಥೆ ಇಂಟರ್ ಸರ್ವಿಸಸ್ ಇಂಟೆಲಿಜೆನ್ಸ್ (ಐಎಸ್‌ಐ) ಜೊತೆಗೂಡಿ ಪಂಜಾಬ್‌ನ ವಿವಿಧೆಡೆ ಹಲವು ಭಯೋತ್ಪಾದಕ ಕೃತ್ಯಗಳಲ್ಲಿ ಭಾಗಿಯಾಗಿದ್ದ ಭಯೋತ್ಪಾದಕನನ್ನು ಎಫ್‌ಬಿಐ ಅಧಿಕಾರಿಗಳು ನ್ಯೂಯಾರ್ಕ್‌ನಲ್ಲಿ ಬಂಧಿಸಿದ್ದಾರೆ.



ಹರ್‌ಪ್ರೀತ್

ಅಮೆರಿಕಕ್ಕೆ ಅಕ್ರಮವಾಗಿ ಪ್ರವೇಶಿಸಿದ ಆರೋಪದ ಮೇಲೆ ಹರ್‌ಪ್ರೀತ್ ಸಿಂಗ್ ಅಲಿಯಾಸ್ ಹ್ಯಾಪಿ ಪಸ್ಸಿಯಾ ಅಲಿಯಾಸ್ ಜೊರಾನನ್ನು ಕ್ಯಾಲಿಫೋರ್ನಿಯಾದ ಸ್ಯಾಕ್ರಮೆಂಟೊ ನಗರದಲ್ಲಿ ಅಮೆರಿಕದ ವಲಸೆ ಹಾಗೂ ಕಸ್ಟಂ ನಿರ್ದೇಶನಾಲಯ ಹಾಗೂ ಎಫ್‌ಬಿಐ ಅಧಿಕಾರಿಗಳು ಬಂಧಿಸಿದ್ದಾರೆ.

‘ಎರಡು ಭಯೋತ್ಪಾದಕ ಸಂಘಟನೆಗಳ ಜೊತೆ ನಿಕಟ ಸಂಪರ್ಕ ಹೊಂದಿದ್ದ ಆರೋಪಿಯು, ತನ್ನ ಫೋನ್‌ಗಳನ್ನು ಸುಟ್ಟುಹಾಕಿ ಅಮೆರಿಕ ದೊಳಗೆ ಅಕ್ರಮವಾಗಿ ಪ್ರವೇಶಿಸಿದ್ದ’ ಎಂದು ಎಫ್‌ಬಿಐ ‘ಎಕ್ಸ್’ನಲ್ಲಿ ತಿಳಿಸಿದೆ.

ಪಾಕಿಸ್ತಾನದ ಐಎಸ್‌ಐ ಹಾಗೂ ಖಾಲಿಸ್ತಾನಿಗಳ ಭಯೋತ್ಪಾದಕ ಗುಂಪು ಬಬ್ಬರ್ ಖಾಲ್ಸಾ ಇಂಟರ್‌ನ್ಯಾಷನಲ್ ಸಂಘಟನೆಗಳ ಜೊತೆ ಈತ ನಿಕಟ ಸಂಪರ್ಕ ಹೊಂದಿದ್ದ. ಜಾಗತಿಕ ಭದ್ರತೆ ಬೆದರಿಕೆ ಹಾಕಿದವರನ್ನು ಅಂತರ ರಾಷ್ಟ್ರೀಯ ಸಹಕಾರದಿಂದ ಬಂಧಿಸಿರುವುದು ಮಹತ್ವದ್ದಾಗಿದೆ’ ಎಂದು ಎಫ್‌ಬಿಐ ತಿಳಿಸಿದೆ.

ಪಂಜಾಬ್‌ನ ಅಮೃತಸರದ ಅಜ್ನಾಲಾ ನಿವಾಸಿಯಾಗಿರುವ ಇವರು, 2024 ಅ.1ರಂದು ಚಂಡೀಗಢದಲ್ಲಿ ಮನೆಯೊಂದರ ಮೇಲೆ ಗ್ರೆನೇಡ್ ದಾಳಿ ಬಳಿಕ ತಲೆಮರೆಸಿಕೊಂಡಿದ್ದರು. ಇದಾದ ಬಳಿಕ, ರಾಷ್ಟ್ರೀಯ ತನಿಖಾ ಸಂಸ್ಥೆಯು (ಎನ್‌ಐಎ) ಹರ್‌ಪ್ರೀತ್ ಸಿಂಗ್ ಮಾಹಿತಿ ನೀಡಿದವರಿಗೆ ₹5 ಲಕ್ಷ ಬಹುಮಾನ ಘೋಷಿಸಿತ್ತು.

ಹರ್‌ಪ್ರೀತ್ ವಶಕ್ಕೆ ಪಡೆಯಲು ಯತ್ನ: ‘ಹರ್‌ಪ್ರೀತ್ ಬಂಧನವು ಭಯೋತ್ಪಾದನೆ ವಿರುದ್ಧದ ಹೋರಾಟದಲ್ಲಿ ಅತ್ಯಂತ ದೊಡ್ಡ ಮೈಲಿಗಲ್ಲು’ ಎಂದು ಬಣ್ಣಿಸಿರುವ ಪಂಜಾಬ್ ಪೊಲೀಸ್ ಇಲಾಖೆ ಮುಖ್ಯಸ್ಥ ಗೌರವ್ ಯಾದವ್, ‘ಆದಷ್ಟು ಬೇಗ ವಶಕ್ಕೆ ಪಡೆಯಲಾಗುವುದು’ ಎಂದು ತಿಳಿಸಿದ್ದಾರೆ.

‘ಪಂಜಾಬ್‌ನಲ್ಲಿ ನಡೆದ 14 ಗ್ರೆನೇಡ್ ದಾಳಿ ಸೇರಿದಂತೆ, 16ಕ್ಕೂ ಅಧಿಕ ಭಯೋತ್ಪಾದಕ ದಾಳಿಯಲ್ಲಿ ಭಾಗಿಯಾಗಿದ್ದ. ಈ ವಿಷಯವನ್ನು ಕೇಂದ್ರ ಸರ್ಕಾರದ ಗಮನಕ್ಕೆ ತಂದು, ಆದಷ್ಟು ಬೇಗ ವಶಕ್ಕೆ ಪಡೆಯಲು ಕ್ರಮ ಕೈಗೊಳ್ಳಲಾಗುವುದು’ ಎಂದು ತಿಳಿಸಿದರು.

ಚೆಸ್ ಕಿರೀಟ ಗೆದ್ದ ಪೆಂಟ್ಸುಲಾಯಿಯಾ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜಾರ್ಜಿಯಾದ ಗ್ರ್ಯಾಂಡ್‌ಮಾಸ್ಟರ್ ಲೆವನ್ ಪೆಂಟ್ಸುಲಾಯಿಯಾ ಅವರು 'ನಮ್ಮ ಬೆಂಗಳೂರು ಇಂಟರ್‌ನ್ಯಾಷನಲ್ ಗ್ರ್ಯಾಂಡ್‌ಮಾಸ್ಟರ್ಸ್ ಚೆಸ್ ಟೂರ್ನಿ'ಯಲ್ಲಿ ಪ್ರಶಸ್ತಿ ಗೆದ್ದು ಕೊಂಡರು. ಐದನೇ ಶ್ರೇಯಾಂಕದ ಈ ಆಟಗಾರ ಹತ್ತು ಸುತ್ತುಗಳಿಂದ ಎಂಟು ಪಾಯಿಂಟ್ಸ್ ಕಲೆಹಾಕಿದರು.



ಪ್ರಶಸ್ತಿ ಗೆದ್ದ ಜಾರ್ಜಿಯಾದ ಲೆವನ್ ಪೆಂಟ್ಸುಲಾಯಿಯಾ

ಜಾರ್ಜಿಯಾದ ರಾಷ್ಟ್ರೀಯ ಚಾಂಪಿಯನ್ ಆಗಿರುವ ಪೆಂಟ್ಸುಲಾಯಿಯಾ ಹತ್ತು ಸುತ್ತುಗಳಲ್ಲಿ ಏಳು ಗೆದ್ದು, ಒಂದು ಸೋತು ಮತ್ತೆರಡು ಪಂದ್ಯ ಡ್ರಾ ಮಾಡಿಕೊಂಡರು. ಮಧ್ಯಪ್ರದೇಶದ ಗ್ರ್ಯಾಂಡ್‌ಮಾಸ್ಟರ್ ಅನುಜ್ ಶ್ರೀವತ್ರಿ ಮತ್ತು ಬೆಲರೂಸ್‌ನ ಅಲೆಕ್ಸಿ ಫೆಡರೋವ್ ಕೂಡ ಇಷ್ಟೇ ಪಾಯಿಂಟ್ಸ್ ಪಡೆದರೂ, ಪ್ರೊಗ್ರೆಸಿವ್ ಅಂಕಗಳ ಆಧಾರದಲ್ಲಿ ಎರಡು ಮತ್ತು ಮೂರನೇ ಸ್ಥಾನ ಪಡೆದರು.

ಕೋರಮಂಗಲದ ಒಳಾಂಗಣ ಕ್ರೀಡಾಂಗಣದಲ್ಲಿ ನಡೆದ ಟೂರ್ನಿಯ ಅಂತಿಮ ಸುತ್ತಿನ ಮೊದಲ ಬೋರ್ಡ್‌ನಲ್ಲಿ 39 ವರ್ಷ ವಯಸ್ಸಿನ ಪೆಂಟ್ಸುಲಾಯಿಯಾ ಅವರು ಅರ್ಮೇನಿಯಾದ ಮಾನ್ಯುಯೆಲ್ ಪೆಟ್ರೋಸಿಯಾನ್ (7.5) ಜೊತೆ 35ನೇ ನಡೆಯಲ್ಲಿ ಡ್ರಾ ಸಾಧಿಸುವಲ್ಲಿ ಯಶಸ್ವಿ ಆದರು.

ಮಧ್ಯಪ್ರದೇಶದ ಐಎಂ ಅನುಜ್ ಶ್ರೀವತ್ರಿ ಎರಡನೇ ಬೋರ್ಡ್‌ನಲ್ಲಿ ಐಎಂ ಅರಣ್ಯಕ್ ಘೋಷ್ (6) ಅವರನ್ನು 55 ನಡೆಗಳಲ್ಲಿ ಸೋಲಿಸಿದರು. 52 ವರ್ಷ ವಯಸ್ಸಿನ ಗ್ರ್ಯಾಂಡ್‌ಮಾಸ್ಟರ್ ಫೆಡರೋವ್, ಆಂಧ್ರಪ್ರದೇಶದ ಮೆಹರ್ ಚಿನ್ನಾರೆಡ್ಡಿ ಅವರನ್ನು 48ನೇ ನಡೆಯಲ್ಲಿ ಮಣಿಸಿದರು.

ಈ ಟೂರ್ನಿಯಲ್ಲಿ ಕಡಿಮೆ ರೇಟಿಂಗ್ ಹೊರತಾಗಿಯೂ ಉತ್ತಮ ಪ್ರದರ್ಶನ ನೀಡಿದ ಕೇರಳದ ನಿತಿನ್ ಬಾಬು (7.5) ನಾಲ್ಕನೇ, ಮೂರನೇ ಶ್ರೇಯಾಂಕದ ಪೆಟ್ರೋಸಿಯಾನ್ (7.5), ಅಗ್ರ ಶ್ರೇಯಾಂಕದ ಪಾ ಇನಿಯನ್ (ತಮಿಳುನಾಡು, 7.5), ಅರ್ಮೇನಿಯಾದ ಕರೆನ್ ಗ್ರೆಗೋರಿಯನ್ (7.5), ಗೋವಾದ ಇತನ್ ವಾಜ್ (7.5) ಅವರು ನಾಲ್ಕರಿಂದ ಏಳರವರೆಗಿನ ಸ್ಥಾನಗಳನ್ನು ಪಡೆದರು. ನಿತಿನ್ ಬಾಬು (ರೇಟಿಂಗ್ 2242) ಅವರು ಈ ಟೂರ್ನಿಯಲ್ಲಿ ಐಎಂ ನಾರ್ಮ್ ಪಡೆದರು.

ಒಟ್ಟು 12 ಆಟಗಾರರು ತಲಾ ಏಳೂವರೆ ಪಾಯಿಂಟ್ಸ್ ಪಡೆದರು. ಕರ್ನಾಟಕದ ಗ್ರ್ಯಾಂಡ್‌ಮಾಸ್ಟರ್ ಜಿ.ಎ. ಸ್ಟ್ಯಾನಿ (7.5) 12ನೇ ಸ್ಥಾನ ಪಡೆದರು.

ಶಾಟ್‌ಪಟ್: ನಿಶ್ಚಯ್‌ಗೆ ಬೆಳ್ಳಿ



ನವದೆಹಲಿ (ಪಿಟಿಐ): ಸೌದಿ ಅರೇಬಿಯಾದ ದಮ್ಮಮ್‌ನಲ್ಲಿ ನಡೆಯುತ್ತಿರುವ ಏಷ್ಯನ್ 18 ವರ್ಷದೊಳಗಿನವರ ಅಥ್ಲೆಟಿಕ್ ಚಾಂಪಿಯನ್ ಷಿಪ್‌ನ ಬಾಲಕರ ಶಾಟ್‌ಪಟ್ ಸ್ಪರ್ಧೆಯಲ್ಲಿ ಭಾರತದ ನಿಶ್ಚಯ್ ಗುರುವಾರ ರಾತ್ರಿ ಬೆಳ್ಳಿ ಪದಕ ಗೆದ್ದುಕೊಂಡಿದ್ದಾರೆ. ಹರಿಯಾಣದ 16 ವರ್ಷ ವಯಸ್ಸಿನ ಅಥ್ಲೀಟ್‌ಗೆ ಇದು ಈ ಕೂಟದ ಎರಡನೇ ಪದಕವಾಗಿದೆ.

ಅವರು ಶಾಟ್‌ಪಟ್ ಅನ್ನು 19.58 ಮೀ. ದೂರಕ್ಕೆಸೆದರು. ಅವರು ನಾಲ್ಕು ಬಾರಿ 19 ಮೀ.ಗಿಂತ ದೂರ ಎಸೆದರು. ಐದನೇ ಯತ್ನದಲ್ಲಿ ಅವರು ಈ ದೂರ ಸಾಧಿಸಿದರು. ಅವರ ವೈಯಕ್ತಿಕ ಶ್ರೇಷ್ಠ ಸಾಧೆ (18.93 ಮೀ.) ಕಳೆದ ತಿಂಗಳು ದಾಖಲಾಗಿತ್ತು. ಚೀನಾದ ಖಿಜೆಂಗ್ ಅವರು 20.23 ಮೀ. ದೂರ ಎಸೆದು ಚಿನ್ನ ಗೆದ್ದರು. ಸಿಂಗಪುರದ ಅನ್ಸನ್ ಲೋಹ್ (18.59 ಮೀ.) ಕಂಚಿನ ಪದಕ ತಮ್ಮದಾಗಿಸಿಕೊಂಡರು.

ದಿನದ ಆರಂಭದಲ್ಲಿ ಭಾರತ ಇನ್ನೆರಡು ಕಂಚಿನ ಪದಕಗಳನ್ನು ಗೆದ್ದಕೊಂಡಿತ್ತು. ಬಾಲಕಿಯರ ವಿಭಾಗದಲ್ಲಿ ಡಿಸ್ಕಸ್ ಥ್ರೋವರ್ ಲಕ್ಷಿತಾ ಮಹ್ಲಾವತ್ ಮತ್ತು 100 ಮೀ. ಹರ್ಡಲ್ಸ್ ಓಟಗಾರ್ತಿ ಶೌರ್ಯಾ ಅಂಬುರೆ ಅವರ ಮೂಲಕ ಈ ಪದಕಗಳು ಬಂದಿದ್ದವು.

ಲಕ್ಷಿತಾ ಡಿಸ್ಕಸ್ ಅನ್ನು 41.30 ಮೀ. ದೂರ ಎಸೆದರು. ಚೀನಾದ ಮಾ ಚೆನ್‌ಯಿ (53.81 ಮೀ) ಚಿನ್ನ ಮತ್ತು ಝೂವೊ ಅನ್‌ಕ್ವಿ (47.89 ಮೀ) ಕ್ರಮವಾಗಿ ಚಿನ್ನ ಮತ್ತು ಬೆಳ್ಳಿ ಗೆದ್ದರು.

ಶೌರ್ಯಾ 13.80 ಸೆ.ಗಳಲ್ಲಿ ಓಟ ಪೂರೈಸಿದರು. ಚೀನಾದ ಬಾವೊ ಯಿನ್‌ಯಿನ್ (13.71) ಮತ್ತು ಹೆ ಯಿಹುಯಿ (13.76) ಕ್ರಮವಾಗಿ ಮೊದಲ ಎರಡು ಸ್ಥಾನ ಪಡೆದರು.

ಸ್ಕ್ವಾಷ್: ಸೆಮಿಗೆ ವೀರ್, ಅನಾಹತ್

ಕೌಲಾಲಂಪುರ (ಪಿಟಿಐ): ಭಾರತದ ಯುವ ಸ್ಕ್ವಾಷ್ ಆಟಗಾರರಾದ ವೀರ್ ಚೋತ್ರಾಣಿ ಮತ್ತು ಅನಾಹತ್ ಸಿಂಗ್ ಅವರು ಶುಕ್ರವಾರ ವಿಶ್ವ ಚಾಂಪಿಯನ್‌ಷಿಪ್ ಅರ್ಹತಾ ಸ್ಪರ್ಧೆಯಲ್ಲಿ (ಏಷ್ಯಾ) ಸೆಮಿಫೈನಲ್ ಪ್ರವೇಶಿಸಿದರು.

ಪುರುಷರ ಸಿಂಗಲ್ಸ್ ಕ್ವಾರ್ಟರ್ ಫೈನಲ್‌ನಲ್ಲಿ 23 ವರ್ಷ ವಯಸ್ಸಿನ ಚೋತ್ರಾಣಿ 9-11, 11-6, 11-6, 11-7ರಿಂದ ಆತಿಥೇಯ ಮಲೇಷ್ಯಾದ ಮೊಹಮ್ಮದ್ ಸಯಾಫಿಕ್ ಕಮಲ್ ಅವರನ್ನು ಮಣಿಸಿದರು.


17ನೇ ವರ್ಷ ವಯಸ್ಸಿನ ಅನಾಹತ್ ಅವರು ಮಹಿಳೆಯರ ಸಿಂಗಲ್ಸ್ ಕ್ವಾರ್ಟರ್ ಫೈನಲ್‌ನಲ್ಲಿ 11-1, 11-7, 11-5ರ ನೇರ ಗೇಮ್‌ಗಳಿಂದ ಜಪಾನ್‌ನ ಅಕಾರಿ ಮಿಡೋರಿಕಾವಾ ಅವರನ್ನು ನಿರಾಯಾಸವಾಗಿ ಮಣಿಸಿದರು.

ಬಾನು ಮುಷ್ತಾಕ್, ದೀಪಾ ಭಸ್ತಿ ಜತೆ ಸಂವಾದ ನಾಳೆ

ಬೆಂಗಳೂರು ಅಂತರರಾಷ್ಟ್ರೀಯ ಕೇಂದ್ರ, 4ನೇ ಮುಖ್ಯ ರಸ್ತೆ, ದೊಮ್ಮಲೂರು 2ನೇ ಹಂತ.

ಬಾನು ಮುಷ್ತಾಕ್ ಅವರ 'ಹಾರ್ಟ್ ಲ್ಯಾಂಪ್' ಪುಸ್ತಕದ ಕುರಿತ ಮಾತುಕತೆಯನ್ನು ಬೆಂಗಳೂರು ಅಂತರರಾಷ್ಟ್ರೀಯ ಕೇಂದ್ರದಲ್ಲಿ ಏಪ್ರಿಲ್ 20ರಂದು ಹಮ್ಮಿಕೊಳ್ಳಲಾಗಿದೆ. ಸಂಜೆ 6ರಿಂದ 7.30ವರೆಗೆ ನಡೆಯಲಿರುವ ಈ ಕಾರ್ಯಕ್ರಮದಲ್ಲಿ ಮೂಲಲೇಖಕಿ ಬಾನು ಮುಷ್ತಾಕ್, ಅನುವಾದಕಿ ದೀಪಾ ಭಸ್ತಿ ಅವರೊಂದಿಗೆ ಶೈನಿ ಆ್ಯಂಟನಿ ಸಂವಾದ ನಡೆಸಲಿದ್ದಾರೆ. ಆಸಕ್ತರು ಭಾಗವಹಿಸಬಹುದು.

ಬಾನು ಮುಷ್ತಾಕ್ ಅವರ 'ಹಾರ್ಟ್ ಲ್ಯಾಂಪ್' ಕೃತಿಯು ವಿಶ್ವದ ಮೇರು ಸಾಹಿತ್ಯ ಪ್ರಶಸ್ತಿ ಬೂಕರ್‌ನ ಶಾರ್ಟ್‌ಲಿಸ್ಟ್‌ನಲ್ಲಿ ಸ್ಥಾನ ಪಡೆದಿದೆ. ವಿಶ್ವದ ಬೇರೆ ಬೇರೆ ಭಾಷೆಯಲ್ಲಿನ 104 ಕೃತಿಗಳ ಪೈಕಿ, ಬಾನು ಮುಷ್ತಾಕ್ ಅವರ ಕೃತಿಯೂ ಸೇರಿದಂತೆ ಆರು ಕೃತಿಗಳು ಮಾತ್ರ ಈ ಶಾರ್ಟ್‌ಲಿಸ್ಟ್‌ನಲ್ಲಿ ಸ್ಥಾನ ಪಡೆದಿವೆ. 2025ರ ಮೇ 20ರಂದು ಲಂಡನ್‌ನಲ್ಲಿ ನಡೆಯಲಿರುವ ಕಾರ್ಯಕ್ರಮದಲ್ಲಿ ವಿಜೇತರ ಹೆಸರನ್ನು ಘೋಷಿಸಲಾಗುತ್ತದೆ. ಬಾನು ಅವರು 'ಎದೆಯ ಹಣತೆ' ಶೀರ್ಷಿಕೆಯಡಿ ಬರೆದಿದ್ದ ಈ ಕೃತಿಯನ್ನು ದೀಪಾ ಭಸ್ತಿಯವರು 'ಹಾರ್ಟ್ ಲ್ಯಾಂಪ್' ಹೆಸರಿನಲ್ಲಿ ಅನುವಾದಿಸಿದ್ದಾರೆ.


ಬಾನು ಮುಷ್ತಾಕ್

ಇಂದು ಮತ್ತು ನಾಳೆ 'ನಾ ಸತ್ತಿಲ್ಲ' ನಾಟಕ



ಕಾನೂನು , ಧರ್ಮಶಾಸ್ತ್ರ, ಸಾಕ್ಷಿ ಪುರಾವೆಗಳ ಆಧಾರದಲ್ಲಿ ಒಬ್ಬ ವ್ಯಕ್ತಿ ತಾನು ಸತ್ತಿಲ್ಲವೆಂದು ವಾದಿಸಿದರೆ, ಪ್ರತಿವಾದಿಯು ಅವನು ಸತ್ತಿದ್ದಾನೆಂದು ನ್ಯಾಯಾಲಯದಲ್ಲಿ ವಾದಿಸುವ, ನಿಗೂಢ ಕಥಾಹಂದರವನ್ನು ಇಟ್ಟುಕೊಂಡಿರುವ ನಾಟಕವೇ 'ನಾ ಸತ್ತಿಲ್ಲ'

ನಿರ್ದೇಶನ: ಶ್ರೀಕೃಷ್ಣ ಕುಲಕರ್ಣಿ. ರಚನೆ: ಕೃಷ್ಣ ಕೊಲ್ಹಾರ ಕುಲಕರ್ಣಿ.

ಇದರ ಪ್ರದರ್ಶನವನ್ನು ಹೊಸಪೇಟೆಯ ಕನ್ನಡ ಕಲಾಸಂಘವು ಕರ್ನಾಟಕ ನಾಟಕ ಅಕಾಡೆಮಿಯ ಸಹಯೋಗದೊಂದಿಗೆ 'ತಿಂಗಳ ನಾಟಕ ಸಂಭ್ರಮ'ದ ಅಂಗವಾಗಿ ಏಪ್ರಿಲ್ 19ರಂದು ಶನಿವಾರ ಬೆಂಗಳೂರಿನ ಮಲ್ಲತ್ತಹಳ್ಳಿಯ ಕಲಾಗ್ರಾಮದ ಸಮುಚ್ಚಯ ಭವನದಲ್ಲಿ ಸಂಜೆ 6.30ಕ್ಕೆ ಪ್ರದರ್ಶನ ಹಮ್ಮಿಕೊಂಡಿದೆ.

ಮರುದಿನ ಏಪ್ರಿಲ್ 20ರಂದು ಭಾನುವಾರ ಕೆ.ಇ.ಎ.ಪ್ರಭಾತ್ ರಂಗಮಂದಿರದಲ್ಲಿ ಕರ್ನಾಟಕ ಎಂಜಿನಿಯರ್ಸ್ ಅಕಾಡೆಮಿಯ ಸಹಯೋಗದೊಂದಿಗೆ ಸಂಜೆ 5.30ಕ್ಕೆ ಪ್ರದರ್ಶನ ನಡೆಯಲಿದೆ.


ಚಂದನಾ ನಾಗ್

ಭಾನುವಾರ ಚಂದನಾ ರಂಗಪ್ರವೇಶ

ನಿರ್ಮಾಪಕಿ ಶೈಲಜಾ ನಾಗ್ ಮತ್ತು ನಿರ್ದೇಶಕ ಬಿ.ಸುರೇಶ್ ಅವರ ಪುತ್ರಿ ಚಂದನಾ ನಾಗ್ ಅವರ ಭರತನಾಟ್ಯ ರಂಗಪ್ರವೇಶ ಏಪ್ರಿಲ್ 20ರಂದು ಭಾನುವಾರ ಜೆ.ಸಿ.ರಸ್ತೆಯಲ್ಲಿರುವ ಎಡಿಎ ರಂಗಮಂದಿರದಲ್ಲಿ ನಡೆಯಲಿದೆ.

ಚಂದನಾ ನಾಗ್ ಭ್ರಮರಿ ಡಾನ್ಸ್ ರೆಪರ್ಟರಿಯ ನಿರ್ದೇಶಕಿ ಸ್ನೇಹಾ ಕಪ್ಪಣ್ಣ ಅವರ ಶಿಷ್ಯೆ.

ಸಂಜೆ 5.30ಕ್ಕೆ ನಡೆಯಲಿರುವ ಈ ಕಾರ್ಯಕ್ರಮದಲ್ಲಿ ನೂಪುರ ಭರತನಾಟ್ಯ ಶಾಲೆಯ ನಿರ್ದೇಶಕಿ ಡಾ.ಲಲಿತಾ ಶ್ರೀನಿವಾಸನ್, ಖ್ಯಾತ ನೃತ್ಯಪಟು ಪ್ರತಿಭಾ ಪ್ರಹ್ಲಾದ್, ಕರ್ನಾಟಕ ಸಂಗೀತ ನೃತ್ಯ ಅಕಾಡೆಮಿಯ ಅಧ್ಯಕ್ಷೆ ಶುಭಾ ಧನಂಜಯ್ ಇರಲಿದ್ದಾರೆ.

ಉಪಸ್ಥಿತಿ: ಡಾ.ವಿಜಯ, ಕಮಲಾ ರಾಧಾಕೃಷ್ಣ.



ಬೆಳ್ಳಿ ಹಬ್ಬದ ಸಂಭ್ರಮದಲ್ಲಿ ಶಿವಶಕ್ತಿ ನೃತ್ಯ ಶಾಲೆ

ಏಪ್ರಿಲ್ 25

ಬೆಂಗಳೂರಿನ ರಾಜಾಜಿನಗರ 2ನೇ ಹಂತದಲ್ಲಿರುವ ಶಿವಶಕ್ತಿ ನೃತ್ಯ ಶಾಲೆ ಸ್ಥಾಪನೆಯಾಗಿ 25 ವರ್ಷಗಳು ತುಂಬಿರುವ ಪ್ರಯುಕ್ತ ರಜತ ಮಹೋತ್ಸವ ಸಮಾರಂಭವನ್ನು ಇದೇ ಏಪ್ರಿಲ್ 25ರಂದು ಶುಕ್ರವಾರ ಸಂಜೆ 5 ಗಂಟೆಗೆ ಆಯೋಜಿಸಲಾಗಿದೆ.

ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾದ ಡಾ.ಪುರುಷೋತ್ತಮ ಬಿಳಿಮಲೆ ಕಾರ್ಯಕ್ರಮವನ್ನು ಉದ್ಘಾಟಿಸುವರು. ಶಾಸಕ ಡಾ. ಸಿ.ಎನ್. ಅಶ್ವಥ್ ನಾರಾಯಣ ಅಧ್ಯಕ್ಷತೆ ವಹಿಸುವರು.

ಕರ್ನಾಟಕ ಸರ್ಕಾರದ ಮುಖ್ಯ ಕಾರ್ಯದರ್ಶಿಗಳಾದ ಎಲ್.ಕೆ. ಅತೀಕ್, ವಿಧಾನ ಪರಿಷತ್ತಿನ ಸದಸ್ಯರಾದ ಡಿ.ಟಿ.ಶ್ರೀನಿವಾಸ್ ಅತಿಥಿಗಳಾಗಿ ಪಾಲ್ಗೊಳ್ಳುವರು. ಚಲನಚಿತ್ರ ನಿರ್ಮಾಪಕರಾದ ಡಿ.ಸುರೇಶ್ ಗೌಡ , ಹಿರಿಯ ಪತ್ರಕರ್ತರಾದ ಎಸ್.ಆರ್. ಆರಾಧ್ಯ ಉಪಸ್ಥಿತರಿರುವರು.

ಕಲಾಯೋಗಿ ಗುರು ಪುಲಿಕೇಶಿ ಕಸ್ತೂರಿ, ಸಂಸ್ಕೃತಿ ಚಿಂತಕರಾದ ಪ್ರೊ. ಎಂ. ಕೃಷ್ಣೇಗೌಡ ಹಾಗೂ ಕಲಾ ನಿರ್ದೇಶಕರಾದ ವಿದ್ವಾನ್ ಹರೀಶ್ ರಾಮನ್ ಭಾಗವಹಿಸಲಿದ್ದಾರೆ. ಶಿವಶಕ್ತಿ ನೃತ್ಯ ಶಾಲೆಯ ಸಂಸ್ಥಾಪಕ ನಿರ್ದೇಶಕರಾ ಕೆ.ಆರ್.ಗುಣವತಿ ಅವರ ಶಿಷ್ಯ ವೃಂದದಿಂದ ಶಿವನಾಮಾಮೃತ ನೃತ್ಯ ರೂಪಕ ನಡೆಯಲಿದೆ.

ಜಾಟ್–2 ಘೋಷಣೆ


ಸನ್ನಿ ದೇವಲ್

ಜಾಟ್ ಸಿನಿಮಾದ ಯಶಸ್ಸಿನ ಬೆನ್ನಲ್ಲೇ ಅದರ ಮುಂದುವರಿದ ಭಾಗವಾಗಿ 'ಜಾಟ್–2' ನಿರ್ಮಿಸಲಾಗುವುದು ಎಂದು ನಟ ಸನ್ನಿ ದೇವಲ್ ಹೇಳಿದ್ದಾರೆ.

ಈ ಚಿತ್ರಕ್ಕೂ ಗೋಪಿಚಂದ್ ಮಲಿನೇನಿ ಆ್ಯಕ್ಷನ್ ಕಟ್ ಹೇಳುತ್ತಿದ್ದಾರೆ. ಏ. 10ರಂದು ತೆರೆಕಂಡ ಜಾಟ್ ಚಿತ್ರಕ್ಕೆ ಪ್ರೇಕ್ಷಕರಿಂದ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗಿತ್ತು. ರಂದೀಪ್ ಹೂಡಾ, ವಿನೀತ್ ಕುಮಾರ್ ಸಿಂಗ್ ಮತ್ತು ಸಯಾಮಿ ಖೇರ್ ಪ್ರಮುಖ ಪಾತ್ರದಲ್ಲಿ ನಟಿಸಿದ್ದಾರೆ.

ಬಾಕ್ಸ್ ಆಫೀಸ್‌ನಲ್ಲಿ ಈವರೆಗೂ ಈ ಚಿತ್ರ ₹ 70 ಕೋಟಿ ಗಳಿಕೆ ಕಂಡಿದೆ. ತಮ್ಮ ಇನ್‌ಸ್ಟಾಗ್ರಾಂ ಖಾತೆಯಲ್ಲಿ ಹೊಸ ಚಿತ್ರದ ವಿಷಯವನ್ನು ಹಂಚಿಕೊಂಡಿದ್ದಾರೆ.

ಮೈತ್ರಿ ಮೂವಿ ಮೇಕರ್ಸ್ ಮತ್ತು ಪೀಪಲ್ ಮೀಡಿಯಾ ಫ್ಯಾಕ್ಟರಿ ಈ ಚಿತ್ರವನ್ನು ನಿರ್ಮಾಣ ಮಾಡುತ್ತಿವೆ.










ಬಿಸಿಲಬೇಗೆ, ಹಣ್ಣುಗಳ ಬಗೆ

ಬಿಸಿಲಿನ ತಾಪ ಹೆಚ್ಚಿದಷ್ಟೂ ಮಾವಿನ ಬಣ್ಣ ಹೊಂಬಣ್ಣಕ್ಕೆ ಬದಲಾಗುತ್ತದೆ. ಸದ್ಯ ಬೆಂಗಳೂರಿನಲ್ಲಿ ಹಣ್ಣಿನ ರಾಜ ಮಾವು ರಾರಾಜಿಸುತ್ತಿದೆ. ಸಫೇದಾ ಎಂದು ಕರೆಯಲಾಗುವ ಬೈಗನ್‌ಪಲ್ಲಿ, ಬಾದಾಮಿ, ಮಲ್ಲಿಕಾ ಅಲ್ಲಲ್ಲಿ ಗಾಡಿಗಳಲ್ಲಿ, ಅಂಗಡಿಗಳಲ್ಲಿ ಮಾರಾಟಕ್ಕೆ ಸಜ್ಜಾಗಿವೆ. ಸಿಂಧೂರಾ ನಮ್ಮ ಲಾಲ್‌ಬಾಗಿನ ತಳಿ, ಹುಳಿಯೇ ಗೊತ್ತಿಲ್ಲದ ತಳಿ, ಎಲ್ಲರ ಕೈಗೆಟಕುವ ಬೆಲೆಯಲ್ಲಿ ಆಗಲೇ ಶೀಕರಣೆಯಾಗುತ್ತಿದೆ. ಮಾವು ಆರಿಸುವಾಗ ಸುವಾಸನೆ ನೋಡಿಯೇ ತೂಕಕ್ಕೆ ಹಾಕುವುದು ವಿಶೇಷ. ಮಾವಿನೊಂದಿಗೆ ದಾಹ ಕಡಿಮೆ ಮಾಡುವ ಕಲ್ಲಂಗಡಿಯ ಮಾರಾಟದ ಭರಾಟೆಯೂ ಜೋರಾಗಿದೆ. ನಗರದ ವಿವಿಧೆಡೆ ರಾಶಿ ರಾಶಿ ಹಣ್ಣುಗಳೀಗ ಬಿಸಿಲಿನ ಬೇಗೆ ಕಡಿಮೆಗೊಳಿಸಲು ಸಜ್ಜಾಗಿವೆ.
ಬೆಂಗಳೂರಿನಲ್ಲಿ ಸದ್ಯ ಜಯಮಹಲ್ ಎಕ್ಸ್‌ಟೆನ್ಶನ್‌ನಲ್ಲಿ ಇರುವ ಮಾವಿನ ಪೇಟೆಯ ಚಿತ್ರಗಳನ್ನು ಸೆರೆ ಹಿಡಿದವರು ಫೋಟೊ ಜರ್ನಲಿಸ್ಟ್ ಬಿ.ಕೆ. ಜನಾರ್ದನ್ ಮತ್ತು ಕಿಶೋರ ಕುಮಾರ್ ಬೋಳಾರ್



ಚಾಕೊಲೇಟ್‌ಗಳಂತೆ ಡೊಲೊ 650 ಸೇವನೆ

ಭಾರತದಲ್ಲಿ ಪ್ಯಾರಾಸಿಟಮಲ್ ಮಾತ್ರೆ ವ್ಯಾಪಕವಾಗಿ ಲಭ್ಯವಿದ್ದು, ಸಣ್ಣ ಜ್ವರ ಬಂದರೂ ಸೇವಿಸುವ ದೊಡ್ಡ ವರ್ಗವೇ ಇದೆ. ಅದರಲ್ಲೂ ಇತ್ತೀಚಿನ ವರ್ಷಗಳಲ್ಲಿ ಡೊಲೊ 650 ಅತಿ ಹೆಚ್ಚು ಮಾರಾಟವಾಗುತ್ತಿರುವ ಮಾತ್ರೆಯಾಗಿದೆ.



ಉದರತಜ್ಞ ಹಾಗೂ ಆರೋಗ್ಯ ಸಲಹೆಗಾರ ಪಳನಿಯಪ್ಪನ್ ಮಾಣಿಕ್ಕಂ ಅವರು ಈ ಬೆಳವಣಿಗೆ ಕುರಿತು ಆಘಾತ ವ್ಯಕ್ತಪಡಿಸಿದ್ದಾರೆ. ಈ ಕುರಿತು ಸಾಮಾಜಿಕ ಮಾಧ್ಯಮದಲ್ಲಿ ವಿಷಯ ಹಂಚಿಕೊಂಡಿರುವ ಅವರು, 'ಡೊಲೊ 650ಯನ್ನು ಭಾರತೀಯರು ಕ್ಯಾಡ್‌ಬೆರಿ ಜೆಮ್ಸ್‌ನಂತೆ ಸೇವಿಸುತ್ತಿದ್ದಾರೆ' ಎಂದಿದ್ದಾರೆ.

'ಜ್ವರ, ತಲೆನೋವು, ಮೈಕೈ ನೋವು ಇದ್ದಲ್ಲಿ ವೈದ್ಯರು ಡೊಲೊ 650ಯನ್ನು ಸೇವಿಸಲು ಹೇಳುವುದು ಭಾರತದಲ್ಲಿ ಸಾಮಾನ್ಯ. ಸುರಕ್ಷಿತ ಎಂಬ ಭಾವನೆಯಿಂದ ಈ ಮಾತ್ರೆಯನ್ನು ಹಲವರು ಶಿಫಾರಸು ಮಾಡುತ್ತಾರೆ. ಆದರೆ ಅತಿಯಾದ ಬಳಕೆ ಯಕೃತ್‌ಗೆ ಸಮಸ್ಯೆ ತಂದೊಡ್ಡಬಹುದು' ಎಂದು ತಜ್ಞರು ಹೇಳಿದ್ದಾರೆ.

'ಕೋವಿಡ್–19 ಸಂದರ್ಭದಲ್ಲಿ ಡೊಲೊ–650 ವ್ಯಾಪಕವಾಗಿ ಬಳಕೆಯಾಯಿತು. ಲಸಿಕೆ ಪಡೆದ ನಂತರ ಅದರ ಅಡ್ಡಪರಿಣಾಮ ತಡೆಗಟ್ಟಲು ಈ ಮಾತ್ರೆ ಹೆಚ್ಚಾಗಿ ಶಿಫಾರಸುಗೊಂಡಿತು. ಡೊಲೊಪರ್ ಮಾತ್ರೆಯ ನಂತರದಲ್ಲಿ ಬಂದ ಡೊಲೊ–650ಯಲ್ಲಿ ಪ್ಯಾರಾಸಿಟಮಲ್ ಇರುತ್ತದೆ. ನೋವು, ಜ್ವರ, ಉರಿಯೂತಕ್ಕೆ ಕಾರಣವಾಗುವ ಪ್ರೊಸ್ಟಾಗ್ಲಾಂಡಿನ್ ಬಿಡುಗಡೆಯನ್ನು ಇದು ತಡೆಯುತ್ತದೆ. ಜತೆಗೆ ದೇಹದ ಉಷ್ಣತೆಯನ್ನೂ ಇದು ಕಡಿಮೆ ಮಾಡುತ್ತದೆ.

2020ರಲ್ಲಿ ವ್ಯಾಪಿಸಿದ ಕೋವಿಡ್–19ರ ನಂತರದಲ್ಲಿ ಸುಮಾರು 350 ಕೋಟಿಯಷ್ಟು ಡೊಲೊ–650 ಮಾತ್ರೆಗಳು ಮಾರಾಟವಾಗಿದ್ದವು. ಇದರಿಂದ ವಾರ್ಷಿಕ ₹400 ಕೋಟಿ ಆದಾಯ ಗಳಿಕೆಯಾಗಿದೆ. ಕೋವಿಡ್ ಪೂರ್ವದಲ್ಲಿ ಮೈಕ್ರೊಲ್ಯಾಬ್ಸ್ ಸುಮಾರು 7.5 ಕೋಟಿ ಸ್ಟ್ರಿಪ್ ಅನ್ನು ಮೈಕ್ರೊ ಲ್ಯಾಬ್ಸ್ ಮಾರಾಟ ಮಾಡಿತ್ತು. ಮುಂದಿನ ವರ್ಷ ಇದು 9.4 ಕೋಟಿಗೆ ಏರಿಕೆಯಾಯಿತು. 2021ರಲ್ಲಿ 14.5 ಕೋಟಿಗೆ ಹೆಚ್ಚಳವಾಯಿತು ಎಂದು ಫೋರ್ಬ್ಸ್ ವರದಿ ಮಾಡಿದೆ. ❖

ಎಳೆ ವಯಸ್ಸಿನ ಮಕ್ಕಳಲ್ಲೂ ಮಲಬದ್ಧತೆ

ಡಾ. ಅಶೋಕ್



ಮಲಬದ್ಧತೆ ಎಲ್ಲರಲ್ಲೂ ಕಂಡುಬರುವ ಸಾಮಾನ್ಯ ಆರೋಗ್ಯ ಸಮಸ್ಯೆ. ಆದರೆ ಇತ್ತೀಚೆಗೆ ತೀರಾ 2 ವರ್ಷದ ಮಕ್ಕಳಲ್ಲೂ ಮಲಬದ್ಧತೆ ಕಂಡುಬರುತ್ತಿದೆ.

ಇದಕ್ಕೆ ಕಾರಣ ಈಗಿನ ಆಹಾರ ಪದ್ಧತಿ. ಜಂಕ್ ಫುಡ್, ಬ್ರೆಡ್, ಬಿಸ್ಕತ್ ಮತ್ತು ರಸ್ಕ್ ಅತಿಯಾದ ಸೇವನೆ. ಜತೆಗೆ ತರಕಾರಿ ಮತ್ತು ಹಣ್ಣುಗಳಂಥ ನಾರಿನಂಶ ಇರುವ ಆಹಾರಗಳನ್ನು ಸೇವನೆ ಮಾಡದೇ ಇರುವುದು. ಸಾಕಷ್ಟು ದ್ರವ ಸೇವನೆ ಮಾಡದಿರುವುದು ಪ್ರಮುಖ ಕಾರಣವಾಗಿದೆ. ಅಸಮತೋಲಿತ ಆಹಾರ ಸೇವನೆಯು ಮುಖ್ಯ ಕಾರಣ.

ಮಲಬದ್ಧತೆ ಸಮಸ್ಯೆ ಕಂಡುಬರಲು ಇಂಥದ್ದೆ ಋತು ಎಂದಿಲ್ಲ. ಆದರೆ, ಬೇಸಿಗೆಯಲ್ಲಿ ಸರಿಯಾಗಿ ನೀರು ಕುಡಿಯದೆ ಇದ್ದರೆ, ಜಡಜೀವನಶೈಲಿಯಿಂದ ಈ ಸಮಸ್ಯೆ ಹೆಚ್ಚುತ್ತದೆ. ಮನೆಯೊಳಗೆ ಸದಾ ಕುಳಿತಿರುವುದು, ಟಿ.ವಿ ಅಥವಾ ಮೊಬೈಲ್ ಪರದೆಯನ್ನು ನೋಡುವುದರಲ್ಲಿ ಹೆಚ್ಚಿನ ಸಮಯ ಕಳೆಯುತ್ತಿರುವುದು ಕಾರಣವಾಗಿದೆ. ಹಾಲು ಮತ್ತು ಡೈರಿ ಉತ್ಪನ್ನಗಳ ಅತಿಯಾದ ಸೇವನೆಯು ಮಲಬದ್ಧತೆಗೆ ಕಾರಣವಾಗಬಹುದು.

ಲಕ್ಷಣಗಳೇನು?: ಹೊಟ್ಟೆ ನೋವು, ಹಸಿವು ಕಡಿಮೆಯಾಗುವುದು, ಹೊಟ್ಟೆಯಲ್ಲಿ ಅಸ್ವಸ್ಥತೆ, ಗಟ್ಟಿಯಾದ ಮಲ ಮತ್ತು ಅನಿಯಮಿತವಾಗಿ ಕರುಳಿನಲ್ಲಿ ಸಂಕಟ ಉಂಟಾಗಬಹುದು.

ಮಕ್ಕಳಲ್ಲಿ ಕಂಡುಬರುವ ಮಲಬದ್ಧತೆಯನ್ನು ಪರಿಹರಿಸಲು ಮೊದಲು ಮಕ್ಕಳ ಆಹಾರ ಪದ್ಧತಿಯನ್ನು ಪೋಷಕರು ಪರಿಶೀಲಿಸಬೇಕು. ನಾರಿನಂಶ ಇರುವ ದ್ರವ ರೂಪದ ಆಹಾರ ಸೇವಿಸುವಂತೆ ನೋಡಿಕೊಳ್ಳಬೇಕು. ಇದರ ಜತೆಗೆ ನಿಯಮಿತವಾಗಿ ದೈಹಿಕ ಚಟುವಟಿಕೆಯಲ್ಲಿ ತೊಡಗಿಸಿಕೊಳ್ಳುವಂತೆ ಮಾಡಬೇಕು.

ನಿರ್ಲಕ್ಷ್ಯ ಸಲ್ಲ: ದೀರ್ಘಕಾಲದ ಮಲಬದ್ಧತೆ ಮಗುವಿನ ಒಟ್ಟಾರೆ ಬೆಳವಣಿಗೆಯ ಮೇಲೆ ಪರಿಣಾಮ ಬೀರುತ್ತದೆ. ಮಕ್ಕಳು ಆಗಾಗ್ಗೆ ಹೊಟ್ಟೆ ನೋವಿಗೆ ತುತ್ತಾಗಬಹುದು. ಮಕ್ಕಳು ಆರೋಗ್ಯಕರ ದಿನಚರಿಯನ್ನು ಆರಂಭಿಸಲು ನಿಗದಿತ ಸಮಯದಲ್ಲಿ ಶೌಚಾಲಯ ಬಳಕೆಯನ್ನು ಪೋಷಕರು ಪ್ರೋತ್ಸಾಹಿಸಬೇಕು.

ಮೇ 2ರವರೆಗೆ ಬೇಸಿಗೆ ಶಿಬಿರ

ದಿ ನ್ಯಾಷನಲ್ ಎಜುಕೇಷನ್ ಸೊಸೈಟಿ, ದಿ ಬೆಂಗಳೂರು ಸೈನ್ಸ್ ಫೋರಂ ಸಹಯೋಗದೊಂದಿಗೆ 53ನೇ ವಾರ್ಷಿಕ ಬೇಸಿಗೆ ಶಿಬಿರವನ್ನು ಏ. 21ರಿಂದ ಮೇ 2ರವರೆಗೆ ಆಯೋಜಿಸಲಾಗಿದೆ.

ಬಸವನಗುಡಿ ನ್ಯಾಷನಲ್ ಕಾಲೇಜು ಆವರಣದಲ್ಲಿ ಪ್ರತಿದಿನ ಬೆಳಗ್ಗೆ 10ರಿಂದ ಮಧ್ಯಾಹ್ನ 12.30ರವರೆಗೆ ಶಿಬಿರ ನಡೆಯಲಿದೆ.

14ರಿಂದ 16 ವರ್ಷದೊಳಗಿನ ಮಕ್ಕಳು ಭಾಗವಹಿಸಬಹುದಾಗಿದೆ. ಜೀವನಶೈಲಿ ಮತ್ತು ಕೌಶಲ ಅಭಿವೃದ್ಧಿಗೆ ಸಂಬಂಧಿಸಿದಂತೆ ನಡೆಯುವ ಈ ಶೈಕ್ಷಣಿಕ ಶಿಬಿರದಲ್ಲಿ ಪಾಲ್ಗೊಂಡವರಿಗೆ ಪ್ರಮಾಣಪತ್ರ ನೀಡಲಾಗುತ್ತದೆ.

ಸೃಜನಶೀಲತೆ ಮತ್ತು ವಿನೋದಮಯ ಚಟುವಟಿಕೆ ಇರುತ್ತದೆ ಎಂದು ಎನ್.ಇ.ಎಸ್. ಸಂಸ್ಥೆಯ ಅಧ್ಯಕ್ಷರಾದ ಡಾ ಎಚ್. ಎನ್. ಸುಬ್ರಹ್ಮಣ್ಯ ಹಾಗೂ ಗೌರವ ಕಾರ್ಯದರ್ಶಿ ವಿ.ವೆಂಕಟಶಿವಾರೆಡ್ಡಿ ತಿಳಿಸಿದ್ದಾರೆ. ಶಿಬಿರದಲ್ಲಿ ಪಾಲ್ಗೊಳ್ಳುವವರು ₹ 2,500 ಶುಲ್ಕ ಪಾವತಿಸಬೇಕು. ನೋಂದಣಿ ಮತ್ತು ಹೆಚ್ಚಿನ ಮಾಹಿತಿಗಾಗಿ 99450 18111 ಸಂಪರ್ಕಿಸಬಹುದು. ❖

ಬಾಹ್ಯಾಕಾಶಕ್ಕೆ ಹಾರಲು ಸಜ್ಜಾಗಿರುವ ಭಾರತದ ಶುಭಾಂಶು ಶುಕ್ಲಾ

ಅಂತರರಾಷ್ಟ್ರೀಯ ಬಾಹ್ಯಾಕಾಶ ನಿಲ್ದಾಣಕ್ಕೆ ತೆರಳಲು ಸಜ್ಜಾಗಿರುವ ಭಾರತದ ಗ್ರೂಪ್ ಕ್ಯಾಪ್ಟನ್ ಶುಭಾಂಶು ಶುಕ್ಲಾ ಅವರ ಎಂಟು ತಿಂಗಳ ತರಬೇತಿ ಪೂರ್ಣಗೊಂಡಿದ್ದು, ಮೇ ತಿಂಗಳಲ್ಲಿ ಸ್ಪೇಸ್ ಎಕ್ಸ್‌ನ ಫಾಲ್ಕನ್–9 ರಾಕೇಟ್ ಹಾಗೂ ಸ್ಪೇಕ್ಸ್‌ಎಕ್ಸ್ ಕ್ರ್ಯೂ ಡ್ರಾಗನ್ ಮೂಲಕ ಪ್ರಯಾಣ ಬೆಳೆಸಲಿದ್ದಾರೆ.

ಹ್ಯೂಸ್ಟನ್ ಮೂಲದ ಖಾಸಗಿ ಬಾಹ್ಯಾಕಾಶ ಕಂಪನಿ ಏಕ್ಸಿಯೊಮ್ ಸ್ಪೇಸ್ ಕಂಪನಿಯ ಏಕ್ಸಿಯೊಮ್ ಮಿಷನ್ 4ನ ಗಗನಯಾನಿಗಳು ನಾಸಾ ನೀಡುವ ತರಬೇತಿಯನ್ನು ಪೂರ್ಣಗೊಳಿಸಿದ್ದಾರೆ. ತರಬೇತಿ ಪೂರ್ಣಗೊಂಡ ಸಂಭ್ರಮದಲ್ಲಿ ನೌಕೆಯ ಚಿತ್ರವಿರುವ ಕೇಕ್ ಕತ್ತರಿಸಿ ನಾಲ್ವರು ಗಗನಯಾನಿಗಳು ಸಂಭ್ರಮಿಸಿದ್ದಾರೆ.

ಮುಖ್ಯ ಗಗನಯಾನಿಯಾಗಿ ಗ್ರೂಪ್ ಕ್ಯಾಪ್ಟನ್ ಶುಭಾಂಶು ಶುಕ್ಲಾ ಹಾಗೂ ಮುಂಜಾಗ್ರತಾ ಕ್ರಮವಾಗಿ ಬದಲಿ ಗಗನಯಾನಿಯಾಗಿ ಗ್ರೂಪ್ ಕ್ಯಾಪ್ಟನ್ ಪ್ರಶಾಂತ್ ಬಾಲಕೃಷ್ಣನ್ ಅವರನ್ನು ಭಾರತ ಆಯ್ಕೆ ಮಾಡಿ ಕಳುಹಿಸಿದೆ. ಬಾಹ್ಯಾಕಾಶ ನಿಲ್ದಾಣದಲ್ಲಿ ಇವರು 15 ದಿನಗಳು ಇರಲಿದ್ದಾರೆ.

ಈ ತರಬೇತಿ ಮತ್ತು ಅಂತರರಾಷ್ಟ್ರೀಯ ಬಾಹ್ಯಾಕಾಶ ನಿಲ್ದಾಣಕ್ಕೆ ಹೋಗುವ ನೌಕೆಯ ವೆಚ್ಚವನ್ನು ಭಾರತವೇ ಭರಿಸಿದೆ. ಈ ಖಾಸಗಿ ಯಾನಕ್ಕಾಗಿ ಸುಮಾರು ₹500ರಿಂದ ₹600 ಕೋಟಿಯನ್ನು ಭಾರತ ವ್ಯಯಿಸುತ್ತಿದೆ. ಇದು ಸಂಪೂರ್ಣ ಖಾಸಗಿಯಾಗಿದ್ದು, ತರಬೇತಿ ನೀಡುತ್ತಿರುವ ನಾಸಾ ಕೂಡಾ ಇದರಿಂದ ಲಾಭ ಗಳಿಸಲಿದೆ ಎಂದು ವರದಿಯಾಗಿದೆ.

ಗ್ರೂಪ್ ಕ್ಯಾಪ್ಟನ್ ಶುಕ್ಲಾ ಅವರು ಪೈಲೆಟ್ ಆಗಿದ್ದು, ಅಗ್ನಿ ಅವಘಡ, ತುರ್ತು ಸಂದರ್ಭ ಎದುರಿಸುವಲ್ಲಿ, ಗಾಯಗೊಂಡ ಯೋಧರಿಗೆ ಪ್ರಥಮ ಚಿಕಿತ್ಸೆ ನೀಡುವಲ್ಲಿ ತರಬೇತಿ ಪಡೆದಿದ್ದಾರೆ. ಈ ಗಗನಯಾನಿ ತಂಡವು ಯುರೋಪ್‌ನಲ್ಲೂ ತರಬೇತಿ ಪಡೆದಿದೆ. ಜತೆಗೆ ಕಡಿಮೆ ಗುರುತ್ವಾಕರ್ಷಣ ಶಕ್ತಿ ಇರುವ ಪರಿಸರದಲ್ಲಿ ಹೊಂದಿಕೊಳ್ಳುವ ತರಬೇತಿಯನ್ನೂ ಪಡೆದಿದ್ದಾರೆ ಎಂದು ಏಕ್ಸಿಯೊಮ್ ಸ್ಪೇಸ್ ಹೇಳಿದ್ದಾರೆ.

ಪೆಸಿಫಿಕ್ ಸಾಗರದಲ್ಲಿ ಕಠಿಣ ತರಬೇತಿಯನ್ನು ಈ ತಂಡ ಎದುರಿಸಿದೆ. ಕಕ್ಷೀಯ ಪ್ರಯೋಗಾಲಯದಲ್ಲಿ ಡಿಜಿಟಲ್ ಕ್ಯಾಮೆರಾ ಬಳಸುವ ತರಬೇತಿ ಪಡೆದಿದ್ದಾರೆ. ಬಾಹ್ಯಾಕಾಶದಲ್ಲಿ ಶುಕ್ಲಾ ಅವರು ದಿನನಿತ್ಯದ ಬೆಳವಣಿಗೆಯನ್ನು ದಾಖಲಿಸುವ ಜವಾಬ್ದಾರಿ ಹೊಂದಿದ್ದಾರೆ. ತರಗತಿ ಕಲಿಕೆ, ಸಿಮ್ಯುಲೇಟರ್ ಬಳಕೆ, ಬಾಹ್ಯಾಕಾಶದ ಮಾದರಿಯಲ್ಲಿ ತರಬೇತಿ ಸೇರಿದಂತೆ ಹಲವು ಕಠಿಣ ತರಬೇತಿಗಳನ್ನು ಈ ತಂಡ ಕಳೆದ ಎಂಟು ತಿಂಗಳಿಂದ ಅಭ್ಯಸಿಸಿದೆ.

ಭಾರತೀಯ ವಾಯು ಸೇನೆಯಲ್ಲಿ ಅಧಿಕಾರಿಯಾಗಿರುವ ಶುಕ್ಲಾ ಅವರನ್ನು ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆ (ಇಸ್ರೊ) ಈ ಯೋಜನೆಗೆ ಆಯ್ಕೆ ಮಾಡಿತ್ತು. ನಾಸಾಗೆ ಸೇರುವ ಮೊದಲು ಇವರು ಭಾರತ ಮತ್ತು ರಷ್ಯಾದಲ್ಲೂ ತರಬೇತಿ ಪಡೆದಿದ್ದರು.


1984ರಲ್ಲಿ ವಿಂಗ್ ಕಮಾಂಡರ್ ರಾಕೇಶ್ ಶರ್ಮಾ ಅವರ ನಂತರದಲ್ಲಿ ಬಾಹ್ಯಾಕಾಶ ಯಾನ ನಡೆಸುತ್ತಿರುವವರಲ್ಲಿ ಗ್ರೂಪ್ ಕ್ಯಾಪ್ಟನ್ ಶುಭಾಂಶು ಶುಕ್ಲ ಮೊದಲಿಗರು. ರಾಕೇಶ್ ಶರ್ಮಾ ಅವರು ರಷ್ಯಾದ ಬಾಹ್ಯಾಕಾಶ ನಿಲ್ದಾಣಕ್ಕೆ ಪ್ರಯಾಣಿಸಿದ್ದರು





ಸರಳ ಕಥೆ, ಲವಲವಿಕೆ ನಿರೂಪಣೆ

ನಾವು ನೋಡಿದ ಸಿನಿಮಾ



ಯುದ್ಧಕಾಂಡ
- ನಿರ್ಮಾಣ: ಅಜಯ್ ರಾವ್
- ನಿರ್ದೇಶನ: ಪವನ್ ಭಟ್
- ತಾರಾಗಣ: ಅಜಯ್ ರಾವ್, ಅರ್ಚನಾ ಜೋಯ್ಸ್, ಪ್ರಕಾಶ್ ಬೆಳವಾಡಿ, ಟಿ.ಎಸ್.ನಾಗಾಭರಣ ಮತ್ತಿತರರು

ಹೆಣ್ಣುಮಕ್ಕಳ ಮೇಲಿನ ಅತ್ಯಾಚಾರ, ದೌರ್ಜನ್ಯದ ಕುರಿತು ಬೇರೆ, ಬೇರೆ ಭಾಷೆಗಳಲ್ಲಿ ಈಗಾಗಲೇ ಸಾಕಷ್ಟು ಚಿತ್ರಗಳು ಬಂದಿವೆ. ಅದೇ ಎಳೆಯ ಕಥೆಯನ್ನು ಹೊಂದಿರುವ ಚಿತ್ರ 'ಯುದ್ಧಕಾಂಡ'. ಅತ್ಯಾಚಾರ ಪ್ರಕರಣವೊಂದು ನ್ಯಾಯಾಲಯದ ಮೆಟ್ಟಿಲು ಏರಿದಾಗ ಏನೆಲ್ಲ ಆಗಬಹುದು ಎಂಬುದನ್ನು ನಿರ್ದೇಶಕ ಪವನ್ ಭಟ್ ಸೊಗಸಾಗಿ ಕಟ್ಟಿಕೊಟ್ಟಿದ್ದಾರೆ. ಇಡೀ ಚಿತ್ರ ಕೋರ್ಟ್ ರೂಂ ಡ್ರಾಮಾವಾದರೂ, ಪಯಣದಲ್ಲಿ ಭಾವುಕತೆಯಿದೆ. ಒಂದೆರಡು ದೃಶ್ಯಗಳಲ್ಲಿ ಕಣ್ಣಂಚಿನಲ್ಲಿ ಹನಿ ಜಿನುಗುತ್ತದೆ. ಅಷ್ಟರಮಟ್ಟಿಗೆ ಚಿತ್ರಕಥೆ ಗಟ್ಟಿಯಾಗಿದೆ. ಇದರ ಜೊತೆಗೆ ಚಿತ್ರದಲ್ಲಿ ಎಲ್ಲರ ನಟನೆ ಗಮನ ಸೆಳೆಯುತ್ತದೆ.

ಚಿತ್ರದ ಪ್ರಾರಂಭದಲ್ಲಿಯೇ ನಾಯಕಿ ನಿವೇದಿತಾ ನ್ಯಾಯಾಲಯದ ಆವರಣದಲ್ಲಿ ಆರೋಪಿಯನ್ನು ಕೊಲೆ ಮಾಡುತ್ತಾಳೆ. ಇದೊಂದು ಕೊಲೆಗೆ ಸಂಬಂಧಿತ ಪ್ರಕರಣ ಎಂಬುದನ್ನು ನಿರ್ದೇಶಕರು ಮೊದಲ ದೃಶ್ಯದಲ್ಲಿಯೇ ಹೇಳಿಬಿಡುತ್ತಾರೆ. ಆ ಕೊಲೆ ಯಾಕೆ ನಡೆದಿದ್ದು, ಅದರ ಹಿನ್ನೆಲೆ ಏನು ಎಂಬುದು ನಿಧಾನಕ್ಕೆ ತೆರೆದುಕೊಳ್ಳುತ್ತದೆ. ಆಗಷ್ಟೇ ಎಲ್‌ಎಲ್‌ಬಿ ಮುಗಿಸಿದ ನಾಯಕ ಭರತ್ ವಕೀಲ ವೃತ್ತಿಗೆ ಕಾಲಿಡುತ್ತಾನೆ. ಆತನ ಬದುಕು, ಕಚೇರಿಯ ಸುತ್ತಲಿನ ಸನ್ನಿವೇಶಗಳೊಂದಿಗೆ ಹಾಸ್ಯದ ದಾಟಿಯಲ್ಲಿಯೇ ಮೊದಲ ಹದಿನೈದು ನಿಮಿಷ ಮುಗಿಯುತ್ತದೆ. ಪ್ರಕರಣಗಳೇ ಇಲ್ಲದೆ ಖಾಲಿ ಕುಳಿತ ಭರತ್, ಚಿಲ್ಲರೆ ಪ್ರಕರಣಗಳನ್ನೇ ಎಷ್ಟು ಚತುರವಾಗಿ ಬಳಸಿಕೊಂಡು ಬೆಳೆಯುತ್ತಾನೆ ಎಂದು ತೋರಿಸುವ ದೃಶ್ಯಗಳು ಖುಷಿ ನೀಡುತ್ತವೆ.

ನಾಯಕಿ ನಿವೇದಿತಾ ಕೊಲೆ ಮಾಡಿದ್ದು ತನ್ನ ಮಗಳನ್ನು ಅತ್ಯಾಚಾರ ಮಾಡಿದ ಆರೋಪಿಯನ್ನು ಎಂಬ ದೃಶ್ಯದಿಂದ ಸಿನಿಮಾ ಗಂಭೀರವಾಗುತ್ತದೆ. ಮಗಳು ಶ್ಯಾಮಿಲಿ ಮತ್ತು ತಾಯಿ ನಿವೇದಿತಾ ನಡುವಿನ ಬಾಂಧವ್ಯದ ದೃಶ್ಯಗಳು ಭಾವ ತೀವ್ರತೆಯನ್ನು ಹೆಚ್ಚಿಸುತ್ತವೆ. ಆರೋಪಿಯನ್ನು ಕೊಲೆ ಮಾಡಿದ ನಿವೇದಿತಾ ಕೂಡ ಈಗ ಆರೋಪಿ ಸ್ಥಾನದಲ್ಲಿ ನಿಂತಿದ್ದಾಳೆ. ಈಕೆಗೆ ಶಿಕ್ಷೆಯಾಗಬೇಕೋ ಅಥವಾ ಬೇಡವೋ ಎಂಬುದೇ ನ್ಯಾಯಾಲಯದಲ್ಲಿ ನಡೆಯುವ ಚಿತ್ರಕಥೆ.

ಭರತ್ ಆಗಿ ಅಜಯ್ ರಾವ್ ಇಷ್ಟವಾಗುತ್ತಾರೆ. ಆದರೆ ಕ್ಲೈಮ್ಯಾಕ್ಸ್ ಹಂತದಲ್ಲಿ ಅವರ ನಟನೆ ಸ್ವಲ್ಪ ಕೃತಕ ಎನ್ನಿಸುತ್ತದೆ. ಪುಟಾಣಿ ರಾಂಧ್ಯಾ ಮತ್ತು ನಿವೇದಿತಾ ಆಗಿ ಕಾಣಿಸಿಕೊಂಡಿರುವ ಅರ್ಚನಾ ಜೋಯ್ಸ್ ಚಿತ್ರದ ಹೈಲೈಟ್. ನೊಂದ ತಾಯಿಯಾಗಿ ಅರ್ಚನಾ ಕೆಲವು ಕಡೆ ಅಬ್ಬರಿಸಿ, ಹಲವು ಕಡೆ ಮೌನಿಯಾಗಿ ನೋಡುಗರ ಕಣ್ಣಲ್ಲಿ ನೀರು ಬರುವಂತೆ ನಟಿಸಿದ್ದಾರೆ. ವಿರೋಧಿ ಬಣದ ವಕೀಲರಾಗಿ ಪ್ರಕಾಶ್ ಬೆಳವಾಡಿ ಹಾವಭಾವಗಳಿಂದಲೇ ಇಷ್ಟವಾಗುತ್ತಾರೆ. ನ್ಯಾಯಾಧೀಶರಾಗಿ ಟಿ.ಎಸ್. ನಾಗಾಭರಣ ಅವರಿಗೆ ಹೆಚ್ಚು ಕೆಲಸವಿಲ್ಲ. ಚಿತ್ರದುದ್ದಕ್ಕೂ ಕಲಾ ನಿರ್ದೇಶಕನ ಕೈಚಳಕ ಎದ್ದು ಕಾಣುತ್ತದೆ. ವಿಶೇಷವಾಗಿ ಕೋರ್ಟ್ ಸೆಟ್ ಚೆನ್ನಾಗಿದೆ. ಹಿನ್ನೆಲೆ ಸಂಗೀತ ಮತ್ತು ಛಾಯಾಚಿತ್ರಗ್ರಹಣವೂ ಕಥೆಗೆ ಪೂರಕವಾಗಿದೆ.

ಇಷ್ಟಾಗಿಯೂ ಚಿತ್ರ ಕೆಲವು ಕಡೆ ಪರಿಪೂರ್ಣ ಎನ್ನಿಸುವುದಿಲ್ಲ. ಇಂಥ ಗಂಭೀರವಾದ ಕಥೆಯ ನಡುವೆಯೂ ಸಹ ವಕೀಲೆ ಜೊತೆ ನಾಯಕನ ಪ್ರೇಮದ ಟ್ರ್ಯಾಕ್, ನಾಯಕನ ನಟನೆಯ ಅನಾವರಣಕ್ಕಾಗಿ ನಟನೆಯೇ ಕೃತಕ ಎನ್ನಿಸುವಷ್ಟು ಸುದೀರ್ಘವಾದ ದೃಶ್ಯಗಳ ಅಗತ್ಯವಿರಲಿಲ್ಲ. ಅತ್ಯಾಚಾರಕ್ಕೊಳಗಾದ ಮಗು ಬದುಕಿ ಕೋಮಾದಲ್ಲಿ ಉಳಿದಾಗ ಆ ಮಗುವಿಗಾಗಿ ಜೈಲಿನಲ್ಲಿರುವ ತಾಯಿ ಮಿಡಿಯದೇ ಇರುವುದು ಚಿತ್ರಕಥೆಯಲ್ಲಿನ ಕೊರತೆ ಎನಿಸುತ್ತದೆ. ಕೋರ್ಟ್‌ನ ಪ್ರತಿ ಸಲದ ವಾದದಲ್ಲಿಯೂ ಹೊಸ ವಿಷಯ ಎತ್ತಿಕೊಂಡು ಬರುವ ಮೊದಲು, ಇದೇ ರೀತಿಯ ಇನ್ನೊಂದಷ್ಟು ಪ್ರಕರಣಗಳನ್ನು ಆಳವಾಗಿ ವಿಶ್ಲೇಷಿಸುತ್ತ ಚಿತ್ರಕಥೆಯನ್ನು ಸ್ವಲ್ಪ ಬಿಗಿಯಾಗಿಸುವ ಅವಕಾಶ ನಿರ್ದೇಶಕರಿಗಿತ್ತು.

ವಿನಾಯಕ ಕೆ.ಎಸ್.

ಇದು ನೋಡಬಹುದಾದ ಸಿನಿಮಾ

ಮೆಚ್ಚಬಹುದಾದ ಹೊಸ ಪ್ರಯತ್ನ

ವೀರ ಚಂದ್ರಹಾಸ
- ನಿರ್ಮಾಣ: ಎನ್.ಎಸ್.ರಾಜ್‌ಕುಮಾರ್
- ಪರಿಶ್ರಮ: ರವಿ ಬಸ್ರೂರು ಮತ್ತು ತಂಡ
- ತಾರಾಗಣ: ಶಿಥಿಲ್ ಶೆಟ್ಟಿ ಐರ್‌ಬೈಲ್, ಪ್ರಸನ್ನ ಶೆಟ್ಟಿಗಾರ್ ಮಂದಾರ್ತಿ, ನಾಗಶ್ರೀ ಜಿ.ಎಸ್., ಉದಯ್ ಕಡಬಾಳ್, ನವೀನ್ ಶೆಟ್ಟಿ ಐರ್‌ಬೈಲ್, ಶಿವರಾಜ್‌ಕುಮಾರ್ ಮತ್ತಿತರರು.

ಸಿನಿಮಾಗಳ ಹಾಡುಗಳಲ್ಲಿ ಯಕ್ಷಗಾನ ಬಳಕೆಯಾಗಿದೆ. ಕೆಲ ಸಿನಿಮಾಗಳಲ್ಲಿ ಯಕ್ಷಗಾನದ ತುಣುಕುಗಳನ್ನು ಪ್ರದರ್ಶಿಸಿದ್ದೂ ಇದೆ. ಕಿರುತೆರೆಯಲ್ಲಿ ಪ್ರಸಂಗಗಳ ಪ್ರದರ್ಶನವೂ ನಡೆದಿದೆ. ಇದೇ ಮೊದಲ ಬಾರಿಗೆ ಯಕ್ಷಗಾನ ಪ್ರಸಂಗದ ಕಥೆಯೊಂದನ್ನು ಬೆಳ್ಳಿತೆರೆಗೆ ತರಲಾಗಿದೆ. ಸಂಗೀತ ನಿರ್ದೇಶಕ ರವಿ ಬಸ್ರೂರು 'ವೀರ ಚಂದ್ರಹಾಸ' ಮೂಲಕ ಇಂಥ ಪ್ರಯತ್ನ ಮಾಡಿದ್ದಾರೆ. ಯಕ್ಷಗಾನಕ್ಕೆ ಸಿನಿಮಾ ಸ್ಪರ್ಶ ನೀಡಿ ಹೊಸ ಲೋಕ ಸೃಷ್ಟಿಸಿದ್ದಾರೆ.

ಜೈಮಿನಿ ಭಾರತದ ಒಂದು ಭಾಗವಾದ ವೀರ ಚಂದ್ರಹಾಸನ ಕಥೆಯನ್ನು ಸಿನಿಮಾ ಒಳಗೊಂಡಿದೆ. ಪೌರಾಣಿಕ ಕಥೆಯುಳ್ಳ ಇದರಲ್ಲಿ ಅನಾಥ ಬಾಲಕನೊಬ್ಬ ಹೇಗೆ ವೀರ ಚಂದ್ರಹಾಸನಾಗಿ ಬೆಳೆದ ಎನ್ನುವವರೆಗೆ ತೋರಿಸಲಾಗಿದೆ. ಒಂದು ಚೌಕಟ್ಟಿನೊಳಗೆ ನಡೆಯುತ್ತಿದ್ದ ಕಥೆಯನ್ನು ತಮ್ಮ ಕಲ್ಪನೆ ಬಳಸಿ ಸಿನಿಮಾ ರೂಪಕ್ಕೆ ಬದಲಿಸಿದ್ದಾರೆ ರವಿ ಬಸ್ರೂರು. ಕಥೆಯಲ್ಲಿ ಬರುವ ಸಂಸ್ಥಾನಗಳನ್ನು, ದೃಶ್ಯಗಳನ್ನು ವಿಎಫ್‌ಎಕ್ಸ್ ಬಳಸಿ ಸೃಷ್ಟಿಸಿ ಹೊಸ ಪ್ರಪಂಚಕ್ಕೆ ಕಥೆ ಹೇಳಲು ಕರೆದೊಯ್ಯುತ್ತಾರೆ. ಸೆಟ್‌ನಲ್ಲೇ ಅರಮನೆಗಳನ್ನು ಸೃಷ್ಟಿಸಿ ಕಥೆಗೆ ಜೀವ ತುಂಬುವ ಪ್ರಯತ್ನ ಮಾಡಿದ್ದಾರೆ. ರವಿ ಬಸ್ರೂರು ಅವರು ಹಿನ್ನೆಲೆ ಸಂಗೀತಕ್ಕೆ ಖ್ಯಾತಿ ಪಡೆದವರು. ಅವರ ಈ ಶಕ್ತಿ ಸಿನಿಮಾದೊಳಗಿನ ಯಕ್ಷಗಾನವನ್ನು ಕುತೂಹಲಕಾರಿಯಾಗಿಸಿದೆ. ಮಕ್ಕಳಿಗೆ ಖುಷಿಯೊಬ್ಬರು ವೀರ ಚಂದ್ರಹಾಸನ ಕಥೆಯನ್ನು ಹೇಳುತ್ತಿರುವಂತೆ ಚಿತ್ರದ ನಿರೂಪಣೆಯಿದೆ.

ತೆಂಕು ಹಾಗೂ ಬಡಗು ತಿಟ್ಟು ಯಕ್ಷಗಾನದ ಪದ್ಯಗಳು ಹಾಗೂ ವೇಷಗಳ ಬಳಕೆ ಇಲ್ಲಿ ಆಗಿದೆ. ಚಂದ್ರಹಾಸನ ಪ್ರವೇಶಕ್ಕೆ ತೆಂಕು ಮಾದರಿ ಬಳಸಲಾಗಿದೆ. ತೆಂಕಿನಿಂದ ಪಟ್ಲ ಸತೀಶ್ ಶೆಟ್ಟಿ ಮತ್ತು ಚಿನ್ಮಯ್ ಭಟ್ ಕಲ್ಲಡ್ಕ, ಬಡಗು ತಿಟ್ಟಿನಲ್ಲಿ ರಾಘವೇಂದ್ರ ಆಚಾರ್ಯ ಜನ್ಸಾಲೆ, ಪ್ರಸಾದ್ ಕುಮಾರ್ ಮೊಗೆಬೆಟ್ಟು, ಗಣೇಶ್ ಆಚಾರ್ಯ ಬಿಲ್ಲಾಡಿ ದನಿಯಲ್ಲಿ ಪದ್ಯಗಳು ಚಿತ್ರಕಥೆಗೆ ಹೊಸ ರೂಪ ನೀಡಿವೆ. ಕಾಳಿಂಗ ನಾವಡರ ಕಂಚಿನ ಕಂಠದ ಧ್ವನಿಯನ್ನೂ ಪದ್ಯವೊಂದರಲ್ಲಿ ಆಸ್ವಾದಿಸಬಹುದು. ಚಿತ್ರದಲ್ಲಿ ಕುಣಿತಕ್ಕೆ ಅವಕಾಶ ನೀಡಬಹುದಿತ್ತು.



ಯಕ್ಷಗಾನ ಎನ್ನುವಾಗ ಕುಣಿತಗಳಲ್ಲಿಯೇ ಪಾತ್ರಗಳ ಗತ್ತು ಅಡಗಿರುವುದರಿಂದ, ಅದು ಕೊರತೆಯಾಗಿ ಕಾಣಿಸುತ್ತದೆ.

ರವೀಂದ್ರ ದೇವಾಡಿಗ ಹಾಗೂ ಶ್ರೀಧರ ಕಾಸರಕೋಡು ಅವರ ಹಾಸ್ಯ ಸಂಭಾಷಣೆ ಬೆಳ್ಳಿತೆರೆಯಲ್ಲೂ ನಗು ತರಿಸುತ್ತವೆ. ಆದರೆ ಮದುವೆ ದೃಶ್ಯ ಸಿನಿಮಾಕ್ಕಿಂತ ವೇದಿಕೆಯಲ್ಲಿ ನಡೆಯುವ ಪ್ರಸಂಗಗಳಲ್ಲೇ ಚೆನ್ನಾಗಿದೆ.

ಸಿನಿಮಾದಲ್ಲಿ ಸಮಯದ ಮಿತಿಯೂ ಇದಕ್ಕೆ ಕಾರಣವಾಗಿರಬಹುದು. ವಿಎಫ್‌ಎಕ್ಸ್‌ನಲ್ಲಿ ಇನ್ನಷ್ಟು ಕೆಲಸ ಮಾಡಬಹುದಿತ್ತು. ಕಿರಣ್ ಕುಮಾರ್ ಆರ್. ಛಾಯಾಚಿತ್ರಗ್ರಹಣ, ಪ್ರಭು ಬಡಿಗೇರ್ ಕಲಾ ನಿರ್ದೇಶನ ಇಲ್ಲಿ ಉಲ್ಲೇಖಾರ್ಹ.

ಎಐ ಮೂಲಕ ಸೃಷ್ಟಿಸಲಾದ ಯಕ್ಷಗಾನ ವೇಷದಲ್ಲಿನ ಪುನೀತ್ ರಾಜ್‌ಕುಮಾರ್ ದೃಶ್ಯ ಹಾಗೂ ಸಿಂಗನಲ್ಲೂರು ಸಂಸ್ಥಾನದ ರಾಜನಾಗಿ ರಾಜ್‌ಕುಮಾರ್ ಅವರನ್ನು ಸೃಷ್ಟಿಸಿರುವುದು ಚಿತ್ರದ ಹೈಲೈಟ್. ಸಿಂಗನಲ್ಲೂರು ಸಂಸ್ಥಾನದ ನಾಡ ಚಕ್ರವರ್ತಿ ಶಿವಪುಟ್ಟಸ್ವಾಮಿಯಾಗಿ ಶಿವರಾಜ್‌ಕುಮಾರ್ ಚಿತ್ರದಲ್ಲಿ ಕಾಣಿಸಿಕೊಂಡಿದ್ದಾರೆ. 'ದುಷ್ಟಬುದ್ಧಿ'ಯಾಗಿ ಪ್ರಸನ್ನ ಶೆಟ್ಟಿಗಾರ್ ಹಾಗೂ 'ಚಂದ್ರಹಾಸ'ನ ಪಾತ್ರಧಾರಿ ಶಿಥಿಲ್ ಶೆಟ್ಟಿ ನಟನೆ ಚೆನ್ನಾಗಿದೆ. 'ಸಮುದ್ರ ಸೇನ'ನಾಗಿ ಚಂದನ್ ಶೆಟ್ಟಿ, 'ಗರುಡಾಕ್ಷ'ನಾಗಿ ಗರುಡರಾಮ್ ಅವರ ಪಾತ್ರಗಳು ಕ್ಲೈಮ್ಯಾಕ್ಸ್‌ನಲ್ಲಿ ಪ್ರವೇಶಿಸುತ್ತವೆ. ಭಾಗ–2ರ ಕಥೆಯ ಮುಖ್ಯ ಪಾತ್ರಗಳು ಇವು.

ಅಭಿಲಾಷ್ ಪಿ.ಎಸ್.

ಇದು ನೋಡಬಹುದಾದ ಸಿನಿಮಾ

'ಕಲಿಗಾಲ'ಕ್ಕೆ ವಿಜಯ್ ಪ್ರಕಾಶ್ ದನಿ

ದಯಾಕರ್ ರಾವ್ ವಿ. ಚಿತ್ರಕಥೆ ಬರೆದು ನಿರ್ದೇಶಿಸಿರುವ, ಎನ್.ರಾಜು ಸುಲ್ತಾನ್‌ಪಾಳ್ಯ ನಿರ್ಮಾಣ ಮಾಡಿರುವ 'ಕಲಿಗಾಲ' ಚಿತ್ರದ ಚಿತ್ರೀಕರಣ ಅಂತಿಮ ಹಂತದಲ್ಲಿದೆ. ಚಿತ್ರದ ಶೀರ್ಷಿಕೆ ಗೀತೆಯ ರೆಕಾರ್ಡಿಂಗ್ ಇತ್ತೀಚೆಗೆ ನಡೆದಿದ್ದು, ವಿಜಯ್ ಪ್ರಕಾಶ್ ದನಿಯಾಗಿದ್ದಾರೆ.



ವಿಜಯ್ ಪ್ರಕಾಶ್

ಪಳನಿ ಡಿ. ಸೇನಾಪತಿ ಸಂಗೀತ ಸಂಯೋಜನೆಯಲ್ಲಿ ಹಾಡುಗಳು ಮೂಡಿಬಂದಿವೆ. 'ಸಮಾಜದಲ್ಲಿ ಪ್ರಬಲ ವರ್ಗದವರು, ಶ್ರೀಮಂತರು, ಅಧಿಕಾರಸ್ಥರು ನಿರ್ಗತಿಕರ ಮೇಲೆ ದಬ್ಬಾಳಿಕೆ ನಡೆಸುತ್ತಲೇ ಇದ್ದಾರೆ. ಹಳ್ಳಿಯೊಂದರಲ್ಲಿ ವೃದ್ಧೆ ಗೂಡಜ್ಜಿ ಗಿರಿಜಮ್ಮನಿಗೆ ಸ್ಥಳೀಯ ಶಾಸಕ ಕಿರುಕುಳ ಕೊಡುತ್ತಿರುತ್ತಾನೆ. ಆಕೆ ಇದನ್ನು ತಾಳಲಾರದೆ ಸಾವಿಗೀಡಾಗುತ್ತಾಳೆ. ಈಕೆಯ ಸಾಕುಮಗ ಇದರ ವಿರುದ್ಧ ಹೋರಾಡುವಾಗ ಅಡೆತಡೆಗಳು ಬರುತ್ತವೆ. ಕೊನೆಗೆ ಆತ ಹೇಗೆ ತನ್ನ ಕಾರ್ಯ ಸಾಧಿಸುತ್ತಾನೆ ಎಂಬುದನ್ನು ಕಮರ್ಷಿಯಲ್ ಅಂಶಗಳೊಂದಿಗೆ ಸಮಾಜಕ್ಕೆ ಸಂದೇಶವಿರುವಂತೆ ಕಥೆಯಲ್ಲಿ ಹೇಳಲಾಗಿದೆ' ಎಂದಿದ್ದಾರೆ ದಯಾಕರ್ ರಾವ್.

ಚಿತ್ರದಲ್ಲಿ ಪ್ರತಾಪ್ ರಾಜ್ ನಾಯಕನಾಗಿ ನಟಿಸಿದ್ದು, ನಾಯಕಿಯ ಆಯ್ಕೆ ಇನ್ನಷ್ಟೇ ಆಗಬೇಕಿದೆ. ತಾರಾಬಳಗದಲ್ಲಿ ಅಪೂರ್ವಶ್ರೀ, ಸೂರ್ಯ ಕುಂದಾಪುರ, ಸಿಲ್ಲಿಲಲ್ಲಿ ಶ್ರೀನಿವಾಸ್, ವೆಂಕಟಾಚಲ, ಅರಸೀಕೆರೆ ರಾಜು, ಚಂದ್ರು, ಕೆಇಬಿ ಮಂಜು, ದಿವ್ಯ, ಶಂಖನಾದ ಆಂಜನಪ್ಪ ಮುಂತಾದವರು ನಟಿಸಿದ್ದಾರೆ. ನಾರಾಯಣ್ ಸಿ. ಛಾಯಾಚಿತ್ರಗ್ರಹಣ, ಆರ್.ದೊರೈರಾಜ್ ಸಂಕಲನ ಚಿತ್ರಕ್ಕಿದೆ.

'ವಿಕ್ಕಿ'ಗೆ ನವೀನ್ ಶಂಕರ್ ಸಾಥ್



ಮಧ್ಯಮ ವರ್ಗದ ಯುವಕನ ಕನಸು, ನನಸುಗಳ ಸುತ್ತ ನಡೆಯುವ ಕಥೆಯನ್ನು ಹೊಂದಿರುವ 'ವಿಕ್ಕಿ' ಚಿತ್ರದ ಟ್ರೇಲರ್ ಇತ್ತೀಚೆಗಷ್ಟೇ ಬಿಡುಗಡೆಗೊಂಡಿದೆ. ನಟ ನವೀನ್ ಶಂಕರ್ ಚಿತ್ರದ ಟ್ರೇಲರ್ ಬಿಡುಗಡೆಗೊಳಿಸಿ ತಂಡಕ್ಕೆ ಶುಭ ಹಾರೈಸಿದರು. ದೀಪಕ್ ಎಸ್. ಅವಂದಕರ್ ಕಥೆ, ಚಿತ್ರಕಥೆ ಬರೆದು ಚಿತ್ರವನ್ನು ನಿರ್ದೇಶಿಸಿದ್ದಾರೆ.

'ವಿಕ್ಕಿ ಕಾಮಿಡಿ ಜಾನರ್ ಚಿತ್ರ. ಮಧ್ಯಮ ವರ್ಗದ ಹುಡುಗನೊಬ್ಬ ದೊಡ್ಡ ಕನಸು ಕಂಡು, ಅದನ್ನು ನನಸು ಮಾಡಿಕೊಳ್ಳಲು ಹೋದಾಗ ಏನೆಲ್ಲ ಆಗಬಹುದು ಎಂಬುದನ್ನು ಹಾಸ್ಯಮಯವಾಗಿ ಹೇಳುವ ಪ್ರಯತ್ನ ಮಾಡಿದ್ದೇವೆ. ಬೆಂಗಳೂರು, ಚಿಕ್ಕಮಗಳೂರು ಸುತ್ತಮುತ್ತ ಚಿತ್ರವನ್ನು ಚಿತ್ರೀಕರಿಸಿದ್ದೇವೆ. ಸೆನ್ಸಾರ್ ಮಂಡಳಿಯಿಂದ ಯು/ಎ ಪ್ರಮಾಣಪತ್ರ ಲಭಿಸಿದ್ದು, ಮೇ ಎರಡನೇ ವಾರ ಚಿತ್ರ ತೆರೆಗೆ ಬರಲಿದೆ' ಎಂದರು ನಿರ್ದೇಶಕರು.

ನವನೀತ ಲಕ್ಷ್ಮಿ ಚಿತ್ರಕ್ಕೆ ಬಂಡವಾಳ ಹೂಡಿದ್ದಾರೆ. ಭರತ್ ತಾಳಿಕೋಟೆ ನಾಯಕ. ವಿಂಧ್ಯಾ ಹೆಗಡೆ, ವರುಣ್ ದೇವಯ್ಯ ಚಿತ್ರದಲ್ಲಿದ್ದಾರೆ.



ಸಿಂಧು ಕೆ.ಟಿ.

ಲಹರಿ

ಅಂದು ಶುಕ್ರವಾರ, ವಿಕೇಂಡ್ ಆಗಿದ್ರಿಂದ್ದ ಮೆಟ್ರೊ ತುಂಬಾ ಜನ, ಸ್ನೇಹಿತೆಯ ಅಕ್ಕನನ್ನು ಭೇಟಿಯಾಗಲು ಮಂತ್ರಿ ಸ್ಕ್ವೇರ್ ಮೆಟ್ರೊ ನಿಲ್ದಾಣದಿಂದ ಮೆಜೆಸ್ಟಿಕ್ ಮೆಟ್ರೊ ನಿಲ್ದಾಣಕ್ಕೆ ಹೊರಟಿದ್ದ ನನಗೆ ಮಾಯಾನಗರಿಯಲ್ಲಿ ನಡೆಯುವ ಮಾಯೆಯೊಂದು ಕಣ್ಣಿಗೆ ಬಿತ್ತು. ನಾನು ಪ್ಲಾಟ್‌ಫಾರ್ಮ್‌ಗೆ ಬರುವುದರೊಳಗೆ ಮೆಟ್ರೊ ಬಂದಿತ್ತು. ಮೊದಲೇ ತಡವಾಗಿ ಬಂದಿದ್ದ ನನಗೆ ಅದೇ ಮೆಟ್ರೊದಲ್ಲಿ ಹೋಗುವುದು ಅನಿವಾರ್ಯವಾಗಿತ್ತು. ಗಡಿಬಿಡಿಯಲ್ಲಿ ಹೋಗುತ್ತಿದ್ದ ನನಗೆ ಎದುರಾಗಿದ್ದೇ ಆ ಅಪರಿಚಿತ ವ್ಯಕ್ತಿ.

30ರಿಂದ 35 ವರ್ಷ ಆಸುಪಾಸಿನ ಆ ವ್ಯಕ್ತಿಯ ಕೈ–ಕಾಲು ನಾ ಕಂಡಂತೆ ಗಟ್ಟಿಯೇ ಇತ್ತು. ಕಪ್ಪು ಶರ್ಟ್, ನೀಲಿ ಜೀನ್ಸ್ ತೊಟ್ಟಿದ್ದ ಆತ. ನೋಡಲು ಮೇಲ್ನೋಟಕ್ಕೆ ಸಭ್ಯನಂತೆ ಕಂಡ. ಮೆಟ್ರೊ ಒಳಗೆ ಹೋಗಲು ನುಗ್ಗುತ್ತಿದ್ದ ನನಗೆ ತಡೆಯಾಗಿ 'ಮೇಡಂ ₹200 ಕ್ಯಾಶ್ ಇದೀಯಾ' ಎಂದ. ಮೊದಲೇ ತಡವಾಗಿದ್ದ ನನಗೆ 'ಇಲ್ಲ ಸರ್' ಎಂದು ಮುನ್ನುಗ್ಗಿದೆ. ಮತ್ತೊಮ್ಮೆ ಕರೆದು 'ಯುಪಿಐ ಇದೀಯಾ' ಎಂದ. ನಾನು ಪ್ರತಿಕ್ರಿಯಿಸದೇ ಮೆಟ್ರೊ ಒಳಗೆ ಹೋದೆ.

ಈಗ ಹಣ ಕೈಯಲ್ಲಿ ಹಿಡಿದು ಹೊರಡುವವರ ಸಂಖ್ಯೆ ಕಡಿಮೆ. ಆ ವ್ಯಕ್ತಿಗೆ ಅನಿವಾರ್ಯವಿತ್ತೇನೋ, ನಾನು ಹಣ ನೀಡಿದರೆ ಆತ ನನಗೆ ಫೋನ್ ಮೂಲಕ ಯುಪಿಐನಲ್ಲಿ ಹಣ ಕಳುಹಿಸುತ್ತಿದ್ದನೇನೋ ಎಂದು ಯೋಚಿಸುತ್ತ, ಉಸಿರಾಡಲು ಜಾಗವಿಲ್ಲದಂತೆ ತುಂಬಿದ್ದ ಮೆಟ್ರೊದಲ್ಲಿ ಕಷ್ಟಪಟ್ಟು ನಿಂತಿದ್ದೆ. ಹಾಗೆ ಹಿಂತಿರುಗಿ ನೋಡಿದಾಗ ಆ ವ್ಯಕ್ತಿ ನನ್ನ ಮುಂದಿದ್ದ ಒಬ್ಬ ಯುವಕನ ಬಳಿ ನನಗೆ ಕೇಳಿದ ಪ್ರಶ್ನೆಯನ್ನೇ ಕೇಳುತ್ತಿದ್ದ, ಆತನು ಕೂಡ ಹಣವನ್ನು ನೀಡಲು ನಿರಾಕರಿಸಿದ.

ತುಂಬಾ ಕಸಿವಿಸಿಯಲ್ಲಿರುವಂತೆ ವರ್ತಿಸುತ್ತಿದ್ದ ಆ ವ್ಯಕ್ತಿ ಮುಂದೆ ಹೋಗಿ ಮತ್ತೊಬ್ಬರ ಬಳಿ ಹಣ ಕೇಳಿದ, ಅವರು ಆತನಿಗೆ ಯುಪಿಐ ಮೂಲಕ ₹200 ನೀಡಿದರು. ಆಗ ಅರ್ಥ ಆಯಿತು ನನಗೆ, ನಾನು ಭಾವಿಸಿದ್ದು ತಪ್ಪು ಎಂದು.

ಆ ವೇಳೆಗಾಗಲೇ ಮೆಜೆಸ್ಟಿಕ್ ನಿಲ್ದಾಣ ಬಂತು. ನಾ ಕೆಳಗೆ ಇಳಿದು ನನ್ನ ಸ್ನೇಹಿತೆಯ ಅಕ್ಕನನ್ನು ಹುಡುಕುತ್ತಿದ್ದೆ ಆಗ ಮತ್ತೆ ಅದೇ ವ್ಯಕ್ತಿ ಕಂಡ... ಪ್ಲಾಟ್‌ಫಾರ್ಮ್‌ನಲ್ಲಿ ನಿಂತಿದ್ದ ಮತ್ತೊಬ್ಬ ವ್ಯಕ್ತಿ ಬಳಿ ₹200 ಹಣ ಕೇಳಿ ಪಡೆದ, ಹಾಗೆ ನೋಡ ನೋಡುತ್ತಿದ್ದಂತೆ ನಾಲ್ಕೈದು ಜನರಿಂದ ಹಣ ವಸೂಲಿ ಮಾಡಿಯೇ ಬಿಟ್ಟ. ಹಣ ಕೊಟ್ಟವರೂ ಆವ ಇನ್ನೊಬ್ಬರ ಬಳಿ ಮತ್ತೆ ಹಣ ಕೇಳುವಾಗ ಮಂಕಾಗಿ ನಿಂತಿದ್ದು ನೋಡಿ ಅಯ್ಯೋ ಪಾಪ ಅನ್ನಿಸುತ್ತಿತ್ತು.

ಅವನ ಈ ಚಟುವಟಿಕೆಯನ್ನೇ ನೋಡುತ್ತಿದ್ದ ನನಗೆ, ಹೋದ ಕೆಲಸದ ಕುರಿತು ಎಚ್ಚರವಾಗಿದ್ದು ಮೊಬೈಲ್ ಕರೆ ಬಂದ ಬಳಿಕವೇ, 'ನಾನು ಇಲ್ಲಿದ್ದೇನೆ, ನೀನು ಎಲ್ಲಿ ಕಾಣ್ತಿಲ್ಲ' ಅಂತಾ. ನಾನು ಅವರನ್ನು ಹುಡುಕಿ ಹೊರಟೇ ಆದರೆ, ಆ ವ್ಯಕ್ತಿ ಮಾತ್ರ ನನ್ನ ಬೆನ್ನು ಬಿಡಲಿಲ್ಲ. ನನ್ನ ಹಿಂಬಾಲಿಸುತ್ತಲೇ ಇದ್ದ. ನನಗಿಂತಲೂ ಮುಂಚೆ ನಾ ಹುಡುಕುತ್ತಿದ್ದವರ ಬಳಿ ಹೋಗಿ, ನಾನು ಅವನು ಬಹಳ ವರ್ಷದಿಂದ ಪರಿಚಿತರು ಎಂಬುವಂತೆ ನನ್ನೆಡೆಗೆ ಕೈತೋರಿ, ಆಕೆ ಬಳಿ ಮಾತನಾಡುತ್ತಿದ್ದ. ಇದನ್ನು ನೋಡಿದ ನಾನು ಮರುಮಾತಾಡದೇ ಅಲ್ಲಿಂದ ಆಕೆಯನ್ನು ಕರೆದುಕೊಂಡು ಹಿಂತಿರುಗಿ ನೋಡದೆ ಹೊರಟೆ...

ಆ ವ್ಯಕ್ತಿ ಕಳ್ಳನಾ? ಭಿಕ್ಷುಕನಾ? ಅನುಕಂಪದಿಂದ ಹಣ ಗೀಟಿಸಿಕೊಳ್ಳುತ್ತಿದ್ದನಾ? ಯಾವುದು ಅಲ್ಲ. ದುಡ್ಡು ಮಾಡುವ ಕಲೆ ಗೊತ್ತಿರುವವ... ಹಾಗಂತ ಇದು ಪರಿಶ್ರಮದಿಂದ ಗಳಿಸಿದ ಹಣವಾ? ಖಂಡಿತ ಅಲ್ಲ. ಬೇರೆಯವರ ಮರುಳು ಮಾಡಿ ಮಾಡುತ್ತಿದ್ದ ಹಣ...

ಈ ರೀತಿಯ ಘಟನೆಗಳು ಬೆಂಗಳೂರಿನಲ್ಲಿ ದಿನನಿತ್ಯ ನೂರಾರು ನಡೆಯುತ್ತಲೇ ಇರುತ್ತವೆ. ಆದರೇ ಇದನ್ನು ಕಂಡ ನನಗೆ ಕಾಡಿದ್ದು ಜನ ಕಾರಣವೇ ಕೇಳದೆ ಹೇಗೆ ಯಾರೋ ಬಂದು ಕೇಳುತ್ತಿದ್ದಂತೆ ಹಣ ಕೊಡುತ್ತಾರೆ. ಬೆಂಗಳೂರಿನಲ್ಲಿ ಅಷ್ಟೂ ಉದಾರಿಗಳು ಇದ್ದಾರ? ಇಲ್ಲ, ಅವರು ಅಷ್ಟೂ ಮುಗ್ಧರ ಅಥವಾ ಅಷ್ಟೂ ಸಿರಿವಂತರ...! ಯಾವುದಕ್ಕೂ ಉತ್ತರ ಇಲ್ಲ.

ಕಷ್ಟದಲ್ಲಿರುವವರು, ಅಸಮರ್ಥರು, ವಯೋವೃದ್ಧರಿಗೆ ಹಣ ಕೊಡುವುದು ಸಾಮಾನ್ಯ. ಆದರೆ, ಎಲ್ಲವೂ ಸರಿಯಿರುವ ದುಡಿದು ತಿನ್ನಲು ಅಲಸ್ಯ ತೋರುವ ಈ ರೀತಿಯ ವ್ಯಕ್ತಿಗಳಿಗೆ ಹಣ ನೀಡುವಾಗ ಸ್ವಲ್ಪ ಎಚ್ಚರವಿರಲಿ. ಹಣ ಕಳೆದುಕೊಳ್ಳಲು ಕಳ್ಳತನವೇ ಆಗಬೇಕೆಂದಿಲ್ಲ. ಮೋಸ ಹೋಗುವವರು ಇರುವವರೆಗೆ ಮೋಸ ಮಾಡುವವರು ಇದ್ದೇ ಇರುತ್ತಾರೆ. ಆದರೆ, ನಿಮ್ಮ ಹಣದ ಹಿಂದಿನ ಪರಿಶ್ರಮವನ್ನು ಸುಲಭವಾಗಿ ವ್ಯರ್ಥವಾಗಲು ಬಿಡಬೇಡಿ...

ವೇಗದ ಚಾರ್ಜಿಂಗ್ ಅಡಾಪ್ಟರ್


ಪ್ರೊಮೇಟ್ ಟೆಕ್ನಾಲಜಿಸ್ ಕಂಪನಿಯು ಪ್ರವಾಸ ಅಥವಾ ಪ್ರಯಾಣದ ಸಂದರ್ಭದಲ್ಲಿ ಅನುಕೂಲ ಮಾಡುವ ಟ್ರಿಪ್‌ಮೇಟ್–ಜಿಎಎನ್–160W ಚಾರ್ಜಿಂಗ್ ಅಡಾಪ್ಟರ್ ಅನ್ನು ಮಾರುಕಟ್ಟೆಗೆ ಬಿಡುಗಡೆ ಮಾಡಿದೆ.

ಚಾರ್ಜಿಂಗ್ ಉತ್ಪನ್ನಗಳ ತಯಾರಿಕೆಯಲ್ಲಿ ಮುಂಚೂಣಿಯಲ್ಲಿರುವ ಪ್ರೊಮೇಟ್ ಕಂಪನಿಯು ವಿವಿಧ ಎಲೆಕ್ಟ್ರಾನಿಕ್ ಸಾಧನಗಳನ್ನು ವೇಗವಾಗಿ (160 ವ್ಯಾಟ್ಸ್ ವರೆಗೆ) ಚಾರ್ಜ್ ಮಾಡಬಲ್ಲ, ಪ್ರವಾಸಿಗರಿಗೆ ಅತ್ಯಂತ ಅನುಕೂಲಕರವಾದ TripMate-GaN160 ಅಡಾಪ್ಟರ್ ಅನ್ನು ಪರಿಚಯಿಸಿದೆ.

ಇದರ ಮೂಲಕ ಸ್ಮಾರ್ಟ್‌ಫೋನ್‌ಗಳು, ಟ್ಯಾಬ್ಲೆಟ್, ಇಯರ್–ಪಾಡ್, ಲ್ಯಾಪ್‌ಟಾಪ್‌ಗಳನ್ನು ಏಕಕಾಲದಲ್ಲಿ ಮತ್ತು ತ್ವರಿತವಾಗಿ ಚಾರ್ಜ್ ಮಾಡಬಹುದು. ಇದರಲ್ಲಿ ಯುಎಸ್‌ಬಿ-ಎ, ಟೈಪ್-ಸಿ (ಹೆಚ್ಚುವರಿ ಎ.ಬಿ) ಪೋರ್ಟ್‌ಗಳೂ ಇವೆ.

ಯೂನಿವರ್ಸಲ್ ಎಸಿ ಸಾಕೆಟ್ (2500w) ಹೊಂದಿರುವುದು ಇದರ ವಿಶೇಷ. ಸುಮಾರು 150ಕ್ಕೂ ಹೆಚ್ಚು ದೇಶಗಳಲ್ಲಿ ಇದನ್ನು ಸುಲಭವಾಗಿ ಗ್ರಾಹಕರು ಬಳಕೆ ಮಾಡಬಹುದು.

GaNFast ಚಾರ್ಜರ್‌ನಲ್ಲಿ ಅತ್ಯಾಧುನಿಕವಾದ ಗ್ಯಾಲಿಯಂ ನೈಟ್ರೈಡ್ (GaN) ಸೆಮಿಕಂಡಕ್ಟರ್‌ಗಳನ್ನು ಬಳಸಲಾಗಿದೆ.



140W ಸಾಮರ್ಥ್ಯದ ಮೂರು ಯುಎಸ್‌ಬಿ ಟೈಪ್-ಸಿ ಪೋರ್ಟ್‌ಗಳಿದ್ದು, ಲ್ಯಾಪ್‌ಟಾಪ್‌ಗಳ ಚಾರ್ಜಿಂಗ್‌ಗೆ ಅನುಕೂಲ. ಜೊತೆಗೆ, 60W ವೇಗದ ಚಾರ್ಜಿಂಗ್ ಸಾಮರ್ಥ್ಯದ ಒಂದು ಯುಎಸ್‌ಬಿ-ಎ ಮಾದರಿಯ ಪೋರ್ಟ್ ಇದೆ. 2500W ಸಾಮರ್ಥ್ಯದ ಯೂನಿವರ್ಸಲ್ ಎಸಿ ಸಾಕೆಟ್ ಹಲವು ಸಾಧನಗಳನ್ನು ಏಕಕಾಲದಲ್ಲಿ ಚಾರ್ಜ್ ಮಾಡಲು ಅನುಕೂಲ ಮಾಡುತ್ತದೆ ಎಂದು ಪ್ರಕಟಣೆ ತಿಳಿಸಿದೆ.

ಕಂಪನಿಯ ಅಧಿಕೃತ ವೆಬ್‌ಸೈಟ್ ಮತ್ತು ಪ್ರಮುಖ ಇ ಕಾಮರ್ಸ್ ವೇದಿಕೆಗಳಲ್ಲಿ ಇದನ್ನು ಕೊಂಡುಕೊಳ್ಳಬಹುದು.

ಬೆಲೆ: ₹8999

ಕಡಿಮೆ ಬೆಲೆಗೆ ಥಾಮ್ಸನ್ T.V, ಏರ್ ಕೂಲರ್

ತಂತ್ರಜ್ಞಾನ

ಫ್ರೆಂಚ್ ಗೃಹಪಯೋಗಿ ಎಲೆಕ್ಟ್ರಾನಿಕ್ ಕಂಪನಿಯಾದ ಥಾಮ್ಸನ್, ಕಡಿಮೆ ಬೆಲೆಗೆ ದೊರಕಬಹುದಾದ ಉತ್ತಮ ದರ್ಜೆಯ ಥಾಮ್ಸನ್ ಕ್ಯೂಎಲ್‌ಇಡಿ ಲಿನಕ್ಸ್ ಟಿ.ವಿಯನ್ನು ಭಾರತದ ಮಾರುಕಟ್ಟೆಗೆ ಬಿಡುಗಡೆ ಮಾಡಿದೆ.

ಕ್ಯೂಎಲ್‌ಇಡಿ ಲಿನಕ್ಸ್ ಟಿ.ವಿ ಯೂ 24, 32 ಹಾಗೂ 40 ಇಂಚುಗಳಲ್ಲಿ ಲಭ್ಯವಿದೆ. 24 ಇಂಚಿನ ಟಿವಿ ಶ್ರೇಣಿಯಲ್ಲಿ ಕ್ಯೂಎಲ್‌ಇಡಿ ಟಿವಿ ಜಗತ್ತಿನಲ್ಲಿಯೇ ಪ್ರಥಮ ಎಂದು ಕಂಪನಿ ತನ್ನ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದೆ.

ಥಾಮ್ಸನ್ ಕ್ಯೂಎಲ್‌ಇಡಿ ಲಿನಕ್ಸ್ ಟಿ.ವಿ Linux Coolita 3.0 OS ಹೊಂದಿದೆ. ಈ ಮೂಲಕ ಉತ್ತಮ ಕಾರ್ಯನಿರ್ವಹಣೆ, ಶ್ರೇಷ್ಠ ಗುಣಮಟ್ಟದ ಡಿಸ್‌ಪ್ಲೆ, ಉತ್ತಮ ಸೌಂಡ್ ಹಾಗೂ ಸುಲಭವಾಗಿ ಆಯ್ಕೆಗಳನ್ನು (personalization) ಜೋಡಿಸಬಹುದಾದ ವ್ಯವಸ್ಥೆ ಇದೆ ಎಂದು ತಿಳಿಸಿದೆ. Bezel Less Design ಹೊಂದಿರುವ ಅತಿ ತೆಳುವಾದ ಪರದೆ ಇದೆ ಎಂದು ತಿಳಿಸಿದೆ.



ದೊಡ್ಡ ಶ್ರೇಣಿಯ ಟಿ.ವಿಯಲ್ಲಿರಬಹುದಾದ ಹಲವು ಸೌಲಭ್ಯಗಳನ್ನು ಕ್ಯೂಎಲ್‌ಇಡಿ ಟಿ.ವಿಯು ಹೊಂದಿದ್ದು ಗ್ರಾಹಕರಿಗೆ ಹೊಸ ಅನುಭವ ನೀಡಲಿದೆ ಎಂದು ತಿಳಿಸಿದೆ.

- 24AlphaQ001ಮಾದರಿಯ ಬೆಲೆ ₹6,799
- 32AlphaQ019 ಮಾದರಿಯ ಬೆಲೆ ₹8,999
- 40AlphaQ060 ಮಾದರಿಯ ಬೆಲೆ ₹12,999

ಇದರ ಜೊತೆಗೆ ಥಾಮ್ಸನ್ ಕಂಪನಿಯು ರಿಮೋಟ್ ಕಂಟ್ರೋಲ್ ತಂತ್ರಜ್ಞಾನದೊಂದಿಗೆ ಸ್ಮಾರ್ಟ್ ಏರ್ ಕೂಲರ್‌ಗಳನ್ನು ಭಾರತದ ಮಾರುಕಟ್ಟೆಗೆ ಪರಿಚಯಿಸಿದೆ. ವಿವಿಧ ಮಾದರಿಗಳಿಗೆ ₹5,699 ರಿಂದ ₹8,999ರಿಂದ ಬೆಲೆ ಇದೆ. Flipkart ನಲ್ಲಿ ಹಾಗೂ ಪ್ರಮುಖ ಸ್ಟೋರ್‌ಗಳಲ್ಲಿ ಟಿ.ವಿ ಹಾಗೂ ಏರ್ ಕೂಲರ್‌ಗಳನ್ನು ಖರೀದಿಸಬಹುದು ಎಂದು ಕಂಪನಿ ತಿಳಿಸಿದೆ.

ಭಾರತದಲ್ಲಿ ಕಡಿಮೆ ಬೆಲೆಗೆ ದೊರಕಬಹುದಾದ ಅತ್ಯುತ್ತಮ ಹಾಗೂ ಆಧುನಿಕ ತಂತ್ರಜ್ಞಾನದ ಟಿ.ವಿ ಮತ್ತು ಏರ್‌ಕೂಲರ್‌ಗಳನ್ನು ಗ್ರಾಹಕರಿಗೆ ತಲುಪಿಸುವಲ್ಲಿ ಥಾಮ್ಸನ್ ಮುಂಚೂಣಿಯಲ್ಲಿದೆ ಎಂದು ಥಾಮ್ಸನ್ ಇಂಡಿಯಾದ ಸಿಇಒ (SPPL) ಅವನೀತ್ ಸಿಂಗ್ ತಿಳಿಸಿದ್ದಾರೆ.

ಸ್ವಸ್ಥಳಾಗಿ ಬರುವೆ ಎಂದ ನಜ್ರಿಯಾ ನಜೀಮ್



ಮಲಯಾಳ ನಟಿ ನಜ್ರಿಯಾ ನಜೀಮ್ ಇತ್ತೀಚೆಗೆ 'ಸೂಕ್ಷ್ಮದರ್ಶಿನಿ' ಎನ್ನುವ ಚಿತ್ರದ ಮೂಲಕ ಮತ್ತೆ ತೆರೆ ಮೇಲೆ ಕಾಣಿಸಿಕೊಂಡಿದ್ದರು. ಆದರೆ ಹಲವು ದಿನಗಳಿಂದ ಸಾರ್ವಜನಿಕವಾಗಿ ಎಲ್ಲಿಯೂ ಕಾಣಿಸಿಕೊಂಡಿರಲಿಲ್ಲ. ಹೀಗಾಗಿ ಅಭಿಮಾನಿಗಳು ಬೇಸರ ಹೊರಹಾಕಿದ್ದರು. ಇದಕ್ಕೆ ನಜ್ರಿಯಾ ಅವರು ಸುದೀರ್ಘ ಪತ್ರದ ಮೂಲಕ ಉತ್ತರಿಸಿದ್ದಾರೆ.

ಸಾಮಾಜಿಕ ಜಾಲತಾಣದಲ್ಲಿ ಪೋಸ್ಟ್ ಹಂಚಿಕೊಂಡ ನಜ್ರಿಯಾ ತಾವು ಭಾವನಾತ್ಮಕ ಸಂದಿಗ್ಧತೆ ಮತ್ತು ವೈಯಕ್ತಿಕ ಸವಾಲುಗಳೊಂದಿಗೆ ಹೋರಾಡುತ್ತಿದ್ದೇನೆ, ಹೀಗಾಗಿ ಕೆಲವು ದಿನ ಮೌನವಾಗಿದ್ದೆ ಎಂದು ಹೇಳಿಕೊಂಡಿದ್ದಾರೆ.

ನಜ್ರಿಯಾ ಮಲಯಾಳ ನಟ ಫಹಾದ್ ಫಾಸಿಲ್ ಪತ್ನಿಯಾಗಿದ್ದಾರೆ. 'ಫೋನ್ ಕರೆಗಳನ್ನು ಸ್ವೀಕರಿಸದೆ, ಸಂದೇಶಗಳಿಗೆ ಉತ್ತರಿಸದೇ ಇರುವುದಕ್ಕೆ ಕ್ಷಮೆ ಕೇಳುತ್ತೇನೆ. ನನ್ನ ಜನ್ಮದಿನದ ಆಚರಣೆಯಲ್ಲೂ ಕಾಣಿಸಿಕೊಳ್ಳಲಿಲ್ಲ. ಸೂಕ್ಷ್ಮದರ್ಶಿನಿ ಚಿತ್ರದ ಯಶಸ್ಸಿನ ಕಾರ್ಯಕ್ರಮದಲ್ಲಿಯೂ ಭಾಗಿಯಾಗಲಿಲ್ಲ. ಕೇರಳ ರಾಜ್ಯ ಸಿನಿಮಾ ಪ್ರಶಸ್ತಿಗೆ ಭಾಜನವಾಗಿದ್ದೇನೆ, ಇದಕ್ಕೆ ಸಂತೋಷವಾಗುತ್ತಿದೆ. ಪ್ರಶಸ್ತಿ ಗೆದ್ದ ಇತರರಿಗೂ ಅಭಿನಂದನೆ. ಕಠಿಣ ಹಾದಿಯಲ್ಲಿ ಸಾಗುತ್ತಿದ್ದೇನೆ. ಚಿಕಿತ್ಸೆ ನಡೆಯುತ್ತಿದ್ದು, ದಿನದಿಂದ ದಿನಕ್ಕೆ ಗುಣಮುಖಳಾಗುತ್ತಿದ್ದೇನೆ ಎಂಬುದನ್ನು ನಿಮ್ಮೊಂದಿಗೆ ಹಂಚಿಕೊಳ್ಳಬಯಸುತ್ತೇನೆ. ನಿಮ್ಮ ಬೆಂಬಲಕ್ಕೆ ನಾನು ಸದಾ ಋಣಿ. ನಾನು ಈಗಿರುವ ಪರಿಸ್ಥಿತಿಯಿಂದ ಸಂಪೂರ್ಣವಾಗಿ ಹೊರಬರಲು ಇನ್ನಷ್ಟು ಸಮಯ ಬೇಕಾಗಬಹುದು. ಆದರೆ ಗುಣಮುಖಳಾಗುವ ಹಾದಿಯಲ್ಲಿದ್ದೇನೆ ಎಂದು ವಾಗ್ದಾನ ನೀಡುತ್ತೇನೆ' ಎಂದು ಬರೆದುಕೊಂಡಿದ್ದಾರೆ.

ಬೇಸಿಲ್ ಜೋಸೆಫ್ ಮತ್ತು ನಜ್ರಿಯಾ ನಟಿಸಿರುವ ಸಸ್ಪೆನ್ಸ್ ಥ್ರಿಲರ್ ಸಿನಿಮಾ 'ಸೂಕ್ಷ್ಮದರ್ಶಿನಿ' 2024ರ ನ.15ರಂದು ತೆರೆಕಂಡಿತ್ತು. ಚಿತ್ರಮಂದಿರ ಮತ್ತು ಒಟಿಟಿಯಲ್ಲಿಯೂ ಉತ್ತಮ ಪ್ರತಿಕ್ರಿಯೆ ಚಿತ್ರಕ್ಕೆ ಸಿಕ್ಕಿದೆ.

ಈ ಚಿತ್ರಕ್ಕಾಗಿ 2025ನೇ ಸಾಲಿನ ಕೇರಳ ರಾಜ್ಯ ಸಿನಿಮಾ ಪ್ರಶಸ್ತಿಯಲ್ಲಿ ಅತ್ಯುತ್ತಮ ನಟಿ ಪ್ರಶಸ್ತಿ ನಜ್ರಿಯಾ ಅವರಿಗೆ ದೊರಕಿದೆ.

ನಾಯಗನ್ ನಂತರ ಮತ್ತೆ ಕಮಲ್ ಮಣಿರತ್ನಂ ಜಾದು

ಮಣಿರತ್ನಂ ನಿರ್ದೇಶನದ ಗ್ಯಾಂಗ್‌ಸ್ಟರ್ ಡ್ರಾಮಾ 'ಥಗ್ ಲೈಫ್' ಚಿತ್ರವನ್ನು ಸೂಪರ್ ಸ್ಟಾರ್ ಕಮಲ್ ಹಾಸನ್ ಶುಕ್ರವಾರ ಬಣ್ಣಿಸಿದ್ದಾರೆ. ಮೂರು ದಶಕಗಳಿಂದ ನಮ್ಮಿಬ್ಬರ ಕಾಂಬಿನೇಶನ್ ಚಿತ್ರಕ್ಕಾಗಿ ಕಾಯುತ್ತಿದ್ದ ಅಭಿಮಾನಿಗಳಿಗೆ ಇದು ಅರ್ಪಣೆ ಎಂದು ಹೇಳಿದ್ದಾರೆ.

1987ರ ಅಪರಾಧ ಡ್ರಾಮಾ 'ನಾಯಗನ್' ಚಿತ್ರಕ್ಕಾಗಿ ಈ ಜೋಡಿ ಒಟ್ಟಾಗಿ ಕೆಲಸ ಮಾಡಿತ್ತು. ಇದು ಹಣ ಗಳಿಕೆ ಮತ್ತು ವಿಮರ್ಶಾತ್ಮಕ ದೃಷ್ಟಿಯಿಂದಲೂ ಭಾರಿ ಯಶಸ್ಸನ್ನು ಗಳಿಸಿತ್ತು. ಹಲವು ರಾಷ್ಟ್ರೀಯ ಚಲನಚಿತ್ರ ಪ್ರಶಸ್ತಿಗಳನ್ನು ಗೆದ್ದಿತ್ತು.

ಈಗ 'ಥಗ್ ಲೈಫ್'ಗಾಗಿ ಈ ಜೋಡಿ ಮತ್ತೆ ಒಂದಾಗಿದೆ. ಇದು ಉತ್ತರ ಮತ್ತು ದಕ್ಷಿಣ ಚಲನಚಿತ್ರೋದ್ಯಮಗಳ ನಟರನ್ನು ಒಳಗೊಂಡ ಬೃಹತ್ ತಾರಾಗಣದ ಚಿತ್ರವಾಗಿದೆ.

'ನಾವು ಕ್ಷಮಿಸಿ ಎಂದು ಮಾತ್ರ ಅಭಿಮಾನಿಗಳಿಗೆ ಹೇಳಬಹುದು. ಈ ಚಿತ್ರ ಹಲವು ವರ್ಷಗಳಿಂದ ಕಾಯುತ್ತಿರುವ ಅಭಿಮಾನಿಗಳಿಗೆ ನಮ್ಮ ಅರ್ಪಣೆ. ತಪ್ಪು ನಮ್ಮದೇ ಆಗಿದೆ. ನಾವಿಬ್ಬರೂ ಈ ಹಿಂದೆಯೇ ಚಿತ್ರ ಮಾಡಬಹುದಿತ್ತು. ಆ ಬಗ್ಗೆ ಯೋಚಿಸುತ್ತಲೇ ಇದ್ದೆವು' ಎಂದು ಹಾಸನ್ ಚಿತ್ರದ ಮೊದಲ ಹಾಡು 'ಜಿಂಗುಚಾ' ಬಿಡುಗಡೆ ಸಮಾರಂಭದಲ್ಲಿ ಹೇಳಿದ್ದಾರೆ.

35 ವರ್ಷಗಳ ಬಳಿಕ ಒಟ್ಟಿಗೆ ಕೆಲಸ ಮಾಡುತ್ತಿದ್ದರೂ ನಮ್ಮ ಕೆಲಸದ ವೈಖರಿ ಹಾಗೆಯೇ ಇದೆ ಎಂದಿದ್ದಾರೆ.

'35 ವರ್ಷಗಳ ಬಳಿಕವೂ ನನ್ನ ಮತ್ತು ಮಣಿ ಸರ್ ನಡುವಿನ ಹೊಂದಾಣಿಕೆಯಲ್ಲಿ ಯಾವುದೇ ಬದಲಾವಣೆ ಆಗಿಲ್ಲ. ನಾವು ಚರ್ಚಿಸಿದಂತೆ ಶೇ 25ರಷ್ಟು ಕೆಲಸ ಮುಗಿಸಿದ್ದೇವೆ. 'ನಾಯಗನ್' ಒಂದು ಲೆಕ್ಕವಾದರೆ, 'ಥಗ್ ಲೈಫ್' ಇನ್ನೊಂದು ಲೆಕ್ಕವಾಗಿದೆ. ನಾವು ಇನ್ನಷ್ಟು ದೂರ ಕ್ರಮಿಸಬೇಕಿದೆ. ಏಕೆಂದರೆ, ನಮ್ಮ ಎಲ್ಲ ಕನಸುಗಳನ್ನು ಯಾವುದೇ ಚಿತ್ರದಲ್ಲಿ ನನಸಾಗಿಸಲು ನಮಗೆ ಸಾಧ್ಯವಾಗಿಲ್ಲ. ಭವಿಷ್ಯದಲ್ಲಿ ನಾವು ಮಾಡುವ ಚಿತ್ರಗಳಲ್ಲೂ ಅದು ಹಾಗೆಯೇ ಆಗುತ್ತದೆ ಎಂದು ನನಗೆ ಖಚಿತತೆ ಇದೆ' ಎಂದಿದ್ದಾರೆ.

ನಾವು ತುಂಬಾ ದೊಡ್ಡ ಕನಸು ಕಾಣುತ್ತೇವೆ. ನಂತರ, ನಮ್ಮ ಮಾರುಕಟ್ಟೆ ಮತ್ತು ಬಜೆಟ್‌ಗೆ ಸರಿಹೊಂದುವಂತೆ ಸೀಮಿತರಾಗುತ್ತೇವೆ. ಚಿತ್ರೋದ್ಯಮದಲ್ಲಿ ಸಿನಿಮಾ ಹಣ ಗಳಿಸುತ್ತದೆಯೇ ಅಥವಾ ಇಲ್ಲವೇ ಎಂಬ ಬಗ್ಗೆ ಮಾತ್ರ ಹೆಚ್ಚು ಗಮನ ಹರಿಸುತ್ತಾರೆ ಎಂದು ಕಮಲ್ ಹೇಳಿದರು.

ಚಿತ್ರವೊಂದರ ಲಾಭ ಮತ್ತು ನಷ್ಟಗಳನ್ನು ಅಂತಿಮವಾಗಿ ಪ್ರೇಕ್ಷಕರೇ ತೀರ್ಮಾನಿಸುತ್ತಾರೆ. ಹೊಸ, ಉದಯೋನ್ಮುಖ ಕಲಾವಿದರು ವಿಕಸನಗೊಳ್ಳುತ್ತಿದ್ದಾರೆ. ಸಿಂಬಲರಸನ್ ವಿಕಸನಗೊಂಡಿದ್ದು, ಚಿತ್ರರಂಗದಲ್ಲಿ ಮಿಂಚುತ್ತಿದ್ದಾರೆ ಎಂದು ಹೇಳಿದರು.

ಒಬ್ಬ ಕಲಾವಿದನಾಗಿ ನನಗೆ ಮಾಡಲೇಬೇಕು ಎನ್ನಿಸುವ ಚಿತ್ರ 'ಥಗ್ ಲೈಫ್'. ನನಗೂ ಈ ಚಿತ್ರದಲ್ಲಿ ನಟಿಸಲು ಮತ್ತು ನಿರ್ಮಾಣ ಮಾಡಲು ಅವಕಾಶ ಸಿಕ್ಕಿದ್ದಕ್ಕೆ ಸಂತೋಷವಾಗಿದೆ. ಇದನ್ನು ವಿವೇಚನಾಶೀಲ ಪ್ರೇಕ್ಷಕರ ಮೇಲಿನ ಪ್ರೀತಿಯಿಂದ ಮಾಡಲಾಗಿದೆ ಎಂದು ಅವರು ತಿಳಿಸಿದ್ದಾರೆ.

ಚೆನ್ನೈನ ಅಲ್ವಾರ್‌ಪೇಟೆಯ ಎಲ್ಡಾಮ್ಸ್ ರಸ್ತೆಯಲ್ಲಿ ನಿಲ್ಲಿಸಿದ್ದ ಸ್ಕೂಟರ್ ಮೇಲೆ ಕುಳಿತು ಮಣಿರತ್ನಂ ಮತ್ತು ತಾವು ಸಿನಿಮಾದ ಬಗ್ಗೆ ಚರ್ಚಿಸಿದ್ದ ಸಮಯವನ್ನು ಕಮಲ್ ನೆನಪಿಸಿಕೊಂಡರು.

ಈ ಗ ಬಿಡುಗಡೆಯಾಗಿರುವ ಚಿತ್ರದ ಮೊದಲ ಹಾಡು 'ಜಿಂಗುಚಾ'ಮದುವೆಯ ಹಾಡಾಗಿದ್ದು, ಇದರಲ್ಲಿ ಸಾನ್ಯಾ ಮಲ್ಹೋತ್ರಾ, ಕಮಲ್ ಹಾಸನ್ ಮತ್ತು ಸಿಲಂಬರಸನ್ ಅವರು ಎ.ಆರ್. ರೆಹಮಾನ್ ಅವರ ಸಂಗೀತಕ್ಕೆ ಹೆಜ್ಜೆ ಹಾಕಿದ್ದಾರೆ. ಕಮಲ್ ಹಾಸನ್ ಅವರೇ ಈ ಹಾಡಿಗೆ ಸಾಹಿತ್ಯ ಬರೆದಿದ್ದಾರೆ.



ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in

ಜಾಹೀರಾತುಗಳಿಗಾಗಿ ಸಂಪರ್ಕಿಸಿ: 080-45557160/ 162/ 163/ 164/ 9845114560 / 9731810277/ 9886213331

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080-45557160/ 162/ 163/ 164/
9845114560 / 9731810277/ 9886213331






II VISHWA VIDYAPEETH II
Affiliated to The Central Board of Secondary Education, Govt. of India, New Delhi
CBSE Affiliation No. 831350
ADMISSION OPEN
AY 2025-26
Pre Primary to Grade 10
SPORTS
Major sports programme at no additional cost
SPACE LAB
Nambi Antariksha Kalakshetra
MATH LAB
Madhava Ganitha Kalakshetra
Choose and walk the path successfully in a CHANGING WORLD
Celebrating 13 GLORIOUS YEARS OF ACADEMIC EXCELLENCE
VVP prepares "Future-Proof Citizens"
Our students are mentored on a regular basis by eminent educationists, scientists, artists and entrepreneurs
Singanayakanahalli, Yelahanka
Varthur, Whitefield
Honnenahalli, Yelahanka
CONTACT US
7022009757 / 7676227483
enquiry@vishwavidyapeeth.edu.in
VISHWA VIDYAPEETH, Sy No.72, Nekkundi Dommasandra, Sarjapura Hobli, Anekal Taluku, Bengaluru-560087
VISIT OUR WEBSITE
LAST FEW SEATS LEFT
REGISTER NOW
SCAN HERE